ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: ಶ್ರೀ ಎಸ್. ಪಿ. ಪಾಟೀಲ

ಬಿಡಿ ಪತ್ರಿಕೆ
—೬—೦

ಸಪ್ಟಂಬರ ೧೯೫೫

ವಾ. ಚಂದಾ
೪—೦—೦

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: **ಶ್ರೀ ಕೆ. ಬಿ. ಕೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

— ಸಹಸಂಪಾದಕರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು **ಗೌ. ಕಾರ್ಯದರ್ಶಿ**
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಸಪ್ಟಂಬರ, ೧೯೫೫** | **ಸಂಚಿಕೆ ೬**

ಪ ರಿ ವಿ ಡಿ

೧.	ಸಂಪಾದಕೀಯ	....	(
೨.	ಕರ್ನಾಟಕ ಗೊಂದಲಿಗರು	ಡಾ. ಬಿ. ಎಸ್ ಗದ್ದಗೀಮಠ	'
೩.	ವನಮಹೋತ್ಸವವೂ ಒಕ್ಕಲುತನದ ಅಭಿವೃದ್ಧಿಯೂ:	ಶ್ರೀ ಎಸ್. ಎ. ಮಾಚಾ	೧
೪.	ಪಾಶ್ಚಾತ್ಯರ ನವನಾಗರಿಕತೆಯ ಗುಣಾವಗುಣಗಳು:	ಶ್ರೀ ತಟ್ಟಿ ಶಾಮರಾಯರು	೧
೫.	ಉತ್ತರ ಭಾರತದ ಪ್ರವಾಸದನುಭವಗಳು:	ಶ್ರೀ ಮಿರ್ಜಿ ಅಣ್ಣಾರಾಯ	೧೭
೬.	ಮೂಲ ಶಿಕ್ಷಣದ ಸ್ವೈಜ ಕಲ್ಪನೆ:	ಶ್ರೀ ಶಿಂತ್ರಿ ಬಸಪ್ಪನವರು	೨೧
೭.	ಜೀವನ ಶಿಕ್ಷಣ ವಾರ್ತೆಗಳು:	....	೨೪
೮.	ಪ್ರಾಥಮಿಕ ಶಿಕ್ಷಣ ಪ್ರಪಂಚ	....	೨೮
೯.	ನಮ್ಮ ಸಮಸ್ಯೆಗಳು	....	ಕವ್ಹರ ೬

ಮುಖಪುಟದ ಚಿತ್ರ: **ಶ್ರೀಮತಿ ವಿಜಯಲಕ್ಷ್ಮಿ ಪಂಡಿತ.**

ಸಂಪಾದಕೀಯ

ದ್ವಿತೀಯ ಪಂಚವಾರ್ಷಿಕ ಯೋಜನೆಯೂ ಶಿಕ್ಷಣ ವಿಕಾಸವು

ಮುಂಬರುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸ್ತಾಪಿಸಲ್ಪಟ್ಟ ಶೈಕ್ಷಣಿಕ ಬದಲಾವಣೆಗಳು ರಾಜ್ಯಘಟನೆಯಲ್ಲಿಯ ನಿರ್ದಿಷ್ಟ ಯೋಜನೆಗೆ ಬೇಕಾಗುವ ಆರ್ಥಿಕ ಬೆಂಬಲ ಹಾಗೂ ಸದ್ಯದ ಶೈಕ್ಷಣಿಕ ಆವಶ್ಯಕತೆ ಇವುಗಳನ್ನು ಅವಲಂಬಿಸಿವೆ. ೬ರಿಂದ ೧೪ಳ ವಯಸ್ಸಿನ ವರೆಗಿನ ಎಲ್ಲ ಮಕ್ಕಳಿಗೂ ಸಾರ್ವತ್ರಿಕ ಹಾಗೂ ಪುಕ್ಕಟೆಯಾದ ಪ್ರಾಥಮಿಕ ಶಿಕ್ಷಣವು ೧೯೬೦ರೊಳಗಾಗಿ ದೊರೆಯಬೇಕೆಂದು ನಮ್ಮ ರಾಜ್ಯಘಟನೆಯಲ್ಲಿ ಹೇಳಿದೆ. ಆದರೆ ಈಗಿದ್ದ ಸೌಕರ್ಯ ಹಾಗೂ ಶೈಕ್ಷಣಿಕ ಪ್ರಗತಿಯ ವೇಗಗಳನ್ನು ನೋಡಿದರೆ ಆ ಗುರಿಯು ಸಾಧಿಸಲು ನಾಲ್ಕಾರು ವರುಷ ತಡವಾಗಬಹುದೆಂದು ತೋರುತ್ತದೆ. ಈ ದೃಷ್ಟಿಯಿಂದಲೇ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿರಬಹುದು. ಶಿಕ್ಷಣ ಪದ್ಧತಿಯಲ್ಲಿಯ ಬದಲಾವಣೆ, ನೂತನ ಸಮಾಜ ನಿರ್ಮಾಣ ಹಾಗೂ ಆರ್ಥಿಕ ಸಂಘಟನೆ ಇವೆಲ್ಲವುಗಳ ಸಾಮೂಹಿಕ ಪರಿಣಾಮದಿಂದ ನಮ್ಮ ಸರಕಾರಕ್ಕೆ ಬಿಡಿಸಲು ಜಟಿಲವಾದ ಸಮಸ್ಯೆಗಳು ಎದುರಾಗಿವೆ. ಹೀಗಿದ್ದಾಗ ಅನವಶ್ಯಕ ಅವಸರವು ಅಪವ್ಯಯವನ್ನು ಉಂಟುಮಾಡೀತೆಂಬ ಭಯವು ಇದೆ. ಶಿಕ್ಷಣದ ಪದ್ಧತಿ ಹಾಗೂ ವಿಷಯಗಳಲ್ಲಿಯ ಬದಲಾವಣೆಗಳನ್ನೂ ಹೊಸ ವರ್ಗದವರಿಗೆ ದೊರೆಯತಕ್ಕ ಅವಕಾಶಗಳ ವಿಸ್ತಾರವನ್ನೂ ಮತ್ತು ಶಿಕ್ಷಕ ವೃತ್ತಿಗೆ ಒಂದು ತಾಂತ್ರಿಕ ಸ್ವರೂಪದ ಒಲುವನ್ನೂ ಒಮ್ಮೆಲೆ ಕೊಡಬೇಕಾಗಿ ಬಂದಿದೆ. ಇವೆಲ್ಲವುಗಳ ಜೊತೆಗೆ ಶಿಕ್ಷಕರ ಸಂಬಳ ಪ್ರಮಾಣವನ್ನು ಹೆಚ್ಚಿಸುವದವಶ್ಯವಿರುವದರಿಂದ ಶೈಕ್ಷಣಿಕ ಸುಧಾರಣೆಗಳಿಂದಾಗುವ ಆರ್ಥಿಕ ಭಾರವು ಮತ್ತಿಷ್ಟು ಹೆಚ್ಚಾಗುವದು.

ಹೀಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶೈಕ್ಷಣಿಕ ಸೂಚನೆಗಳು ಬಹಳ ವ್ಯಾಪಕವಾಗುವವು. ಪ್ರಾಥಮಿಕ ಸಾಲೆಗಳನ್ನು ಮೂಲ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸುವದು; ಮಾಧ್ಯಮಿಕ ಶಿಕ್ಷಣವನ್ನು ಹೊಸ ಬೇಡಿಕೆಗಳಿಗೆ ತಕ್ಕಂತೆ ಸರಿಪಡಿಸುವದು ಮತ್ತು ಶಿಷ್ಯವೇತನ ಮುಂತಾದ ಆರ್ಥಿಕ ನೆರವನ್ನು ಕೊಟ್ಟು ಎಲ್ಲ ವರ್ಗದವರಿಗೂ ಸರಿಸಮಾನವಾದ ಅವಕಾಶಗಳನ್ನು ಕಲ್ಪಿಸಿ ಕೊಡುವದು. ಇವೆಲ್ಲವುಗಳು ಯೋಜನೆಯಲ್ಲಿ ಸಮಾವೇಶವಾಗಿವೆ. ಹೊಸ ಆದರ್ಶಗಳನ್ವಯ ಮೂಲ ಶಿಕ್ಷಣ ಸಾಲೆಗಳಿಗೆ ಯೋಗ್ಯ ಇಮಾರತಿಗಳು ಬೇಕಾಗುವವು. ಈಗಿದ್ದ ಇಮಾರತಿಗಳನ್ನು ಸರಿಪಡಿಸುವದು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರ ವೇತನವನ್ನು ಹೆಚ್ಚಿಸಬೇಕಾಗುವದು. ಪ್ರಾಥಮಿಕ ಶಿಕ್ಷಣ ವಿಸ್ತಾರಕ್ಕೂ ಶಿಕ್ಷಕರ ವೇತನಗಳನ್ನು ಹೆಚ್ಚಿಸಲಿಕ್ಕೂ, ಇಮಾರತು ಉಪಕರಣ ಮುಂತಾದವುಗಳಿಗೆಲ್ಲ ಕೂಡಿ ೫೦೦ ಕೋಟಿ ರೂಪಾಯಿಗಳನ್ನು ಯೋಜನೆಯಲ್ಲಿ ಕಾದಿಡಲಾಗಿದೆ. ನಿರಕ್ಷರತೆಯ ನಿರ್ಮೂಲನೆಗಾಗಿ ೮೫ ಕೋಟಿ ರೂಪಾಯಿಗಳ ವ್ಯವಸ್ಥೆಮಾಡಲಾಗಿದೆ. ಅನೇಕ ಶಾಲೆಗಳನ್ನು ವಿವಿಧೋದ್ದೇಶ ಸಾಲೆಗಳನ್ನಾಗಿ ಪರಿವರ್ತಿಸುವ ಸೂಚನೆಗಳೂ ಅಡಕವಾಗಿವೆ. ಮಾಧ್ಯಮಿಕ ಶಿಕ್ಷಣಕ್ಕೆ ಸುಮಾರು ೩೦೦ ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಕಾಲೇಜುಗಳ ಹಂತದಲ್ಲಿಯೂ ಬದಲಾವಣೆಗಳನ್ನು ಕಲ್ಪಿಸಿದ್ದಾರೆ. ವಿಶ್ವವಿದ್ಯಾಲಯಗಳ ಹೊರಗೆ ಕೊಡಬಹುದಾದ ವಿಜ್ಞಾನ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ೨೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಹಿಂದಿಯನ್ನು ಮಾತಾಡದಿರುವ ಪ್ರದೇಶದಲ್ಲಿ ಹಿಂದಿಯ ಪ್ರಸಾರಕ್ಕೆ ಮಹತ್ವದ ಸ್ಥಾನ ಕೊಡಲಾಗಿದೆ. ಯೋಜನೆಯಲ್ಲಿ ಹಳ್ಳಿಗಾಡುಗಳ ಅಗತ್ಯಗಳಿಗೆ ವಿಶೇಷ ಲಕ್ಷ ಕೊಟ್ಟಿದ್ದಾರೆ. ಸಂಸ್ಕೃತ, ರಾಷ್ಟ್ರೀಯ ವಾಚನಾಲಯದ ಬೆಳವಣಿಗೆ, ಪ್ರಾಚೀನ ಸಂಶೋಧನ ಹಾಗೂ ಮಾನವ ಶಾಸ್ತ್ರ ಮುಂತಾದವುಗಳ ಅಭ್ಯಾಸವನ್ನು ಲಕ್ಷಿಸಲಾಗಿದೆ.

ಅಗಸ್ಟ ೧೬ರ ಹರತಾಳವೂ ವಿದ್ಯಾರ್ಥಿಗಳೂ

ಕಳೆದ ತಿಂಗಳ ೧೫–೧೬ರಂದು ದೇಶದ ಎಲ್ಲ ಕಡೆಗೂ ವಿಶೇಷವಾಗಿ ಕರ್ನಾಟಕದಲ್ಲಿ ಪ್ರತಿಯೊಂದು ಶಹರದಲ್ಲಿಯೂ ಪೋರ್ತುಗೀಜ ಸರಕಾರದವರಿಂದ

ಗೋವಾದಲ್ಲಿ ನಡೆದ ಕ್ರೂರ ಚಟುವಟಿಕೆಗಳನ್ನು ಖಂಡಿಸುವದರ ಸಲುವಾಗಿ ಶಾಲೆ /ಕಾಲೇಜುಗಳ ವಿದ್ಯಾರ್ಥಿಗಳು ಹರತಾಳ ಹಾಗೂ ಮೆರವಣಿಗೆಯಲ್ಲಿ ಪ್ರಾಮುಖ್ಯವಾದ ಭಾಗವಹಿಸಿದರು. ಅಂದು ವಿದ್ಯಾರ್ಥಿಗಳು ತಮ್ಮ ಶಾಲೆ ಕಾಲೇಜುಗಳನ್ನು ಬಿಟ್ಟು ಬೇರೆ ವಿದ್ಯಾ ಸಂಸ್ಥೆಗಳಿಗೆ ಹೋಗಿ ಅಲ್ಲಿಯ ವಿದ್ಯಾರ್ಥಿಗಳನ್ನು ಅಪರ ಮನವೊಲಿಸಿಯಾಗಲಿ, ಜುಲುಮೆ ಮಾಡಿಯಾಗಲಿ, ಮೆರವಣಿಗೆಯಲ್ಲಿ ಭಾಗವಹಿಸುವಂತೆ ಪ್ರಯತ್ನಿಸಿದರು. ಗೋವೆಯಲ್ಲಿ ನಡೆದ ಹಿಂಸೆಗಳ ಖಂಡನೆಗೆ ಯಾರೂ ಒಪ್ಪದಿರಲಾರರು. ಭಾರತದ ಹೊರಗಿನ ರಾಷ್ಟ್ರಗಳೂ ಪೋರ್ತುಗೀಜರ ಅಮಾನುಷ ಕೃತಿಯನ್ನು ನಿರ್ಭಿಡೆಯಿಂದ ಖಂಡಿಸಿದ್ದಾರೆ. ನ್ಯಾಯ ನಿಷ್ಠುರವಾದಿಗಳೆಲ್ಲರೂ ಘಂಟಾಘೋಷವಾಗಿ ತಿಳಿಹೇಳಿದ್ದಾರೆ. ಇದೆಲ್ಲವೂ ಆಗಬೇಕಾದದ್ದೂ ಆದರೆ ಮತ್ತೊಂದು ಮಾತನ್ನು ಶಿಕ್ಷಕರಾದ ನಾವು ಲಕ್ಷದಲ್ಲಿಡುವದು ಅವಶ್ಯವೆಂದು ತೋರುತ್ತಿದೆ. ವಿದ್ಯಾರ್ಥಿಗಳು ತಮ್ಮ ಶಾಲೆ ಕಾಲೇಜುಗಳನ್ನು ಬಿಟ್ಟು ಇನ್ನಿತರ ಸಂಸ್ಥೆಗಳಿಗೆ ಹೋಗಿ ಶಿಸ್ತು ಶಾಂತಿ ಮುಂತಾದವುಗಳನ್ನು ಅಲಕ್ಷಿಸಿ ಮನಸ್ಸಿಗೆ ಬಂದಂತೆ ಚೀರಾಡಿ ಕಿಡಿಕಿಗಳನ್ನು ಮುರಿದು ಕಾಜುಗಳನ್ನು ಒಡೆದು, ಶಾಲಾಧಿಕಾರಿಗಳಿಗೆ ಬೆದರಿಕೆ ಹಾಕಿ ವಿದ್ಯಾರ್ಥಿಗಳನ್ನು ಹೊರಗೆ ಕರೆದೊಯ್ಯುವ ರೀತಿ ನೀತಿಗಳನ್ನು ಕಣ್ಮುಟ್ಟಿ ನೋಡಿದವರಾರೂ ಸಹಿಸಲಾರರು; ಸಹಿಸಬಾರದು. ವಿಧ್ಯಾರ್ಥಿಗಳು ಎಳೆ ವಯಸ್ಸಿನ ಮೂಲಕ ಉತ್ಸಾಹ ತುಂಬಿರುವದು ಸಹಜವಿದೆ. ಆದರೆ ಅದರ ಉಪಯೋಗವು ಇಂಥ ಸನ್ನಿವೇಶಗಳಲ್ಲಿ ಹೇಗಾಗಬೇಕೆಂಬುದೇ ಮಹತ್ವದ ಪ್ರಶ್ನೆ. ಇದನ್ನು ಶಿಕ್ಷಕರು ಪಾಲಕರೂ ಸಮಾಜದ ಧುರೀಣರೂ ಬಿಡಿಸಬೇಕು. ಹಿರಿಕಿರಿಯ ವಿದ್ಯಾರ್ಥಿಗಳೆಲ್ಲರೂ ಶಿಸ್ತಿನಿಂದಲೂ ಶಾಂತಿಯಿಂದಲೂ ಸಂಘಟಿತರಾಗುವದು ಎಲ್ಲರಿಗೂ ಬೇಕಾದ ಮಾತು. ಆದರೆ ಅವರು ತಮ್ಮ ಉತ್ಸಾಹವನ್ನು ದುರುಪಯೋಗ ಮಾಡಿ ಸಮಾಜದಲ್ಲಿ ಹಿರಿಯರ ತಲೆಯನ್ನು ತಿನ್ನುವ ಘಟನೆಗಳನ್ನು ನಿರ್ಮಿಸಬಾರದು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಮೊನ್ನೆ ಪಾಟಣಾದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮನಬಿಚ್ಚಿ ಮಾತನಾಡಿದ್ದಾರೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಹಾಳಾಗಿದೆಯೆಂದೂ ಹೊಣೆಗೇಡಿತನವು ಹೆಚ್ಚಾಗಿದೆಯೆಂದೂ ಹೇಳಿ ಅವರ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಮಾಡಿದ್ದಾರೆ. ಇತ್ತೀಚಿಗೆ ಉತ್ತರ ಹಿಂದುಸ್ಥಾನದಲ್ಲಿ ಉಚ್ಚಶಿಕ್ಷಣ ಸಂಸ್ಥೆಗಳಲ್ಲಿ ನಡೆದ ವಿದ್ಯಾರ್ಥಿಗಳ ಚಟುವಟಿಕೆಗಳು ಎಲ್ಲರ ಲಕ್ಷ್ಯವನ್ನು ಸೆಳೆದಿವೆ. ಸಮಾಜದ ಹಿರಿಯರ, ಶಿಕ್ಷಣ ಸಂಸ್ಥೆಗಳ ಸಂಚಾಲಕರ ಹಾಗೂ ಶಿಕ್ಷಕರ ಮಾರ್ಗದರ್ಶನಕ್ಕೆ ವಿದ್ಯಾರ್ಥಿಗಳಲ್ಲಿ ಆಸ್ಪದವಿಲ್ಲವೇನೋ ಎಂಬ ಭಯವೂ ಉಂಟಾಗಿದೆ. ಬ್ರಿಟಿಶರು ನಮ್ಮಲ್ಲಿದ್ದಾಗ ಅವರೊಡನೆ ನಮ್ಮ ಸ್ವಾತಂತ್ರ್ಯ ಸಂಗ್ರಾಮ ನಡೆದಾಗ ಸಾರ್ವಜನಿಕ ಹರತಾಳ, ಸತ್ಯಾಗ್ರಹ, ಮೆರವಣಿಗೆ, ಘೋಷಣೆ ಮುಂತಾದ ಚಟುವಟಿಕೆಗಳಿಗೆ ಒಂದು ವಿಶಿಷ್ಟವಾದ ತಾತ್ಪೂರ್ತಿಕ ಸ್ಥಾನವಿತ್ತೆಂಬುದನ್ನು ಎಲ್ಲ ಯುವಕರೂ ವಿದ್ಯಾರ್ಥಿಗಳೂ ತಿಳಿಯುವದು ಅತ್ಯವಶ್ಯವೆಂದು ನಮಗೆ ತೋರುತ್ತದೆ. ಮೊಟ್ಟ ಮೊದಲು ವಿದ್ಯಾರ್ಥಿಗಳು ವಿದ್ಯಾಸಂಸ್ಥೆಗಳಲ್ಲಿದ್ದಾಗ ಮಾಡಬೇಕಾದ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳಬೇಕು. ಎಳೆ ವಯಸ್ಸಿನಲ್ಲಿಯೇ ಅಪಕ್ವವಾದ ವಿಚಾರಗಳ ಹಾಗೂ ಅಯೋಗ್ಯವಾದ ವರ್ಚಸ್ಸಿನ ಪರಿಣಾಮವಾಗಿ ವಿದ್ಯಾರ್ಥಿಗಳು ಇಂಥ ಚಟುವಟಿಗೆಗಳಲ್ಲಿ ಧುಮುಕುವದು ಸರಿಯಾಗಬಹುದೇ? ಹಿರಿಯ ವಿದ್ಯಾರ್ಥಿಗಳಿಗೆ ರಾಜಕಾರಣದ ಅಭ್ಯಾಸ ಅಗತ್ಯವಿದ್ದರೂ ಅವರು ಪ್ರತ್ಯಕ್ಷ ರಾಜಕಾರಣಿಗಳಾಗುವದು ಹಿತಕರವೋ, ಇವೇ ಮುಂತಾದ ಸಮಸ್ಯೆಗಳನ್ನು ಪಾಲಕರೂ ಶಿಕ್ಷಕರೂ ವಿದ್ಯಾರ್ಥಿಗಳ ಹಾಗೂ ರಾಷ್ಟ್ರದ ಹಿತದ ದೃಷ್ಟಿಯಿಂದ ಬಿಡಿಸಲು ಪ್ರಯತ್ನಿಸುವದು ಅತ್ಯಗತ್ಯವೆಂದು ನಾವು ಹೇಳಬಯಸುತ್ತೇವೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಅನಂತಾನೇಕ ಶುಭಾಶಯಗಳು

ಇಂಗ್ಲಂಡದಲ್ಲಿ ಭಾರತ ಹಾಯ್ ಕಮೀಶನರಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಕಳೆದ ಅಗಸ್ಟ ೧೮ರಂದು ತಮ್ಮ ೬೬ನೆಯ ವರುಷವನ್ನು ದಾಟಿ ೬೭ರಲ್ಲಿ ಕಾಲಿಟ್ಟರು. ಇವರ ಅಣ್ಣಂದಿರಾದ ಪ್ರಧಾನ ಮಂತ್ರಿಗಳು ೧೧ ವರುಷದವರಿರುವಾಗ ಕ್ರಿ. ಶ. ೧೯೦೦ರಲ್ಲಿ ಶ್ರೀಮತಿ ಪಂಡಿತರು ಜನಿಸಿದರು. ತಂದೆ ಮೋತೀಲಾಲರಿಂದ ಬಾಲ್ಯ ಶಿಕ್ಷಣ ಪಡೆದ ಇವರ ಮೇಲೆ ಬಾಪೂಜಿಯವರ ಪ್ರಭಾವವು ವಿಶೇಷವಾಗಿ ಪರಿಣಮಿಸಿತು. ಶ್ರೀಮತಿಯವರು ಬ್ಯಾರಿಸ್ಟರ ಆರ್. ಎಸ್. ಪಂಡಿತರನ್ನು ಲಗ್ನವಾಗಿ ಪ್ರಪಂಚದಲ್ಲಿ ಕಾಲಿಟ್ಟು ಇಬ್ಬರು ಹೆಣ್ಣುಮಕ್ಕಳನ್ನು

ಕಂಡಿದ್ದಾರೆ. ಕ್ರಮೇಣವಾಗಿ ಇವರ ತಂದೆಯವರೂ ಅಣ್ಣಂದಿರೂ ಇವರೂ ಇವರ ಪತಿಯಂದಿರೂ ೧೯೩೦ರ ರಾಷ್ಟ್ರೀಯ ಆಂದೋಲನದಲ್ಲಿ ಪ್ರತ್ಯಕ್ಷ ಭಾಗವಹಿಸಿ ಎಲ್ಲರೂ ಅನೇಕ ಸಾರೆ ಸೆರೆಮನೆಗಳಿಗೆ ಹೋದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೆಹರೂ ಮನೆತನದ ಸೇವೆ ಅಮೋಘವಾಗಿದೆ; ತ್ಯಾಗ ಅದ್ವಿತೀಯವಾಗಿದೆ. ೧೯೩೭ರಲ್ಲಿ ಮೊಟ್ಟ ಮೊದಲಿಗೆ ಕಾಂಗ್ರೆಸ್ಸು ಅಧಿಕಾರವನ್ನು ವಹಿಸಿದಾಗ ಶ್ರೀಮತಿ ಪಂಡಿತರು ತಮ್ಮ ರಾಜ್ಯದ ಮಂತ್ರಿಮಂಡಲದಲ್ಲಿ ಸೇರಿ ಒಳ್ಳೇ ಯಶಸ್ವಿಯಾದ ಆಡಳಿತವನ್ನು ಸಾಧಿಸಿ ಭಾರತದ ಮಹಿಳೆಯರಿಗೆ ಹೆಮ್ಮೆಯ ಸ್ಥಾನವನ್ನು ಕಲ್ಪಿಸಿದ್ದಾರೆ. ಮುಂದೆ ಕೆಲವು ಕಾಲ ರಶಿಯ ಹಾಗೂ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಭಾರತದ ಪರವಾಗಿ ರಾಯಭಾರಿ ಕೆಲಸವನ್ನು ಅಪ್ರತಿಮವಾಗಿ ಸಾಗಿಸಿದರು. ಅದಕ್ಕೂ ಹೆಚ್ಚಿನದೆಂದರೆ ೧೯೫೩ರಲ್ಲಿ ವಿಶ್ವಸಂಸ್ಥೆಯ ಅಧ್ಯಕ್ಷರೆಂದು ಆಯ್ಕೆಹೊಂದಿ ಭಾರತ ಮಹಿಳೆಯರ ಕೀರ್ತಿಯನ್ನು ವಿಶ್ವದೆಲ್ಲೆಡೆಗೂ ಹಬ್ಬಿಸಿದರು. ಹೀಗೆ ಅನೇಕ ವರುಷಗಳಿಂದ ಭಾರತದ ಒಳಗೂ ಹೊರಗೂ ಅತ್ಯುನ್ನತ ಅಧಿಕಾರದ ಸ್ಥಾನಗಳಲ್ಲಿದ್ದು ಭಾರತ ಮಾತೆಯ ಸೇವೆಯನ್ನು ಮಾಡುತ್ತಿದ್ದಾರೆ. ಇವರಿಗೆ ಇನ್ನೂ ಹೆಚ್ಚು ಉಜ್ವಲವಾದ ಭವಿತವ್ಯ ಕಾದಿದೆ. ಪರಮಾತ್ಮನು ಶ್ರೀಮತಿಯವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ.

ಮೊಹರಮ್ ದಿನಾಚರಣೆ

ಮುಸಲ್ಮಾನರಿದ್ದ ವಿಶ್ವದ ಎಲ್ಲ ಕಡೆಗೂ ಅಗಸ್ಟ ತಿಂಗಳ ೨೯ರಂದು ಮೊಹರಮ್‌ದ ೧೦ನೆಯ ದಿನವನ್ನು ಎಂದಿನಂತೆ ಆಚರಿಸಿದರು. ಮೊಹರಮ್‌ದ ೧೦ ದಿನಗಳನ್ನೂ ಮುಖ್ಯವಾಗಿ ೧೦ನೆಯ ದಿನವನ್ನು ಬೇರೆ ಬೇರೆ ದೇಶದವರೂ ಬೇರೆ ಬೇರೆ ಪಂಗಡದವರೂ ತಮ್ಮ ತಮ್ಮ ಪದ್ಧತಿಗಳಿಗನುಸರಿಸಿ ಆಚರಿಸುವರು. ಮೊಹರಮ್‌ದ ಬಗ್ಗೆ ಇತಿಹಾಸ ಹಾಗೂ ಇನ್ನಿತರ ಪಠ್ಯ ಪುಸ್ತಕಗಳಲ್ಲಿ ಕೆಲವು ಸಂಗತಿಗಳನ್ನು ವಿದ್ಯಾರ್ಥಿಗಳು ಪಡೆಯುವದುಂಟು. ಆದರೆ ಮೊಹರಮ್‌ದ ನಿಜವಾದ ಆಚರಣೆ ಹೇಗಿರಬೇಕು ಮತ್ತು ಅದರ ಮಹತ್ವವೇನು ಎಂಬ ಸಂಗತಿಯನ್ನು ನಮ್ಮ ವಿದ್ಯಾರ್ಥಿಗಳು ತಿಳಿಯುವದು ಅತ್ಯವಶ್ಯ. ಮೊಹರಮ್‌ದ ೧೦ನೆಯ ದಿನವು ಕರ್ಬಲಾದಲ್ಲಿ ನಡೆದ ಒಂದು ಮಹಾದುರಂತದ ಕೊನೆಯ ದಿನವಾಗಿದೆ. ಅಂದು ಮಹಮ್ಮದ ಪೈಗಂಬರನ ಮೊಮ್ಮಗನಾದ ಹುಸೇನನು ಸತ್ಯ ಹಾಗೂ ನ್ಯಾಯ ಮುಂತಾದ ತತ್ವಗಳ ಬೆನ್ನು ಹತ್ತಿ ತನ್ನಗಿಂತಲೂ ಎಷ್ಟೋ ಪಾಲು ಮಿಗಿಲಾದ ಸೈನ್ಯದೊಡನೆ ಏಕಾಕಿಯಾಗಿ ಕಾದಾಡಿ ಕೊಲ್ಲಲ್ಪಟ್ಟನು. ತನ್ನ ಹಟವನ್ನು ಸಾಧಿಸಲು ಪ್ರಾಣವನ್ನೂ ಸಹ ಲೆಕ್ಕಿಸಲಿಲ್ಲ. ಹೀಗೆ ಅಮೌಲ್ಯವಾದ ತತ್ವಗಳ ರಕ್ಷಣೆಗೆ ತಮ್ಮ ಪ್ರಾಣವನ್ನೂ ಸಹ ಕಳೆದುಕೊಂಡ ಮಹಾನುಭಾವರ ಹೆಸರುಗಳಲ್ಲಿ ಹುಸೇನನ ಹೆಸರು ಚಿರಸ್ಮರಣೀಯವಾಗಿದೆ. ಮಹಮ್ಮದ ಪೈಗಂಬರರ ತರುವಾಯ ಯಾರು ಖಲಿಫರಾಗಬೇಕೆಂಬುವ ಪ್ರಶ್ನೆಯು ಬರಬರುತ್ತ ರಾಜಕೀಯ ಸ್ವರೂಪವನ್ನು ತಾಳಿದ ಪರಿಣಾಮವಾಗಿ ಮುಸ್ಲೀಮ ಮತದಲ್ಲಿ ಇಬ್ಬಣಗಳಾಗಿ ಕೊಲೆ, ರಕ್ತಪಾತ, ಅನ್ಯಾಯಗಳು ನಡೆದವು. ಅವೆಲ್ಲವುಗಳನ್ನು ನಿಲ್ಲಿಸಬೇಕೆಂಬ ಹಟದಿಂದ ಪ್ರಯತ್ನಿಸಿದ ಹುಸೇನನಿಗೆ ಜಯ ದೊರೆಯಲಿಲ್ಲ. ಕೊನೆಗೆ ಹುಸೇನನು ಪ್ರಾರ್ಥನೆಯಲ್ಲಿರುವಾಗ ಕೊಲ್ಲಲ್ಪಟ್ಟನು. ಇವೇ ಮೊದಲಾದ ಐತಿಹಾಸಿಕ ನಿಜಾಂಶಗಳನ್ನು ನಮ್ಮ ವಿದ್ಯಾರ್ಥಿಗಳು ತಿಳಿಯಬೇಕು ಕೆಲವರು ಮೊಹರಮ್‌ವನ್ನು ಸೂತಕ ದಿನಗಳೆಂದು ಆಚರಿಸಿದರೆ ಅದನ್ನೇ ಬೇರೆ ಕೆಲವರು ಉತ್ಸವ ದಿನಗಳೆಂದು ಆಚರಿಸುವರು. ಇದು ಹೀಗೆ ಯಾಕೆ ಇರಬೇಕು, ಇದಕ್ಕೆ ಐತಿಹಾಸಿಕ ಆಧಾರಗಳೇನು ಇವೇ ಮುಂತಾದ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪಷ್ಟ ಕಲ್ಪನೆ ಇರುವದು ಅವಶ್ಯ.

ಒಬ್ಬ ಶಿಕ್ಷಕ ತಜ್ಞನ ಕಣ್ಮರೆ

ಇದೇ ತಿಂಗಳ ದಿನಾಂಕ ೨ರಂದು ಬಿಹಾರ ರಾಜ್ಯದ ಪಬ್ಲಿಕ್ ಸರ್ವಿಸ್ ಕಮೀಶನ್‌ದ ಅಧ್ಯಕ್ಷರಾದ ಡಾ. ಅಮರನಾಥ ಝಾರವರು ಪಾಟಣಾದಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರು. ಇವರ ನಿಧನದಿಂದ ಇಡೀ ಭಾರತಕ್ಕೆ ತುಂಬಿಬಾರದ ಹಾನಿಯಾಗಿದೆ. ಇವರು ಉತ್ತರ ಪ್ರದೇಶದವರಿದ್ದು ತಮ್ಮ ಚಿಕ್ಕಂದಿನ ಅಭ್ಯಾಸವನ್ನು ಅಲಹಾಬಾದದಲ್ಲಿ ಮುಗಿಸಿ ಉಚ್ಚಶಿಕ್ಷಣ ಸಂಸ್ಥೆಗಳಲ್ಲಿ ಅಪ್ರತಿಮ ವಿದ್ಯಾರ್ಥಿಯೆಂದು ಹೆಸರುಗಳಿಸಿದರು. ಇಂಗ್ಲೀಷ ಭಾಷೆಯನ್ನು ಆಳವಾಗಿ ಅಭ್ಯಸಿಸಿದರು. ಇಂಗ್ಲೀಷ ಭಾಷೆಯ ಪ್ರಾಧ್ಯಾಪಕರೆಂದು ತಮ್ಮ ನೌಕರಿಯನ್ನು ಪ್ರಾರಂಭಿಸಿದರು. ಮೊದಲಿನಿಂದಲೂ ದೀರ್ಘ

ಪರಿಶ್ರಮ ಪಡುವವರಾದುದರಿಂದ ಅವರು ಶಿಕ್ಷಣ ಕ್ಷೇತ್ರದಲ್ಲಿ ಕೆಲವು ದಿನಗಳಲ್ಲಿಯೇ ಗಣ್ಯವ್ಯಕ್ತಿಗಳೆಂದು ಎಣಿಸಲ್ಪಟ್ಟರು. ತಮ್ಮ ಜೀವನದಲ್ಲಿ ಅತ್ಯುನ್ನತ ಸ್ಥಾನಗಳಲ್ಲಿ ದುಡಿಯುವ ಪ್ರಸಂಗಗಳನ್ನು ಹಲವಾರು ಸಾರೆ ತಂದುಕೊಂಡಿದ್ದರು. ಅಲಹಾಬಾದ ಹಾಗೂ ಬನಾರಸ ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿದ್ದು ಉತ್ತರ ಪ್ರಾಂತದ ಪಬ್ಲಿಕ್ ಸರ್ವಿಸ್ ಕಮಿಶನ್‌ದ ಅಧ್ಯಕ್ಷರಾಗಿದ್ದರು. ಅಂತರ್ ವಿಶ್ವವಿದ್ಯಾಲಯಗಳ ಸಮಿತಿಯ ಅಧ್ಯಕ್ಷರಾಗಿಯೂ ದುಡಿದರು. ಅಖಿಲ ಭಾರತದ ಶೈಕ್ಷಣಿಕ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಇನ್ನೂ ಹಲವಾರು ರೀತಿಯಿಂದ ಡಾ. ಝಾರವರು ಭಾರತದ ಶಿಕ್ಷಣರಂಗದಲ್ಲಿ ಅಮೋಘವಾದ ಸೇವೆಯನ್ನು ಸಲ್ಲಿಸಿದರು. ಅವರು ಇಂಗ್ಲೀಷ ಭಾಷೆಯ ಸುಪ್ರಸಿದ್ಧ ಶಿಕ್ಷಕರೆಂದೂ ಬಹುಭಾಷಾಪಂಡಿತರೆಂದೂ ಶಿಕ್ಷಣತಜ್ಞರೆಂದೂ ಹೆಸರಾದ ಗ್ರಂಥಕಾರರೆಂದೂ ಭಾರತೀಯರಿಗೆ ಚಿರಪರಿಚಿತರಾಗಿದ್ದರು. ತಮ್ಮ ಇಡೀ ಜೀವನವನ್ನೇ ಶಿಕ್ಷಣಕ್ಷೇತ್ರಕ್ಕೆ ಮುಡುಪಾಗಿಟ್ಟಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅವರ ಮಾತಿಗೆ ಎಲ್ಲರೂ ಬೆಲೆ ಕೊಡುತ್ತಿದ್ದರು. ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ಅವರ ಮಾರ್ಗದರ್ಶನ ಇನ್ನೂ ಕೆಲವು ಕಾಲಬೇಕಾಗಿತ್ತು. ಇಂಥ ಸಂಧಿಕಾಲದಲ್ಲಿ ಒಬ್ಬ ಶ್ರೇಷ್ಠ ಶಿಕ್ಷಣತಜ್ಞನನ್ನು ಕಳೆದುಕೊಂಡುದು ಅಪಾರವಾದ ಹಾನಿ. ಆದರೆ ದೈವ ಸಂಕಲ್ಪವೇ ಬೇರೆ ಇದ್ದಮೇಲೆ ಯಾರು ಮಾಡುವದೇನು? ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಆಚಾರ್ಯ ವಿನೋಬಾ ಭಾವೆಯವರ ಷಷ್ಟ್ಯಬ್ದಿ

ಆಚಾರ್ಯ ಭಾವೆಯವರು ಇದೇ ತಿಂಗಳ ೧೧ ರಂದು ತಮ್ಮ ೬೦ ವರುಷಗಳನ್ನು ಮುಗಿಸುವರು. ಅಂದು ಭಾರತದಲ್ಲೆಲ್ಲಾ ಅವರ ಜನ್ಮೋತ್ಸವಗಳು ನಡೆಯುವವು. ಅವರು ಈ ಯುಗದ ದಿವ್ಯಜ್ಞಾನಿಗಳಾಗಿದ್ದಾರೆ. ಭಾರತದ ಕೋಟ್ಯವಧಿ ಜನರಿಗೆ ಸ್ವರಾಜ್ಯದ ನಿಜವಾದ ಅರ್ಥವೇನಾಗಬೇಕೆಂಬ ಕನಸನ್ನು ನನಸನ್ನಾಗಿ ಮಾಡಲಿಕ್ಕೆ ಪ್ರೇಮ ಹಾಗು ಶಾರೀರಿಕ ಶ್ರಮ ಈ ಅಸ್ತ್ರದ್ವಯಗಳ ಸಹಾಯದಿಂದ ಭೂದಾನ ಯಜ್ಞವನ್ನು ಹೂಡಿದ್ದಾರೆ. ಈಗಾಗಲೆ ಈ ಯಜ್ಞಕ್ಕೆ ಸುಮಾರು ೪೦ ಲಕ್ಷ ಎಕರೆಗಳಷ್ಟು ಭೂಮಿಯು ಸಂಗ್ರಹಿಸಲ್ಪಟ್ಟಿದೆ. ಈ ಮಹಾ ಆಂದೋಲನವನ್ನು ಗಾಳಿ, ಮಳೆ, ಬಿಸಿಲೆನ್ನದೆ ಕಾಲ್ನಡಿಗೆಯಿಂದಲೇ ಸಾಗಿಸುತ್ತಿರುವ ಆಚಾರ್ಯರಿಗೆ ದೇವರು ದೀರ್ಘ ಆಯುಷ್ಯವನ್ನೂ ಆರೋಗ್ಯ ಸಂಪತ್ತನ್ನೂ ಕೊಡಲೆಂದು ಪ್ರಾರ್ಥಿಸುವೆವು.

ವಿನೋಬಾರವರ ಜೀವನ ಚರಿತ್ರೆ ಅವರ ಉದಾತ್ತ ಧ್ಯೇಯ ಹಾಗು ಕಾರ್ಯ ಮುಂತಾದವುಗಳ ಬಗೆಗೆ ನಮ್ಮ ವಿದ್ಯಾರ್ಥಿಗಳಿಗೆ ಸಾಕಷ್ಟು ಕಲ್ಪನೆಯಿರುವದು ಅವಶ್ಯವೆಂದು ತೋರುತ್ತದೆ. ಅವರ ಜನ್ಮೋತ್ಸವವನ್ನು ಈ ದಿಸೆಯಲ್ಲಿ ಜರುಗಿಸಿದರೆ ನಿಜವಾಗಿಯೂ ಸಾರ್ಥಕವಾದೀತು.

ಶ್ರೀಮತಿ ಇಂದಿರಾ ಗಾಂಧಿಯವರ ಕರ್ನಾಟಕ ಸಂಚಾರ

ಶ್ರೀಮತಿ ಇಂದಿರಾ ಗಾಂಧಿಯವರು ಮುಂದಿನ ತಿಂಗಳಲ್ಲಿ ಕರ್ನಾಟಕಕ್ಕೆ ಭೆಟ್ಟಿಕೊಡುವರೆಂಬ ಬಗ್ಗೆ ಈಗಾಗಲೇ ಎಲ್ಲರೂ ಓದಿ ಉತ್ಸಾಹಭರಿತರಾಗಿರಲು ಸಾಕು. ಶ್ರೀಮತಿಯವರು ಶ್ರೀ ಜವಾಹರಲಾಲರ ಏಕಮಾತ್ರ ಪುತ್ರಿಯಾಗಿದ್ದು ತಂದೆಯವರ ಜೀವನದ ಮುಖ್ಯಾಧಾರವಾಗಿದ್ದಾರೆ. ಮುಖ್ಯ ಪ್ರಧಾನಿಗಳು ಎಲ್ಲಿಯೇ ಇರಲಿ ಯಾವ ದೇಶವನ್ನೇ ಸಂಚರಿಸಲಿ ಎಂಥ ಮಹತ್ವದ ರಾಜಕಾರಣ ಪ್ರಸಂಗಗಳೇ ಇರಲಿ ಅವರ ಜೊತೆಗೆ ಶ್ರೀಮತಿ ಗಾಂಧಿಯವರು ಇದ್ದೇ ಇರುವರು. ತಂದೆಯವರು ನೆರಳನಂತೆ ಹಿಂಬಾಲಿಸಿ, ಅವಿಶ್ರಾಂತವಾದ ಅವರ ರಾಜಕೀಯ ಜೀವನವು ಸುಗಮವಾಗುವಂತೆ ನೋಡಿಕೊಳ್ಳುವ ಗುರುತರವಾದ ಹೊಣೆಗಾರಿಕೆ ಶ್ರೀಮತಿಯವರ ಪಾಲಿಗೆ ಬಂದು ಬಹಳ ದಿನಗಳಾದವು. ಇದನ್ನು ಯಶಸ್ವಿಯಾಗಿ ನಿರ್ವಹಿಸಿಯೂ ಸಮಾಜ ಕಲ್ಯಾಣದ ವಿವಿಧ ಕ್ಷೇತ್ರಗಳಲ್ಲಿ ತಾವೂ ದುಡಿಯುತ್ತಿದ್ದಾರೆ. ಮೇಲಾಗಿ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲದ ಸದಸ್ಯರೂ ಇದ್ದಾರೆ. ಮೊನ್ನೆ ಮುಖ್ಯ ಪ್ರಧಾನರು ಯುರೋಪದ ಪ್ರವಾಸವನ್ನು ಕೈಕೊಂಡಾಗ ಅವರ ಜೊತೆಗೆ ಹೋಗಿ ಭಾರತದ ಬಗೆಗೆ ಪಾಶ್ಚಿಮಾತ್ಯರಲ್ಲಿರುವ ಗೌರವಾದರಗಳನ್ನು ಪ್ರತ್ಯಕ್ಷ ಕಂಡು ಬಂದಿದ್ದಾರೆ. ಶ್ರೀಮತಿಯವರು ನಮ್ಮ ಪ್ರಾಂತಕ್ಕೆ ಬರುತ್ತಿರುವದು ಇದೇ ಮೊದಲನೆಯದಾಗಿರಬಹುದು. ಅವರ ಬರುವಿಕೆಯನ್ನು ಎಲ್ಲರೂ ನಿರೀಕ್ಷಿಸುತ್ತಿರುವದು ಸಹಜವಾಗಿದೆ. ಶ್ರೀಮತಿಯವರಿಗೆ ಕರ್ನಾಟಕ ಸಂಚಾರವು ಎಲ್ಲ ದೃಷ್ಟಿಯಿಂದಲೂ ಸುಖಮಯವಾಗಲೆಂದು ಹಾರೈಸುವೆವು.

ಕರ್ನಾಟಕ ಗೊಂದಲಿಗರು

ಬರೆದವರು : ಡಾ. ಬಿ. ಎಸ್. ಗದ್ದಗೀಮಠ, ಲಕ್ಷ್ಮೇಶ್ವರ.

ಕರ್ನಾಟಕದಲ್ಲಿ ಹಾಡುಗಬ್ಬಗಳನ್ನು ಹಾಡಿ ಜನರನ್ನು ತಣಿಸುವ ಅನೇಕ ಜನಾಂಗಗಳಿವೆ. ಅವರ ಉದ್ಯೋಗವು ಈಗಲೂ ಹಾಡುವುದು; ಕಥೆಯನ್ನು ಹೇಳುವುದು. ಹೊಲೆದಾಸರು, ಮುಟ್ಟೆದಾಸರು, ಗರುಡದಾಸ ಮೊದಲಾದವರು ಭಜನೆ, ಹರಿಕೀರ್ತನೆಯನ್ನು ಮಾಡುತ್ತ ಕರ್ನಾಟಕದ ತುಂಬೆಲ್ಲ ಅಲೆದಾಡುತ್ತಾರೆ. ಈ ಜನರು ಕರ್ನಾಟಕದಲ್ಲಿ ಹದಿನೈದನೆಯ ಶತಮಾನದಲ್ಲಿ ಪ್ರಸಿದ್ಧ ಹೊಂದಿದರೆಂದು ಐತಿಹಾಸಿಕ ಆಧಾರಗಳಿಂದ ಹೇಳಬಹುದು. ಇವರಕಿಂತಲೂ ಹಿಂದೆ ಸುಮಾರು ಏಳು ಅಥವಾ ಎಂಟನೆಯ ಶತಮಾನದಿಂದ ಜನಪದಕೆ ಹಾಡಿ, ಕಥೆ ಹೇಳಿ ಜನರ ಮನವನ್ನು ತಣಿಸಿ ಮೆಚ್ಚುಗೆಯನ್ನು ಪಡೆದ ಇನ್ನೊಂದು ದೊಡ್ಡ ಪಂಗಡವು ಈಗಲೂ ಕರ್ನಾಟಕದಲ್ಲಿದೆ. ಈ ಪಂಗಡದ ಜನರೇ ಈಗಿನ ಗೊಂದಲಿಗರು. ಗೊಂದಲಿಗರ ಪರಂಪರೆಯೂ ಪ್ರಾಚೀನತೆಯೂ ದೊಡ್ಡದಿದೆ ಎಂದು ಸಂಶೋಧನೆಯಿಂದ ತಿಳಿದು ಬರುತ್ತದೆ. ಈ ಜನರು ಶಿವನನ್ನೂ ಶಕ್ತಿಯನ್ನೂ ತಮ್ಮ ದೇವತೆಯೆಂದು ಪೂಜಿಸಿ, ಹಾಡಿ ಕಥೆಯನ್ನು ಹೇಳುತ್ತಾರೆ. ಇವರು ಹಾಡುವ, ಹೇಳುವ ಕಥನ-ಕವನಗಳನ್ನು ಪರಿಶೀಲಿಸಿ ನೋಡಿದರೆ ಈಶ್ವರ, ಮಹಾದೇವ, ಹರ, ಶಿವಲಿಂಗ ಎಂಬ ದೇವರನ್ನೊಳಗೊಂಡ ಕಥೆಗಳೇ ಹೆಚ್ಚುಬರುವುವು. ಕಥನ ಕವನವನ್ನು ಹಾಡಿ ಕಥೆಯನ್ನು ಬಿಚ್ಚಿ ಹೇಳುವಾಗ ಈಗಲೂ ಹಾಡುಗಳಲ್ಲಿ ಈ ಜನರು ಶಿವಸೊಲ್ಲುಗಳನ್ನೇ ಪಲ್ಲವಿಯಾಗಿ ಬಳಸುತ್ತಾರೆ. ಆದರೆ ಇವರ ಬಿಡಿಹಾಡುಗಳು ಶಕ್ತಿ, ಕಾಳಿ, ದುರ್ಗಿ, ಭವಾನಿ ಮೊದಲಾದ ದೇವತೆಗಳ ಸ್ತವನಗಳಾಗಿರುವುದನ್ನು ಕಿವಿಯಿಂದ ಕೇಳಬಹುದು. ಈಗಲೂ, ಯಾರಾದರೂ ಅವರ ಕುಲದೇವರನ್ನು ಕೇಳಲು ಅವರು ಅಂಬಾಭವಾನಿ, ತುಳಜಾಭವಾನಿಯು ಭಕ್ತರೆಂದೂ ಕೆಲವರಂತೂ ತಾವು ಕೊಲ್ಹಾಪುರ ಅಂಬಾಭವಾನಿಯ ಸ್ತೋತ್ರಪಾಠಕರೆಂದೇ ಹೇಳುವರು. ಇವರು ಹಾಡಿ ಹೇಳುವ ಕಥೆಗಳಲ್ಲಿ ಶಿವ, ಹರ, ಮಹಾದೇವರ ಸ್ತುತಿಗಳಲ್ಲದೆ ಹೆಚ್ಚಾಗಿ ಶಿವಾಲಯಗಳೇ ಕಥಾ–ಸನ್ನಿವೇಶಗಳಲ್ಲಿ ಬರುವುವು. ಹೀಗೆ ಶಿವೋಪಾಸಕರಾದ ಇವರು ಇಂದು ಅಂಬಾಭವಾನಿಯ ಭಕ್ತರಾದುದು ಎಂದು ಎಂಬ ಪ್ರಶ್ನೆಯು ಸಂಶೋಧಕರಿಗೆ ಬಾರದಿರದು.

ಪ್ರಾಚೀನಕಾಲದಿಂದಲೂ ಇವರು ಶಿವೋಪಾಸಕರಿದ್ದು ಶಿವನಿಗೆ ತಮ್ಮ ಹಾಡುಗಥೆಗಳಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟಿದ್ದರೂ ಶಕ್ತಿಯನ್ನು ಅಲ್ಲೊಮ್ಮೆ ಇಲ್ಲೊಮ್ಮೆ ಬೇಕಾದಾಗ ಮಾತ್ರ ಹೊಗಳಿದ್ದು ಅವರು ಹೇಳುವ ಕಥೆಗಳಲ್ಲಿ ಬರುವುದು. ಹೀಗಿದ್ದ ಈ ಜನರು ಈಗ ಹೇಗೆ ಅಂಬಾಭವಾನಿಯ ಭಕ್ತರಾದರೆಂಬುದನ್ನು ಚರ್ಚಿಸುವುದು ಅತ್ಯಗತ್ಯ. 'ಗೊಂದಲ' ಶಬ್ದವು ಅಚ್ಚಗನ್ನಡ ಶಬ್ದವಿದ್ದು ಕನ್ನಡ ಕವಿಗಳು ಅದನ್ನು ಹೇರಳವಾಗಿ ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ. ಪಂಪ, ರುದ್ರಭಟ್ಟ, ಅಭಿನವಪಂಪ, ಹರಿಹರ, ವಿರೂಪಾಕ್ಷಪಂಡಿತ, ಲಕ್ಷ್ಮೀಶ ಮೊದಲಾದ ಕನ್ನಡ ಕವಿಶ್ರೇಷ್ಠರು ಈ ಶಬ್ದವನ್ನು ತಮ್ಮ ಕಾವ್ಯಗಳಲ್ಲಿ 'ಸಮೂಹ' ಎಂಬರ್ಥದಲ್ಲಿ ಪ್ರಯೋಗಿಸಿದ್ದಾರೆ. ಇವರಲ್ಲಿ ಅಭಿನವ ಪಂಪನು ಮಾತ್ರ ಪಂಪರಾಮಾಯಣದಲ್ಲಿ ಈ ಶಬ್ದವನ್ನು 'ಒಂದು ಬಗೆಯ ನಾಟಕ' ವೆಂಬರ್ಥದಲ್ಲಿ ಉಪಯೋಗಿಸಿದ್ದಾನೆ.

ಉ:— ದೇಶಿ ವಿಲಾಸಮಂ ಪಡೆಯೆ ಗೊಂದಳ
ವೆಕ್ಕಣವಾಗಳಾನೃಪಾ।
ವಾಸದೊಳಾಡಿ ದತ್ತೆಸೆಯೆ, ಪಾಣಿತಲಂ
ಪಡೆವಂತೆ ಕುಂಕುಮ॥

ಸ್ಥಾಪಕವಮಂ, ಕುರುಳ್ ಕೆದರುವಂತೆ
ತಮಾಲ ನವಪ್ರವಾಳಮಂ |
ಕೇಸಡಿ ವಾಸುವಂತೆ ತಳಿರಂ ನಗೆಗಣ್ಣು
ಗುಳ್ವಂತೆ ನೆಯ್ದಿಲಂ ||೧||
ಆ. ಶ. ||೧೦೬||

ಎಂದು ತನ್ನ ಕಾವ್ಯದ 'ದೇಶಿ' ಯ ವಿಲಾಸವನ್ನು ಬಣ್ಣಿಸಿದ್ದಾನೆ. ಅಭಿನವಪಂಪನ ಕಾಲವು ಹನ್ನೊಂದನೆಯ ಶತಮಾನದ ಕೊನೆಯದೆಂದು ಕವಿಚರಿತೆ-ಕಾರರು ಒಪ್ಪಿಕೊಂಡಿದ್ದಾರೆ. ಇದರ ಮೇಲಿಂದ ಗೊಂದಲಿಗರು ಅಭಿನವಪಂಪನ ಕಾಲದಲ್ಲಿ ಇದ್ದರೆಂದೂ ಅವರು ರಾಜಾಸ್ಥಾನದಲ್ಲಿ ಒಂದು ಬಗೆಯ ನಾಟಕ-ವಿನೋದಾವಳಿಗಳನ್ನು ಮಾಡುವ ದೇಸಿಗ (ಹಳ್ಳಿಗ) ರೆಂದೂ ಸಂಶೋಧಕರಿಗೆ ವೇದ್ಯವಾಗದಿರದು. ಅಭಿನವಪಂಪನ ಕಾಲದಲ್ಲಿ ಈ ಜನರು ಅರಸನೊಡ್ಡೋಲಗದಲ್ಲಿ ತಮ್ಮ ನಾಟಕ ವಿನೋದಾವಳಿಗಳನ್ನಾಡಿ 'ದೇಶಿ'ಯ ವಿಲಾಸವನ್ನು ತೋರಿಸುತ್ತಿದ್ದರೆಂದ ಮೇಲೆ ಇವರಿಗೆ ಐತಿಹಾಸಿಕ ದೊಡ್ಡ ಪರಂಪರೆ ಇರಲೇಬೇಕು. ನೃಪತುಂಗನು ತನ್ನ ಕವಿರಾಜ ಮಾರ್ಗದಲ್ಲಿ ಹೇಳುವ ಚಿತ್ತಾಣ, 'ಬೆದಂಡೆ' 'ಭಾಜನೆ ಗಬ್ಬ' ಮೊದಲಾದ ಹಾಡುಗಬ್ಬಗಳನ್ನು ಹಾಡುವ ಜನರು ಇವರೇ ಏಕೆ ಆಗಿರಲಿಕ್ಕಿಲ್ಲ ?

'ಗೊಂದಲವು' ಯಕ್ಷಗಾನವಲ್ಲ. ಯಕ್ಷಗಾನವು ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಮಾತ್ರ ವಿಶೇಷ ಸಂಬಂಧಿಸಿದೆ. ಈ ಜಿಲ್ಲೆಗಳಲ್ಲಿ ಗೊಂದಲಿಗರೇ ಇಲ್ಲ. 'ಕವಿರಾಜ ಮಾರ್ಗ'ದಲ್ಲಿ 'ನಾಳ್ವಗರಣ' ಅಭಿನವಪಂಪನ 'ಮಲ್ಲಿನಾಥನ ಪುರಾಣ'ದಲ್ಲಿ 'ಯಕ್ಷಂದೋಳನ' ಅಗ್ಗಳನ 'ಚಂದ್ರಪ್ರಭೆ'ಯಲ್ಲಿ 'ಎಕ್ಕಲಗಾಣ' ರತ್ನಾಕರ ವರ್ಣಿಯ 'ಭರತೇಶವೈಭವ'ದಲ್ಲಿ ಎಕ್ಕಡಿಗಾರ ಇವಾವೂ ಯಕ್ಷಗಾನಕ್ಕೆ ಸಂಬಂಧಿಸಿಲ್ಲವೆಂದು ಯಕ್ಷಗಾನ ತಜ್ಞರು ಒಪ್ಪುತ್ತಾರೆ. ಇವೆಲ್ಲವುಗಳು ಹಾಡುಗಬ್ಬಗಳಿರುವದರಿಂದ ಕರ್ನಾಟಕ ಗೊಂದಲಿಗರು ಆಡುತ್ತಿರುವ 'ಗೊಂದಲ' (ಒಂದು ಬಗೆಯ ನಾಟಕ) ದ ವಿವಿಧ ನಾಟಕ ವಿನೋದಾವಳಿಗಳಿರಬಹುದೇ ? ಈ ಎಲ್ಲ ಅನುಮಾನಗಳು ಕರ್ನಾಟ ಗೊಂದಲಿಗರ ಅತಿ ಪ್ರಾಚೀನ ಪರಂಪರೆಯನ್ನು ಹೇಳದಿರವು. ಕರ್ನಾಟಕ ಜನಪದದಲ್ಲಿ ನಾಟಕ ವಿನೋದಾ
ವಳಿಗಳನ್ನು ಆಡಿತೋರಿಸಿ ಜನರನ್ನು ತಣಿಸುವ ಮ
ಜಾತಿಗರೂ (ಬಹುರೂಪಿಗಳು) ಕಿಳ್ಳಿಕ್ಯಾತರೂ
ಗೊಂದಲಿಗರ ವರ್ಗಕ್ಕೆ ಸೇರಿದವರು. ಶಿವಶರಣ
ಜಾತಿಗರ ಚೌಡಯ್ಯನೆಂಬ ಶಿವಭಕ್ತನು ಬಹುಪ್ರಸಿ
ಯಾಗಿ ಹೋಗಿದ್ದಾನೆ. ಈ ಶಿವಭಕ್ತನು ಶಿವನ ಲೀಲಾ
ಪಗಳನ್ನು ಹಾಕಿ, ಹಾಡಿ ಕುಣಿಯುತ್ತಿದ್ದನೆಂದು ಅವನ
ತ್ರಿಯಿಂದ ಗೊತ್ತಾಗುತ್ತದೆ. ಶಿವನ ಲೀಲೆಗಳನ್ನೊಳಗೊ
'ಶಿವಪಾರಿಜಾತ' ವೆಂಬ ಒಂದು ಹಾಡುಗಬ್ಬದ ಅತಿ
ರ್ಣವಾದ ಕೈಬರಹದ ಪ್ರತಿಯು ಬೈಲಹೊಂಗ
ಶ್ರೀ ದೊಡ್ಡ ಭಾವೇಶ್ವಿ ಮೂಗಿ ಅವರಲ್ಲಿ ನನ್ನ ನಿದ
ನಕ್ಕೆ ಬಂತು. ಅದರಲ್ಲಿ ಬರುವ ಹಲಕೆಲವು ಸಂಕೇ
ಗಳಿಂದ ಇದು ಶರಣ ಚೌಡಯ್ಯನ ಶಿವಪಾರಿಜಾತ ವಿ
ಹುದೆಂದು ಶಂಕಿಸಲಾಗಿದೆ. ಈ ಶರಣನ ಸಂಬಂ
ಹಂತಿಯ ಹಾಡುಗಳೂ ದೊರೆಯುತ್ತವೆ. ಮೇಲೆ ಹೇ
ಈ ಪಂಗಡದ ಜನರೆಲ್ಲರೂ ಒಂದೊಂದು ಬಗೆಯ
ಕನ್ನಡ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಅವ
ಹಾಡಿ ಆಡಿದ ಎಷ್ಟೋ ಕೃತಿಗಳು ಗ್ರಂಥಸ್ತವಾಗದೆ ಗಾ
ಡಾಗಿ ಹೋಗಿವೆ ಎಂದೂ ಈಗಲೂ ಹೋಗುತ್ತಿರು
ವೆಂದೂ ಹೇಳಲು ಒಲು ದುಃಖವೆನಿಸುವದು. ಕನ್ನ
ಸಾಹಿತ್ಯಾಭಿಮಾನಿಗಳೂ ರಸಿಕರೂ ಇವುಗಳನ್ನು ಬೆಳ
ತರಲು ಇಂದಾದರೂ ಮುಂದೆ ಬರಬೇಕಾಗಿದೆ.

'ಗೊಂದಲವು' (ಒಂದು ಬಗೆಯ ನಾಟಕ
ಗೊಂದಲಿಗರ ಕಾಯಕವಾಗಿತ್ತು. ಈ ಜನರು ಮೊದ
ಶಿವೋಪಾಸಕರಿದ್ದರೂ ಕಾಲಮಾನದಂತೆ ತಮ್ಮ ಪೂಜೆ
ರಸ್ಕಾರಗಳನ್ನು ಬದಲಾಯಿಸಿಕೊಂಡು ಬಂದಂತೆ ತೋ
ತ್ತದೆ. ಹಾಡುಗಬ್ಬಗಳನ್ನು ಹಾಡುತ್ತ ಜನರ ಮನರಂ
ನೆಯನ್ನು ಮಾಡುತ್ತ ಅಲೆದಾಡುವ ಈ ಜನರು ಮುಂ
ರಾಜಕಾರಣದಲ್ಲಿ ಕೈಯಿಟ್ಟದ್ದು ಕಂಡುಬರುತ್ತದೆ. ಕರ್
ಟಕ ಇತಿಹಾಸವನ್ನು ಅಭ್ಯಸಿಸಲು ಹಲಕೆಲವು ಕಡೆಯ
ಗೊಂದಲಿಗರು, ಜಾತಿಗರು, ಬುಡಬುಡಕಿಗಳು ಮೊ
ಲಾದ ಈ ವರ್ಗಕ್ಕೆ ಸೇರಿದ ಜನರ 'ಗೂಢಾಚಾರ'ರಾ
ಗಿಯೂ 'ಗುಪ್ತರಾಜದೂತ'ರಾಗಿಯೂ ವರ್ತಿಸಿದ್ದು
ತಿಳಿದು ಬರುವದು. ವಿಜಯನಗರದ ಅರಸರ ಕಾಲ
ಲ್ಲಿಯೂ ವಿಜಯಪುರ ಅರಸರ ಕಾಲದಲ್ಲಿಯೂ ಧಂದಿಸ್ಕೆ
ಗೊಂದಲವನ್ನಾಡಿಸುವದು ವಿಶೇಷ ಬಳಕೆಯಲ್ಲಿತ್ತು

ಹಲ್ಲದೆ ಅನೇಕ ಸಣ್ಣಪುಟ್ಟ ಮಾಂಡಲೀಕರು ಇಂಥ ಜನ ರನ್ನು ತಮ್ಮಲ್ಲಿಟ್ಟುಕೊಂಡು ದತ್ತಿ ದೇಣಿಗೆಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರೆಂದು ಆ ಜನರಿಗಿರುವ ಜಾತ ಇನಾಮು' ಭೂಮಿಗಳಿಂದ ತಿಳಿದು ಬರುತ್ತದೆ. ಗೊಂದಲವು' ಆಗಿನ ಕಾಲದಲ್ಲಿ ಜನಪ್ರಿಯವಾದ ಕಾರಣ ಎಲ್ಲ ಜನರೂ ಅದಕ್ಕೆ ಪ್ರಾಶಸ್ತ್ಯಕೊಟ್ಟು ಆಡಿಸು ತ್ತಿದ್ದರು. ಜನಸಾಮಾನ್ಯರಿಗಂತೂ ಅದೊಂದು ವಿನೋ ದಾವಳಿಯೇ ಆಗಿತ್ತು. ಗೊಂದಲಿಗರು ತಮ್ಮ ಮೇಳಗ ಳನ್ನು ಕಟ್ಟಿಕೊಂಡು ದೇಶದ ತುಂಬೆಲ್ಲ ಸಂಚರಿಸಿ ಸ್ಥಾನಿಕ ಸುದ್ದಿಗಳನ್ನು ಅರಸರಿಗೆ ಮುಟ್ಟಿಸುತ್ತಿದ್ದರು. ಮಹಾರಾಷ್ಟ್ರದ ಇತಿಹಾಸದಲ್ಲಂತೂ ಗೊಂದಲಿಗರು ಈ ಕೆಲಸಗಳನ್ನು ಬಲು ದಕ್ಷತೆಯಿಂದ ಮಾಡುತಿದ್ದರೆಂಬು ದಕ್ಕೆ ಅನೇಕ ನಿದರ್ಶನಗಳುಂಟು.

ದಕ್ಷಿಣದಲ್ಲಿ ಮಹಾರಾಷ್ಟ್ರರು ಪ್ರಬಲರಾಗಲು ಅನೇಕ ಕನ್ನಡ ಸಂಸ್ಥಾನಗಳು ಮಹಾರಾಷ್ಟ್ರರ ವಶವಾ ದುವು. ಈ ಸಂಸ್ಥಾನಗಳಲ್ಲಿ ವಾಸಮಾಡಿಕೊಂಡಿದ್ದ ಅನೇಕ ಗೊಂದಲಿಗರು ಮಹಾರಾಷ್ಟ್ರರ ಕೈವಶವಾದರು. ಅವರ ಪ್ರಭಾವವು ರಾಜಬಲದಿಂದ ಈ ಜನತೆಯ ಮೇಲೆ ಬಿತ್ತು. ಮರಾಠರು ಅಂಬಾಭವಾನಿಯ ಭಕ್ತರು. ಮರಾಠರ ಸಂಪರ್ಕದಿಂದ ಬರಬರುತ್ತ ಈ ಜನರು ಶಕ್ತಿ ಶಿವೋಪಾ ಸಕರಿದ್ದರೂ ಅಂಬಾಭವಾನಿ, ತುಳಜಾಭವಾನಿಯ ಭಕ್ತ ರಾದರು. ಮೊದಲಿನಿಂದಲೂ ಕನ್ನಡಿಗರಾಗಿದ್ದ ಈ ಜನರ ಸ್ತ ಸಂಬಂಧವು ಕರ್ನಾಟಕದಲ್ಲಿಯೇ ಹೆಚ್ಚಾಗಿತ್ತು. ಮುಂದೆ ಪೇಶ್ವೆಯರ ಆಳಿಕೆಯಲ್ಲಿ ಪೇಶ್ವಾಯಿ ಅಮಲಿನ ತ್ತದ ಪ್ರಭಾವವು ಕರ್ನಾಟಕದ ಮೇಲೆ ವಿಶೇಷ ಗಲು ಕರ್ನಾಟಕದ ಗೊಂದಲಿಗರೂ ಮಹಾರಾಷ್ಟ್ರದಲ್ಲಿ ರಿಕೊಂಡ ತಮ್ಮ ಬೀಗ ಬಿಜ್ಜರ ಧರ್ಮಾಚರಣೆಗಳ ಸ್ವೀಕರಿಸಿಕೊಂಡು ಅಂಬಾಭವಾನಿ, ತುಳಜಾಭವಾನಿಯ ಭಕ್ತರಾದರಲ್ಲದೆ ಅನೇಕರು ಮರಾಠಿ ಭಾಷೆಗೆ ಮನ ಸೋತು ಮರಾಠಿಯನ್ನೇ ತಮ್ಮ ಭಾಷೆಯನ್ನಾಗಿ ಮಾಡಿ ಕೊಂಡರು. ಹೀಗಾಗಿ ಮರಾಠಿಗರ ಪ್ರಭಾವವು ಈ ಸಂಚಾರ ಮಾಡುವ ಜನರ ಮೇಲೆ ವಿಶೇಷ ಪರಿಣಾಮ ಮಾಡಿತು. ಇಂದಿಗೂ ಆ ಜನರು ಹಾಗೆಯೇ ಉಳಿದು ಕೊಂಡಿದ್ದಾರೆ.

ಕರ್ನಾಟಕ ಜನಪದದಲ್ಲಿ 'ನಿನ್ನ ಗೊಂದಲ ತಿಳು ದಿಲ್ಲ' ಎಂಬ ಶಬ್ದಪ್ರಯೋಗವು ಮೇಲಿಂದ ಮೇಲೆ ಕೇಳ ಬರುವುದು. ಗೊಂದಲಿಗರು ತಮ್ಮ ಗೊಂದಲವನ್ನಾಡುತ್ತ ರಾಜಕಾರಣ (politics)ದಲ್ಲಿಯೂ ಭಾಗವಹಿಸ ಹತ್ತಲು ಜನರು ಅವರನ್ನು ನಂಬದಾದರು. ಬರಬರುತ್ತ ಗೊಂದಲವು 'ರಾಜಕಾರಣ' (politics) ಎಂಬರ್ಥ ದಲ್ಲಿ ಕನ್ನಡ ನಾಡೊಳಗೆ ಬಳಕೆಯಲ್ಲಿ ಬಂತು. ಈಗಲೂ ಹಳ್ಳಿಗರು ಈ ಶಬ್ದವನ್ನು ಇದೇ ಅರ್ಥದಲ್ಲಿ ಉಪಯೋಗಿ ಸುವರು.

ಕನ್ನಡ ಜಾನಪದ ಸಾಹಿತ್ಯದಲ್ಲಿ ಗೊಂದಲಿಗರ ಹಾಡುಗಳಿಗೂ ಒಂದು ಸ್ಥಾನವಿದೆ. ಈ ಹಾಡುಗಳು ಬಿಚ್ಚು ಬಿಡಿ ಪದ್ಯಗಳಿರದೆ ಅನೇಕ ತಲೆ ಮಾರಿನ ಕಥಾ ಕವನಗಳಾಗಿವೆ; ಅಥವಾ ಅಖಂಡ ಹಾಡುಗಬ್ಬಗಳಾಗಿವೆ ಎಂದೇ ಹೇಳಬಹುದು. ಇಂದು ಕನ್ನಡ ಗೊಂದಲಿಗರು, ಅಂದು ನೃಪತುಂಗನು ನಿರ್ದೇಶಿಸಿ ಹೇಳಿದ ಅಚ್ಚಗನ್ನಡ ನಾಡಿನಲ್ಲಿಯೇ ಹೆಚ್ಚಾಗಿ ವಾಸ ಮಾಡಿಕೊಂಡಿದ್ದಾರೆ. ಕೆರೂರು, ಬದಾಮಿ ಇವು ಪಟ್ಟದಕಲ್ಲಿ (ಕಿಸುವೊಳಲ್)ಗೂ ಗಜೇಂದ್ರಗಡ, ಕನಕೇರಿ, ಕೊಪ್ಪಳ ಇವು ಕೊಪ್ಪಳ (ಕೊಪಣ) ನಗರಕ್ಕೂ ಕಡಕೋಳ, ಮುರಗೋಡ, ಬೈಲವಾಡ, ಬೈಲಹೊಂಗಲ ಇವು ಒಕ್ಕುಂದಕ್ಕೂ ಗದಗ, ಮುಳಗುಂದ ಇವು ಲಕ್ಷ್ಮೇಶ್ವರ (ಪುಲಿಗೆರೆ)ಕ್ಕೂ ತೀರ ಸಮೀಪವಾಗಿವೆ. ಕೆರೂರ ಗೊಂದಲಿಗರು ಬಾರಿಸಿ ಹಾಡುವದರಲ್ಲಿಯೂ ಕಥೆ ಹೇಳುವುದರಲ್ಲಿಯೂ ಎಲ್ಲ ಗೊಂದಲಿಗರಿಗಿಂತ ಮೇಲೆಂದು ಕರ್ನಾಟಕ ಗೊಂದಲಿ ಗರು ಒಪ್ಪುತ್ತಾರೆ. ಬೈಲವಾಡದ ಗೊಂದಲಿಗರು ಬಾರಿಸಿ ಹಾಡುವುದರಲ್ಲಿಯೂ, ಕಡಕೋಳದ ಗೊಂದಲಿಗರು ಕಥೆ ಹೇಳುವದರಲ್ಲಿಯೂ ಮಿಗಿಲೆಂದು ಜನರು ಈಗಲೂ ಹೇಳುತ್ತಾರೆ. ಈ ಊರುಗಳಲ್ಲಿಯೇ ಗೊಂದಲಿಗರು ಈಗ ಮನೆಮಾರು ಸಹಿತ ವಾಸವಾಗಿದ್ದಾರೆ. ಇವರು ಈಗಲೂ ತಮ್ಮ ಮನೆಗೆಲಸವಾದ 'ಗೊಂದಲ'ವನ್ನೇ ಮಾಡುವರು. ಕೆಲವರು ಅಂಬಾಭವಾನಿಯ ಭಕ್ತರಾಗಿ ಕೈಯಲ್ಲಿ ಕಕ್ಕಡ ದೀವಿಗೆ ಹಿಡಿದು ಭಿಕ್ಷೆಗಾಗಿ ಕರ್ನಾಟಕದ ತುಂಬೆಲ್ಲ ಅಲೆ ದಾಡುವರು. ಈ ಜನರು ಕಥನ ಕವನಗಳನ್ನು ಹಾಡಿ ಒಡೆದು ಹೇಳುವುದರಲ್ಲಿ ಹೆಸರುವಾಸಿಗಳಾಗಿದ್ದಾರೆ. ಇವರು ಅನೇಕ ರಸಾತ್ಮಕ ಹಾಡುಗಬ್ಬಗಳನ್ನು ಅನೇಕ ದಿನಗಳ ವರೆಗೆ ಬಲು ಸೊಗಸಾಗಿ ಹಾಡಿ ನೆರೆದ ಜನರನ್ನು ತಣಿಸುವರು. ಅನೇಕರು ಆಶುಕವಿಗಳಾಗಿ ಯಾವ ಕಥೆ

ಯನ್ನು ಕೊಟ್ಟರೂ ನಿಂತಲ್ಲಿಯೇ ಹಾಡಿ ಜನರನ್ನು ತಣಿಸಬಲ್ಲರು. ಈ ಹಾಡುಗಬ್ಬಗಳನ್ನು ಗೊಂದಲ ಹಾಕಿ ಹೇಳಲು ಗೊಂದಲಿಗರು ಅನೇಕ ವಾದ್ಯಗಳನ್ನು ದನಿಗೂಡಿಸಲು ಮೇಳದಲ್ಲಿ ಉಪಯೋಗಿಸುವರು. ಸುತಿ, ಸಂಬಾಳ, ತಾಳ ಮೊದಲಾದವುಗಳೇ ಗೊಂದಲದಲ್ಲಿ ಉಪಯೋಗಿಸುವ ಮುಖ್ಯ ವಾದ್ಯಗಳಾಗಿವೆ. ಸುತಿಯು ತಂತಿಯ ವಾದ್ಯವಿದ್ದು ಹಾಡುವಾಗ ರಾಗದೊಡನೆ ದನಿ ಹಿಡಿಯುತ್ತದೆ. ಸಂಬಾಳವು ತೊಗಲಿನ ವಾದ್ಯವಿದ್ದು ಕಟಿಯುವ ತಾಳಗಳ ಸಪ್ಪಳದೊಡನೆ ಕಲಬೆರಕಿಯಾಗಿ ಬರುವುದರಿಂದ ಅಪಸರವನ್ನು ಮುಚ್ಚಿಕೊಂಡು 'ಧಿಮ್ ತೋಮ್, ಧಿತ್ತೈ ಕಣ್ ಕಡತ್ತೈ' ಎಂದು ಆವೇಶ ತುಂಬಿ ಹಾಡುವಾಗ ದಣಿವನ್ನೇ ಮರೆಯಿಸಿ' ಗತ್ತು ಲಯದ ಕನ್ನಡ ಸಂಗೀತ ಮಾರ್ಗವನ್ನೇ ಹಿಡಿಯುವದು. ಇಂತಹ ಸಂಗ ಜೋಡಣೆ (orchestra)ಯಲ್ಲಿ ನೆರೆದ ಜನವು ಮನಸೋತು ಹಾಡಿ ಹೇಳುವ ಕಥನಕವನವನ್ನು ಮೈಮರತೇ ಕೇಳಹತ್ತುವುದು. ಗೊಂದಲಿಗರು ಬಹುತರವಾಗಿ ಹಳ್ಳಿಗಳಲ್ಲಿ ಶ್ರಾವಣಮಾಸದಲ್ಲಿ ಇಂತಹ ಕಥನ ಕವನಗಳನ್ನು ಜನರಿಗೆ ಹೇಳುವರು. ವಿಶೇಷವಾಗಿ ಇವರು ಕೆಳಗಿನ ಕಥೆಗಳನ್ನು ಅನೇಕ ದಿನಗಳ ವರೆಗೆ ಹಾಡುತ್ತಾರೆ.

(೧) ಭಿಕ್ಷುಕರಾಜ ಪದ್ಮಾವತಿಯರ ಕಥೆ.
(೨) ಕಾಳಿಂಗರಾಜ ರತ್ನಾವತಿಯರ ಕಥೆ.
(೩) ಮೌನಸಿಂಗ ಇಗ್ನಾವತಿಯರ (ಅರಣ್ಯ ಕುಮಾರನ) ಕಥೆ.
(೪) ಗೋಪಿಚಂದ ಜಯರಾಣಿಯರ (ಬಂಗಾಲಗಿರಿಬಾವನ) ಕಥೆ.
(೫) ಸೋಮಶೇಖರ ಚಂದ್ರಶೇಖರ (ಗಡ್ಡೀಬಸವನ) ಕಥೆ.
(೬) ಶ್ಯಾಮನೇಳ ಬಸಾವತಿಯ ಕಥೆ.
(೭) ಲೌತಕುಮಾರ ಬಸವಕುಮಾರರ ಕಥೆ.
(೮) ಮೈಲಾವತಿ ನೀಲಕುಮಾರರ ಕಥೆ.
(೯) ಲಕ್ಷಾಪತಿಯ ಕಥೆ.
(೧೦) ಪುಂಡದತ್ತಾಜಿಯ ಕಥೆ.
(೧೧) ಬಲವಂತ ಬಸವಂತರ ಕಥೆ.
(೧೨) ಮಂಜಘೋಷೆಯ ಕಥೆ.
(೧೩) ಬಸವೇಶ ಚನ್ನಬಸವೇಶರ ಕಥೆ.
(೧೪) ಗುಣಸಾಗರಿಯ ಕಥೆ.
(೧೫) ಸತ್ತ ಗಂಡನ ಪಡೆದ ಚೆನ್ನವ್ವನ ಕಥೆ.

ಈ ಪ್ರಕಾರ ಅನೇಕ ಅರಸ ಅರಸಿಯರ, ಶರಣ ಶರಣೆಯರ ಕಥೆಗಳನ್ನು ಇನ್ನೂ ಬೇಕೆನ್ನುವಂತೆ ಹೇ ಮುಗಿಸುವರು. ಇವರ ಕಥೆಗಳಲ್ಲಿ ರಕ್ಕಸರು, ಭೂತಪಿಸಾಚಿಗಳು, ತುಡುಗರು, ವನ್ಯಪಶುಗಳ ಭೀಕರತೆ, ಅರಸೊತ್ತಿಗೆ, ವನವಾಸ, ಪ್ರಪಂಚ ಚಮತ್ಕಾರಗಳು, ಲಥಾಯಿ ವ್ಯಾಪಾರ, ಜಲಪರ್ಯಟನ, ಪರದೇಶದ ಕನ್ನೆಯರನ್ನು ಸಾಹಸದಿಂದ ವರಿಸುವ ಸಾಹಸ ಚಿತ್ರಗಳೂ ಬಲು ಸವ ರಸವಾಗಿ ಬರುವುವು. ಅಲ್ಲದೆ, ಕಥಾಗರ್ಭದಲ್ಲಿ ಅನೇ ಉಪಕಥೆಗಳೂ ಬಂಜೆಯರು, ಮಲತಾಯಂದಿರು, ಮ ಮಕ್ಕಳಗೋಳು, ಹರಕೆ, ದೇವೋಪವಾಸ, ನೋಂಪಿ, ತಪಸ್ಸು, ಯಂತ್ರ, ಮಂತ್ರ, ತಂತ್ರ, ಮದ್ದು, ಮಾಟ, ಮೊದಲಾದ ಸಿದ್ಧಾಟಿಕೆಗಳೂ ಸ್ತ್ರೀ ಅಪಹರಣ, ಕುಂಟಲತನ, ಹಾದರ ಮೊದಲಾದ ಅಪಕೃತಿಗಳು ಬಂದರೂ ಕೊನೆಗೆ ಪ್ರಪಂಚವೇ ಮಾರ್ಮಿಕವಾಗಿ ಪಾರಮಾತ್ಮವನ್ನು ಹೊಂದಲು ಅನುಭವದೊಡನೆ ಕಾಲಿಡುವುದು.

ಈ ಹಾಡುಗಬ್ಬಗಳನ್ನು ಹಾಡುವಾಗ ಈ ಜನರು ಅನೇಕ ಜಾನಪದ ಧಾಟಿಗಳನ್ನು ಬಳಸುತ್ತಾರೆ. ೧) ಶಿವಹರನೆ ಎನದೇವ | ೨) ಹರಹರನೆ ಎನದೇವ | ೩) ಶಿವಹರನೆ ಮಾದೇವ | ಎಂಬ ಅನೇಕ ಶಿವಸ್ತುತಿಗಳಿಂದ ಪ್ರಾರಂಭವಾಗುವ ಪ್ರತಿಯೊಂದು ಹಾಡುಗಬ್ಬವನ್ನು ಬಿಚ್ಚಿ ಹೇಳುವ ಮುನ್ನ—

ಶರಣರ ಶಾಸ್ತ್ರವ ಹೇಳತೀವ್ರೀ |
ಅವರ ಕಥೆಗಳ ಹೇಳತೀವ್ರೀ |
ವೀರರ ಕಥೆಗಳ ಹಾಡತೀವ್ರೀ |
ಇಷ್ಟು ಕಥೆಗಳ ಹೇಳತೀವ್ರೀ |
ಒಷ್ಟು ಕಥೆಗಳ ಹಾಡತೀವ್ರೀ |
ಯಾವ ಕಥೆಯನು ಹೇಳಬೇಕ್ರೀ |

ಎಂದು ಕೂಡಿದ ಸಭೆಗೆ ತಮ್ಮ ಸಾಹಿತ್ಯ ಕುಶಲತೆಯನ್ನು ಬೀರಿ ಕೈಮುಗಿದು ಯಾವ ಹಾಡುಗಥೆಯನ್ನು ಹಾಡಬೇಕೆಂದು ಕೇಳಿಕೊಳ್ಳುತ್ತಾರೆ. ಕೂಡಿದ ಜನವು ಸೂಚಿಸಿದ ಕಥೆಯನ್ನು ಎತ್ತಿಕೊಂಡು ಹಾಡಿ ಒಡೆದು ಹೇಳಲು ಸುರು ಮಾಡುತ್ತಾರೆ. ಕಥೆಯು ಸರಾಗವಾಗಿ ಒಮ್ಮೆ ಪ್ರಾರಂಭವಾಗಲು ಅನೇಕ ರಾಗ ಧಾಟಿಗಳೊಂದಿಗೆ

ವರು ಹಾಡು ಮುಗಿಯುವವರೆಗೂ ಅನೇಕ ಜಾನಪದ ಶಿಲ್ಲುಗಳನ್ನು ಬಳಸಿಕೊಂಡು ಬಲು ಹೌಸುಹುಮ್ಮಸ ದಿಂದ ರಸಭರಿತವಾಗಿ ಹಾಡುವರು.

೧) ಸುವ್ವೀವ ಸಂಗಯ್ಯ । ಸುವ್ವೀವ ಲಿಂಗಯ್ಯ
ಚೆನ್ನಭಾಗದ ಬಸವಯ್ಯ ಸುವ್ವಿ ॥

೨) ಶಿವಸುವಿ ಎನದೇವಿ ॥

೩) ಹರಹರ ಮಾದೇವ । ಕಲ್ಯಾಣ ದೇವಿ ॥

ಂಬವೇ. ಸೊಲ್ಲುಗಳು ವಾದ್ಯಗಳೊಂದಿಗೆ ಮನರಂಜಕ ಾಗಿ ಕೇಳಬರುವುವು.

ಕಥೆಗಳನ್ನು ಹೇಳುವಾಗ ಮಧ್ಯದಲ್ಲಿ ಕನ್ನಡ ಅನು ಭವಗಳ ಬೆಡಗಿನ ಹಾಡುಗಳನ್ನೂ ಕೋಲುಪದಗಳನ್ನೂ ಂದರ್ಭಕ್ಕೆ ಸರಿಯಾಗಿ ಎತ್ತಿಕೊಂಡು ಆಧ್ಯಾತ್ಮ ಜೀವ ನ ಆಳವನ್ನು ಜನತೆಗೆ ಪರಿಚಯ ಮಾಡಿಕೊಡುವರು.

ಕೋಲು ಕೊಲೆನ್ನಿರೆ ।
ಸದ್ಗುರುವಿನ ಶೀಲ ಮೇಲೆನ್ನಿರೆ ॥ ಪ ॥
ಅತ್ತಿ ಹೆಸರು ಹರಕು ಚಾಪಿ ।
ಮಾವನ ಹೆಸರು ಮಂಚದ ಕಾಲ ।
ನನ್ನ ಹೆಸರು ಕಲ್ಲಾವಿಲ್ಲಿ ।
ಗಂಡನ ಹೆಸರು ಮುತ್ತಿನ ಚೆಂಡ ॥ ಕೊ ॥ ೧ ॥
ಹತ್ತಿ ಬಿತ್ತಿ ಬತ್ತಿ ಕಾಣೆ ।
ಬತ್ತ ಬಿತ್ತಿ ಬಾನಾಕಾಣೆ ।
ಮನೆಯ ತುಂಬ ಮಕ್ಕಳ ಹೆತ್ತು ।
ಗಂಡನ ಸುಖವ ಕಾಣಲಿಲ್ಲ ॥ ಕೊ ॥ ೨ ॥
ಗಂಡ ದಂಡಿಗೆ ಹೋಗುವಾಗ ।
....
....
ಆರು ಮಕ್ಕಳನ್ನು ಹಡೆದೆ ॥ ಕೊ ॥ ೩ ॥
ದಂಡಿಗೆ ಹೋಗುವ ಅಣ್ಣಾಗಳಿರೆ ।
ದಂಡಿಗೆ ಹೋಗುವ ತಮ್ಮಗಳಿರೆ ।
ದಂಡಿನೊಳಗ ಗಂಡನ ಕಂಡ್ರೆ ।
.... ಕೊ ॥ ೪ ॥
ಗುಡ್ಡಕ ನೆರಳಿಲ್ಲ ।
ಗುರುವಿಗೆ ನೆಲೆಯಿಲ್ಲ ।
ಗುರು ಚಿದಾನಂದನ ।
ಪಾದಕ ಹೊಂದಿರುವೆ ॥ ಕೊ ॥ ೫ ॥

ಹೀಗೆ ಈ ಜಡ ದೇಹದಲ್ಲಿ ಉದ್ಭವಿಸುವ ಷಡ್ರಿಪುಗಳನ್ನು ಮಾರ್ಮಿಕವಾದ ಬೆಡಗಿನ ರೀತಿಯಲ್ಲಿ ಹೇಳುತ್ತಾರೆ. ಆ ಗಂಡನೇ ಚಿನ್ಮಯ ಚಿದಾನಂದ ಪರಮಾತ್ಮ. ನಮ್ಮಲ್ಲಿಯ ವಾಸನೆಗಳೇ ಜಡದೇಹ ಹೆತ್ತ ಮಕ್ಕಳು. ನಮ್ಮ ಆತ್ಮವು ಪರಮಾತ್ಮನ ಪರಮಾಣುವಾದರೂ ಈ ಜಡದೇಹದಲ್ಲಿರು ವಾಗ ಅಲ್ಲಿ ಷಡ್ರಿಪುಗಳು ಉದ್ಭವಿಸುವುವು. ಈ ಲೋಕ ದಿಂದ ಪರಮಾತ್ಮನನ್ನು ಬೆರೆಯುವ ಆತ್ಮಗಳಿಗೆ ಜಡದೇ ಹಾತ್ಮವು ತನ್ನ ಸ್ಥಿತಿಯನ್ನು ಮಹಾದೇವನಿಗೆ ಹೇಳಿಕಳು ಹಿಸಿ, ಗುರುವೇ ಈ ಲೋಕದಲ್ಲಿ ತನಗೆ ಗತಿಯೆಂದು ಗುರುವಿನ ಪಾದಕ್ಕೆ ಹೊಂದಿದೆ. ಇದಲ್ಲದೆ ಕೆಳಗಿನ ಹಾಡಿ ನಲ್ಲಿ ನಮ್ಮ ದೇಹೋತ್ಪತ್ತಿ ಸ್ಥಿತಿಲಯವನ್ನು ಕಾಣ ಬಹುದು.

ಕಾಯಿ ಕಂಡೇನ ।
ಬಾಯನ್ನ ದೇವ ಕಾಯಿಕಂಡೇನ ॥ ಪ ॥
ನೀರಾಗ ನೆರಳಾಗ ಹುಟ್ಟುವ ಕಾಯಿ ।
ಬೇರು ಇಲ್ಲದೆ ಮರ ಬೆಳೆಯುವ ಕಾಯಿ ।
ಗಾಳಿಯಿಲ್ಲದೆ ಮರ ತೂಗುವ ಕಾಯಿ ।
ಕರ್ರನ ಕೆಂಪನ ಕಾಯಾಗತದ ।
ಪ್ರಾಯಕ ಬಂದ ಮೇಲೆ ಬಿರುಸಾಗತದ ।
ಹಣ್ಣಾಗಿ ತಾವಮಣ್ಣ ಪಾಲಾಗತದ ॥ ೨ ॥
ಅಂಗದೊಳಗೆ ತಾ ಹುಟ್ಟುವ ಕಾಯಿ ।
ಮಂಗ ಮೂರ್ತಿ ತಾ ಮಾಡುವ ಕಾಯಿ ।
ಸಂಗನ ಪಾದಕ ಶರಣಾಗುವ ಕಾಯಿ ॥ ೩ ॥

ಇಂಥಹ ಹಾಡುಗಳು ಜನರ ಮನವನ್ನು ಪರಮಾತ್ಮನೆಡೆಗೆ ಎಳಿಸಿ ಈ ಜೊಂಡು ಪ್ರಪಂಚವನ್ನು ಗೆದ್ದು ಆತ್ಮವು ಸದ್ಗ ತಿಯನ್ನು ಹೊಂದುವುದಕ್ಕಾಗಿ ಸಾಧನವಾಗುವುವು. ಹೀಗೆ ಇವರು ತಮ್ಮ ಹಾಡುಗಳಲ್ಲಿ ಅನೇಕ ಅನುಭವ ಗೀತೆಗ ಳನ್ನು ಹಾಡಿ ಜನರ ಮನವನ್ನು ಧಾರ್ಮಿಕ ಭಾವನೆಗೆ ಹಚ್ಚುವುದನ್ನು ಪ್ರತ್ಯಕ್ಷ ಕೇಳಿ ಮನಗಾಣಬಹುದು.

ಗೊಂದಲಿಗರ ಯಾವ ಹಾಡುಗಬ್ಬವೇ ಆಗಲಿ ಕೆಳಗಿನ ಹರಕೆಯೊಂದಿಗೆ ಕೊನೆಯಾಗುವದು.

ಆಡುಮಕ್ಕಳಾಗಿ ।
ತೂಗು ತೊಟ್ಟಿಲವಾಗಿ ।
ಪಾಂಡವರ ಬಳಗಾಗಿ ।

ಹತ್ತು ಪಂದ್ಯಾಗ | ದೌಲತ್ತು ಮುಂದಾಗಿ |
ಹತ್ತುವ ಕುದುರ್‍ಯಾಗಿ |
ಚತ್ತರಗಿ ನೆರಳಾಗಿ |
ಸಮಗಾಗಿ ತಾಮ್ಮರ ||

ಎಂದು ಹಾಡಿ ಹರಿಸಿ, ತಮ್ಮ ಕಥೆಗೆ ಮಂಗಳಾರುತಿಯೆತ್ತುವರು. ಇಂದು ಗೊಂದಲವೆಂದರೆ ಪಾರ್ವತಿಯನ್ನು ಆದಿಜಗದಂಬೆಯೆಂದು ಭಕ್ತಿಯಿಂದ ಪೂಜಿಸಿ ಭಜನೆ, ಹಾಡು ಮೊದಲಾದುವುಗಳೊಂದಿಗೆ ಸಂಭ್ರಮದಿಂದ ಸಾಹಸ ಕಥೆ ಹೇಳಿ, ಬೆಳಗುಗಳೆಯುವದು. ವಿಶೇಷವಾಗಿ ಕರ್ನಾಟಕದಲ್ಲಿ ಹಲ-ಕೆಲವು ಜಾತಿಗಳಲ್ಲಿ ಮದುವೆಯ ಹಂದರದಲ್ಲಿಯೂ ಈ ಕಥೆಗಳನ್ನು ಹೇಳಿಸುವರು. ಬ್ರಾಹ್ಮಣರಲ್ಲಿಯೂ ಮದುವೆಯ ಹಂದರದಲ್ಲಿ ಗೊಂದಲ ಹಾಕಿಸುವ ಪದ್ಧತಿ ಇದೆ. ಸುಸಂಸ್ಕೃತವಾದ ಈ ಆರ್ಯ ಪಂಗಡವು ಈ ಪದ್ಧತಿಯನ್ನೇಕೆ ಆಚರಿಸುವದು ? ಎಂಬುದು ಸಂಶೋಧಕರಿಗೆ ಸಮಸ್ಯೆಯಾಗಿರುವದು. ಗೊಂದಲಿಗರು ಜಗದಂಬೆಯ ಭಕ್ತರಾಗಿದ್ದು ಅವಳ ಲೀಲೆಗಳನ್ನು ಹಾಡುತ್ತ ಕನ್ನಡ ನಾಡಿನಲ್ಲಿ ತಿರಿದುಂಬುವರು. ಹಿಂದಿನ ಅರಸು ಮನೆತನಗಳು ಈ ಗೊಂದಲಿಗರಿಗೆ ಮೇಲಿಂದ ಮೇಲೆ ಕರೆಯಿಸಿ ಮಾನ ಮನ್ನಣೆ ಮಾಡುತ್ತಿದ್ದರು. ಹಲಕೆಲವರಿಗೆ ರಾಜರು ಕೊಟ್ಟ ಮಾನಗಳು ಇಂದಿಗೂ ಅವೆ. ಇಂದಿನ ಯಾಂತ್ರಿಕ ಯುಗದ ಪ್ರಭಾವದಿಂದ ಜನರಲ್ಲಿ ಸಾಹಿತ್ಯಾಭಿರುಚಿಯು ಕಡಿಮೆಯಾಗಿ ಹಾಡುಗಬ್ಬಗಳು ಕರಗ ಹತ್ತಿವೆ. ಈ ಹಾಡುಗಬ್ಬಗಳನ್ನು ಹಾಡುವ ಗೊಂದಲಿಗರಿಗೆ ಹೊಟ್ಟೆಯ ಪ್ರಶ್ನೆ ಬಂದಾಗ ಮಾನ ಮನ್ನಣೆಯ ಮಾತಂತೂ ದೂರೇ ಸರಿ. ಇದನ್ನರಿತ ಹಲಕೆಲವು ಗೊಂದಲಿಗರು ಈಗ ಗೊಂದಲ ಹಾಕುವದನ್ನು ಬಿಟ್ಟುಕೊಟ್ಟು ಬೇರೆ ಉದ್ಯೋಗಗಳನ್ನು ಕೈಕೊಂಡ ಮೂಲಕ ಬುನಾದಿಯಿಂದ ಬಂದ ಇವರ ಹಿರಿಯರ ಸಾಹಿತ್ಯ ಸಂಪತ್ತು ಕಣ್ಮರೆಯಾಗ ಹತ್ತಿದೆ ಇವರ ಕಥೆಗಳಲ್ಲಿಯೂ ಹಾಡುಗಳಲ್ಲಿಯೂ ನಾಡ ಸಂಸ್ಕೃತಿಯು ಅಡಕವಾಗಿದೆ. ಆದುದರಿಂದ ಅವು ನಮಗೆ ಅವಶ್ಯ ಬೇಕು. ಪ್ರಯತ್ನ ಪಟ್ಟು ಅವುಗಳನ್ನು ಇಂದು ನಾವು ಉಳಿಸಲೇಬೇಕಾಗಿದೆ. ಇದು ಅವಶ್ಯಕವೇ ?

ವನಮಹೋತ್ಸವವೂ ಒಕ್ಕಲುತನದ ಅಭಿವೃದ್ಧಿಯೂ

ಲೇಖಕರು : **ಶ್ರೀ ಎಸ್. ಎ. ಮಾಚಾ,** ಬಿ.ಎಜಿ.,ಬಿ.ಟಿ.,ಡಿ.ಬಿ.ಇ., ಕಾರವಾರ.

ಈ ಜಗತ್ತಿನಲ್ಲಿ ಅತಿ ಅವಶ್ಯವಾದ ವಸ್ತುಗಳೆಂದರೆ ಆಹಾರ, ಆಚ್ಛಾದನ, ಆಶ್ರಯ. ಇವುಗಳಲ್ಲಿ ಆಹಾರವೇ ಅತ್ಯವಶ್ಯವಾದದ್ದು. ಗಿಡಗಳನ್ನು ನೆಡುವದರಿಂದ ಇವುಗಳನ್ನು ಹೆಚ್ಚಾಗಿ ಸಾಧಿಸಬಹುದು. ಈ ಕಾರಣಗಳಿಂದಲೇ ಪುರಾತನ ಕಾಲದಿಂದಲೂ ಗಿಡನೆಡುವ ಉತ್ಸವಗಳು ನಡೆದು ಬಂದಿರುತ್ತವೆ. ಈ ಗಿಡನೆಡುವ ಉತ್ಸವಗಳು ಮಾನವ ಸಂಸ್ಕೃತಿಯಷ್ಟೇ ಪುರಾತನವಾಗಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು. ನಮ್ಮ ಪೂರ್ವಜರು ಗಿಡಗಳೊಂದಿಗೆ ಪ್ರೀತಿ, ಭಯ, ಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದರು. ಅವರು ಗಿಡಗಳನ್ನೂ ಪೂಜಿಸಿದ್ದೂ ಉಂಟು ಮತ್ತು ಕೆಲವು ಗಿಡಗಳನ್ನಂತೂ ದೈವವೆಂದೂ ತಿಳಿಯಲಾಗಿತ್ತು. ಹಿಂದಕ್ಕೆ ಸಾಧು-ಸಂತರು ಸತ್ಯ ಇಲ್ಲವೆ ದೇವರ ದರ್ಶನಕ್ಕೆ ಅಡವಿಗೆ ಹೋಗಿ ತಪಸ್ಸನ್ನಾಚರಿಸುತ್ತಿದ್ದರು. ಹೀಗೆ ಪೂರ್ವಜರು ಭೂಮಿಗೆ ನಿಕಟವಾಗಿ ಹೊಂದಿಕೊಂಡು ಬಾಳುತ್ತಿದ್ದರು. ಈಗಿನ ಪ್ರಪಂಚದಲ್ಲಿಯೂ ಸಹ ಗಿಡಗಳಿಗೆ ಬಹಳ ಮಹತ್ವದ ಸ್ಥಾನ

ಬಂದಿದೆ. **ಯಾಕಂದರೆ** ನಮ್ಮ ಅತ್ಯಂತ ಮಹತ್ವದ ರಾಷ್ಟ್ರೀಯ **ಉದ್ದಿಮೆಯಾದ** ಒಕ್ಕಲುತನವು ಯಶಸ್ವಿಯಾಗುವದು ಮುಖ್ಯವಾಗಿ ಗಿಡಗಳನ್ನು ಅವಲಂಬಿಸಿರುತ್ತದೆ.

ಆದಕಾರಣ ಒಕ್ಕಲುತನ ದೃಷ್ಟಿಯಿಂದ ಗಿಡಗಳ ಸ್ಥಾನ ಮಾನಗಳು ಈ ಕೆಳಗಿನಂತಿವೆ.—

೧) " ಗಿಡಗಳು ಭೂಮಿಯ ಸವಕಳಿಯನ್ನು ತಡೆಯುತ್ತವೆ. ಕಾಲಾಂತರದಿಂದ ಮಳೆಯ ಗಾಳಿಯ ಹೊಡೆತಕ್ಕೆ ಭೂಮಿಯ ಮೇಲಿರುವ ಫಲವತ್ತಾದ ಮಣ್ಣು ಹರಿದು **ಹೋಗಿ** ಭೂಮಿಯ ಫಲದ್ರೂಪತೆಯು ಕಡಿಮೆಯಾಗಿದೆ. ಸಾಮಾನ್ಯವಾಗಿ ೧೫ ರಿಂದ ೨೫ ಇಂಚು ಮಳೆಯು ಒಮ್ಮೆಲೆ ರಭಸದಿಂದ ಬೀಳುವಲ್ಲಿ ಮಳೆಯ ನೀರಿನ ಸೆಳೆತಕ್ಕೆ ಒಂದು ಎಕರೆಗೆ ೧೫ ರಿಂದ ೨೫ ಚಕ್ಕಡಿ ಫಲವತ್ತಾದ ಮಣ್ಣು ನೀರಿನ ಪಾಲಾಗುವದು.

ಈ ಕೊಚ್ಚಿಕೊಂಡು ಹೋಗುವ ಮಣ್ಣಿನಲ್ಲಿ ವನಸ್ಪತಿಗಳಿಗೆ ಬೇಕಾಗುವ ಮೂಲ ಆಹಾರ ದ್ರವ್ಯಗಳು ಸಹ ಇರುತ್ತವೆ. ಕಾರಣ ಈ ಕೊಚ್ಚಿಕೊಂಡು ಹೋಗುವ ಮಣ್ಣನ್ನು ತಡೆಯಲು ಗಿಡಗಳು ಮತ್ತು ಅವುಗಳ ಬೇರುಗಳು ಸಹಾಯವಾಗುತ್ತವೆ. ಇದೂ ಅಲ್ಲದೆ ಬಿರುಗಾಳಿಯನ್ನು ತಡೆದು ಪೈರುಗಳನ್ನೂ ರಕ್ಷಿಸುವದೂ ಉಂಟು.

೨) ಗಿಡಗಳಿಂದ ಮೋಡಗಳು ಆಕರ್ಷಿತವಾಗಿ ಮಳೆಯು ಬೀಳಲ್ಪಡುತ್ತದೆ. ಮಳೆಯು ಸಕಾಲಕ್ಕೆ ಆಗದಿದ್ದರೆ ಬೆಳೆಯು ಚನ್ನಾಗಿ ಬರುವದಿಲ್ಲ. ಈಗ ನಮ್ಮ (ಮುಂಬಯಿ) ರಾಜ್ಯದಲ್ಲಿ ಮಳೆಯ ಅಭಾವದಿಂದ ಕೆಲವು ಕಡೆಗೆ ಬರಗಾಲದ ಭೀತಿಯಿದೆ. ಕಾರಣ ಸಸಿ ಬೆಳೆದು ಕಾಳು ಹಸಿಬೇಕು. ಉದಾ:- ಒಂದು ಪೌಂಡು ಒಣ ಕಾಳುಗಳು ತಯಾರಾಗಬೇಕಾದರೆ ೩೦೦ ರಿಂದ ೪೦೦ ಪೌಂಡು ನೀರನ್ನು ಆ ವನಸ್ಪತಿಯು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇದರ ಮೇಲಿಂದ ವನಸ್ಪತಿಗಳಿಗೆ ನೀರಿನ ಅವಶ್ಯಕತೆಯೆಷ್ಟಿದೆಯೆಂಬುದು ಗೊತ್ತಾಗುತ್ತದೆ.

೩) ಗಿಡಗಳ ಎಲ್ಲ ಅಂಗಗಳು ಮನುಷ್ಯ ಜೀವಿಗೆ ಉಪಯೋಗ ಬರುತ್ತವೆ. ಗಿಡಗಳು ಮನುಷ್ಯನಿಗೆ ಶ್ರೇಷ್ಠವಾದ ಕಟ್ಟಿಗೆಯನ್ನು ಪೂರೈಸುತ್ತದೆ. ಒಕ್ಕಲಿಗರಿಗೆ ತಮಗೆ ಉಪಯೋಗ ಬೀಳುವ ರೆಂಟೆ, ಕುಂಟೆ, ಚಕ್ಕಡಿ ಮುಂತಾದ ಉಪಕರಣಗಳನ್ನು ಮಾಡಲಿಕ್ಕೂ ಮತ್ತು ಉರುವಲಕ್ಕೂ ಉಪಯೋಗವಾಗುತ್ತದೆ. ಒಕ್ಕಲಿಗರು ಕಟ್ಟಿಗೆಯನ್ನು ಉರುವಲಕ್ಕೆ ಉಪಯೋಗಿಸುವದರಿಂದ ಸೆಗಣಿಯಿಂದ ಕುಳ್ಳು ಮಾಡುವದು ಕಡಿಮೆಯಾಗಿ ಸೆಗಣಿಯು ಗೊಬ್ಬರಕ್ಕೆ ಉಪಯೋಗವಾಗುತ್ತದೆ. ಗಿಡಗಳಿಂದ ಒಕ್ಕಲಿಗರು ಎಷ್ಟೋ ಉಪಧಂದೆಗಳನ್ನು ಕೈಕೊಳ್ಳಬಹುದು.:- ಅವು ಯಾವವೆಂದರೆ:—

೧) ಜೇನು ಸಾಕುವದು.

೨) ರೇಶಿಮೆ ಹುಳಗಳನ್ನು ಸಾಕುವದು.

ಮೇಲೆ ಹೇಳಿದ ಗಿಡಗಳ ಉಪಯೋಗಗಳಿಂದ ಒಕ್ಕಲಿಗರಿಗೆ ಹೆಚ್ಚು ಆಹಾರ ಬೆಳೆಯಲು ಸಹಾಯವಾಗುತ್ತದೆ. ಈಗ ಜನಸಂಖ್ಯೆ ಪ್ರಮಾಣವು ಹೆಚ್ಚುತ್ತ ನಡೆದಂತೆ ಆಹಾರ ಧಾನ್ಯಗಳೂ ಹೆಚ್ಚು ಬೇಕೇಬೇಕು. ಈಗ ವಿಶ್ವದ ಜನಸಂಖ್ಯೆಯು ೨೪೦೦ (ಸಾಧಾರಣ) ದಶಲಕ್ಷ ಇದ್ದು ಮುಂದಿನ ೫೦ (ಐವತ್ತು) ವರ್ಷಗಳಲ್ಲಿ ಸಾಧಾರಣ ೩೫೦೦ ದಶಲಕ್ಷ ಆಗಬಹುದು. ಇದರಿಂದ ಈಗಿನ ಪ್ರಮಾಣಕ್ಕಿಂತ ೧೦೦ಕ್ಕೆ ೫೦ ರಷ್ಟು ಪ್ರಮಾಣವು ಹೆಚ್ಚಾಗಲಿಕ್ಕೇಬೇಕು. ಅದರೆ ಪೋಷಣೆಗೆ ೧೦೦ಕ್ಕೆ ೭೦ ರಂತೆ ಆಹಾರಧಾನ್ಯ ಹೆಚ್ಚಾಗಲಿಕ್ಕೇಬೇಕು. ಇದನ್ನು ನೋಡಿದರೆ ಆಹಾರಧಾನ್ಯದ ಹೆಚ್ಚಾಗಿ ಬೆಳೆಯುವ ಅವಶ್ಯಕತೆಯೆಷ್ಟಿದೆಯೆಂಬುದು ಗೊತ್ತಾಗುತ್ತದೆ.

ಆದಕಾರಣ ಶಕ್ಯವಿದ್ದಲ್ಲಿ ಶಕ್ಯವಿದ್ದಷ್ಟು ಗಿಡಗಳನ್ನು ನೆಟ್ಟು ಈಗ ಆಹಾರದಲ್ಲಿದ್ದ ಕೊರತೆಯನ್ನು ಹೋಗಲಾಡಿಸಿ ಸಮೃದ್ಧಿಯಾಗಲು ಹೋರಾಡಬೇಕು. ಕಾರಣ ನಾವು ಸಾಧ್ಯವಿದ್ದಷ್ಟು ಗಿಡಗಳನ್ನು ಹಚ್ಚೋಣ ಮತ್ತು ಉಳಿಸೋಣ.

ಪಾಶ್ಚಾತ್ಯರ ನವನಾಗರಿಕತೆಯ ಗುಣಾವಗುಣಗಳು

ಲೇಖಕರು: ಶ್ರೀ ತಟ್ಟಿ ಶಾಮರಾಯರು, ಬಿ.ಎ.,ಎಸ್.ಟಿ.ಸಿ.ಡಿ., ಧಾರವಾಡ.

ಮನುಷ್ಯನೇ ಏಕೆ ಇಷ್ಟೊಂದು ಕಷ್ಟವಹಿಸಿದ್ದಾನೆ?—ಭಾರ ಎತ್ತುವದು, ವಸ್ತುಗಳನ್ನು ಹೊತ್ತುಕೊಂಡು ಒಯ್ಯುವದು, ಕಾಲ್ನಡಿಗೆಯಿಂದ ನಡೆಯುವದು, ಅನೇಕ ವಿಷಯಗಳನ್ನು ಸ್ಮೃತಿಯಲ್ಲಿಟ್ಟುಕೊಳ್ಳುವದು ಇತ್ಯಾದಿ ಕೆಲಸಗಳ ಶ್ರಮವನ್ನು ಉಳಿಸಿಕೊಳ್ಳುವದಕ್ಕೆ ಎಲ್ಲ ಪ್ರಾಣಿಗಳಿಗಿಂತಲೂ ಮನುಷ್ಯನೇ ಏಕೆ ಇಷ್ಟು ತೊಂದರೆಪಟ್ಟುಕೊಂಡಿದ್ದಾನೆ? ಇದಕ್ಕಿಷ್ಟೇ ಉತ್ತರವೆಂದು ತೋರುವದು—ಏನಂದರೆ ಈ ಕೆಲಸಗಳು ಅವನಿಗೆ ಬೇಜಾರ ಎನಿಸುವದರಿಂದ. ಅವನು ನಿಜವಾಗಿ ಮಾಡಬೇಕೆಂದು ಬಯಸುವದು ಈ ಕೆಲಸಗಳನ್ನಲ್ಲ; ತನಗಾಗಿ ಈ ಕೆಲಸಗಳನ್ನು ಮಾಡಲಿಕ್ಕೆಂದು ಅವನು ಯಂತ್ರಸಾಧನಗಳನ್ನು ಕಲ್ಪಿಸಿಕೊಂಡಿದ್ದಾನೆ—ತಾನು ನಿಜವಾಗಿ ಮಾಡಬೇಕೆಂದು ಹಂಬಲಸುತ್ತಿರುವ ಇತರ ಸಂಗತಿಗಳಿಗಾಗಿ ವೇಳೆಯೂ ಸಾಮರ್ಥ್ಯವೂ ದೊರಕಬೇಕೆಂದು. ಅವಾವ ಸಂಗತಿಗಳು? ನಮ್ಮ ನಾಗರಿಕತೆಯ ದುಷ್ಟ ಅಂಶಗಳ ಬಗೆಗೆ ಒಂದೆರಡು ಮಾತನ್ನು ಹೇಳಿದ ವಿನಾ ಈ ಪ್ರಶ್ನೆಗೆ ಉತ್ತರ ಕೊಡಲು ಬರುವದಿಲ್ಲ; ಆದರೆ ಅದರ ಗುಣಗಳಿಗಾಗಿ ಅದನ್ನು ಮೊದಲು ಹೊಗಳದೆ ಅದರ ದೋಷಗಳನ್ನು ಮಾತ್ರ ಹೇಳುವದು ಸರಿಯಾಗಲಾರದು. ಆ ಗುಣಗಳಾವವು?

ನಾಗರಿಕತೆಯ ಗುಣಗಳ ಪ್ರಶಂಸೆ: **ವ್ಯವಸ್ಥೆ ಮತ್ತು ಸುರಕ್ಷಿತತೆ.** ಮೊದಲು ಎಲ್ಲಕ್ಕೂ ಅಗ್ರಸ್ಥಾನದಲ್ಲಿ ಸುವ್ಯವಸ್ಥೆ ಸುರಕ್ಷಿತತೆ ಬರುವವು. ಇಂದು ನಾನು ಇನ್ನೊಬ್ಬನೊಡನೆ ಜಗಳವಾಡಿದರೆ ಆತನು ದೇಹದಿಂದ ನನಕಿಂತ ಬಲಶಾಲಿಯಾಗಿದ್ದು ನನ್ನನ್ನು ಎತ್ತಿ ಒಗೆಯಬಹುದಾದ ಮಾತ್ರದಿಂದ ನಾನು ಹೊಡೆತತಿಂದು ಸುಮ್ಮನೆ ಕೂಡ್ರುವ ಭಯವಿಲ್ಲ. ನ್ಯಾಯದಾನಕ್ಕೆ ಮೊರೆಯಿಟ್ಟರೆ ನ್ಯಾಯವು ಉಭಯ ಪಕ್ಷಗಳ ನ್ಯಾಯಾನ್ಯಾಯಗಳನ್ನು ಚೆನ್ನಾ ತೂಗಿ ನೋಡಿ ತನಗೆ ಯೋಗ್ಯವೆನಿಸಿದ ನಿರ್ಣಯವನ್ನು ಕೊಡುವದು. ಅಂತೂ ವ್ಯಕ್ತಿವ್ಯಕ್ತಿಗಳ ವಿವಾದದಲ್ಲಿ ದೇ ಬಲದ ಸ್ಥಾನವನ್ನು ಸತ್ಯದ ಬಲವು ತೆಗೆದುಕೊಂಡಿ ಎಂದು ಹೇಳಬಹುದು. ಇದಲ್ಲದೆ ನ್ಯಾಯಶಾಸನ ನನ್ನನ್ನು ಕಳವು ಅತ್ಯಾಚಾರಗಳಿಂದ ಸಂರಕ್ಷಿಸುತ್ತದೆ ಯಾವಾತನೇ ಆಗಲಿ ಒಮ್ಮೆಲೆ ಧಾವಿಸಿ ಬಂದು ನನ ಮನೆಯಲ್ಲಿ ನುಗ್ಗಿ ನನ್ನ ವಸ್ತು-ಒಡವೆಗಳನ್ನು ಕಳ್ಳ ಮಾಡಿಕೊಂಡಾಗಲಿ ನನ್ನ ಮಕ್ಕಳನ್ನು ಹಿಡಿದುಕೊಂಡಾ ಗಲಿ ಹೋಗಲಾರನು. ದರೋಡೆಗಾರರು ಇರುವರೆಂ ನೋ ನಿಜ ಆದರೂ ಅವರು ಅಪರೂಪವಾಗಿದ್ದು ಹಿಡಿ ಲ್ಪಟ್ಟಾಗ ಶಿಕ್ಷೆಗೆ ಗುರಿಯಾಗುವರು.

ಈ ಸುರಕ್ಷಿತತೆಯ ಅರ್ಥವನ್ನು ನಾವು ಚೆನ್ನಾ ಮಾಡಿಕೊಳ್ಳಬೇಕು. ಅದಿಲ್ಲದೆ, ನಾಗರಿಕತೆಯನ ಕಟ್ಟುವಂತಹ, ಮಾನವನ ಉಚ್ಚತರಗತಿಯ ಕಾಯ ಗಳು ನಡೆಯಲಾರವು. ಶೋಧಕರು ಹೊಸ ಸಂಗತಿ ಳನ್ನು ಶೋಧಿಸಲಾರರು. ವಿಜ್ಞಾನಿಯು ಹೊಸ ಸ ವನ್ನು ಕಂಡುಹಿಡಿಯಲಾರನು ಅಥವಾ ಕಲಾವಿದ ಸುಂದರವಾದ ಕೃತಿಗಳನ್ನು ನಿರ್ಮಿಸಲಾರನು. ಬರಿ ಸುರಕ್ಷಿತತೆ ಸುವ್ಯವಸ್ಥೆಗಳಿಂದಲೇ ನಾಗರಿಕತೆಯಾಗ ದ್ದರೂ ಅವು ಇಲ್ಲದೆ ನಾಗರಿಕತೆಯು ಮುಂದುವರಿಯಲ ರದು.

ನಾವು ಉಸುರಾಡಿಸುವ ಹವೆಯು ನಮ್ಮ ಜೀ ನಕ್ಕೆ ಆವಶ್ಯವಿದ್ದಷ್ಟೇ ಅವು ನಮ್ಮ ನಾಗರಿಕತೆಗೆ ಅವ ವಾಗಿ ಬೇಕು. ನಾವು ಉಸುರಾಡಿಸುವ ಹವೆಯು ನವ ನಿತ್ಯ ಅನುಭವದ ಮಾತಾಗಿರುವದರಿಂದ ಹೇಗೆ ನವ

ಲಕ್ಷ್ಯಕ್ಕೆ ಮುಖ್ಯ ವಿಷಯವಾಗುವದಿಲ್ಲವೋ ಹಾಗೆಯೇ ಈ ಸುರಕ್ಷಿತತೆ ಸುವ್ಯವಸ್ಥೆಗಳು ನಮ್ಮ ಲಕ್ಷ್ಯದಲ್ಲಿ ಪ್ರಾಮುಖ್ಯವಾಗಿ ನಿಲ್ಲುವದಿಲ್ಲ.

ಆದರೂ ಈ ಎರಡೂ ವಿಷಯಗಳು ಹೊಸವೂ ಅಪೂರ್ವವಾದವೂ ಆಗಿವೆ. ರೋಮನ್ ಸಾಮ್ರಾಜ್ಯದ ಅಲ್ಪಾವಧಿಯ ಕೆಲಕಾಲವೊಂದನ್ನು ಬಿಟ್ಟರೆ ಯುರೋಪ ಖಂಡದಲ್ಲಿ ಕಳೆದ ಎರಡು ಶತಮಾನಗಳಲ್ಲಿ ಮಾತ್ರ ಶಾಂತಿ ಸುವ್ಯವಸ್ಥೆಗಳು ಕಾಣಿಸಿಕೊಂಡಿವೆ; ಈ ಅವಧಿಯಲ್ಲಿ ಕೂಡ ಎರಡು ಕ್ರಾಂತಿಗಳೂ ಅನೇಕ ಯುದ್ಧಗಳೂ ಆಗಿಹೋಗಿವೆ. ಅಂತೂ ಇಂದು ನಾಗರಿಕತೆಯಲ್ಲಿ ನೆಲಸಿದ ಜನರು ತಮ್ಮ ಸಾಮಾನ್ಯವಾದ ದೈನಂದಿನ ಜೀವನದಲ್ಲಿ ಕೊಲೆ-ಸುಲಿಗೆಗಳ ಭಯದಿಂದ ಬಹುತರವಾಗಿ ಮುಕ್ತರಾಗಿದ್ದಾರೆಂಬದು ನಮ್ಮ ನಾಗರಿಕತೆಯು ಸಾಧಿಸಿದ ದೊಡ್ಡದೊಂದು ಕಾರ್ಯವೆಂದು ಹೇಳಬಹುದು.

ಆರೋಗ್ಯ

ಜನರು ನೋವಿನ ಭಯದಿಂದಲೂ ಬಹ್ವಂಶದಿಂದ ಮುಕ್ತರಾಗಿದ್ದಾರೆ. ಅವರು ಬೇನೆಬೀಳುವದೇನೋ ಹೋಗಿಲ್ಲ, ಆದರೆ ವೇದನಾರಹಿತವಾದ ಶಸ್ತ್ರಚಿಕಿತ್ಸೆ ರೋಗ ಚಿಕಿತ್ಸೆಗಳಿಂದಲೂ ಹೊಸ ಔಷಧಗಳಿಂದಲೂ ರೋಗವು ಮೊದಲಿನಷ್ಟು ಭಯಂಕರವಾದ ಯಾತನೆಯಾಗಿರುವದಿಲ್ಲ. ಜನರು ಬೇನೆಬೀಳುವದೂ ಮೊದಲಿಗಿಂತ ಎಷ್ಟೋ ಕಡಿಮೆಯಾಗಿದೆ. ಪ್ರಕೃತಿಯಿಂದ ನಿರೋಗಿಯಾಗಿರುವದೊಂದೇ ನಾಗರಿಕತೆಯ ಲಕ್ಷಣವಲ್ಲ—ಸಾಮಾನ್ಯ ತಿಳುವಳಿಕೆಯಂತೆ ಕಾಡು ಜನರು ನಿರೋಗಿಯಾಗಿಯೇ ಇರುವರು—ಆದರೆ ದೇಹಸ್ವಾಸ್ಥ್ಯವಿಲ್ಲದಿದ್ದರೆ ನೀವು ಯಾವ ಸುಖವನ್ನೂ ಅನುಭೋಗಿಸಲಾರಿರಿ ಮತ್ತು ಯಾವ ಕಾರ್ಯವನ್ನೂ ಸಾಧಿಸಲಾರಿರಿ. ಹಲವರು ಮಹಾವ್ಯಕ್ತಿಗಳು ತಮ್ಮ ವ್ಯಾಧಿಗ್ರಸ್ತಸ್ಥಿತಿಯಲ್ಲಿಯೇ ಮಹತ್ಕಾರ್ಯವನ್ನು ಸಾಧಿಸಿದ್ದಾರೆ; ಅವರು ಶ್ರೇಷ್ಠ ಕಾರ್ಯವನ್ನು ಸಾಧಿಸಿದ್ದರಾದರೂ ನಿರೋಗಿಯಾದ ಸ್ಥಿತಿಯಲ್ಲಿದ್ದಿದ್ದರೆ ಇದಕ್ಕೂ ಶ್ರೇಷ್ಠತರವಾದ ಕಾರ್ಯವನ್ನು ಅವರು ನಿಃಸಂದೇಹವಾಗಿ ಸಾಧಿಸುತ್ತಿದ್ದರು.

ಸ್ತ್ರೀ ಪುರುಷರು ಈಗ ಮೊದಲಿಗಿಂತಲೂ ಹೆಚ್ಚು ಆರೋಗ್ಯವಂತರಾಗಿದ್ದಾರೆ, ಅವರ ಆಯುಷ್ಯಮಾನವೂ ಮೊದಲಿಗಿಂತ ಹೆಚ್ಚಾಗಿದೆ, ಬೆಳೆದು ದೊಡ್ಡವರಾಗುವ ಯೋಗವೂ ಹೆಚ್ಚಿದೆ.

ನವನಾಗರಿಕತೆಯ ವ್ಯಾಪ್ತಿ

ಮೂರನೆಯದಾಗಿ ನಮ್ಮ ನಾಗರಿಕತೆಯು ಹಿಂದೆ ಇದ್ದು ನಷ್ಟವಾದ ನಾಗರಿಕತೆಗಳಿಗಿಂತಲೂ ಹೆಚ್ಚು ಸ್ಥಿರವಾಗಿದೆ. ಇದರ ಕಾರಣವೇನಂದರೆ ಅದು ವಿಸ್ತೃತವಾಗಿ ವ್ಯಾಪಿಸಿದೆ. ಇತಿಹಾಸದಲ್ಲಿ ಪ್ರಸಿದ್ಧವಾದ ಎಷ್ಟೋ ನಾಗರಿಕತೆಗಳು ಬಲಾಢ್ಯರಾದ ಅನಾಗರಿಕರು ದಾಳಿಮಾಡಿ ಅವನ್ನು ನಾಶಗೊಳಿಸಿದ್ದರಿಂದ ನಿರ್ನಾಮವಾದವು. ಬಬಿಲನ್, ಅಸೀರಿಯಾ ಸಭ್ಯತೆಗಳು ಹೀಗೆ ಅಳಿದವು. ಚೀನ, ಹಿಂದುಸ್ತಾನಗಳಲ್ಲಿಯೂ ಇಂತಹ ದಾಳಿಗಳು ಆಗಾಗ್ಗೆ ಆಗಿವೆ. ಗ್ರೀಸ ದೇಶಕ್ಕೂ ರೋಮದ ಪತನಕ್ಕೂ ಇದೇ ಕಾರಣವಾಯಿತು.

ಪ್ರಸ್ತುತ ನಮ್ಮ ನಾಗರಿಕತೆಗೆ ಯಾವ ಗಂಡಾಂತರಗಳಿಂದ ಭಯವಿದ್ದರೂ—ಅವು ಬೇಕಾದಷ್ಟು ಇವೆ—ಮೇಲಿನ ಅನಾಗರಿಕರ ದಾಳಿಯ ಭಯದಿಂದ ಅದು ಮುಕ್ತವಾಗಿದೆ. ಈ ಮೊದಲು ಹೇಳಿದಂತೆ ಹಿಂದಿನ ಕಾಲದ ನಾಗರಿಕತೆಗಳು ವಿಶಿಷ್ಟವಾದವುಗಳು ಮತ್ತು ಪರಿಮಿತವಾದವು ಇದ್ದವು. ಅವು ಕಾಡುಜನರ ಮರುಭೂಮಿಯಿಂದ ಆವೇಷ್ಟಿತವಾದ ಫಲವದ್ದ್ವೀಪಗಳಂತೆ ಇದ್ದವು. ಕಾಲಗತಿಯಲ್ಲಿ ಆ ಮರುಭೂಮಿಯು ಎಲ್ಲೆಡೆಯಲ್ಲಿಯೂ ವ್ಯಾಪಿಸಿ ದ್ವೀಪವು ಮಾಯವಾಗಿ ಹೋಯಿತು. ಇಂದಿನ ಸ್ಥಿತಿಯು ಬೇರೆಯಾಗಿದೆ– ದ್ವೀಪವೇ ಮರುಭೂಮಿಯನ್ನು ಮಾಯವಾಗಿಸತೊಡಗಿದೆ. ಆಧುನಿಕ ನಾಗರಿಕತೆಯು ಬಹುದೂರ ತನ್ನ ಕಾಲು ಚಾಚಿದ್ದಾಗಿದೆ. ಅದು ಯುರೋಪ ಅಮೇರಿಕಗಳಲ್ಲಿ ಹರಡಿದ್ದಲ್ಲದೆ ಏಶಿಯ ಆಫ್ರಿಕಗಳ ಭಾಗಗಳಲ್ಲಿಯೂ ಹಬ್ಬಿದೆ. ಬಹುತರವಾಗಿ ಪ್ರಪಂಚದ ಯಾವ ಭಾಗವೂ ಅದರ ಸಂಸರ್ಗವಿಲ್ಲದೆ ಇಲ್ಲ. ಮತ್ತು ಅದಕ್ಕೆ ವಿನಾಶಶಕ್ತಿಯ ಅಸ್ತ್ರಗಳ ಅನುಕೂಲವಿರುವದರಿಂದ ಪೃಥ್ವಿಯ ಮೇಲೆ ಇನ್ನೂ ಉಳಿದಿರುವ ಯಾವ ಕಾಡು ಇಲ್ಲವೆ ಅನಾಗರಿಕ ಜನರೂ ಅದನ್ನೂ ಸೋಲಿಸಲಾರರು.

ಪ್ರಪಂಚದ ಅಖಂಡೈಕ್ಯ

ಇದರಿಂದ ಪ್ರಪಂಚಕ್ಕೆ ಈಗ ಮೊತ್ತಮೊದಲಿನ

ಸಾರೆ ಅಖಂಡ ಒಂದಾಗುವ ಸುಯೋಗವು ಬಂದಿದೆ ಎಂದೆನ್ನಬಹುದು. ಕ್ರಯವಿಕ್ರಯ ಹಾಗೂ ಸರಕುಗಳ ವಿನಿಮಯದ ವಿಷಯವನ್ನು ಪರಿಶೀಲಿಸಿದರೆ ಈಗಾಗಲೇ ಜಗತ್ತು ಒಂದಾಗಿದೆ. ನನ್ನ ಸಾಮಾನ್ಯ ದೈನಂದಿನದ ಜೀವನವನ್ನು ಉಲ್ಲೇಖಿಸಿದಾಗ ನಮ್ಮ ಆಹಾರದ ವಿಷಯವಾಗಿ ಹೇಳಿರಲಿಲ್ಲ. ಹೇಳಿದ್ದರೆ ನಾನು ಉಣ್ಣುವ ಆಹಾರವು ಪೃಥ್ವಿಯ ಎಲ್ಲ ಭಾಗಗಳಿಂದಲೂ ಬರುತ್ತದೆ ಎಂದು ಹೇಳುತ್ತಿದ್ದೆನು. ಉದಾಹರಣೆಗಾಗಿ ನಮ್ಮ ಕಿರಾಣಿ ಅಂಗಡಿಯೊಳಗಿನ ಸಾಮಾನುಗಳನ್ನು ನೋಡಿರಿ—ಅವು ಪೃಥ್ವಿಯ ದೂರದೂರದ ಕಡೆಗಳಿಂದ ಬಂದವಾಗಿವೆ—ಚಿತ್ರವಿಚಿತ್ರ ದೇಶಗಳಿಂದ ಸಮುದ್ರದಾಚೆಯ ದೂರ ಪ್ರದೇಶಗಳಿಂದ ಬಂದಿವೆ. ಬ್ರಾಝಿಲ್‌ದಿಂದ ಬಂದ ಕಿತ್ತಳೆಗಳು, ಅಫ್ರಿಕೆಯ ಉತ್ತತ್ತಿಯ ಹಣ್ಣುಗಳು, ಭಾರತದ ಅಕ್ಕಿ, ಚೀನದ ಚಹಾ, ಡೆಮೆರಾರಾದಿಂದ ಬಂದ ಸಕ್ಕರೆಯನ್ನೂ ಕಾಣಬಹುದು. ಇಂದು ಒಬ್ಬ ಕುಟುಂಬದ ಮಹಿಳೆಯು ಪೇಟೆಗೆ ಹೋಗಿ ಒಬ್ಬ ಕಿರಾಣಿ ವ್ಯಾಪಾರಸ್ಥನ ಅಂಗಡಿಯಲ್ಲಿ ಕೊಂಡುಕೊಳ್ಳಬಹುದಾದ ವಿವಿಧೋತ್ಪಾದನೆಯ ಸಮೃದ್ಧವಾದ ಸಂಗ್ರಹದಿಂದ ಹಿಂದಿನ ಯಾವ ಘನವಂತನಾದ ಖಲೀಫನೂ, ಯಾವ ಪೌರ್ವಾತ್ಯ ಅರಸನೂ, ಅತ್ಯಂತ ಝಗಝಗಿಸುವ ವೈಭವದಲ್ಲಿ ಮೆರೆದ ಸಾಲೊಮನ್‌ನು ಕೂಡ ತನ್ನ ಮನೆಯನ್ನು ತುಂಬಿಸಿಕೊಳ್ಳಲಾರದಂತೆ ಇತ್ತು. ಈ ವಸ್ತುಗಳು ನಮಗೆ ಜಗತ್ತಿನ ಎಲ್ಲ ಮೂಲೆಗಳಿಂದಲೂ ದೊರೆಯುತ್ತವೆ ಎಂಬದರ ಅರ್ಥವು ಇಷ್ಟೇ—ಪ್ರಪ್ರಥಮವಾಗಿ ಜಗತ್ತು ಒಂದೇ ಆಗುತ್ತಿದೆ. ಒಂದಕ್ಕೊಂದು ಸಂಪರ್ಕವಿರದ ಹಲವಾರು ಭಿನ್ನವಿಭಿನ್ನ ಪ್ರದೇಶಗಳಲ್ಲ ಎಂದು.

ನೊನ್ನೆ ಮೊನ್ನಿನ ತನಕ ಪ್ರಪಂಚದ ರಾಷ್ಟ್ರಗಳೆಲ್ಲ ಒಂದಕ್ಕೊಂದು ಸಂಪರ್ಕವಿರದ ಬೇರೆ ಬೇರೆ ದ್ವೀಪಗಳಲ್ಲಿ ವಾಸಿಸುತ್ತಿದ್ದಂತೆ ಇರುತ್ತಿದ್ದರು. ಇದಕ್ಕೊಂದೇ ಅಪವಾದವೆಂದರೆ ಒಂದು ದ್ವೀಪದ ಜನರು ಮತ್ತೊಂದರಲ್ಲಿನ ಜನರ ಮೇಲೆ ದಾಳಿ ಮಾಡಿದಾಗ. ಕೆಲವು ದ್ವೀಪಗಳಂತೂ ಅತ್ಯಂತ ಸಂಪರ್ಕವಿಹೀನವಾಗಿದ್ದವು. ಇಂದು ಹಾಗಿಲ್ಲ. ಈ ಎಲ್ಲ ಜನರಲ್ಲಿ ಅವಿರತವಾದ ಹೋಗಿಬರುವ ಸಂಪರ್ಕವಿದೆ. ಅಭೇದ್ಯ ಕೋಟೆಗಳಂತೆ ಇದ್ದ ಈ ದೇಶಗಳ ಗಡಿಗಳು ಸಂಪರ್ಕಕ್ಕೆ ಪ್ರತಿಬಂಧಕವಾಗಿಲ್ಲ. ಅಖಂಡ ಪ್ರಪಂಚವು ಒಂದಾಗುವಂತಿದೆ. ಹೀಗಾಗಿ ಯಾ ರಾಷ್ಟ್ರಕ್ಕೂ ಅಜ್ಞಾತ ಜನರು ಬಂದು ತಮ್ಮ ರಾಷ್ಟ್ರ ವಿನಾಶವನ್ನು ಬಗೆಯಬಹುದೆಂಬ ಭಯವಿಲ್ಲ. ಭಯ ಗಂಡಾಂತರವೂ ಇದ್ದರೆ ರಾಷ್ಟ್ರದಲ್ಲಿನ ಆಂತರಿಕ ಕಾರ ಗಳಿಂದಲೇ. ಇನ್ನು ನಾವು ಪಾಶ್ಚಾತ್ಯ ನಾಗರಿಕತೆ ದೋಷಗಳನ್ನು ವಿಮರ್ಶಿಸುವದು ಕ್ರಮಪ್ರಾಪ್ತವಾಗಿದೆ.

ಈ ನಾಗರಿಕತೆಯ ದೋಷಗಳು

ಹಲವು ಅಪವಾದಗಳನ್ನು ಬಿಟ್ಟರೆ ಇಂದು ರಾ ಕೀಯ ಬಲಾತ್ಕಾರಕ್ಕೆ ವಿಶೇಷ ಅಸ್ಪದವಿಲ್ಲ. ಕಾಯಿದೆ ದೃಷ್ಟಿಯಿಂದ ಪ್ರಜೆಗಳೆಲ್ಲರೂ ಸಮಾನರು; ಇದಲ್ಲ ಎಷ್ಟೋ ದೇಶಗಳಲ್ಲಿ ಅವರಿಗೆ ತಾವು ಯಾರಿಂದ ಮತ್ತ ಹೇಗೆ ಆಳಲ್ಪಡಬೇಕು ಎಂದು ಹೇಳುವ ಅಧಿಕಾರವು ಇ ಆದರೆ ದುಡ್ಡಿನ ಹಂಚಿಕೆಯು ಇನ್ನೂ ಬಹಳ ಅನ್ಯಾಯ ಸ್ಥಿತಿಯನ್ನು ಸೂಚಿಸುತ್ತದೆ—ದುಡ್ಡಿನ ಹಂಚಿಕೆಯಿಂದ ಅನ್ನ, ವಸ್ತ್ರ, ವಸತಿ, ಪುಸ್ತಕ, ವೈದ್ಯಕೀಯ ಶುಶ್ರೂ ಮುಂತಾದವುಗಳ ಹಂಚಿಕೆ ಎಂಬದನ್ನು ಮರೆಯದೆ ಇರೋಣ. ಇಂಗ್ಲಂಡದ ಉದಾಹರಣೆ ತೆಗೆದುಕೊಳ್ಳ ಅಲ್ಲಿಯ ರಾಷ್ಟ್ರೀಯ ಉತ್ಪನ್ನದ ಅರ್ಧ ಹಣವು ಜ ಸಂಖ್ಯೆಯ ಒಂದು ಹದಿನೇಳನೆಯ ಭಾಗದವರಿಗೆ ಹಂ ಹೋಗುತ್ತದೆ. ಇದರ ಅರ್ಥವೇನೆಂದರೆ ಪ್ರತಿ ಹದಿನಾರ ಜನರಿಗೆ ಉತ್ಪನ್ನದ ಅರ್ಧವು ಹೋಗಿ ಹದಿನೇಳನೆಯ ನಿಗೆ ಉಳಿದ ಅರ್ಧವು ಮುಟ್ಟುತ್ತದೆ. ಅಂತೂ, ಕೆಲವ ಜನರು ಸುಖವಿಲಾಸದಲ್ಲಿ ಜೀವನವನ್ನು ನಡೆಸಿದ ಬಹಳಮಂದಿಗೆ ಅನ್ನ ಬಟ್ಟೆಗೂ ಕೂಡ ಸಾಕಷ್ಟು ಸಿಕ್ಕುವ ದಿಲ್ಲ. ಇಷ್ಟೇ ಅಲ್ಲದೆ ಇಂಗ್ಲಂಡದಲ್ಲಿ ಸಾವಿರಾರು ಜನರು ಅಸಹ್ಯವಾದ ಸನ್ನಿವೇಶದಲ್ಲಿ ಜೀವಿಸುವರು. ಐದಾರು ಜನರಿರುವ ಎಷ್ಟೋ ಕುಟುಂಬಗಳು ಒಂದೇ ಒಂದು ಕೋಣೆಯ ಮನೆಯಲ್ಲಿ ವಾಸಿಸುವರು. ಆ ಒಂದು ಕೋಣೆಯಲ್ಲಿಯೇ ಅವರು ಮಲಗುವದೂ, ಬಟ್ಟೆ ತೊಟ್ಟು ಕೊಳ್ಳುವದೂ, ಒಗೆಯುವದೂ, ಊಟ ಮುಂತಾದ್ದನ್ನು ಮಾಡಬೇಕು; ಅದರಲ್ಲಿಯೇ ಅವರು ಜನಿಸುತ್ತಾರೆ, ಅದರಲ್ಲಿಯೇ ಸಾಯುತ್ತಾರೆ. ಈ ಜೀವನವನ್ನು ಅವರು ಮೋಜಿಗಾಗಿ ಜೀವಿಸುವದಿಲ್ಲ, ಆದರೆ ಇನ್ನೊಂದು ಕೋಣೆಯ ಭಾಡಿಗೆ ಕೊಡಲಿಕ್ಕೆ ಅವರು ನಿರ್ಗತಿಕರಾಗಿರುವದರಿಂದ.

ಯುದ್ಧದ ಗಂಡಾಂತರ

ಇದಕ್ಕೂ ದೊಡ್ಡದೊಂದು ಗಂಡಾಂತರ ಯುದ್ಧದಿಂದ ಪ್ರಾಪ್ತವಾಗಿದೆ. ಕ್ರಯ ವಿಕ್ರಯ ವ್ಯಾಪಾರ ವಿನಿಮಯದಲ್ಲಿ ಪ್ರಪಂಚವು ಅಖಂಡವಾಗಿದ್ದರೂ ರಾಷ್ಟ್ರ ರಾಷ್ಟ್ರಗಳಲ್ಲಿ ಇನ್ನೂ ಸಂಪರ್ಕಕ್ಕೆ ಅಡ್ಡಿಗಳಿರುವವು; ಆಯಾ ಸರಕಾರಗಳಿಂದ ಈ ಅಡ್ಡಿಗಳು ಉಂಟಾಗಿವೆ. ಇಂದಿಗೆ ಸುಮಾರು ೪೦ ವರ್ಷಗಳ ಹಿಂದೆ ೧೯೧೪ರಿಂದ ೧೯೧೮ರ ವರೆಗೆ ಜಗತ್ತೇ ಹಿಂದರಿಯದಿದ್ದ ಅತ್ಯಂತ ವಿನಾಶಕ ಯುದ್ಧವೊಂದು ಪಶ್ಚಿಮ ಯುರೋಪದ ದೊಡ್ಡ ರಾಷ್ಟ್ರಗಳ ನಡುವೆ ಆಯಿತು. ಆ ಯುದ್ಧದ ಕಾರಣಗಳು ಅನೇಕವಾಗಿದ್ದವು; ಅವುಗಳಲ್ಲಿ ಮುಖ್ಯವಾದವೆಂದರೆ ಭಯ ಮತ್ತು ಅಹಂಕಾರ. ಪ್ರತಿಯೊಂದು ರಾಷ್ಟ್ರವು ಉಳಿದ ರಾಷ್ಟ್ರಗಳ ಶಕ್ತಿಗೆ ಭಯಪಟ್ಟಿತ್ತು ಮತ್ತು ದುರಹಂಕಾರಕ್ಕೆ ಒಳಗಾಗಿ ಈ ಭಯವನ್ನು ಬಹಿರಂಗವಾಗಿ ಒಪ್ಪುತ್ತಿರಲಿಲ್ಲ. ಈ ಭಯದ ಪರಿಣಾಮವಾಗಿ ರಾಷ್ಟ್ರಗಳು ಅಪರಿಮಿತ ಹಣವನ್ನು ಬಂದೂಕುಗಳನ್ನೂ ತೋಫುಗಳನ್ನೂ ತಯಾರಿಸುವದರಲ್ಲಿ, ಯುದ್ಧದ ಹಡಗಗಳನ್ನು ಕಟ್ಟುವದರಲ್ಲಿ, ಸೈನಿಕರಿಗೆ ತರಬೇತಿಯನ್ನು ಕೊಡುವದರಲ್ಲಿಯೂ ವ್ಯಯಮಾಡಿದವು. ಹೀಗಾಗಿ ಯುರೋಪವು ಒಂದು ದೊಡ್ಡ ಸಶಸ್ತ್ರ ರಣಶಿಬಿರದಂತೆ ಕಾಣುತ್ತಿತ್ತು. ಬಣವೆಗೆ ಬೆಂಕಿಹಚ್ಚಲಿಕ್ಕೆ ಒಂದೇ ಒಂದು ಬೆಂಕೀಕಡ್ಡಿ ಸಾಲದೇ! ಈ ಎಲ್ಲ ಯುದ್ಧ ಸಾಮುಗ್ರಿಯು ಪರಿಸರದಲ್ಲಿ ಬಿದ್ದಿರುವಾಗ ಯುರೋಪವು ಬೆಂಕಿಹತ್ತಿ ಉರಿಯಲಿಕ್ಕೆ ಒಂದೇ ಒಂದು ಕಡ್ಡಿಯು ಬೇಕಾಗಿತ್ತು. ಎಂತಹ ಕಡ್ಡಿಯಾದರೂ ನಡೆಯಬಹುದು. ಅಷ್ಟರಲ್ಲಿ ಯಾರೋ ಒಬ್ಬರು ಒಂದು ಕಡ್ಡಿಯನ್ನು ಕೊರೆದರು, ಯುರೋಪದ ಸ್ಫೋಟವಾಯಿತು.

ಈ ಸ್ಫೋಟದ ನಂತರವೂ ತಾತ್ಪೂರ್ತಿಕ ಶಾಂತಿಯ ನಂತರ ಪುನಃ ಯುದ್ಧ ತಯಾರಿಯು ನಡೆಯಿತು. ಮೊದಲನೇ ಯುದ್ಧದ ಪೂರ್ವದಲ್ಲಿ ಜಗತ್ತಿನಲ್ಲಿ ಒಟ್ಟು ತರಬೇತಿ ಹೊಂದಿದ ಸೈನಿಕರ ಸಂಖ್ಯೆಗಿಂತ ಹೆಚ್ಚು ಸೈನಿಕರು ಮುಂದೆ ತಯಾರಾದರು. ರಾಷ್ಟ್ರಗಳಲ್ಲಿ ಯುದ್ಧದ ಸಿದ್ಧತೆಗಾಗಿ ಹೆಚ್ಚು ಹಣ ವ್ಯಯವಾಗುತ್ತ ಬಂದಿದೆ. ಉಳಿದೆಲ್ಲ ಜಾಣತನಕ್ಕಿಂತ ತಾವು ಯುದ್ಧದಲ್ಲಿ ಹೆಚ್ಚು ನಿಪುಣರಾಗಿದ್ದೇವೆಂದು ಜನಾಂಗಗಳು ಗರ್ವಪಡುತ್ತಿವೆ; ತನಗೇ ಜಯವು ಸಿಕ್ಕುವದೆಂದೂ ಪ್ರತಿಯೊಂದು ರಾಷ್ಟ್ರಕ್ಕೆ ಎನಿಸುತ್ತದೆ.

ಕೆಲವು ದಿನಗಳ ಹಿಂದೆ * ಇಂಗ್ಲಂಡದೊಡನೆ ಸ್ನೇಹಸಂಬಂಧವಿದ್ದ ಪೌರ್ವಾತ್ಯ ಅರಸನೊಬ್ಬನು, ಅಫಗಾಣಿಸ್ತಾನದ ಅಮಾನುಲ್ಲಾ ಎಂಬಾತನು ಪಾಶ್ಚಾತ್ಯ ಸಂಸ್ಕೃತಿಯು ಯಾವ ಸ್ವರೂಪದ್ದಿದೆ ಎಂಬುದನ್ನು ನೋಡಬೇಕೆಂದು ಇಂಗ್ಲಂಡಕ್ಕೆ ಭೆಟ್ಟಿ ಕೊಟ್ಟನು. ಆತನನ್ನು ಲಲ್‌ವರ್ತಕೋವ್ ಎಂಬಲ್ಲಿ ಯುದ್ಧ ಸಾಧನಗಳಾದ ಟ್ಯಾಂಕುಗಳನ್ನು ನೋಡಲಿಕ್ಕೆ, ಹೆಂಡನ್ ಎಂಬಲ್ಲಿ ಬಾಂಬು ಎಸೆಯುವ ವಿಮಾನುಗಳನ್ನು ನೋಡಲಿಕ್ಕೆ ಕರೆದೊಯ್ಯಲಾಯಿತು. ಒಂದು ಸಬಮರಿನಿನಲ್ಲಿ ಕೂಡಿಸಿಕೊಂಡು ಪ್ರವಾಸ ಮಾಡಿಸಲಾಯಿತು, ಸ್ಪಿಟ್‌ಹೆಡ್ ಎಂಬ ಭೂಶಿರದಿಂದ ಒಂದು ಟಾರ್ಪೆಡೋ ಹಾರಿಸಲಿಕ್ಕೆ ಕೊಡಲಾಯಿತು; ಆದರೆ ಯಾರೊಬ್ಬರೂ ಇಂಗ್ಲಂಡದ ನಾಮಾಂಕಿತ ಕವಿಯ ಸಂದರ್ಶನ ಮಾಡಿಸಲಿಲ್ಲ—ಕವಿಗಳನ್ನಾಗಲಿ, ಚಿತ್ರಕಾರರನ್ನಾಗಲಿ, ಸಂಗೀತಗಾರರನ್ನಾಗಲಿ, ಸುಂದರ ಕಲಾಕೃತಿ ನಿಪುಣರನ್ನಾಗಲಿ ತೋರಿಸಲಿಲ್ಲ. ಇಂದಿಗೆ ಮುನ್ನೂರು ವರ್ಷಗಳ ತರುವಾಯ ಅಫಗಾಣರು ತಮ್ಮ ದೇಶದ ಚರಿತ್ರೆಯನ್ನು ಓದುವಾಗ ಇಂಗ್ಲಿಷ ಜನರ ವಿಷಯವಾಗಿ ಏನು ಕಲ್ಪನೆಯನ್ನು ಮಾಡಿಕೊಳ್ಳಬಹುದು? ಇಂಗ್ಲಿಷರು ಯುದ್ಧಪ್ರಿಯ ಜನಾಂಗವೆಂದೂ ಶಾಂತಿ ಜೀವನದ ಸಂಪತ್ತಿಯಲ್ಲಿ ಅವರಿಗೆ ಆಸ್ಥೆಯಿರಲಿಲ್ಲವೆಂದೂ, ಬಂದ ವಿದೇಶೀಯರಿಗೆ ತಮ್ಮ ಸಂಸ್ಕೃತಿಯ ಘನತೆಯನ್ನು ಬಣ್ಣಿಸಿ ತೋರಿಸುವಷ್ಟು ಅದರ ಅಭಿಮಾನವೂ ಅವರಿಗೆ ಇರಲಿಲ್ಲವೆಂದೂ ತಿಳಿಯಲಿಕ್ಕಿಲ್ಲವೇ? ನಿಜವಾಗಿ ನಾವು ನಮ್ಮ ಕವಿಗಳ ವಿಷಯದಲ್ಲಿ ಪಡುವ ಅಭಿಮಾನಕ್ಕಿಂತ ನಮ್ಮ ಯುದ್ಧ ಹಡಗಗಳ ವಿಷಯಕ್ಕೆ ಹೆಚ್ಚು ಅಭಿಮಾನಪಡುವೆವು. ಜನರನ್ನು ಶಾಂತಿ ಸಮಯದಲ್ಲಿ ಸುಖಿಗಳನ್ನೂ ವಿವೇಕಿಗಳನ್ನೂ ಮಾಡುವದರಲ್ಲಿ ಖರ್ಚು ಮಾಡುವದಕ್ಕಿಂತ ಹೆಚ್ಚು ಹಣವನ್ನು ಅವರನ್ನು ಯುದ್ಧದಲ್ಲಿ ನಾಶಗೊಳಿಸುವದರಲ್ಲಿ ಖರ್ಚು ಮಾಡುತ್ತೇವೆ. ಈ ಮಾತು ಇಂಗ್ಲಂಡಕ್ಕೆ ಎಷ್ಟು ಅನ್ವಯಿಸುವುದು ಅಷ್ಟೇ ಉಳಿದ ದೇಶಗಳಿಗೂ ಅನ್ವಯಿಸುವದು. ಇದೇ ರೀತಿಯಾಗಿ ರಾಷ್ಟ್ರಗಳು ಮುಂದುವರಿದರೆ ಪುನಃ ಬಣವೆಗೆ ಬೆಂಕಿಹತ್ತಲಿಕ್ಕೆ ಒಂದು ಕಡ್ಡಿಯು

ಸಾಕು. ಆಧುನಿಕ ಯುದ್ಧದ ವಿನಾಶಕ ಶಕ್ತಿಯು ಎಷ್ಟು ಭಯಾನಕವಾಗಿದೆಯೆಂದರೆ ಇನ್ನೊಮ್ಮೆ ಥರ್ಗ್ ಎಂದು ಯುದ್ಧಜ್ವಾಲೆ ಪ್ರಜ್ವಲಿಸಿದರೆ ಸಂಪೂರ್ಣ ನಾಗರಿಕತೆಯೇ ನಶಿಸಿ ಹೋಗುವದು.

ಇದನ್ನು ಬಿಗಿಹಿಡಿಯಬಹುದಾದ ಸಾಧನವೆಂದರೆ ರಾಷ್ಟ್ರಸಂಘವೆಂಬ ಸಂಸ್ಥೆ. ಕಳೆದ ಯುದ್ಧದ ನಂತರ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದರ ಉದ್ದೇಶವು ರಾಷ್ಟ್ರಗಳು ತಮ್ಮ ಪರಸ್ಪರರಲ್ಲಿನ ಜಗಳಗಳನ್ನು ತೀರಿಸಿ ಕೊಳ್ಳಲಿಕ್ಕೆ ಒಂದು ನ್ಯಾಯಾಲಯವನ್ನು ಒದಗಿಸುವದೇ ಆಗಿದೆ. ಜಗಳಾಡುವ ಇಬ್ಬರು ಓಣಿಯಲ್ಲಿ ಹೇಗೆ ಹೊಡೆದಾಟಕ್ಕೆ ನಿಲ್ಲದೇ ನ್ಯಾಯಾಲಯಕ್ಕೆ ಹೋಗುವರೋ ಹಾಗೆಯೇ ಮೊದಲು ವಿವಾದಾಸ್ಪದವಾದ ಮಾತಿಗೆ ಯುದ್ಧಕ್ಕೆ ಇಳಿಯುತ್ತಿದ್ದ ಜನಾಂಗಗಳು ಈಗ ರಾಷ್ಟ್ರ ಸಂಘಕ್ಕೆ ತಮ್ಮ ಜಗಳವನ್ನು ಒಯ್ಯಬಹುದು. ಈ ಸಂಘದಲ್ಲಿ ಜಗತ್ತಿನ ಪ್ರಮುಖ ರಾಷ್ಟ್ರಗಳೆಲ್ಲ ಇವೆ. ಆದಕ್ಕೆ ಯುದ್ಧವನ್ನು ನಿಲ್ಲಿಸುವಷ್ಟು ಸಾಮರ್ಥ್ಯವಿನ್ನೂ ಬಂದಿಲ್ಲ. ಆ ಸಾಮರ್ಥ್ಯವು ಅದಕ್ಕೆ ಒಂದಾನೊಂದು ದಿನ ಬರಬಹುದು. ಹೀಗಾಗಲಿಕ್ಕೆ ಎಲ್ಲ ಘಟಕ ರಾಷ್ಟ್ರಗಳು ಸ್ವಸಂತೋಷದಿಂದ ಕೆಲವೊಂದು ಸೈನ್ಯಪಡೆಯನ್ನೂ ಹಡಗು ಪಡೆಯನ್ನೂ ಆ ರಾಷ್ಟ್ರ ಸಂಘಕ್ಕೆ ಅರ್ಪಿಸಬೇಕು. ಈ ರಾಷ್ಟ್ರ ಸಂಘದಲ್ಲಿ ಪ್ರಪಂಚದ ರಾಷ್ಟ್ರಗಳ ಆಶಾಂಕುರ ವಿದೆ.

ಯಂತ್ರಗಳಿಂದ ಗಂಡಾಂತರ

ನಮ್ಮ ಸಂಸ್ಕೃತಿಯ ಇನ್ನೊಂದು ದೊಡ್ಡ ದೋಷವೆಂದರೆ ತನ್ನಲ್ಲಿದ್ದ ಜ್ಞಾನದ ಉಪಯೋಗವನ್ನು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೆಂಬುದು ಅದಕ್ಕೆ ತಿಳಿಯದೇ ಹೋದುದು. ವಿಜ್ಞಾನವು ನಮಗೆ ದೇವತೆಗಳಿಗೆ ಒಪ್ಪುವಂಥ ಅದ್ಭುತ ಶಕ್ತಿಗಳನ್ನು ಕೊಟ್ಟಿದೆ; ಹೀಗಿದ್ದೂ ಅದನ್ನು ನಾವು ಸಣ್ಣ ಮಕ್ಕಳಂತೆ ಉಪಯೋಗ ಮಾಡುವದರಲ್ಲಿದ್ದೇವೆ.

ಉದಾಹರಣೆಗಾಗಿ ನಮ್ಮ ಯಂತ್ರಗಳನ್ನು ನಮ್ಮ ಆಧೀನದಲ್ಲಿ ಹೇಗೆ ಇಟ್ಟುಕೊಳ್ಳಬೇಕೆಂಬುದೇ ನಮಗೆ ತಿಳಿಯದಾಗಿದೆ. ಮನುಷ್ಯನಿಗೆ ಸೇವಕರಂತೆ ಸೇವೆಸಲ್ಲಿಸುವದಕ್ಕೆ ಯಂತ್ರಗಳು ಮಾಡಲ್ಪಟ್ಟವು; ಹೀಗಿರಲು ಅವನು ಅವುಗಳನ್ನು ಬಹುಮಟ್ಟಿಗೆ ಆಶ್ರಯಿಸಿರುವದರಿಂದ ಅವು ಒಂದು ದಿನ ಅವನ ಪ್ರಭುಗಳಾಗಿಯೇ ಬಿಡುವವು. ಈಗಾಗಲೇ ಅಸಂಖ್ಯಾತ ಜನರು ತಮ್ಮ ಜೀವನದ ಬಹು ಭಾಗವನ್ನು ಯಂತ್ರಗಳನ್ನು ಜೋಕೆಯಿಂದ ಇಟ್ಟು ಅವುಗಳ ಸುಸ್ಥಿತಿಯನ್ನು ಕಾಯುವದರಲ್ಲಿಯೇ ಕಳೆಯುವರು. ಈ ಯಂತ್ರಗಳೋ ಬಹು ನಿಷ್ಠುರ ಯಜಮಾನರು. ಅದಕ್ಕೆ ಕಲ್ಲಿದ್ದಲಿ ಹೊಟ್ಟೆಗೆ ಹಾಕಬೇಕು, ಕುಡಿಯಲಿಕ್ಕೆ ಪೆಟ್ರೋಲ್ ಕೊಡಬೇಕು, ಮೈಕೆಳೆಯಲಿಕ್ಕೆ ಎಣ್ಣೆಯನ್ನು ಒದಗಿಸಬೇಕು, ಅವುಗಳ ದೇಹದ ಉಷ್ಣತೆಯ ಮಾನವು ಸರಿಯಾದ ಮಿತಿಯಲ್ಲಿರಬೇಕು. ಮತ್ತು ಅವು ನಿರೀಕ್ಷಿಸಿದ ವೇಳೆಗೆ ಅವಕ್ಕೆ ಆಹಾರವು ದೊರೆಯದೇ ಹೋದರೆ ಅವು ಜೋಲುಮೋರೆ ಹಾಕಿ ಕೆಲಸವನ್ನೇ ನಿಲ್ಲಿಸುತ್ತವೆ, ಇಲ್ಲವೆ ಸಿಟ್ಟಿಗೆದ್ದು ಸಿಡಿದು ತಮ್ಮ ಆಸುಪಾಸಿನಲ್ಲೆಲ್ಲ ಹಾಳುಗೆಡವಿಬಿಡುವವು. ಆದ್ದರಿಂದ ಅವುಗಳ ಯೋಗಕ್ಷೇಮವನ್ನು ನಾವು ಬಹು ಜಾಗರೂಕತೆಯಿಂದ ನೋಡಿಕೊಳ್ಳಬೇಕು; ಅವು ಸಂತುಷ್ಟರಾಗಿ ಇರುವದಕ್ಕೆ ನಮ್ಮ ಕೈಲಾದದ್ದನ್ನೆಲ್ಲ ಮಾಡಬೇಕು. ಈಗಾಗಲೆ ಯಂತ್ರಗಳಿಲ್ಲದೆ ನಾವು ಕೆಲಸ ಮಾಡುವದು, ಆಡುವದು ಸಹ ಕಷ್ಟವಾಗಿದೆ; ಅವು ನಮ್ಮ ಮೇಲೆ ಸಂಪೂರ್ಣ ತಮ್ಮ ಅಮಲನ್ನು ನಡೆಸುವ ದಿನವು—ನಾವು ಪಶುಗಳ ಮೇಲೆ ನಡೆಸುವಂತೆ—ಬಂದರೂ ಬರಬಹುದು.

ನಮಗೆ (ಯಂತ್ರಗಳಿಂದ) ಉಳಿಯುತ್ತಿರುವ ವೇಳೆಯಲ್ಲಿ ನಾವು ಏನು ಮಾಡಬೇಕು ?

ಯಂತ್ರಗಳಿಂದ ನಮಗೆ ಉಳಿದ ವೇಳೆಯಿಂದ ಮತ್ತು ಅವು ನಮಗೆ ನೀಡಿದ ಹೊಸ ಶಕ್ತಿಯಿಂದ ನಾವು ಏನು ಮಾಡಬೇಕು ಎಂಬ ನಮ್ಮ ಮೊದಲಿನ ಪ್ರಶ್ನೆಗೆ ಬಂದೆವು. ಒಟ್ಟಿನಲ್ಲಿ ಹೇಳುವದಾದರೆ ನಾವೂ ಏನೂ ಮಾಡುತ್ತಾ ಇಲ್ಲ ಅಥವಾ ನಾವು ಮಾಡುವದು ಅತ್ಯಲ್ಪವಾಗಿದೆ. ಹೆಚ್ಚಾಗಿ ನಮ್ಮ ಸಮಯ ಶಕ್ತಿಗಳನ್ನು ಇನ್ನು ಅನೇಕ ಸುಧಾರಿಸಿದ ಯಂತ್ರಗಳನ್ನು ತಯಾರು ಮಾಡುವದರಲ್ಲಿಯೇ ಕಳೆಯುತ್ತೇವೆ. ಆದರೆ ಹೆಚ್ಚು ಯಂತ್ರಗಳು ಮತ್ತು ಹೆಚ್ಚು ಸುಧಾರಿಸಿದ ಯಂತ್ರಗಳು ಇನ್ನೂ ಹೆಚ್ಚು ಸಮಯ ಶಕ್ತಿಗಳ ಉಳಿತಾಯ ಮಾಡುವವು. ಈ ಉಳಿಕೆಯನ್ನು ತಕ್ಕೊಂಡು ನಾವು ಏನು ಮಾಡಬೇಕೆಂಬ ಸಮಸ್ಯೆಯು ಮತ್ತೆ ತಲೆ ಎತ್ತುವದು.

ನನಗೆ ತೋರಿದ ಮಟ್ಟಿಗೆ ಇದಕ್ಕೆ ಉತ್ತರವೆಂದರೆ ನಾವು ಹೆಚ್ಚು ಶ್ರೇಷ್ಠವಾದ ಸಂಸ್ಕೃತಿಯನ್ನು ಬೆಳಿಸಲಿಕ್ಕೆ ಪ್ರಯತ್ನಿಸಬೇಕು. ಏಕೆಂದರೆ ಈ ಯಂತ್ರಗಳಾಗಲಿ ಅವು ನಮಗೆ ನೀಡಿದ ಶಕ್ತಿಯಾಗಲಿ ನಾಗರಿಕತೆ ಎನಿಸುವದಿಲ್ಲ, ಅವು ನಾಗರಿಕತೆಗೆ ಸಾಧನಗಳು ಮಾತ್ರ. ಒಂದು ಉಗಿ ಬಂಡಿಯಲ್ಲಿ ಕೂತು ಹೋಗುವೆವು ಎಂಬದೇನು ಸುಧಾರಣೆಯ ಅಥವಾ ನಾಗರಿಕತೆಯ ವಿಶಿಷ್ಟ ಲಕ್ಷಣವಲ್ಲ. ಸುಸಂಸ್ಕೃತರಾಗಿರುವದೆಂದರೆ ಒಳ್ಳೇ ವಸ್ತುಗಳನ್ನು ಮಾಡಲಿಕ್ಕೆ ಕಲಿಯುವದು ಮತ್ತು ಅವುಗಳನ್ನು ನೋಡಿ ಆನಂದಪಡುವದು. ದಾಕ್ಷಿಣ್ಯಕ್ಕೆ ಒಳಗಾಗದೆ ಸ್ವತಂತ್ರವಾಗಿ ಆಲೋಚಿಸುವದು, ನ್ಯಾಯವಾದ ಸನ್ಮಾರ್ಗದಲ್ಲಿ ನಡೆಯುವದು ಮತ್ತು ಮಾನವ ಮಾನವರಲ್ಲಿ ನ್ಯಾಯದ ಸಮದೃಷ್ಟಿಯನ್ನಿಟ್ಟುಕೊಳ್ಳುವದು—ಇವೇ ಈ ಕಾರ್ಯಗಳನ್ನು ಸಾಧಿಸುವದಕ್ಕೆ ಮಾನವನಿಗೆ ಎಂದಿಗಿಂತಲೂ ಹೆಚ್ಚು ಅನುಕೂಲವೂ ಅವಕಾಶವೂ ದೊರಕಿವೆ. ಆತನಿಗೆ ಹೆಚ್ಚು ಸಮಯವಿದೆ, ಹೆಚ್ಚು ಕಾರ್ಯಶಕ್ತಿಯಿದೆ, ಭಯಕ್ಕೆ ಅವಕಾಶವು ಕಡಿಮೆ, ಪ್ರತಿಕೂಲ ಪರಿಸ್ಥಿತಿಯೊಡನೆ ಹೋರಾಟವೂ ಕಡಿಮೆ. ಈ ಉಳಿತಾಯವಾದ ಕಾಲ ಕಾರ್ಯಶಕ್ತಿಗಳನ್ನು ಹೆಚ್ಚು ಆನಂದದಾಯಕ ವಸ್ತುಗಳನ್ನು ನಿರ್ಮಿಸುವದರಲ್ಲಿ, ವಿಶ್ವದ ಬಗೆಗೆ ಹೆಚ್ಚು ಹೆಚ್ಚು ಜ್ಞಾನ ಮಾಡಿಕೊಳ್ಳುವದರಲ್ಲಿ, ರಾಷ್ಟ್ರ ರಾಷ್ಟ್ರಗಳಲ್ಲಿ ಹುಟ್ಟಿದ ಜಗಳಗಳನ್ನು ನಿವಾರಿಸುವದರಲ್ಲಿ, ದಾರಿದ್ರ್ಯವನ್ನು ದೂರ ಮಾಡುವ ಉಪಾಯವನ್ನು ಹುಡುಕುವದರಲ್ಲಿ ಕಳೆದರೆ ನಮ್ಮ ಸಂಸ್ಕೃತಿಯು ಖಂಡಿತವಾಗಿಯೂ ಎಲ್ಲ ಸಂಸ್ಕೃತಿಗಳಲ್ಲಿ ಶ್ರೇಷ್ಠವೆನಿಸುವದು; ಅದು ಆ ಎಲ್ಲ ಸಂಸ್ಕೃತಿಗಳಿಗಿಂತ ಹೆಚ್ಚು ಕಾಲ ಬಾಳುವದು.

★ಈ ಲೇಖವು ೧೯೩೦ರ ಸುಮಾರಕ್ಕೆ ಜೋಡ ಎಂಬ ತತ್ವಜ್ಞಾನಿಗಳಿಂದ ಬರೆಯಲಾಗಿದೆ. ಅದರ ಅನುವಾದವಿದು.

ಉತ್ತರ ಭಾರತದ ಪ್ರವಾಸದನುಭವಗಳು

ಲೇಖಕರು :— ಶ್ರೀ ಮಿರ್ಜಿ ಅಣ್ಣಾರಾಯರು, ಶೇಡಬಾಳ.

ಭಾರತೀಯ ಸಂಸ್ಕೃತಿಯ ಅಭ್ಯಾಸಿಗಳು ಒತ್ತಟ್ಟಿಗೆ ಕುಳಿತು ನೂರಾರು ಗ್ರಂಥಗಳನ್ನು ಅಭ್ಯಸಿಸುವದಕ್ಕಿಂತ ಒಮ್ಮೆ ದೇಶವನ್ನು ಸುತ್ತಿ ಬಂದರೂ ಸಾಕು; ಸಂಸ್ಕೃತಿಯ ನಿಕಟ ಪರಿಚಯವನ್ನು ಹೊಂದಬಹುದು, ಅವರ ಹೃದಯವನ್ನು ಅರಿಯಬಹುದು. ನಾಡಿನ ನಾಡಿಯನ್ನು ಗುರುತಿಸಲು ಪ್ರವಾಸದಷ್ಟು ಉಪಯುಕ್ತ ಸಾಧನ ಇನ್ನೊಂದಿಲ್ಲ. ಇದನ್ನರಿತೇ ಸ್ವಾಮಿ ವಿವೇಕಾನಂದರನ್ನು ಮೊದಲು ಮಾಡಿಕೊಂಡು ಮಹಾತ್ಮರ ವರೆಗೆ ಆದ ಹಲವು ಜನ ಹಿರಿಯರು ಭಾರತದ ಮೂಲೆ ಮೂಲೆಗಳಲ್ಲೂ ಸಂಚರಿಸಿದ್ದುಂಟು. ಅದರಿಂದ ಅವರು ರಾಷ್ಟ್ರದ ಜೀವ-ಜೀವಾಳವನ್ನು ಅರಿಯಲು ಸಾಧ್ಯವಾಯಿತು. ಜಾಗೃತ ಭಾರತವನ್ನು ನಿರ್ಮಿಸಲೂ ಸಮರ್ಥರಾದರು.

ಕ್ರಿ. ಶ. ೧೯೪೭ರಲ್ಲಿ ಭಾರತವು ಸ್ವತಂತ್ರವಾಯಿತು. ಅದರೊಡನೆ ಎರಡು ಭಾಗವೂ ಆಯಿತು. ನಾಡಿನ ಅನೇಕ ಭಾಗಗಳಲ್ಲಿ ಗಲಭೆಗಳು ಉಂಟಾದುವು. ಪಾಕಿಸ್ತಾನದಿಂದ ನಿರಾಶ್ರಿತರಾದ ಹಿಂದುಗಳು ಹಿಂಡು ಹಿಂಡಾಗಿ ಹೊರಬೀಳಹತ್ತಿದರು. ಆರೇಳು ನೂರು ಸಂಸ್ಥಾನಿಕರು ತಾವು ಸ್ವತಂತ್ರರೆಂಬಂತೆ ಬಾಳಲು ಹವಣಿಸಿದರು. ಭಾರತವು ಆಗ ಒಂದು ಬಿರುಗಾಳಿಗೆ ಒಡ್ಡಿದ ಸೊಡರಿನಂತೆ ಜಗತ್ತಿಗೆ ತೋರಿರಬೇಕು. ಅದರ ಸ್ವಾತಂತ್ರ್ಯವೂ ಅಷ್ಟೇ. ಇಂಥ ಸಂದರ್ಭದಲ್ಲಿ ವಿಶ್ವವಂದ್ಯರಾದ ಮಹಾತ್ಮರ ಕೊಲೆ! ಇದೇನು? ಭಾರತೀಯರ ಪುಣ್ಯ ತೀರಿತೇ? ಸಂಸ್ಕೃತಿಯು ಸಂಪತ್ತೆಂಬುದು ನಷ್ಟವಾಯಿತೇ? ಹಿಂದಿನ ಅಧ್ಯಾತ್ಮ, ತಪಸ್ಸು, ತ್ಯಾಗಗಳೆಂಬವು

ಗಳೆಲ್ಲ ಬರೀ ಜೊಳ್ಳು ನುಡಿಗಳೇ? ಅಶೋಕ, ಹರ್ಷ, ಪುಲಿಕೇಶಿಗಳಂಥವರು ಸಾಮ್ರಾಜ್ಯಗಳನ್ನು ಸ್ಥಾಪಿಸಿ, ಭಾರತವನ್ನು ಆಳಿದರೆಂಬ ನುಡಿಯು ಕೇವಲ ಹಳೆಯ ಕತೆಯನ್ನು ಹೇಳುವದಕ್ಕೆ ಮಾತ್ರ ಉಳಿಯಿತೆ?— ಇತ್ಯಾದಿ ಪ್ರಶ್ನೆಗಳು ವಿಚಾರವಂತರಲ್ಲಿ ಆಗ ಉದ್ಭವಿಸದೆ ಇರಲಿಲ್ಲ.

ಇಂಥ ಸಂಕ್ರಮಣ ಕಾಲದಲ್ಲಿಯೇ ನನಗೆ ಉತ್ತರ ಭಾರತದ ಸಂಚಾರದ ಸುಯೋಗ ಒದಗಿಬಂದಿತು. ನನಗೇನೋ ಹಲವು ದಿನಗಳಿಂದ ದಕ್ಷಿಣ ಹಿಂದುಸ್ಥಾನದಂತೆಯೇ ಉತ್ತರದ ಅನೇಕ ಸ್ಥಳಗಳನ್ನು ನಿರೀಕ್ಷಿಸಬೇಕೆಂಬ ಹಂಬಲ ಇತ್ತು. ಆದರೆ ಅದು ಕೇವಲ ಕನಸಿನ ಮಾತಾಗಿತ್ತು. ಬಡ ಪ್ರಾಥಮಿಕ ಶಿಕ್ಷಕರ ಇಂಥ ಅನೇಕ ಕನಸುಗಳು ನನಸಾಗದೆ ಉಳಿಯುವುದೇ ಹೆಚ್ಚು. ಆದರೆ ನನಗೊಂದು ಸಹಜ ಸುಯೋಗವು ಒದಗಿ ಬಂತು. ಶೇಡಬಾಳದ ಶಾಂತಿಸಾಗರ ಅನಾಥಾಶ್ರಮವನ್ನು ರವೀಂದ್ರರ ಶಾಂತಿನಿಕೇತನದಂಥ ಸಂಸ್ಥೆಯನ್ನಾಗಿ ಮಾಡಬೇಕೆಂಬ ನನ್ನ ಹುಚ್ಚು, ಊರನ್ನು ಬಿಡಿಸಿತು. ಉತ್ತರ ಭಾರತದಲ್ಲಿ ಸಂಚರಿಸಲು ಸೆಳೆದೊಯ್ದಿತು. ಧ್ಯೇಯದ ಬೆನ್ನು ಹತ್ತಿದ ಯುವಕರಿಗೆ ಬಡತನದ ಕಷ್ಟ ನಿಷ್ಠುರಗಳ ಪರಿವೆ ಇರುವದಿಲ್ಲವಷ್ಟೆ?

ಒಮ್ಮೆ ಊರನ್ನು ಬಿಟ್ಟು, ಕನ್ನಡ ನಾಡಿನ ಗಡಿಯನ್ನು ದಾಟಿದ ನಾನು ಮಹಾರಾಷ್ಟ್ರ, ಮಧ್ಯಪ್ರದೇಶ, ಬಿಹಾರ, ಬಂಗಾಲ, ಸಂಯುಕ್ತ ಪ್ರಾಂತ, ರಾಜಸ್ಥಾನ, ಸೌರಾಷ್ಟ್ರ ಮತ್ತು ಗುಜರಾಥದ ಅನೇಕ ಸ್ಥಳಗಳನ್ನು ಸಂದರ್ಶಿಸಿದೆ. ಹಲವು ತರದ ಸಮಾಜಗಳನ್ನು ಕಂಡೆ. ಅನೇಕ ಜನ ಸಂತರ ದರ್ಶನವನ್ನು ಪಡೆದೆ. ಭಾರತೀಯ ಸಂಸ್ಕೃತಿಯ ಹೃದಯವನ್ನು ಗುರುತಿಸಲು ಯತ್ನಿಸಿದೆ. ಅದರೊಡನೆ ನನ್ನ ಜೀವನದ ಧ್ಯೇಯವೂ ಸ್ಪಷ್ಟವಾಗುತ್ತ ನಡೆಯಿತು. ಅದನ್ನು ಸಾಧಿಸಲು ಉತ್ಕಟ ಇಚ್ಛೆಯೂ ಹೋರಾಡುವ ಮನೋವೃತ್ತಿಯೂ ಪ್ರವಾಸದನುಭವಗಳಿಂದ ನಿರ್ಮಾಣವಾದುವು.

ಎಲ್ಲರಿಗೂ ಒಂದೇ ಮಾದರಿಯ ಶಿಕ್ಷಣವನ್ನು ಒದಗಿಸುವ ಈ ರಾಜ್ಯದಾಡಳಿತೆಯ ಶಿಕ್ಷಣ ಪದ್ಧತಿಯನ್ನು ಸ್ವಲ್ಪ ಸಮಯ ದೂರ ಇಟ್ಟು ಸ್ವತಂತ್ರವೂ ಭಾರತೀಯ ಬುನಾದಿಯ ಮೇಲೆ ಸ್ಥಿರಗೊಂಡುದೂ ಪ್ರಾಚೀನ ಗುರುಕುಲ ಪದ್ಧತಿಯನ್ನು ಮೈಗೂಡಿಸಿಕೊಂಡುದೂ ಆದ ಒಂದು ಸಜೀವ ಶಿಕ್ಷಣ ಕ್ರಮವನ್ನು ರೂಪಿಸಲಿಕ್ಕೆ ಮಾದರಿಯ ಸ್ವತಂತ್ರ ಸಂಸ್ಥೆಯನ್ನು ಕಟ್ಟಬೇಕೆಂದು ಹಂಬಲಿಸಿ ನಾನು ಪ್ರವಾಸವನ್ನು ಕೈಕೊಂಡಿದ್ದೆ. ಅದರಿಂದ ನನ್ನ ಪ್ರವಾಸದಲ್ಲಿ ಶಿಕ್ಷಣ ಸಂಸ್ಥೆಗಳ ನಿರೀಕ್ಷಣೆಯೂ ಒಂದು ಮುಖ್ಯ ಗುರಿಯಾಗಿದ್ದಿತು. ಈ ಮೊದಲೇ ನೋಡಿದ ಧರ್ಮಸ್ಥಳದ 'ಸಿದ್ಧವನ' ಶಾಲೆ, ಬಾಹುಬಲಿ 'ಬ್ರಹ್ಮಚರ್ಯಾಶ್ರಮ'ಗಳು ನನ್ನ ದೃಷ್ಟಿಯಲ್ಲಿ ಆಗಾಗ ಸುಳಿಯುತ್ತಿದ್ದವು. ಅದರಂತೆ ನಾಶಿಕದ ಬಳಿಯಲ್ಲಿರುವ 'ಗಜಪಂಥದ ಗುರುಕುಲ'ವನ್ನು ಕಂಡೆ. ಪ್ರಾಚೀನ ಭಾರತೀಯರಂತೆ ಗುಡ್ಡ ಒಂದರ ಅಡಿಯಲ್ಲಿ ಪುಟ್ಟ ಶಾಲಾಗೃಹವನ್ನು ನಿರ್ಮಿಸಿಕೊಂಡು, ಬ್ರಹ್ಮಚಾರಿಗಳ ನೇತೃತ್ವದಲ್ಲಿ ಶಿಕ್ಷಣ ಸಾಗುತ್ತಿದ್ದಿತು ವಿದ್ಯಾರ್ಥಿಗಳು ತಮ್ಮ ಕೆಲಸಗಳನ್ನೆಲ್ಲ ತಾವೇ ಮಾಡಿಕೊಳ್ಳುತ್ತ ಇದ್ದರು. ಆದರೂ ಅಲ್ಲಿಯ ಮಕ್ಕಳ ಶಿಕ್ಷಣವು ಹೊರಗಿನ ಲೋಕದಲ್ಲಿ ಮನ್ನಣೆ ಹೊಂದಲೆಂಬ ಉದ್ದೇಶದಿಂದ ದೇಶದಲ್ಲಿ ಪ್ರಚಲಿತ ಇರುವ ಶಿಕ್ಷಣ ಕ್ರಮವನ್ನೇ ಅನುಸರಿಸಿದ್ದರು. ಅದರಿಂದ ಆಂತರಿಕ ವೈಶಿಷ್ಟ್ಯವೇನೂ ಅಲ್ಲಿ ಕಾಣುತ್ತ ಇರಲಿಲ್ಲ. ಈ ಪ್ರವಾಸದಲ್ಲಿ ನಾನು ಕಂಡ ಶಿಕ್ಷಣ ಸಂಸ್ಥೆಗಳಲ್ಲಿ ಬಿಹಾರದ ಆರಾದಲ್ಲಿರುವ 'ಬಾಲಾ ವಿಶ್ರಾಮ' ಬಂಗಾಲದ ಬೋಲಪುರದಲ್ಲಿರುವ 'ಶಾಂತಿ ನಿಕೇತನ'ಗಳಲ್ಲಿ ಮಾತ್ರ ಇಂಥ ಶೈಕ್ಷಣಿಕ ವೈಶಿಷ್ಟ್ಯಗಳನ್ನು ನಾವು ಕಾಣಬಹುದು. ಒಂದು ಹೆಣ್ಣುಮಕ್ಕಳಿಗಾಗಿ ಪಂಡಿತಾ ಚಂದಾಬಾಯಿಯವರು ನಡೆಯಿಸಿದ ಸಂಸ್ಥೆ; ಇನ್ನೊಂದು ಕವಿವರ್ಯ ರವೀಂದ್ರರು ನಿರ್ಮಿಸಿದ ವಿಶ್ವ ಸಂಸ್ಕೃತಿ ಸಮ್ಮೇಳನದ ಸಂಸ್ಥೆ. ದಿಲ್ಲಿಯ ಮೂಲೋದ್ಯೋಗ ಶಿಕ್ಷಣ ಕೇಂದ್ರವು ತನ್ನ ಶೈಕ್ಷಣಿಕ ಕ್ಷೇತ್ರದಲ್ಲಿ ಬರುವ ಜನತೆಯ ಸಾಂಸ್ಕೃತಿಕ ಮಟ್ಟವನ್ನೆಲ್ಲ ಎತ್ತರಿಸುವ ನವೀನ ಪ್ರಯೋಗವೊಂದನ್ನು ನಡೆಯಿಸಿದೆ. ಅಲ್ಲಿ ಮಕ್ಕಳಿಗಷ್ಟೇ ಶಿಕ್ಷಣವಲ್ಲ. ಸಮಾಜದೊಳಗಿನ ಪ್ರತಿಯೊಬ್ಬರಿಗೂ ಶಿಕ್ಷಣ ಕೊಡುವ ವ್ಯವಸ್ಥೆಯಿದೆ. ಇದು ನವರಾಷ್ಟ್ರ ನಿರ್ಮಾಣದ ಪ್ರಯೋಗಗಳಲ್ಲಿ ಒಂದಾಗಿದೆ. ಭಾರತದ ಶಿಕ್ಷಣ ಮಂತ್ರಿಗಳಾದ ಮಾನ್ಯ ಅಬುಲ್ ಕಲಂ ಆಝಾದರ ಮಾರ್ಗದರ್ಶನದಲ್ಲಿ ಇದು ನಡೆದಿದೆ. ಇಲ್ಲಿಯ

ಶಿಕ್ಷಣ ಕ್ರಮಕ್ಕೊಂದು ವೈಶಿಷ್ಟ್ಯವೂ ಇದೆ. ಈ ಸಂಸ್ಥೆಗಳ ಶಿಕ್ಷಣ ಕ್ರಮದ ಜೊತೆಗೆ ಪಾಂಡಿಚೇರಿಯ ಶ್ರೀ ಅರವಿಂದಾಶ್ರಮದಲ್ಲಿರುವ ತರಗತಿ ವಿಹಿತ ವಿಷಯ ಜ್ಞಾನಕ್ಕೆ ಅನುಸರಿಸಿ ಒಬ್ಬ ವಿದ್ಯಾರ್ಥಿಯೇ ಭಿನ್ನ ಭಿನ್ನ ತರಗತಿಗೆ ಸೇರುವ ಶಿಕ್ಷಣವನ್ನು ನೆನೆದರೆ ನಮ್ಮ ಕಲ್ಪನೆಯಲ್ಲಿ ಶೈಕ್ಷಣಿಕ ಭವ್ಯ ಮಂದಿರವೊಂದು ರೂಪುಗೊಳ್ಳುವುದು. ಇದಕ್ಕೆ ಇನ್ನಿಷ್ಟು ಜೀವಕಳೆಯನ್ನು ಒದಗಿಸಬೇಕೆಂದರೆ ನಾವು ನಾಲಂದ ವಿಶ್ವವಿದ್ಯಾಲಯವನ್ನು ಸಂದರ್ಶಿಸಿ, ಅದರ ಪ್ರಾಚೀನ ಶಿಕ್ಷಣ ಕ್ರಮವನ್ನು ತಿಳಿದುಕೊಳ್ಳಬೇಕು. ನಾವು ಅಲ್ಲಿ ಹೋದಾಗ ಐತಿಹಾಸಿಕ ವಸ್ತು ಸಂಗ್ರಹಾಲಯವನ್ನೂ ವಿದ್ಯಾಲಯದ ಕಟ್ಟಡವನ್ನೂ ನೋಡಿದೆವು. ಉಚ್ಚ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಮಾದರಿಯ ವಸತಿಗೃಹಗಳನ್ನು ಇಲ್ಲಿ ನಾವು ಕಂಡು, ಮೆಚ್ಚಬಹುದು. ಇಂದಿಗೂ ಅನುಕರಿಸಬಹುದು.

ಇಂಥ ಯಾವ ಸುಪ್ರಸಿದ್ಧ ಶಿಕ್ಷಣ ಸಂಸ್ಥೆಯನ್ನು ಕಂಡರೂ ಅವುಗಳ ಪರಿಚಯವು ಅವುಗಳ ಸುತ್ತಲೂ ವಾಸಿಸುವ ಜನಕ್ಕೇನೇ ಇರುವಂತೆ ತೋರುವದಿಲ್ಲ. ದಾರಿಯಲ್ಲಿ 'ಬಾಲಾ ವಿಶ್ರಾಮ'ವನ್ನು ಶೋಧಿಸಲಿಕ್ಕೆ ಒಂದು ಒಪ್ಪತ್ತು ಹಿಡಿದರೆ ಬೋಲಪುರ ನಿಲ್ದಾಣದಲ್ಲಿ ಜನಗಳಿಗೆ ಶಾಂತಿನಿಕೇತನದ ಹೆಸರೇ ಗೊತ್ತಿಲ್ಲ. ಕನ್ನಡಿಗರಾದ ನಮಗೆ ಶಾಂತಿನಿಕೇತನ ಆಕರ್ಷಕವಾದರೆ ಬಂಗಾಲಿಗಳಿಗೆ ಕಲ್ಯಾಣದ ಅನುಭವ ಮಂಟಪ ಅಭ್ಯಾಸದ ವಸ್ತುವಾಗಿ ಮನ ಸೆಳೆಯುವದು ಇದಕ್ಕಿಂತ ಭಾರತೀಯರೆಲ್ಲರೂ ತಮ್ಮ ಸುತ್ತುಮುತ್ತಲೂ ಇರುವ ಸದ್ಗುಣಿಗಳನ್ನು ಸಂಸ್ಥೆಗಳನ್ನು ಕಂಡು ಮೆಚ್ಚುವ ಗುಣವನ್ನು ಇಂದು ಮೈಗೂಡಿಸಿಕೊಳ್ಳುವ ಅವಶ್ಯಕತೆ ಹೆಚ್ಚಾಗಿದೆ.

ಈ ಹೊರ ನೋಟದ ಅಭ್ಯಾಸವು ನಮಗೆ ಪಾಶ್ಚಿಮಾತ್ಯರ ಅನುಕರಣದಿಂದ ಉಂಟಾಗಿದೆ. ಇಂಗ್ಲಿಷ ಸಂಸ್ಕೃತಿಯ ಅಂಧಾನುಕರಣದ ದುಷ್ಫಲಗಳಲ್ಲಿ ಇದೊಂದಾಗಿದೆ. ದೃಷ್ಟಿವೈಶಾಲ್ಯತೆಯನ್ನು ಒದಗಿಸಲು ಈ ಅಭ್ಯಾಸ ಉಪಯುಕ್ತವಾದರೆ ಅಡ್ಡಿಯಿಲ್ಲ. ಆದರೆ ಹೃದ್ಯವನ್ನೇ ಕಾಣದೆ ಹೊರಗೆ ಹರಿದಾಡುವ ಬುಡವಿಲ್ಲದ ಜ್ಞಾನ ವೈಭವವು ಜೀವನಕ್ಕೆ ಬೆಳಕನ್ನು ನೀಡದು; ಹೃದಯಕ್ಕೆ ಸಂಸ್ಕೃತಿಯನ್ನು ಒದಗಿಸದು. 'ಶಾಂತಿನಿಕೇತನ'ದ ಸಮೀಪದ ನಿಲ್ದಾಣದಲ್ಲಿಯೇ ದುಡ್ಡು ಕೊಟ್ಟರೂ ಕುಡಿಯಲಿಕ್ಕೆ ಬಿಸಿನೀರನ್ನು ಕೊಡದ ಹಾಟೇಲದ ಮ್ಯಾನೇಜರನನ್ನು ಕಂಡರೆ ಅಲ್ಲಿಯೇ ಬಯಲಲ್ಲಿ ಇಳಿದುಕೊಂಡ ಬಡ ಕೂಲಿಕಾರರು ನೀರು ಕಾಯಿಸಿಕೊಳ್ಳಲಿಕ್ಕೆ ಬೆಂಕಿಯನ್ನು ಕೇಳಿದರೆ ಕಾಯಿಸಿದ ನೀರನ್ನೇ ಒದಗಿಸುವ ಉದಾರ ಹೃದಯಿಗಳು! ಆ ಉಪಹಾರ ಗೃಹದ ಭವ್ಯ ಸೌಧವೆಲ್ಲಿ? ಆ ಹರಕು ಕಂಬಳಿಯ ಗುಡಿಸಲವೆಲ್ಲಿ? ಬಿಸಿನೀರು ಕೊಟ್ಟರೆ ಚಹಕೊಳ್ಳೆರೆಂಬ ಆಲೋಚನೆಯ ಹಣದ ರಾಹುಗ್ರಸ್ತ ಹೃದಯವೆತ್ತ? ನೀರಡಿಸಿದವರಿಗೆ ನೀರನೊದಗಿಸುವ ನಿರಪೇಕ್ಷ ವೃತ್ತಿಯ ಭಾರತೀಯ ಬಾಲೆಯರೆತ್ತ? ಒಂದು ಪರಕೀಯ ಪ್ರಭಾವವ ದರೆ ಇನ್ನೊಂದು ಭಾರತೀಯ ಸಂಸ್ಕೃತಿಯ ಹೃದಯವಾಗಿದೆ. ಒಂದು ಹೊರ ನೋಟದ ಹುಸಿ ಜೀವನವಾದರೆ ಇನ್ನೊಂದು ಆಂತರಿಕ ಸೌಂದರ್ಯದ ಸಾರ್ಥಕ ಜೀವನವಾಗಿದೆ.

ಪ್ರವಾಸದಲ್ಲಿ ಇಂಥ ಅನುಭವಗಳು ಹಲವು; ಹೋಗಬೇಕಾದ ಸ್ಥಳಕ್ಕೆ ರಿಕ್ಷಾ ಗೊತ್ತುಮಾಡಿಕೊಡಲಿಕ್ಕೆ ಕಮಿಶನ್ ಕೇಳುವ ಜನರ ನೆರೆಯಲ್ಲಿಯೇ ನಮ್ಮನ್ನು ಇಳಿದುಕೊಳ್ಳಬೇಕಾದ ಯೋಗ್ಯ ಸ್ಥಾನಕ್ಕೆ ಒಯ್ದು ಮುಟ್ಟಿಸಿ ಬರುವ ಉಪಕಾರಿಗಳೂ ಕೆಲವರು ಇರುವರು. ಸಾಮಾನ್ಯ ಗಾಡಿಯ ಟಿಕೇಟು ಪಡೆದು, ತಪ್ಪಿ ಮೇಲಿನಲ್ಲಿ ೧೫ ಮೈಲು ಪ್ರವಾಸ ಮಾಡಿದುದಕ್ಕೆ ೧೫ ರೂ ಲಂಚ ಕೇಳುವ ರೈಲು ಅಧಿಕಾರಿಗಳ ಮಧ್ಯದಲ್ಲಿಯೇ ದೂರಿನ ಪ್ರವಾಸಿಗರೆಂದು ಹತ್ತಿರ ಕರೆದು, ಸುಖ ಸೋಯಿಗಳನ್ನು ವಿಚಾರಿಸಿ, ಚಹಕೊಟ್ಟು ಕಳಿಸುವ ಸ್ಟೇಷನ್ ಮಾಸ್ತರರೂ ಸಿಕ್ಕುವರು. ಒಂದು ಪಾಶವೀ ವೃತ್ತಿಯ ಪ್ರತೀಕವಾದರೆ ಇನ್ನೊಂದು ಮಾನವೀಯತೆಯ ಗುರುತಾಗಿ ಕಂಡು ಬರುವದು. ಇಂಥ ಅನುಭವಗಳು ಉಂಟಾಗುವಾಗ, ಮನುಷ್ಯನು ಭಾರತೀಯ ಸಂಸ್ಕೃತಿಯ ಗುರಿಯಾದ ದೇವತ್ವವನ್ನು ಹೊಂದದಿದ್ದರೂ ಅಡ್ಡಿಯಿಲ್ಲ; ಮಾನವತೆಯನ್ನಾದರೂ ಕಾಯ್ದುಕೊಂಡು ಬಾಳಿದರೆ ಸಾಕೆಂದು ಎನಿಸುವುದು.

ಭಾರತದ ವಿವಿಧ ಪ್ರಾಂತಗಳಲ್ಲಿ ಸಂಚರಿಸಿ ನೋಡಿದರೆ ವೈವಿಧ್ಯ ಅಪಾರವಾಗಿರುವಂತೆ ಕಂಡು ಬರುವುದು.

ಬಂಗಾಲದ 'ಲುಲುವಾ', ಬಿಹಾರದ 'ಕುಂಡಿಯಾ' ಜನರ ರೀತಿ ನಡವಳಿಕೆಗಳಲ್ಲಿ ಎಷ್ಟೋ ಅಂತರಗಳನ್ನು ನಾವು ಕಾಣಬಹುದು. ಇಷ್ಟೇ ಏಕೆ ಬಿಹಾರ ಒಂದರಲ್ಲಿಯೇ ಸಮ-ಸಮೀಪದಲ್ಲಿಯೇ ನೆಲೆಸಿರುವ 'ಕಹಾರ' ಹಾಗು 'ಜಥರಿಯಾ' ಜನಾಂಗಗಳ ಜೀವನದಲ್ಲೂ ವೈವಿಧ್ಯವನ್ನು ಕಾಣುತ್ತೇವೆ. ಕನ್ನಡ ನಾಡಿನ ಒಕ್ಕಲಗರಲ್ಲೂ ದೇಶದ ಇನ್ನೊಂದು ಮೂಲೆಯಲ್ಲಿರುವ 'ಜಾಟ್' ರೈತರಲ್ಲೂ ಭೇದವನ್ನು ನಾವು ಕಾಣಬಹುದು. ಮಲಬಾರದಿಂದ ಸುಂದರವನದವರೆಗೂ ಮದ್ರಾಸಿನಿಂದ ಸೌರಾಷ್ಟ್ರದವರೆಗೂ ಇಂಥ ವಿವಿಧತೆಯನ್ನು ನಾವು ನೋಡುತ್ತೇವೆ. ಆದರೆ ಅವರೆಲ್ಲರಲ್ಲೂ ಒಂದೇ ರಾಷ್ಟ್ರೀಯತೆಯ ಅಸ್ತಿತ್ವ ಕಂಡುಬರುವುದು. ಅವರ ಜೀವನಕ್ಕೆಲ್ಲ ಒಂದೇ ವಿಶಾಲವಾದ ಸಂಸ್ಕೃತಿಯ ಹಿನ್ನೆಲೆಯೂ ಇದೆ. ಜುನಾಗಡದ ಅರಸೊತ್ತಿಗೆಯು ಸ್ವತಂತ್ರ ಭಾರತ ಸರಕಾರದಲ್ಲಿ ವಿಲೀನ ಹೊಂದಿದಾಗ, ಸಂಸ್ಥಾನಿಕನ ಸುಖ ಜೀವನದ ಸೌಖ್ಯವನ್ನು ಕಳೆದುಕೊಂಡ ಇಸ್ಲಾಂ ಧರ್ಮದ ಸರದಾರನೊಬ್ಬನು ಟಾಂಗಾವಾಲಾನಾಗಿ ಬಾಳಬೇಕಾಗಿ ಬಂದಾಗಲೂ ಪಾಕಿಸ್ತಾನಕ್ಕೆ ಹೋಗಲು ಒಪ್ಪದೆ, ಹಿಂದುಗಳನ್ನು ಪ್ರೀತಿಸುತ್ತ, ಹಿಂದೂ ಯಾತ್ರಿಕರನ್ನು ಸಂತೋಷದಿಂದ ಜುನಾಗಡದಿಂದ ಗಿರಿನಾರಕ್ಕೆ ಗುಡ್ಡಗಳ ಮಧ್ಯದಿಂದ ಕರೆದೊಯ್ದು ಸುರಕ್ಷಿತ ತಲುಪಿಸುವ ಕಾರ್ಯವನ್ನು ಮಾಡುವ ಭಾರತೀಯ ಮುಸಲ್ಮಾನರ ಹೃದಯದೌನತ್ಯವನ್ನು ಕಂಡಾಗ ಯಾರಿಗೆ ಸಂತಸವಾಗಲಿಕ್ಕಿಲ್ಲ? ಭಾರತೀಯ ಸಂಸ್ಕೃತಿಯ ಜೀವಾಳವನ್ನು ಗುರುತಿಸಿ ಯಾರಿಗೆ ಹೆಮ್ಮೆ ಎನಿಸಲಿಕ್ಕಿಲ್ಲ? ಇಂಥ ಆಂತರಿಕ ಐಕ್ಯತೆಯೊಂದು ಭಾರತೀಯ ಜೀವನದಲ್ಲಿ ಜೀವನದಿಯಾಗಿ ಪ್ರವಹಿಸುತ್ತಿರುವುದರಿಂದಲೇ ಕಾಶಿಯ ವಿಶ್ವೇಶ್ವರ ಮಂದಿರದ ಹತ್ತಿರವೇ ಔರಂಗಜೇಬನು ಹಿಂದೂ ದೇವಾಲಯವನ್ನು ಕೆಡವಿ ಮಸೀದೆಯನ್ನು ಕಟ್ಟಿಸಿದ್ದರೂ ನಾಡಿನ ಅಖಂಡತ್ವಕ್ಕೆ ಭಂಗ ಬಂದಿರಲಿಲ್ಲ. ತಾಜಮಹಲದ ಸೌಂದರ್ಯವನ್ನು ಕಂಡು ಮೆಚ್ಚದ ನಮ್ಮ ಆಚಾರವಂತರೂ ನಮ್ಮಲ್ಲಿ ಇಲ್ಲ. ವಿಜಯನಗರದ ಅರಸುಲ್ಲಿ ಇಸ್ಲಾಂ ಜನರು ಸೈನಿಕ ವೃತ್ತಿಯಲ್ಲಿ ಇದ್ದು, ಆದಿಲಶಹನೊಡನೆ ಪ್ರಾಮಾಣಿಕವಾಗಿ ಹೋರಾಡಿದ ಜನಾಂಗ ನಮ್ಮದು. ಅಂತಲೇ ಸ್ವಾತಂತ್ರ್ಯೋದಯದ ಆ ದುರ್ದಿನಗಳನ್ನು ದಾಟಿ ಇಂದಿನ ಸುದಿನಗಳನ್ನು ಕಾಣಲು ನಮ್ಮ ರಾಷ್ಟ್ರಕ್ಕೆ ಸಾಧ್ಯವಾಗಿದೆ.

ಈ ಸಾಂಸ್ಕೃತಿಕ ದೃಷ್ಟಿಯನ್ನು ಅದರ ಹೃದಯ ಆಳ ಅಗಲಗಳನ್ನು ಅರಿತು, ಯಾವ ಕ್ಷಣಿಕ ಪ್ರಸಂ ಗಳಿಂದಲೂ ಉದ್ರೇಕಗೊಳ್ಳದೆ, ಈಗ ಭಾರತೀಯ ರಾಷ್ಟ್ರೀಯ ದೃಷ್ಟಿಯಿಂದ ಜೀವಿಸಿದರೆ ಭಾರತದ ಭವಿ ಭವನವನ್ನು ಭದ್ರವಾಗಿಯೂ ಭವ್ಯವಾಗಿಯೂ ಕಟ್ಟ ಸಾಧ್ಯವಿದೆ. ಆ ಸುಂದರ ಮಂದಿರದಲ್ಲಿ ವಿಶ್ವ ಮಾ ಯನ್ನು ಇಟ್ಟು ಪೂಜಿಸುವ ಜಗತ್ತಿನ ಜನರನ್ನು ಕಾಣ ಯೋಗ ಸಮೀಪದಲ್ಲಿಯೇ ಇದೆ. ಅದಕ್ಕಾಗಿ ನಾವ ಶಾಂತಚಿತ್ತದಿಂದ ನಮ್ಮ ನಮ್ಮ ಜೀವನ ರಂಗದ ಕರ್ಮಯೋಗಿಗಳಾಗಿ ಬಾಳೋಣ. ಭವ್ಯ ಭವಿಷತ್ತ ನಿರ್ಮಾಣ ಮಾಡೋಣ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು

ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಮೂಲ ಶಿಕ್ಷಣದ ನೈಜ ಕಲ್ಪನೆ

ಅನುವಾದಕರು : ಶ್ರೀ ಶಿಂತ್ರಿ ಬಸಪ್ಪನವರು, ಧಾರವಾಡ

(ಮೂಲಶಿಕ್ಷಣದ ಸ್ಥಾಯೀ ಸಮಿತಿಯ ಚೇರಮನ್‌ರಾದ ಶ್ರೀ ಶ್ರೀಮನ್ನಾರಾಯಣ ಹಾಗೂ ಭಾರತ ಸರಕಾರದ ಶಿಕ್ಷಣ ಶಾಖೆಯ ಸಹಕಾರ್ಯದರ್ಶಿಗಳಾದ ಶ್ರೀ ಕೆ. ಜಿ. ಸೈಯದೀನರವರು ಮೂಲ ಶಿಕ್ಷಣದ ನಿಜವಾದ ಕಲ್ಪನೆಯ ಬಗೆಗೆ ಇತ್ತ ಹೇಳಿಕೆಯ ಅನುವಾದವನ್ನು ಇಲ್ಲಿ ಕೊಡಲಾಗಿದೆ.) ಪ್ರ. ಸಂ.

ಮೂಲ ಶಿಕ್ಷಣದ ಅರ್ಥವು ಹಲವು ತೆರನಾಗಿ ಮಾಡಲ್ಪಟ್ಟಿದೆ; ಕೆಲವು ಸಲ ಅದರ ಅಪಾರ್ಥವೂ ಆದದ್ದುಂಟು. ಹಾಗೆ ಆಗುವದು ಸ್ವಾಭಾವಿಕವಿದೆ. ಕಾರಣವೆಂದರೆ, ಅದು ಇತ್ತೀಚಿನ ಮಾರ್ಪಾಟು; ಅದರ ತತ್ತ್ವವಿಧಾನಗಳು ಇನ್ನೂ ರೂಪುಗೊಳ್ಳುವದರಲ್ಲಿವೆ. ಆದುದರಿಂದ, ಮೂಲ ಶಿಕ್ಷಣದ ಬಗೆಗಿದ್ದ ನಮ್ಮ ನಿಜವಾದ ವಿಚಾರಗಳನ್ನು ಒಮ್ಮೆ ಸ್ಪಷ್ಟವಾಗಿ ಹೇಳಿಬಿಡುವದು ಅವಶ್ಯವೆಂದು ನಮಗೆ ತೋರುತ್ತಿದೆ.

ಸ್ಥೂಲವಾಗಿ ಹೇಳುವದಾದರೆ, ರಾಷ್ಟ್ರೀಯ ಮೂಲ ಶಿಕ್ಷಣ ಸಮಿತಿ (ಝಾಕೀರ ಹುಸೇನ ಸಮಿತಿ)ಯ ವರದಿಯಲ್ಲಿ ರೂಪಿಸಲ್ಪಟ್ಟ ಹಾಗೂ ಕೇಂದ್ರ ಶಿಕ್ಷಣ ಸಲಹಾ ಸಮಿತಿಯವರಿಂದ ಸುಗಮವಾಗಿ ನಿವೇದಿಸಲ್ಪಟ್ಟ ಅರ್ಥವೇ ಮೂಲ ಶಿಕ್ಷಣದ ನಿಜವಾದ ವಿಚಾರ ಪ್ರಣಾಲಿಯೆಂಬುದನ್ನು ನಾವಿಲ್ಲಿ ಹೇಳಬಯಸುತ್ತೇವೆ. ಆ ವರದಿಯಲ್ಲಿ ನಿರೂಪಿಸಿದ ಮೂಲ ತತ್ತ್ವಗಳು ಮತ್ತು ವಿಧಾನಗಳು ಭಾರತದ ಶೈಕ್ಷಣಿಕ ಪುನರ್ರಚನೆಯನ್ನು ರೂಪಗೊಳಿಸಿ ಮಾರ್ಗದರ್ಶನ ಮಾಡಬೇಕೆಂಬುದು ನಮ್ಮ ಸ್ಪಷ್ಟ ಅಭಿಪ್ರಾಯವು. ಎಂಟು ವರ್ಷಗಳ ವರೆಗೆ ಸಾರ್ವತ್ರಿಕವಾದ ಒತ್ತಾಯದ ಶಿಕ್ಷಣವಿರಬೇಕೆಂಬುದರ ಬಗೆಗೂ ಮತ್ತು ತಾಯ್ನುಡಿಯು ಶಿಕ್ಷಣದ ಮಾಧ್ಯಮವಾಗಿರಬೇಕೆಂಬುದರ ಬಗೆಗೂ ಭಿನ್ನಾಭಿಪ್ರಾಯಗಳಿಲ್ಲ. ಅವು ಈಗ ಎಲ್ಲರ ಮನ್ನಣೆಗೆ ಪಾತ್ರವಾಗಿರುವದರಿಂದ ಅವುಗಳನ್ನು ಕುರಿತು ಹೆಚ್ಚಿಗೆ ಹೇಳುವ ಅವಶ್ಯಕತೆಯಿಲ್ಲ. ಕೆಳಗಿನ ಹಾಗೂ ಮೇಲಿನ ಇಯತ್ತೆಗಳಲ್ಲಿ ಮೂಲ ಶಿಕ್ಷಣವು ಎಂಟೂ ವರ್ಷಗಳ ವರೆಗೆ ಅಖಂಡವಾಗಿ ಸಾಗಬೇಕೆಂಬುದರ ಬಗೆಗೆ ಮತಭೇದವಿರಬಹುದು. ಮುಂದೆ ಹೇಳಿದ ಹಲವು ಲಕ್ಷಣಗಳ ಹಾಗೂ ಧೋರಣಗಳ ಬಗೆಗೆ ಸ್ಪಷ್ಟೀಕರಣವು ಅವಶ್ಯವಿದೆ:—

(೧) ಮಹಾತ್ಮಾ ಗಾಂಧಿಯವರು ತಿಳಿದ ಹಾಗೂ ಹೇಳಿದ ಪ್ರಕಾರ ಮೂಲ ಶಿಕ್ಷಣವು ಪ್ರಾಮುಖ್ಯವಾಗಿ ಜೀವನದ ಸಲುವಾಗಿಯೇ ಇದೆ; ಅದಕ್ಕೂ ಹೆಚ್ಚಾಗಿ ಜೀವನದ ಮುಖಾಂತರ ಕೊಡಲ್ಪಡುವ ಶಿಕ್ಷಣವಾಗಿದೆ. ಹಿಂಸೆ-ಸುಲಿಗೆಗಳಿಲ್ಲದ ಸಮಾಜ ಪದ್ಧತಿಯ ರಚನೆಯೇ ಅದರ ಅಂತಿಮ ಹೆಗ್ಗುರಿ. ಜಾತಿ ಅಥವಾ ವರ್ಗದ ಯಾವದೇ ಭೇದಭಾವವಿಲ್ಲದೆ ಎಲ್ಲ ಬಾಲಕರೂ ಬಾಲಿಕೆಯರೂ ಭಾಗವಹಿಸುವಂಥ, ಉತ್ಪಾದಕ, ರಚನಾತ್ಮಕ ಹಾಗೂ ಸಾಮಾಜಿಕ ಉಪಯುಕ್ತತೆಯುಳ್ಳ ಉದ್ಯೋಗವೇ ಮೂಲ ಶಿಕ್ಷಣದ ಕೇಂದ್ರವಾಗಿ ಇರಿಸಲ್ಪಟ್ಟಿದೆ.

(೨) ಈ ಹಂತದಲ್ಲಿ ಮೂಲೋದ್ಯೋಗವನ್ನು ಪರಿಣಾಮಕಾರಿಯಾಗಿ ಕಲಿಸುವದು ಶಿಕ್ಷಣದ ಬಹುಮುಖ್ಯ ಭಾಗವು. ಯೋಗ್ಯ ವಾತಾವರಣದಲ್ಲಿ ನಿರ್ವಹಿಸಲ್ಪಟ್ಟ ಉತ್ಪಾದನೆಯ ಉದ್ಯೋಗದಿಂದ ದೊರೆಯುವ ಸಮವಾಯ ಜ್ಞಾನವು ಹೆಚ್ಚು ವಾಸ್ತವಿಕ ಹಾಗು ನೈಜವಾದದ್ದಾಗುತ್ತದಲ್ಲದೆ ಅದರಿಂದ ವ್ಯಕ್ತಿತ್ವ ಹಾಗು ವರ್ತನಗಳ ವಿಕಾಸಕ್ಕೆ ಬಲು ಸಹಾಯವಾಗಿ ಸಮಾಜಕ್ಕೆ

ಉಪಯೋಗ ಬೀಳುವ ಕೆಲಸಗಳ ಬಗೆಗೆ ಪ್ರೇಮ ಹಾಗು ಗೌರವಗಳು ಹುಟ್ಟುತ್ತವೆ. ಮೂಲೋದ್ಯೋಗದಿಂದ ತಯಾರಾದ ವಸ್ತುಗಳನ್ನು ಮಾರಿ ಬಂದ ಹಣವು ಸಾಲೆಯನ್ನು ನಡೆಸುವ ವೆಚ್ಚಕ್ಕೆ ಇಲ್ಲವೆ ಸಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಕೊಡಲು, ಅಥವಾ ಮಕ್ಕಳಿಗೆ ಸಮವಸ್ತ್ರಗಳನ್ನು ಹೊಲಿಸಲು, ಇಲ್ಲವೆ ಸಾಲೆಗೆ ಬೇಕಾಗುವ ಉಪಕರಣ, ಆಸನ ಮೊದಲಾದವುಗಳನ್ನು ಕೊಳ್ಳಲು ಉಪಯೋಗವಾಗುವದೆಂಬುದನ್ನು ನಾವು ಸ್ಪಷ್ಟವಾಗಿ ಅರಿತುಕೊಳ್ಳಬೇಕು.

(೩) ಬೇಸಿಕ್ ಸಾಲೆಗಳಲ್ಲಿಯ ಮೂಲೋದ್ಯೋಗದ ಸ್ಥಿತಿ-ಗತಿಯನ್ನು ಕುರಿತು ಮತಭೇದವಿರುವದಾದರೂ ಮಗುವಿನ ಸಂಪೂರ್ಣ ವ್ಯಕ್ತಿತ್ವದ ವಿಕಾಸವೂ ಕೈಕೆಲಸದಲ್ಲಿ ಮಗುವು ಸಂಪಾದಿಸುವ ನೈಪುಣ್ಯವೂ ಮೂಲ ಶಿಕ್ಷಣದ ತಾತ್ತ್ವಿಕ ಧ್ಯೇಯವಾಗಿದೆಯೆಂಬ ಮಾತನ್ನು ಸ್ಪಷ್ಟವಾಗಿ ಉಲ್ಲೇಖಿಸುವದು ಅವಶ್ಯವಿದೆ. ಮೂಲೋದ್ಯೋಗವನ್ನು ಕಲಿಸುವದು ಪರಿಣಾಮಕಾರಿಯಾದುದರ ಹಾಗೂ ಅದರಿಂದ ಹೊರಹೊಮ್ಮುವ ಶೈಕ್ಷಣಿಕ ಪರಿಣಾಮವು ಮಕ್ಕಳ ಮನಸ್ಸಿನ ಮೇಲೆ ಚನ್ನಾಗಿ ಆದುದರ ಬಗೆಗೆ ಖಾತ್ರಿ ಮಾಡಿಕೊಳ್ಳಲು ಉಪಾಯವೆಂದರೆ ತಯಾರಾದ ವಸ್ತುಗಳು ಚನ್ನಾಗಿರಬೇಕು ಅಥವಾ ಆ ಮಟ್ಟದ ಮಕ್ಕಳು ಮಾಡುವಂತಹವುಗಳಂತಿರಬೇಕು ಇಲ್ಲವೆ ಉಪಯೋಗ ಮಾಡಲು ಬರುವಂತಹವುಗಳಿರಬೇಕು, ಅವಶ್ಯಬಿದ್ದರೆ ಪೇಟೆಯಲ್ಲಿ ಮಾರಲು ತಕ್ಕವುಗಳಾಗಿರಬೇಕು. ಉದ್ಯೋಗದಲ್ಲಿಯ ನೈಪುಣ್ಯ, ಹಸ್ತಕೌಶಲ್ಯದ ಮೇಲಿನ ಪ್ರೇಮ, ಇವುಗಳಿಗೆ ಹೆಚ್ಚಿನ ಶೈಕ್ಷಣಿಕ ಬೆಲೆಯಿದೆ. ಆವುದಾದರೊಂದು ಚಟುವಟಿಕೆಯುಳ್ಳ, ಚಲೋ ಸಾಲೆಗಳಲ್ಲಿಯಂತೆ ಮಕ್ಕಳು ಸಾಧನ-ಸಾಮುಗ್ರಿಗಳ ಕೂಡ ಆಡುತ್ತ ಕುಳಿತರೆ ಅದರಿಂದ ಆವ ಪ್ರಯೋಜನವೂ ಇಲ್ಲ. ಇಲ್ಲಿಯ ವರೆಗೆ ಮಾಡುತ್ತ ಬಂದಂತೆ ಇನ್ನು ಮುಂದೆ ಈ ಉತ್ಪಾದನೆಯ ಧೋರಣವನ್ನು ಸಹಸಾ ಕಡೆಗಣಿಸತಕ್ಕದ್ದಲ್ಲ. ಯಾಕಂದರೆ, ಉದ್ಯೋಗದಲ್ಲಿ ರೂಢಿಯಿಂದ ಪ್ರಾಪ್ತವಾದ ಪ್ರಾವೀಣ್ಯವು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಮಗುವಿನ ಸರ್ವಾಂಗ ಸುಂದರವಾದ ವಿಕಾಸಕ್ಕೆ ನಿಃಸಂಶಯವಾಗಿ ಕಾರಣೀಭೂತವಾಗಿದೆ. ಅದು ಮಕ್ಕಳೆಲ್ಲರು ಸಂಪಾದಿಸಲರ್ಹವಾದ ಆದರ್ಶಗಳನ್ನು ಅವರ ಕಣ್ಣೆದುರಿಗೆ ಇಡುತ್ತಿದೆ. ಉದ್ದೇಶಪೂರ್ವಕವಾಗಿ ಕೆಲಸದಲ್ಲಿ ತೊಡಗುವದು, ಒಮ್ಮನದಿಂದ ಕೆಲಸ ಮಾಡುವದು, ಜಿಗಟುತನ, ವಿವೇಕಯುಕ್ತ ಹಂಚಿಕೆಗಾರಿಕೆ ಮೊದಲಾದ ಉಪಯುಕ್ತವಾದ ಚಟುವಟಿಕೆಗಳಲ್ಲಿಯೂ ಮನೋವೃತ್ತಿಗಳಲ್ಲಿಯೂ ಅದು ಅವರಿಗೆ ಉತ್ತಮವಾದೊಂದು ತರಬೇತಿಯನ್ನು ಕೊಡುತ್ತಿದೆ. ಈ ಹಂತದಲ್ಲಿ ಉತ್ಪಾದನೆಯು ಇಂತಿಷ್ಟೇ ಆಗಬೇಕೆಂಬ ಪ್ರಮಾಣಗಳನ್ನು ಹಾಕಿಡಲು ಶಕ್ಯವಿರದಿದ್ದರೂ ಶಕ್ಯವಿದ್ದಷ್ಟೆಲ್ಲ ಆರ್ಥಿಕ ಲಾಭಗಳನ್ನು ಪಡೆಯುವದರತ್ತ ಶಿಕ್ಷಕನು ಶ್ರಮಿಸುತ್ತಿರಬೇಕು; ಹಾಗೆ ಮಾಡುವಾಗ ಶೈಕ್ಷಣಿಕ ಧ್ಯೇಯ-ಧೋರಣಗಳಿಗೆ ಚ್ಯುತಿಯು ಎಳ್ಳಷ್ಟೂ ಬರಕೂಡದು. ಇಲ್ಲಿಯುವರೆಗಾದ ಅನುಭವದ ಸಹಾಯದಿಂದ ಸಣ್ಣ ಮತ್ತು ದೊಡ್ಡ ಬೇಸಿಕ್ ಸಾಲೆಗಳಲ್ಲಿಯ ಮೇಲಿನ ಇಯತ್ತೆಗಳಿಗೋಸ್ಕರ ಉತ್ಪಾದನೆಯ ಪ್ರಮಾಣವನ್ನು ನಿರ್ದಿಷ್ಟ ಪಡಿಸುವದು ನಮ್ಮ ರಾಜ್ಯ ಸರಕಾರಕ್ಕೆ ಅಷ್ಟೊಂದು ಕಠಿಣವೆನಿಸಲಿಕ್ಕಿಲ್ಲವೆಂದು ಅನ್ನಬೇಕಾಗಿದೆ.

(೪) ಸಾಲೆಯಲ್ಲಿ ಕೈಕೊಳ್ಳಬಹುದಾದ ಮೂಲೋದ್ಯೋಗವನ್ನು ಆರಿಸುವಾಗ ಅದು ಎಷ್ಟರ ಮಟ್ಟಿಗೆ ಬೌದ್ಧಿಕ ಶಕ್ತಿಗೆ ಪ್ರಚೋದನೆಯನ್ನು ಕೊಡುತ್ತಿದೆ; ಪ್ರಗತಿಪರವಾದ ವಿಕಾಸವನ್ನು ಎಷ್ಟರ ಮಟ್ಟಿಗೆ ಮಾಡುತ್ತಿದೆ ಹಾಗೂ ವ್ಯಾವಹಾರಿಕ ಚಾತುರ್ಯವನ್ನು ಎಷ್ಟರ ಮಟ್ಟಿಗೆ ಬೆಳೆಯಿಸುತ್ತಿದೆ ಎಂಬ ಸಂಗತಿಗಳನ್ನು ವ್ಯಾಪಕ ದೃಷ್ಟಿಯಿಂದ ಗಣನೆಗೆ ತಂದುಕೊಂಡು ನಾವು ಆಯ್ದುಕೊಳ್ಳಬೇಕು. ಮೂಲೋದ್ಯೋಗವು ಸಾಲೆಯ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಿಗೆ ಒಗ್ಗುವಂತಹದಿದ್ದು ಅದರಲ್ಲಿ ಹುದುಗಿದ್ದ ಶೈಕ್ಷಣಿಕ ಲಾಭಗಳು ಹೆಚ್ಚೆಚ್ಚಾಗಿ ಹೊರಹೊಮ್ಮುತ್ತಿರಬೇಕು ಸಾಲೆಯಲ್ಲಿ ಆವುದಾದರೊಂದು ಉದ್ಯೋಗವನ್ನು—ಉದಾಹರಣಾರ್ಥವಾಗಿ ನೂಲುವ ಉದ್ಯೋಗವನ್ನು—ಸೇರಿಸಿದರೆ ಅದು ಬೇಸಿಕ್ ಸಾಲೆಯಾಯಿತೆಂದು ಕೆಲವರು ತಪ್ಪು ತಿಳುವಳಿಕೆಯನ್ನು ಮಾಡಿಕೊಂಡದ್ದುಂಟು. ಅದು ನಿಜಕ್ಕೂ ಮೂಲ ಶಿಕ್ಷಣದ ವಿಚಾರ ಪ್ರಣಾಲಿಗೆ ದೊಡ್ಡದೊಂದು ಅನ್ಯಾಯವನ್ನು ಮಾಡಿದೆ.

(೫) ಮೂಲ ಶಿಕ್ಷಣದಲ್ಲಾಗಲಿ ಇಲ್ಲವೆ ಬೇರಾವ ಉತ್ತಮ ಶಿಕ್ಷಣದಲ್ಲಾಗಲಿ ಜ್ಞಾನವು ಚಟುವಟಿಕೆ,

ವ್ಯಾವಹಾರಿಕ ಅನುಭವ, ನಿರೀಕ್ಷಣೆ, ಇವುಗಳಿಗೆ ಸಂಬಂಧಿಸಿರಬೇಕು. ಇದನ್ನು ಮನವರಿಕೆ ಮಾಡಿಕೊಳ್ಳಲು ಮೂಲ ಶಿಕ್ಷಣದಲ್ಲಿ ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳೆಲ್ಲ ಸಂಬಂಧೀಕರಣದ ಮೂರು ಮುಖ್ಯ ಕೇಂದ್ರಗಳಾದ ಮೂಲೋದ್ಯೋಗ, ನೈಸರ್ಗಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ, ಇವುಗಳಿಗೆ ಅನುಬಂಧಿಸಿ ಕಲಿಸಲ್ಪಡಬೇಕೆಂಬ ನಿಯಮವಿದೆ. ಈ ಕೇಂದ್ರಗಳಲ್ಲಿ ಸ್ವಾಭಾವಿಕವಾಗಿ ಮಗುವಿನ ಅಭಿರುಚಿಯಿದೆ. ಉತ್ತಮ ತರಬೇತಿಯನ್ನು ಪಡೆದ ಜಾಣಾಕ್ಷ ಶಿಕ್ಷಕನು ತಾನು ಮಕ್ಕಳಿಗೆ ಕೊಡಬೇಕಾಗಿದ್ದ ಜ್ಞಾನವನ್ನು ಈ ಮೂರು ಕೇಂದ್ರಗಳಲ್ಲಿ ಆವುದಾದರೊಂದಕ್ಕೆ ಅನುಬಂಧಿಸಿ ಕಲಿಸುತ್ತಾನೆ. ಆತನು ಹಾಗೆ ಮಾಡಲು ಶಕ್ತನಾಗದಿದ್ದರೆ, ಅದರ ಅರ್ಥವು ಈ ಪ್ರಕಾರ ಆಗುತ್ತಿದೆ:— ಅವನಲ್ಲಿ ಯೋಗ್ಯತೆಯ ಕೊರತೆಯಿದೆ; ಅಥವಾ ಮಕ್ಕಳ ಮಟ್ಟಕ್ಕೆ ಸರಿ ಹೋಗದ ವಿಷಯಗಳು ಅಭ್ಯಾಸ ಪತ್ರಿಕೆಯಲ್ಲಿ ಹೇರಲ್ಪಟ್ಟಿವೆ. ಅಭ್ಯಾಸ ಪತ್ರಿಕೆಯೊಳಗಿನ ಹಲವು ವಿಷಯಗಳನ್ನು ಮೇಲೆ ಹೇಳಿದ ಮೂರೂ ಕೇಂದ್ರಗಳಿಗೆ ಸಮವಾಯದಿಂದ ಕಲಿಸಲು ಶಕ್ಯವಿಲ್ಲೆಂಬ ಸಂಗತಿಯು ಗಮನಾರ್ಹವಿದೆ. ಇಂಥ ಪ್ರಸಂಗಗಳಲ್ಲಿ ಚಲೋ ಬೇಸಿಕ್ಕೇತರ ಸಾಲೆಗಳಲ್ಲಿ ಕಲಿಸುವ ಪದ್ಧತಿಗಳಂತೆ ಕಲಿಸಲು ನಿರ್ಬಂಧವಿರಕೂಡದು. ಇಂಥ ಪಾಠಗಳಲ್ಲಿ ಉದ್ದೇಶ, ಅಭಿರುಚಿ, ಸ್ಪಷ್ಟ ಮಾತುಗಾರಿಕೆ, ಮೊದಲಾದವುಗಳನ್ನೊಳಗೊಂಡಿರಬೇಕು. ಎಷ್ಟೋ ಸಾಲೆಗಳಲ್ಲಿ ಸಂಬಂಧೀಕರಣದ ಹೆಸರಿನಿಂದ ಜಗ್ಗಿ ತಂದ ಕೃತ್ರಿಮ-ಅನುಬಂಧ ಮಾಡುವದು ನಿಲ್ಲಿಸಬೇಕು.

(೬) ಬೇಸಿಕ್ ಸಾಲೆಗಳಲ್ಲಿ ಮೂಲೋದ್ಯೋಗದ ಉತ್ಪಾದನೆಗೆ ಹೆಚ್ಚು ಮಹತ್ವ ಕೊಟ್ಟದ್ದರ ಅರ್ಥವು ಪುಸ್ತಕಗಳ ಅಭ್ಯಾಸವಿಲ್ಲೆಂದು ಆಗುವದಿಲ್ಲ. ಜ್ಞಾನ-ಸಂಸ್ಕೃತಿಗಳನ್ನು ಪಡೆಯಲು ಪುಸ್ತಕವು ಒಂದೇ ಒಂದು ಸಾಧನವೆಂಬುದನ್ನು ಮೂಲ ಶಿಕ್ಷಣವು ಒಪ್ಪುವದಿಲ್ಲ. ಸುಸಂಘಟಿತವಾದ ಹಾಗೂ ಉತ್ಪಾದನೆಯುಳ್ಳ ಉದ್ಯೋಗವು ಚಿಕ್ಕ ಮಕ್ಕಳಿಗೆ ಹೆಚ್ಚಿನ ಜ್ಞಾನವನ್ನೂ ವ್ಯಕ್ತಿತ್ವದ ವಿಕಾಸವನ್ನೂ ಬಹುಮುಖವಾಗಿ ಕೊಡಬಲ್ಲದು; ಹೆಚ್ಚಿನ ಸುಸಂಬದ್ಧವಾದ ಜ್ಞಾನವನ್ನೂ ಮನಾನಂದವನ್ನೂ ಕೊಡುವಲ್ಲಿ ಹೊತ್ತಿಗೆಗಳಿಗಿರುವ ಬೆಲೆಯು ಇದ್ದೇ ಇದೆ. ಬೇಸಿಕ್ಕೇತರ ಸಾಲೆಗಳಲ್ಲಿರುವಂತೆ ಬೇಸಿಕ್ ಸಾಲೆಗಳಲ್ಲಿಯೂ ಚಲೋ ಪುಸ್ತಕಾಲಯವೊಂದಿರುವದು ಅವಶ್ಯ.

(೭) ಮಕ್ಕಳಲ್ಲಿ ಸಹಕಾರದ ಹಾಗೂ ಸಾಮಾಜಿಕ ಭಾವನೆಗಳನ್ನು ಚಿಗುರಿಸಿ ಬೆಳೆಸಲು ಮೂಲ ಶಿಕ್ಷಣವು ಸಾಲೆ ಹಾಗೂ ಸಮಾಜ ಇವೆರಡರಲ್ಲಿ ಅತಿ ನಿಕಟ ಸಂಬಂಧವನ್ನಿಟ್ಟಿದೆ. ಈ ಉದ್ದೇಶದ ಸಾಧನೆಗಾಗಿ ಅದು ಸಾಲೆಯನ್ನೇ ಒಂದು ಜೀವಂತ ಮತ್ತು ಚಟುವಟಿಕೆಯುಳ್ಳ ಸಮಾಜವನ್ನಾಗಿ ಪರಿವರ್ತಿಸಿ ಸಾಲೆಯಲ್ಲಿಯೇ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ನೆರವೇರಿಸಲು ಪ್ರೇರೇಪಿಸುತ್ತಿದೆ. ಎರಡನೆಯದಾಗಿ, ದಿನಾಲು ಸಾಲೆಯ ಸುತ್ತುಮುತ್ತಲಿನ ಜನರ ಜೀವನಕ್ರಮದಲ್ಲಿ ನೇರವಾಗಿ ಭಾಗವಹಿಸಲು ಮತ್ತು ಎಲ್ಲ ತರಹದ ಸಾಮಾಜಿಕ ಸೇವೆಯ ಕೆಲಸಗಳನ್ನು ಸಂಘಟಿಸಲು ಅದು ಹುರಿದುಂಬಿಸುತ್ತಿದೆ. ಅದರ ಇನ್ನೊಂದು ಮಹತ್ವದ ಲಕ್ಷಣವೆಂದರೆ ಸಾಲೆಯಲ್ಲಿಯ ಮಕ್ಕಳ ಸ್ವಾಯತ್ತತೆಯು ಅವರು ಮುಂದೆ ಹೊರಬೇಕಾಗುವ ಹೊಣೆಗಾರಿಕೆಗಳನ್ನು ನಿರ್ವಹಿಸಲು ಹಾಗೂ ಮುಂದೆ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗುವ ಜೀವನವನ್ನು ಸಾಗಿಸಲು ಅವಶ್ಯವಾಗಿ ಬೇಕಾದ ತರಬೇತಿಯನ್ನು ಸಾಲೆಯಲ್ಲಿ ಅವ್ಯಾಹತವಾಗಿ ಕೊಡುತ್ತಿದೆ. ಈ ಪ್ರಕಾರ ಬೇಸಿಕ್ ಸಾಲೆಯು ಸ್ವಾವಲಂಬನ, ಸಹಕಾರ, ಕಾಯಕದ ಗೌರವ, ಮೊದಲಾದ ಸದ್ಗುಣಗಳನ್ನು ಮಕ್ಕಳಲ್ಲಿ ಹುಟ್ಟಿಸುತ್ತಿದೆಯಲ್ಲದೆ ಹುರುಪಿನ ಸಮಾಜ ರಚನೆಯನ್ನು ನಿರ್ಮಿಸಲು ಕಾರಣೀಭೂತವಾಗುತ್ತಿದೆ.

(೮) ಮೂಲ ಶಿಕ್ಷಣವು ಕೇವಲ ಹಳ್ಳಿಗಳ ಸಲುವಾಗಿಯೆಂದು ಇನ್ನು ಮುಂದೆಯಾದರೂ ತಿಳಿಯಬಾರದು. ಅದರಲ್ಲಿ ಅಡಗಿದ ಯೋಗ್ಯತೆಯ ದೃಷ್ಟಿಯಿಂದಲೂ ಮತ್ತು ಹಳ್ಳಿಗಳ ಸಲುವಾಗಿ ತಯಾರಿಸಲ್ಪಟ್ಟ ಕಡಿಮೆ ತರಗತಿಯ ಶಿಕ್ಷಣವೆಂಬ ಭಾವನೆಯನ್ನು ಹೊಡೆದೊಡಿಸುವ ಉದ್ದೇಶದಿಂದಲೂ ಶಹರ ಕ್ಷೇತ್ರಗಳಲ್ಲಿಯೂ ಕೂಡ ಅದನ್ನು ಸರಿಯಾಗಿಯೇ ಸುರುಮಾಡಬೇಕು. ಈ ಉದ್ದೇಶದಿಂದ ಶಹರಗಳಲ್ಲಿಯ ಸಾಲೆಗಳ ಮೂಲೋದ್ಯೋಗಗಳ ಆಯ್ಕೆ ಮತ್ತು ಅಲ್ಲಿಯ ಅಭ್ಯಾಸ ಪತ್ರಿಕೆಯಲ್ಲಿಯೂ ಸಹ ಅವಶ್ಯವಿದ್ದ ತಿದ್ದುಪಡಿಗಳನ್ನು ಮಾಡಿಕೊಳ್ಳಬಹುದು. ಆದರೆ, ಮೂಲ ಶಿಕ್ಷಣದ ಸಾಮಾನ್ಯ ಆದರ್ಶಗಳೂ ಪದ್ಧತಿಗಳೂ ಹಾಗೆಯೇ ಉಳಿಯಬೇಕು.

ಜೀವನ ಶಿಕ್ಷಣ ವಾರ್ತೆಗಳು

ಅನುವಾದಕರು: ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆ. ಮ. ಸರಕಾರಿ ಟ್ರೇ. ಕಾ. ಧಾರವಾ

(ಜೀವನ ಶಿಕ್ಷಣದ ಬಗೆಗೆ ಮುಂಬಯಿ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಬಂದ ಕೆಲ ಸಂಗತಿಗಳನ್ನು ಕೆಳಗೆ ಕೊಡಲಾಗಿ

—ಪ್ರ. ಸಂ.

ಭಾಗ ೧

೧. ಮೂಲಶಿಕ್ಷಣವೆಂದರೇನು ?

ಜನ ಸಾಮಾನ್ಯರಲ್ಲಿ ಮೂಲ ಶಿಕ್ಷಣದ ನಿಜವಾದ ಸ್ವರೂಪದ ಬಗೆಗೆ ಅನೇಕ ತಪ್ಪು ಕಲ್ಪನೆಗಳು ಪ್ರಚಲಿತ ವಿರುತ್ತವೆ. ಮೂಲ ಶಿಕ್ಷಣದ ಉಳಿದ ಅಂಗಗಳನ್ನು ಹೊರತು ಪಡಿಸಿ ಕೇವಲ ಒಂದಿಲ್ಲೊಂದನ್ನು ಎತ್ತಿ ತೋರಿಸುವಂಥ ತಪ್ಪು ಕಲ್ಪನೆಗಳಿಂದ ದುರುಪಯೋಗವಾಗಬಹುದು. ಈ ತರಹದ ಗೊಂದಲಮಯ ವಿಚಾರಗಳನ್ನು ಹೋಗಲಾಡಿಸಲು ಭಾರತ ಸರಕಾರದ ಶಿಕ್ಷಣ ಖಾತೆಯ ಸಹ-ಕಾರ್ಯದರ್ಶಿಗಳಾದ **ಶ್ರೀ ಕೆ. ಜಿ. ಸೈಯದೀನರ**ವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರಿಂದ ಮೂಲ ಶಿಕ್ಷಣವೆಂದರೇನು ? ಮತ್ತು ಅದರ ನಿಲುವು ಏನು ? ಎಂಬುದರ ಬಗೆಗೆ ಸಂಕ್ಷೇಪವಾದ ಕಲ್ಪನೆ ಬರುತ್ತದೆ ಆ ಹೇಳಿಕೆಯಲ್ಲಿ ಶ್ರೀ ಸೈಯದೀನರವರು ಮೂಲ ಶಿಕ್ಷಣದ ಆವಶ್ಯಕ ಲಕ್ಷಣಗಳನ್ನು ಹೇಳಿದ್ದಾರೆ. ಅವೆಲ್ಲವೂ ಸರಿಯಾಗಿ ಲಕ್ಷಿಸಲ್ಪಡಬೇಕು. ಮೊಟ್ಟಮೊದಲು ಅದೊಂದು ಮಕ್ಕಳ ಜೀವನಕ್ಕಷ್ಟೇ ಅಲ್ಲದೆ ಅವನ ಜೀವನದ ಮುಖಾಂತರ ಸಾಗುವ ಶಿಕ್ಷಣವಾಗಿದೆ. ಮಕ್ಕಳ ಜೀವನವು ಯಾವದಾದರೊಂದು ಸ್ಥಳೀಯ ಉದ್ಯೋಗವನ್ನು ಮತ್ತು ಅವರ ಸುತ್ತುಮುತ್ತಲಿರುವ ನೈಸರ್ಗಿಕ ಹಾಗು ಸಾಮಾಜಿಕ ಪರಿಸ್ಥಿತಿಗಳನ್ನು ಒಳಗೊಂಡಿರುತ್ತದೆ. ಈ ಮೂಲೋದ್ಯೋಗವು ಉತ್ಪಾದಕವಾಗಿರುವದು ಅವಶ್ಯ. ಮತ್ತು ಅವರಲ್ಲಿ ಶಿಕ್ಷಣಕ್ಕೆ ಬೇಕಾಗುವ ಅವಕಾಶಗಳು ಸಾಕಷ್ಟಿರಬೇಕು. ಮಕ್ಕಳು ತಮ್ಮ ಉದ್ಯೋಗದಿಂದ ಸಮಾಜಕ್ಕೆ ಉಪಯುಕ್ತವಾದಂಥ ಬೆಲೆ ಬಾಳು ಸಾಮಾನುಗಳನ್ನು ತಯಾರಿಸಬೇಕು.

ಎರಡನೆಯದಾಗಿ, ಮಕ್ಕಳು ವಿದ್ಯಾಭ್ಯಾಸವನ ಮಾಡದೆ ಉದ್ಯೋಗವನ್ನು ಮಾತ್ರ ಕಲಿಯುತ್ತಾರೆಂ ತಪ್ಪು ಕಲ್ಪನೆಯಾಗಬಾರದು. ಮಕ್ಕಳಿಗೆ ವಿಷಯ ಜ್ಞಾನ ಮಾಡಿಕೊಡುವ ಕಾರ್ಯ ಹಾಗು ಪ್ರೇರಕ ಶ ಗಳು ಅವರ ಮೂಲೋದ್ಯೋಗ ಮತ್ತು ಸುತ್ತಲಿನ ಸ ವೇಶಗಳಲ್ಲಿ ಅಡಕವಾಗಿವೆ. ಇಲ್ಲಿಯವರೆಗೆ ವಿದ್ಯಾಭ ಸವು ಬರಿದಾದ ರೀತಿಯಲ್ಲಿ ಸಾಗುತ್ತಿತ್ತು. ಗಣಿ ಇತಿಹಾಸ ಇಲ್ಲವೆ ಭೂಗೋಲವನ್ನು ಕಲಿಯುವಂತೆ ಮ ಳನ್ನು ಪ್ರೇರೇಪಿಸುವ ಉದ್ದೇಶವಾಗಲಿ ಶಕ್ತಿಯಾಗ ಅದರಲ್ಲಿರಲಿಲ್ಲ. ಆದರೆ ಈ ಹೊಸ ಪದ್ಧತಿಯ ಮೂಲೋದ್ಯೋಗ ಹಾಗೂ ಸನ್ನಿವೇಶಗಳು ಸಂಘಟಿ ಚಟುವಟಿಕೆಗಳ ಯೋಜನೆಯ ಮುಖಾಂತರ ಅಗ ವಿರುವ ಪ್ರೇರಣೆ ಹಾಗು ಪ್ರಚೋದನಗಳನ್ನು ಒದಗಿ ಕೊಡುತ್ತವೆ. ಮೂಲ ಶಿಕ್ಷಣದಲ್ಲಿ ವಾಚನ ಹಾಗು ವಾಚನಾಲಯಗಳಿಗೆ ಸಾಂಪ್ರದಾಯಕ ಶಿಕ್ಷಣ ಪದ್ಧ ಯಲ್ಲಿರುವದಕ್ಕಿಂತಲೂ ಹೆಚ್ಚು ಮಹತ್ವಸ್ಥಾನ ಕೊ ಲಾಗಿದೆ.

ಮೂರನೆಯದಾಗಿ, ಮೂಲ ಶಿಕ್ಷಣ ಶಾಲೆ ಹಳ್ಳಿ ಯ ಸಮಾಜ ಕೇಂದ್ರವಾಗಿದೆ. ಗ್ರಾಮಾಭಿವೃದ್ಧಿಗಾ ಸಂಘಟಿಸಲ್ಪಡುವ ಯೋಜನೆಗಳಲ್ಲಿ ಭಾಗವಹಿಸಿ ವಿದ್ಯಾ ರ್ಥಿಗಳೂ ಶಿಕ್ಷಕರೂ ಹಳ್ಳಿಯ ಸುಧಾರಣೆಯಲ್ಲಿ ನಿಕಟ

ಸಂಬಂಧವನ್ನಿಟ್ಟುಕೊಳ್ಳುತ್ತಾರೆ. ಮೂಲ ಶಿಕ್ಷಣವು ಶಹರಗಳಿಗಿರದೆ ಕೇವಲ ಹಳ್ಳಿಗಿರುವದೆಂಬ ತಪ್ಪು ಕಲ್ಪನೆಯೂ ಈ ಹೇಳಿಕೆಯಿಂದ ದೂರವಾಗುವದು. ಇದು ಶಿಕ್ಷಣದ ಸ್ವಾಭಾವಿಕ ಪದ್ಧತಿಯಾಗಿದ್ದು ಶಹರ ಶಾಲೆಗಳಿಗೆ ಮೂಲೋದ್ಯೋಗಗಳನ್ನು ಆರಿಸುವದರಲ್ಲಿರುವ ಅಂತರವನ್ನು ಬಿಟ್ಟರೆ ಹಳ್ಳಿಯಷ್ಟೇ ಪಟ್ಟಣಕ್ಕೂ ಅನ್ವಯಿಸುತ್ತಿದೆ.

೨. ಮೂಲ ಶಿಕ್ಷಣ ಪ್ರದರ್ಶನ, ೧೯೫೫

ಯಾವದೇ ಹೊಸ ಯೋಜನೆಯನ್ನು ವಿಶೇಷವಾಗಿ ಮೂಲಶಿಕ್ಷಣ ಯೋಜನೆಯನ್ನು, ಪ್ರವರ್ತಿಸುವದರಲ್ಲಿ ಪ್ರದರ್ಶನವು ಬಹು ಮಹತ್ವದ ಪಾತ್ರವನ್ನು ವಹಿಸುತ್ತದೆ. ಮೊಟ್ಟಮೊದಲು ಉತ್ತಮ ತರಗತಿಯ ಸಾಮಾನುಗಳನ್ನು ತಯಾರಿಸಲು ಇದರಿಂದ ಜಿಲ್ಹೆಗಳಿಗೆ ಪ್ರೇರಣೆ ದೊರೆಯುತ್ತದೆ. ಮೂಲೋದ್ಯೋಗದಲ್ಲಿಯ ಮೇಲ್ಮಟ್ಟವು ಶಿಕ್ಷಣದಲ್ಲಿಯ ಮೇಲ್ಮಟ್ಟದ ಸೂಚಕವೆಂದು ಈಗ ತಿಳಿಯಲಾಗಿದೆ. ಮತ್ತು ಪ್ರದರ್ಶನದಿಂದ ಮೂಲೋದ್ಯೋಗವನ್ನು ಸುಧಾರಿಸಲಿಕ್ಕೆ ಸ್ಪಷ್ಟವಾದ ಪ್ರೇರಣೆಯು ದೊರೆಯುತ್ತದೆ. ಎರಡನೆಯದಾಗಿ ಪ್ರದರ್ಶನದಿಂದ ಎಲ್ಲ ಜಿಲ್ಹೆಗಳು ಒಂದೆಡೆಗೆ ಕೂಡುತ್ತಿವೆ. ಪ್ರತಿ ಜಿಲ್ಹೆಯವರು ಉಳಿದ ಜಿಲ್ಹೆಗಳಲ್ಲಿ ಏನು ಮಾಡಲ್ಪಡುತ್ತಿರುವದೆಂಬುದನ್ನು ನೋಡಿ ಅನೇಕ ಸಂಗತಿಗಳನ್ನು ಕಲಿಯಬಹುದು. ಈ ಕ್ಷೇತ್ರದಲ್ಲಿ ದುಡಿಯುವವರು ಸಮಸ್ಯೆಗಳನ್ನು ಚರ್ಚಿಸಿ ತಮ್ಮ ತೊಂದರೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು.

ಮೂರನೆಯದಾಗಿ ಪ್ರದರ್ಶನವು ಸಾರ್ವಜನಿಕ ಶಿಕ್ಷಣದ ಒಂದು ಬಲವುಳ್ಳ ಸಾಧನವಾಗಿದೆ. ಜನರು ಮೂಲ ಶಿಕ್ಷಣ ವೆಂದರೇನೆಂಬದನ್ನು ಕಾರ್ಯರೂಪದಲ್ಲಿ ನೋಡುವದರಿಂದ ಅದರ ಬಗ್ಗೆ ಇದ್ದ ಅನೇಕ ತಪ್ಪು ಕಲ್ಪನೆಗಳು ದೂರಾಗುತ್ತವೆ. ಪ್ರದರ್ಶನಗಳನ್ನು ಏರ್ಪಡಿಸುವದರಿಂದ ಆಗುವ ಲಾಭಗಳಲ್ಲಿ ಇವು ಕೆಲವು. ೧೯೫೪ ರಲ್ಲಿ ರಾಜ್ಯದ ಮೂಲ ಶಿಕ್ಷಣ ಪ್ರದರ್ಶನವೊಂದನ್ನು ಪುಣೆಯಲ್ಲಿ ಏರ್ಪಡಿಸಲಾಗಿತ್ತು. ಇದರ ಪೂರ್ವದಲ್ಲಿ ಜಿಲ್ಹಾ ಪ್ರದರ್ಶನಗಳು ಏರ್ಪಡಿಸಲ್ಪಟ್ಟಿದ್ದವು. ಇಂಥದೇ ದೊಡ್ಡ ಪ್ರಮಾಣದ ಪ್ರದರ್ಶನವನ್ನು ಈ ವರ್ಷ ಸಪ್ಟಂಬರ ತಿಂಗಳ ಕೊನೆಯ ವಾರದಲ್ಲಿ ಪುಣೆಯಲ್ಲಿ ಜರುಗಿಸಬೇಕೆಂದು ಯೋಚಿಸಲ್ಪಟ್ಟಿದೆ. ಈ ಪ್ರದರ್ಶನವನ್ನು ಪುಣೆಯ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ವಿಶಾಲವಾದ ಆವಾರಗಳಲ್ಲಿ ಏರ್ಪಡಿಸಲಾಗುವದು. ಪ್ರತಿ ಜಿಲ್ಹೆಯವರಿಗೆ ತಾವು ಉತ್ಪಾದಿಸಿದ ಸಾಮಾನುಗಳನ್ನೂ ಹಾಗೂ ತಯಾರಿಸಿದ ಶೈಕ್ಷಣಿಕ ಚಿತ್ರಪಟ ಮತ್ತು ನಕಾಶ ಮೊದಲಾದವುಗಳನ್ನು ಪ್ರದರ್ಶಿಸಲು ಪ್ರತ್ಯೇಕ ಸ್ಥಳಗಳನ್ನು ಕೊಡಲಾಗುವದು. ಆ ಜಿಲ್ಹೆಯ ವತಿಯಿಂದ ಅ. ಡೆ. ಎ ಇನಸ್ಪೆಕ್ಟರರೊಬ್ಬರು ಪ್ರದರ್ಶಿಸತಕ್ಕ ಸಾಮಾನುಗಳನ್ನು ತರುವರು. ಅವುಗಳನ್ನು ಪ್ರದರ್ಶಿಸುವದಕ್ಕೂ ಹಾಗು ಅವುಗಳ ಸುರಕ್ಷತೆ ಮತ್ತು ಮಾರಾಟಗಳ ಬಗೆಗೂ ಅವರೇ ಹೊಣೆಗಾರರಾಗುವರು. ಮೂಲೋದ್ಯೋಗಗಳಲ್ಲಿಯ ಕ್ರಿಯೆಗಳ ಪ್ರಾಯೋಗಿಕ ಪ್ರದರ್ಶನ ಮತ್ತು ಮಕ್ಕಳ ಸಾಂಸ್ಕೃತಿಕ ಚಟುವಟಿಕೆ ಮೊದಲಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಪ್ರದರ್ಶನವನ್ನು ಸಾಕಷ್ಟು ಶೈಕ್ಷಣಿಕ ವಾಗುವಂತೆ ಯೋಚಿಸಲಾಗಿದೆ. ಜಿಲ್ಹೆಗಳೂ ಸಹ ಇಂತಹ ಪ್ರದರ್ಶನಗಳನ್ನು ಇದರ ಪೂರ್ವದಲ್ಲಿ ತಮ್ಮ ತಮ್ಮ ಜಿಲ್ಹೆಗಳ ಮಟ್ಟಿಗೆ ಏರ್ಪಡಿಸುವವು. ಅಲ್ಲಿ ಆರಿಸಲ್ಪಟ್ಟ ವಸ್ತುಗಳು ರಾಜ್ಯ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುವವು.

೩. ಮೂಲೋದ್ಯೋಗದ ರೂಢಿಯನ್ನು ಸಾಗಿಸುವದು.

ಯಾವದೇ ಕೌಶಲ್ಯತೆಯಾಗಲಿ ಕೆಲವು ಕಾಲ ರೂಢಿ ಮಾಡುವದನ್ನು ಬಿಟ್ಟರೆ ಅದು ಬಲವು ಕುಗ್ಗಿ ಕೆಲವು ಅವಧಿಯ ತರುವಾಯ ಅದು ಸಂಪೂರ್ಣವಾಗಿ ಅಳಿದು ಹೋಗುತ್ತದೆಂಬುದು ಚನ್ನಾಗಿ ತಿಳಿದಿದೆ. ಇದೇ ಚಟಗಳು ಉಂಟಾಗುವ ತತ್ವ. ಉದಾಹರಣೆಗಾಗಿ ಅಚ್ಚಾಕ್ಷರ ಬರೆಹವನ್ನೇ ತೆಗೆದುಕೊಳ್ಳಿರಿ. ಇದನ್ನು ಹೊಡೆಯುವ ಜಾಣ್ಮೆಯು ದೀರ್ಘಾವಧಿಯ ರೂಢಿಯಿಂದ ಬರುತ್ತದೆ. ಆದರೆ ಸ್ವಲ್ಪ ದಿವಸಗಳವರೆಗೆ ಇದರ ರೂಢಿಯನ್ನು ಬಿಟ್ಟರೆ ಇದರಲ್ಲಿಯ ಜಾಣ್ಮೆಯನ್ನು ಕಳೆದುಕೊಳ್ಳುವೆವು. ಇದೇ ಭಾಷೆಗೂ ಅನ್ವಯಿಸುವದು. ನಾನು ಹಿಂದಿಯಂಥ ಒಂದು ಹೊಸ ಭಾಷೆಯನ್ನು ಕಲಿತು ಅದರಲ್ಲಿ ಅತಿ ಹೆಚ್ಚಿನ ಪರೀಕ್ಷೆಯನ್ನು ಪಾಸಾದೆನೆಂದು ತಿಳಿಯಿರಿ.

ನಾನು ಹಿಂದಿಯಲ್ಲಿ ಮಾತಾಡುವ ರೂಢಿಯನ್ನಿಡದಿದ್ದರೆ ಕೆಲವು ತಿಂಗಳುಗಳ ತರುವಾಯ ಈ ಹೊಸ ಭಾಷೆಯಲ್ಲಿ ಮಾತಾಡುವ ನನ್ನ ರೂಢಿಯೇ ತಪ್ಪಿ ಹೋಗುತ್ತದೆ. ಮೂಲೋದ್ಯೋಗಗಳಲ್ಲಿಯೂ ಅದೇ ಮಾತು. ನೂಲುವ ಮತ್ತು ನೇಯುವ ಜಾಣ್ಮೆಯು ಸತತ ರೂಢಿಯಿಂದ ಬರುವಂಥಹದು. ಶಿಕ್ಷಕರು ಈ ಕುಶಲತೆಯನ್ನು ತಮ್ಮ ತರಬೇತಿಯ ಅವಧಿಯಲ್ಲಿ ಪಡೆಯುತ್ತಾರೆ. ಆದರೆ ಅವರು ತಮ್ಮ ಶಾಲೆಗಳಿಗೆ ಮರಳಿ ಹೋದನಂತರ ಅವುಗಳಲ್ಲಿಯ ರೂಢಿಯನ್ನು ಹಾಗೇ ಸಾಗಿಸುವದಿಲ್ಲ. ಇದರ ಪರಿಣಾಮವೇನಾಗುವದು ? ಅವರು ತಮ್ಮ ಕುಶಲತೆಯನ್ನು ಕಳೆದುಕೊಳ್ಳುವರು. ಮೂಲ ಶಿಕ್ಷಣ ಪರಿಶೀಲನಾ ಸಮಿತಿಯವರು ಕೆಲವು ಶಾಲೆಗಳಿಗೆ ಭೆಟ್ಟಿಯನ್ನಿತ್ತಾಗ ನೇಯ್ಗೆಯ ಶಿಕ್ಷಕರು ನೇಯುವ ರೂಢಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದುದು ಅವರಿಗೆ ಕಂಡು ಬಂದಿತು. ಯಾಕಂದರೆ ತಮ್ಮ ತರಬೇತಿ ಮುಗಿದನಂತರ ಅವರು ಅದರ ಅಭ್ಯಾಸವನ್ನೇ ಬಿಟ್ಟು ಬಿಟ್ಟಿದ್ದರು, ಎಲ್ಲ ಮೂಲೋದ್ಯೋಗಗಳ ಶಿಕ್ಷಕರು ತರಬೇತಿ ಮುಗಿದನಂತರ ತಮ್ಮ ಜಾಣ್ಮೆಯನ್ನು ಕಾಯ್ದುಕೊಳ್ಳಬೇಕು. ಮತ್ತು ಇದಕ್ಕಾಗಿ ಅವರು ರೂಢಿಯನ್ನು ಮಾಡುತ್ತಿರಬೇಕು. ಶಾಲೆಗಳಲ್ಲಿ ಅವರಿಗೂ ರಾಟಿ, ಮಗ್ಗಗಳಿರಬೇಕು. ಅವುಗಳಿಂದ ಮೇಲಿಂದಮೇಲೆ ಕೆಲಸ ಮಾಡಬೇಕು. ಹೀಗೆ ಅವರು ಮಾಡುವದರಿಂದ ತಮ್ಮ ರೂಢಿಯನ್ನು ಬೆಳೆಯಿಸುವರಲ್ಲದೆ ಮೂಲೋದ್ಯೋಗದಲ್ಲಿ ತಯಾರಾದ ವಸ್ತುಗಳ ಉತ್ತಮ ಮಾದರಿಯನ್ನು ವಿದ್ಯಾರ್ಥಿಗಳೆದುರು ಇಡಲು ಸಮರ್ಥರಾಗುವರು. ವಿದ್ಯಾರ್ಥಿಗಳು ಶಿಕ್ಷಕರನ್ನು ಅನುಕರಿಸಿ ಆ ಮೂಲಕ ತಮ್ಮ ಕೆಲಸದಲ್ಲಿ ಪ್ರಗತಿಯನ್ನು ಪಡೆಯುತ್ತಾರೆ. ನೇಯ್ಗೆಯ ಶಿಕ್ಷಕರು ಅಲ್ಪಾವಧಿ ತರಬೇತಿಗಾಗಿ ಪುನಃ ಹೋಗಬೇಕೆಂದು ಕೆಲ ಜನರು ಸೂಚಿಸಿರುವರು. ಆದರೆ ಶಿಕ್ಷಕರು ತರಬೇತಿಯ ನಂತರ ರೂಢಿಯನ್ನು ಬಿಟ್ಟು ಬಿಟ್ಟರೆ ಇಂಥ ತರಬೇತಿ ಎಷ್ಟೇ ಆದರೂ ಅದರಿಂದ ಯಾವ ಲಾಭವೂ ಆಗಲಾರದು. ಪ್ರತಿಯೊಬ್ಬ ಶಿಕ್ಷಕನು ತನ್ನ ವಿಷಯದಲ್ಲಿ ಪ್ರಾವೀಣ್ಯತೆಯನ್ನು ಪಡೆದವನಿರಬೇಕು. ಇತಿಹಾಸವನ್ನು ಕಲಿಸುವ ಶಿಕ್ಷಕನು ಅದನ್ನು ಚನ್ನಾಗಿ ಅರಿತವನಿರಬೇಕು. ಭೂಗೋಲ ಹಾಗೂ ಮೂಲೋದ್ಯೋಗಗಳಲ್ಲಿಯೂ ಸಹ ಹಾಗೆಯೇ. ಇದು ತರಬೇತಿ ಮುಗಿದನಂತರವೂ ರೂಢಿಯನ್ನಿಟ್ಟುಕೊಂಡರೆ ಮಾತ್ರ ಸಾಧ್ಯ. ಇಲ್ಲವಾದರೆ ಅವರು ನಿಜವಾದ ಶಿಕ್ಷಕರಾಗದೆ ಹೆಸರಿಗೆ ಮಾತ್ರ ಮೂಲೋದ್ಯೋಗ ಶಿಕ್ಷಕರಾಗುವರು. ಬೇರೆ ಬೇರೆ ಶಾಲೆಗಳಲ್ಲಿ ದುಡಿಯುವ ಮೂಲೋದ್ಯೋಗ ಶಿಕ್ಷಕರು ದಯಮಾಡಿ ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದರಂತೆ ವರ್ತಿಸುವರೆಂದು ಆಶಿಸಲಾಗಿದೆ.

ಭಾಗ ೨.

(೧) ರಾಜ್ಯದ ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗಗಳ ಪ್ರದರ್ಶನದ ವಿವರಗಳು:-

ರಾಜ್ಯದ ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗಗಳ ಪ್ರದರ್ಶನದ ಯೋಜನೆಗಳು ಈಗ ಕೊನೆಗೊಂಡಂತಾಗಿವೆ. ಪ್ರದರ್ಶನವು ೧೯೫೫ ಸಪ್ಟಂಬರ ೨೭ ರಿಂದ ೧೯೫೫ ಅಕ್ಟೋಬರ ೨ ನೆಯ ದಿನಾಂಕದ ವರೆಗೆ ತೆರೆದಿಡಲ್ಪಡುವದು. ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿ ಅವರು ದಿನಾಂಕ ೨೭-೯-೧೯೫೫ ರಂದು ಮುಂಜಾನೆ ೯-೩೦ ಕ್ಕೆ ಅದನ್ನು ಉದ್ಘಾಟಿಸುವರು. ಶಿಕ್ಷಣ ಹಾಗೂ ಕಾಯಿದೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿ ಅವರು ದಿನಾಂಕ ೨೯-೯-೧೯೫೫ ರಂದು ಮುಂಜಾನೆ ೯-೩೦ ಗಂಟೆಗೆ ಬಹುಮಾನ ವಿತರಣ ಮಾಡುವರು. ಮುಂಬಯಿ ಲೇಜಿಸ್ಲೇಟಿವ್ಹ ಕೌನ್ಸಿಲದ ಚೇರಮನ್‌ರೂ ಹಾಗು ಗ್ರಾಮೋದ್ಯೋಗಗಳ ಸಮಿತಿಯ ಚೇರಮನ್‌ರೂ ಆದ ಶ್ರೀ ಆರ್. ಎಸ್. ಹುಕ್ಕೇರಿಕರ ಅವರು ಗಾಂಧಿ ಜಯಂತಿಯ ದಿನವಾದ ೧೯೫೫ ನೆಯ ಅಕ್ಟೋಬರ ೨ ರಂದು ಮುಂಜಾನೆ ೮-೩೦ ಗಂಟೆಗೆ ಮುಕ್ತಾಯ ಸಮಾರಂಭವನ್ನು ನೆರವೇರಿಸುವರು. ಪ್ರದರ್ಶನವನ್ನು ಸಾಧ್ಯವಿದ್ದಷ್ಟು ಬೋಧಪ್ರದ ಹಾಗೂ ಉಪಯುಕ್ತವಾಗುವಂತೆ ಮಾಡಲು ಇಚ್ಛಿಸಲಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಟ್ರೇನಿಂಗ ಕಾಲೇಜುಗಳಲ್ಲಿ ತಯಾರಾದ ಶರ್ಟಿನ ಹಾಗು ಕೋಟಿನ ಅರಿವೆ, ಆಸನಗಳು, ಬಣ್ಣದ ಡಿಝಾಯಿನುಗಳು ಇತ್ಯಾದಿಯಾಗಿ ಅರಿವೆಯ ವಿವಿಧ ಪ್ರಕಾರಗಳಿಗೆ ಪ್ರತ್ಯೇಕವಾಗಿ ಪಾರಿತೋಷಕಗಳು ಕೊಡಲ್ಪಡುವವು. ಇದಲ್ಲದೆ ಕಟ್ಟಿಗೆ ಕೆಲಸ, ರಟ್ಟಿನ ಕೆಲಸ ಇತ್ಯಾದಿ ಕೆಲಸಗಳಲ್ಲಿ ಉತ್ಕೃಷ್ಟ ಕಲಾ ಕುಸುರಿನಿಂದ ಕೂಡಿದ

ವಸ್ತುಗಳಿಗೂ ಬಹುಮಾನಗಳು ಕೊಡಲ್ಪಡುವವು. ಪ್ರದರ್ಶನವು ತೆರೆದಿರುವಾಗ ದಿನಾಲು ಮುಂಜಾನೆ ಹಾಗೂ ಸಾಯಂಕಾಲ ಪ್ರಾತ್ಯಕ್ಷಿಕೆಗಳನ್ನು ಸಂಘಟಿಸುವ ವಿಚಾರವೂ ಇದೆ. ಬೇರೆ ಬೇರೆ ಸಾಲೆಗಳಿಂದ ವಿದ್ಯಾರ್ಥಿಗಳು ಕಚ್ಚಾ ಸಾಮಗ್ರಿಯಿಂದ ಉತ್ಪಾದಿತ ವಸ್ತುಗಳವರೆಗೆ ಮೂಲೋದ್ಯೋಗದ ಎಲ್ಲ ಕ್ರಿಯೆಗಳನ್ನು ಪ್ರತ್ಯಕ್ಷ ಮಾಡಿ ತೋರಿಸುವರು. ಈ ಪ್ರಾತ್ಯಕ್ಷಿಕೆಗಳು ರಾಜ್ಯದ ಜೀವನ ಶಿಕ್ಷಣ ಸಾಲೆಗಳಲ್ಲಿ ಕಲಿಸಲ್ಪಡುತ್ತಿರುವ ಎಲ್ಲ ಮೂಲೋದ್ಯೋಗಗಳನ್ನು ಪ್ರತಿನಿಧೀಕರಿಸುವಂತೆ ಮತ್ತು ವೈವಿಧ್ಯಪೂರ್ಣವಾಗುವಂತೆ ನೋಡಿಕೊಳ್ಳಲು ಯೋಚಿಸಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಎರಡು ದಿವಸಗಳನ್ನು ಮೀಸಲಾಗಿರಿಸಿದೆ. ಅಭಿವೃದ್ಧಿಕ ಚಟುವಟಿಕೆಗಳ ರಚನಾತ್ಮಕ ಅಂಗವನ್ನು ಚಿತ್ರಿಸುವ ವಿವಿಧ ಕಾರ್ಯಕ್ರಮಗಳನ್ನು ಪುಣೆ ಶಹರದ ಸಾಲೆಯ ಮಕ್ಕಳು ಸಂಘಟಿಸುವರು. ಪ್ರದರ್ಶನದ ಸಲುವಾಗಿ ಕಳಿಸಲ್ಪಟ್ಟ ರಾಜ್ಯದ ಮೂಲೋದ್ಯೋಗ ಸಾಲೆಗಳ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಸಮ್ಮೇಲನವು ಪ್ರದರ್ಶನದ ಒಂದು ವೈಶಿಷ್ಟ್ಯವಾಗಿದೆ. ಈ ಸಮ್ಮೇಲನವು ಪ್ರತಿದಿನ ಅಪರಾಹ್ನದಲ್ಲಿ ಮೂರು ದಿವಸ ನಡೆಯುವದು. ಪ್ರತಿ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರನು ಜಿಲ್ಹೆಯಲ್ಲಿಯ ಮೂಲೋದ್ಯೋಗದ ಕೆಲಸದ ಬಗ್ಗೆ ಒಂದು ಸಂಕ್ಷಿಪ್ತ ವರದಿಯನ್ನು ಈ ಸಮ್ಮೇಲನದಲ್ಲಿ ಒಪ್ಪಿಸಬೇಕಾಗುವದು. ಬೇಸಿಕ್ಅಲ್ಲದ ಸಾಲೆಗಳನ್ನು ಬೇಸಿಕ್ ಸಾಲೆಗಳಾಗಿ ಪರಿವರ್ತಿಸುವ ಸಂಬಂಧದ ಸಮಸ್ಯೆಗಳನ್ನು ಮತ್ತು ಬೇಸಿಕ್ ಸಾಲೆಗಳಲ್ಲಿಯ ಮೂಲೋದ್ಯೋಗದ ಕೆಲಸವನ್ನು ಸುಧಾರಿಸುವದನ್ನು ಚರ್ಚೆಗೆ ತೆಗೆದುಕೊಳ್ಳಲಾಗುವದು. ಪ್ರದರ್ಶನದ ಕೊನೆಯ ದಿನವನ್ನು ಅಂದು ಗಾಂಧಿ ಜಯಂತಿಯ ದಿನವಿರುವದರಿಂದ ಸನ್ನಿವೇಶಕ್ಕೆ ತಕ್ಕಂತೆ ಸಮಗ್ರ ಮೌನವಾಗಿ ನೂಲುವ ಹಾಗೂ ನೇಯುವ ಕ್ರಿಯೆಗಳಿಂದ ಆಚರಿಸಲಾಗುವದು. ಅನೇಕ ಚರಖಗಳು ಮತ್ತು ಮಗ್ಗಗಳು ಕಾರ್ಯಗತವಾಗುವವೆಂದೂ ಪುಣೆ ಶಹರದಲ್ಲಿಯ ಎಲ್ಲ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಈ ಪ್ರಾತ್ಯಕ್ಷಿಕೆಗಳಲ್ಲಿ ಭಾಗ ವಹಿಸುವರೆಂದೂ ಆಶಿಸಲಾಗಿದೆ. ಈ ಪ್ರದರ್ಶನವನ್ನು ಸಂಘಟಿಸುವದರಲ್ಲಿ ಪುಣೆಯಲ್ಲಿಯ ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳು ಒಳ್ಳೇ ಮಹತ್ವದ ಪಾತ್ರವನ್ನೂ ವಹಿಸಬೇಕಾಗುವದೆಂಬುದರಲ್ಲಿ ಸಂದೇಹವಿಲ್ಲ. ಪ್ರಾತ್ಯಕ್ಷಿಕೆಗಳನ್ನು ಮತ್ತು ಸಾಂಸ್ಕೃತಿಕ ಸಮಾರಂಭಗಳನ್ನು ಸಂಘಟಿಸುವದರಲ್ಲಿ ಅವರು ಸ್ವಯಂಸೇವಕರಾಗಿ ಕೆಲಸ ಮಾಡಬೇಕಾಗುವದು. ಸಮಾರಂಭಗಳಲ್ಲಿ ಒಳಗೆ ಬಿಡುವದನ್ನು ನಿಯತಗೊಳಿಸುವದರಲ್ಲಿ ಮತ್ತು ಜನದಟ್ಟಣೆಯನ್ನು ನಿಯಂತ್ರಿಸುವದರಲ್ಲಿ ಅವರ ಸಹಾಯವು ಅತ್ಯವಶ್ಯ. ಶೃಂಗರಿಸುವ ವ್ಯವಸ್ಥೆ ಹಾಗೂ ಅವಧಿಗಳನ್ವಯ ಕಾವಲಿನ ಕೆಲಸ ಇವು ಸಂಪೂರ್ಣ ಅವರಿಗೇ ಸಂಬಂಧಿಸಿದವು. ಈ ಪ್ರದರ್ಶನವು ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಸಣ್ಣ ಸಂಸ್ಥೆಗಳಲ್ಲಿ ಅಪರೂಪವಾಗಿ ದೊರೆಯಬಹುದಾದ ದೊಡ್ಡ ಪ್ರಮಾಣದಮೇಲೆ ಸಮರಸ ಸಾಂಘಿಕ ಚಟುವಟಿಕೆಗಳನ್ನು ರೂಢಿಗೊಳಿಸುವ ಒಳ್ಳೆಯ ಸುಸಂಧಿಯನ್ನು ಒದಗಿಸುವದೆಂದು ನಾವು ನಂಬಿದ್ದೇವೆ.

ಅನುವಾದಕರು :– ಶ್ರೀ ಆಯ್. ಎಸ್. ಬಿದರಿ
ಧಾರವಾಡ.

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕತೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦–೧೦–೦

— ೫ನೆಯ ಪ್ರಕಟಣೆ —

ಕುಮಾರಿ ಸುನೇತ್ರಾ

ಜೀನದ ಹೆಸರಾಂತ ಬರೆಹಗಾರರಾದ
ಲಿನ್, ಯು, ಟೆಂಗರ
ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦–೧೦–೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಪ್ರಾಥಮಿಕ ಶಿಕ್ಷಣ ಪ್ರಪಂಚ

ಅಗಸ್ಟ, ೧೯೫೫

(ಕೆಳಗೆ ಕಾಣಿಸಲಾದ ಗ್ರಾಮುಗಳಲ್ಲಿ ದಿನಾಂಕ ೧೫ರಂದು **೯ನೆಯ ಸ್ವಾತಂತ್ರ್ಯೋತ್ಸವವನ್ನು** ಸ್ಥಾನಿಕ ಪ್ರಮುಖರ ಇಲ್ಲವೆ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮುಗಳೊಂದಿಗೆ ಆಚರಿಸಲಾಯಿತು.)

ಹೊಳೆಆಲೂರ, ಬೆಲೂರ (ಬಾದಾಮಿ), ಕತಕನಹಳ್ಳಿ, ಬಟ್ಟೂರ (ಶಿರಹಟ್ಟಿ), ಗಂದಿಗವಾಡ (ಖಾನಾಪೂರ), ಯಲಗೂರು (ಮುದ್ದೇಬಿಹಾಳ), ಮಡಕೇಶಿರೂರ, ಲಿಂಗಧಾಳ (ಗದಗ), ಕಟಗೇರಿ (ಬಾದಾಮಿ), ಆಲಮೇಲ (ಸಿಂದಗಿ), ಪಡೇಕನೂರ (ಮುದ್ದೇಬಿಹಾಳ), ರೋಣಿಹಾಳ (ಬಾಗೇವಾಡಿ), ಕೆರೂರ, ಹಾಗನೂರ-ಕರ್ಲಕೊಪ್ಪ (ಬಾದಾಮಿ), ನೀಲಗುಂದ, ಉಗಲವಾಟ (ಬಾದಾಮಿ), ಭಗವತಿ (ಬಾಗಲಕೋಟಿ), ಹುಲ್ಲಳ್ಳಿ (ಹುನಗುಂದ), ಉರ್ದುಶಾಲೆ, ಕಾರವಾರ, ಯಲಿವಾಳ (ಕುಂದಗೋಳ), ಹೆಬ್ಬಾಳ (ಶಿರಹಟ್ಟಿ), ಬೆನಕನಕೊಂಡ (ರಾಣೇಬೆನ್ನೂರ), ಹೊಸೂರು (ಬಾದಾಮಿ), ತಳಕವಾಡ (ಬಾದಾಮಿ), ಕುಂಚನೂರ (ಜಮುಖಂಡಿ), ಮುಗದ, ಖಜ್ಜೀಡೋಣಿ (ಬಾಗಲಕೋಟಿ), ಹುಯಿಲಗೋಳ (ಗದಗ), ಬಿದರಹಳ್ಳಿ (ಗದಗ) ಸೋಂದಾ (ಶಿರ್ಶಿ), ಇಲಾಳ (ಹುನಗುಂದ), ಹಳದೂರ (ಬಾದಾಮಿ), ಅಮಲಝರಿ (ಬೀಳಗಿ), ಬೆಣ್ಣೂರ, ಹಳ್ಳೂರ, ಧುಂಡಸಿ, ಹಾಳಕುಸುಗಲ್ಲ (ನವಲಗುಂದ), ಮುಳವಾಡ, ಹೊಸಶಿಡೇನೂರ (ರಾಣೇಬೆನ್ನೂರ), ಕಾಖಂಡಕಿ, ಸಂಗೂರ (ಹಾವೇರಿ), ಉತ್ತೂರ (ಮುಧೋಳ), ಕರಡಿಕೊಪ್ಪ (ಹುಬ್ಬಳ್ಳಿ), ಹುಣಸೀಕಟ್ಟಿ (ಬೈಲಹೊಂಗಲ), ಕುರಡೀಕೇರಿ (ಹುಬ್ಬಳ್ಳಿ), ತೆವರಮೆಳಿಹಳ್ಳಿ (ಸಿಗ್ಗಾಂವ), ಜಂಬಗಿ (ವಿಜಾಪೂರ), ಹಳಗುಣಕಿ (ಇಂಡಿ), ಮುಗಳಹಳ್ಳಿ (ಬಾಗಲಕೋಟಿ), ಬೇವೂರ (ಬಾಗಲಕೋಟಿ), ರಟ್ಟೇಹಳ್ಳಿ, ಹಿರೇಆಸಂಗಿ (ಬಾಗೇವಾಡಿ), ಮರನಾಳ (ಹುಕ್ಕೇರಿ), ವಜ್ಜರಮಟ್ಟಿ (ಮುಧೋಳ), ಸಾಸ್ವೀಹಳ್ಳಿ (ನವಲಗುಂದ), ಭತಗುಣಕಿ (ಇಂಡಿ).

ಈ ಊರುಗಳಲ್ಲಿ ಅಲ್ಲದೆ ಧಾರವಾಡ, ಬೆಳಗಾವ, ಹುಬ್ಬಳ್ಳಿ, ಲಚ್ಯಾಣ, ಜಮುಖಂಡಿಗಳಲ್ಲಿಯ ಎಲ್ಲ ಟ್ರೇನಿಂಗ ಕಾಲೇಜುಗಳಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

(* ಮುಂದಿನ ಪುಟ ನೋಡಿರಿ)

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ. ಗಳಿಗಾಗಿ)

ಬೆಲೆ: **೦—೨—೬**

ಅಂಚೆವೆಚ್ಚ ರೂ. ೦—೧—೦ ಪ್ರತಿಯೊಂದಕ್ಕೆ

ಪ್ರತಿಗಳು ಸಿಗುವ ಸ್ಥಳ:—

ಪ್ರಧಾನ ಸಂಪಾದಕರು **ಕನ್ನಡ ಪ್ರಾಥಮಿಕ ಶಿಕ್ಷಣ**

ಧಾರವಾಡ.

'ಪ್ರಾಥಮಿಕ ಶಿಕ್ಷಣ'

ವಿಶೇಷ ಸಂಚಿಕೆ

೧೯೫೫ನೆಯ ಅಕ್ಟೋಬರ ತಿಂಗಳ 'ಪ್ರಾಥಮಿಕ ಶಿಕ್ಷಣ' ಸಂಚಿಕೆಯು ಹೆಚ್ಚು ಪುಟಗಳಿಂದ ಕೂಡಿ ಶಿಕ್ಷಣದ ವಿವಿಧ ಅಂಗಗಳನ್ನು ಹಾಗೂ ಇತರ ಶೈಕ್ಷಣಿಕ ವಿಷಯಗಳನ್ನು ಕುರಿತು ಹೆಸರಾಂತ ಲೇಖಕರ ಬರೆಹಗಳನ್ನೊಳಗೊಂಡು ವೈವಿಧ್ಯಪೂರ್ಣವಾಗಿ ಪ್ರಕಟವಾಗುವದು.

ಪ್ರ. ಸಂ.

ನಮ್ಮ ಸಮಸ್ಯೆಗಳು

—ಚ. ಹ. ಸಕ್ರೋಜಿ ಕೋಟುಮಚಗಿ.

ಪ್ರ. ಬಾಲಕರು ರಸಗ್ರಹಿಣಿಗಳಾಗುವಂತೆ ಕೈಕೊಳ್ಳುವ ಉಪಾಯ ಹೇಳಿ?

ಉ. ಈ ಉಪಾಯವು ಅಭ್ಯಾಸ ಪತ್ರಿಕೆಯಲ್ಲಿಯೇ ಸಮಾವಿಷ್ಟವಾಗಿದೆ. ೧ನೆಯ ಇಯತ್ತೆಯಿಂದಲೇ ಮಣ್ಣು ಮೊದಲಾದ ಸಾಮಗ್ರಿಯಿಂದ ಗೊಂಬೆಗಳನ್ನು ಮಾಡುವದು, ಚಿತ್ರ ತೆಗೆಯುವದು, ಬಣ್ಣ ಕೊಡುವದು, ಕವಿತೆಗಳನ್ನು ಶೃಂಗಾರಯುಕ್ತವಾಗಿ ಅನ್ನುವದು, ಹಾಡುವದು ಈ ಎಲ್ಲ ಆಟಪಾಠಗಳಂತೆ ಆರಂಭವಾಗುವ ಚಟುವಟಿಕೆಗಳೇ ಬಾಲಕರನ್ನು ಗಿಡಗಂಟೆಗಳಲ್ಲಿ, ಪಶುಪಕ್ಷಿಗಳಲ್ಲಿ, ಕೌಟುಂಬಿಕ ಜೀವನದಲ್ಲಿ, ಗೆಳೆತನದಲ್ಲಿ, ಸ್ನೇಹದಲ್ಲಿ ಇರುವ ಆನಂದದ ರಸವನ್ನು ಗ್ರಹಣ ಮಾಡಲಿಕ್ಕೆ ತರಬೇತು ಮಾಡುವದು.

ಪ್ರ. ಈಗಿದ್ದ ಅಭ್ಯಾಸವನ್ನು ಸಮವಾಯ ಪದ್ಧತಿಯಂತೆ ಸಾಗಿಸಿದರೆ ವಾರ್ಷಿಕ ಪ್ರಗತಿಯನ್ನು ಸಾಧಿಸಿ ಜೀವನ ಶಿಕ್ಷಣ ಶಾಲೆಗಳು ಯಶಸ್ವಿಯಾಗಿ ಸರಕಾರದ ಯೋಜನೆಯನ್ನು ಪೂರ್ತಿಗೊಳಿಸಲಿಕ್ಕಿಲ್ಲವಷ್ಟೇ?

ಉ. ಪ್ರಶ್ನೆಯು ಸ್ಪಷ್ಟವಾಗಿಲ್ಲ. ಪಾಠಗಳನ್ನು ಸಮವಾಯ ಪದ್ಧತಿಯಿಂದ ಸಾಗಿಸಿದರೆ ವರ್ಷದಲ್ಲಿ ಮುಗಿಯಬೇಕಾದ ಅಭ್ಯಾಸ ಪತ್ರಿಕೆಯ ವಿಷಯಗಳೂ ಮುಗಿಯಲಿಕ್ಕಿಲ್ಲ. ಜೀವನ ಶಿಕ್ಷಣದ ಉಚ್ಚ ಆದರ್ಶಗಳಾದ ಸ್ವಾವಲಂಬನ, ಉದ್ಯೋಗಪ್ರಿಯತೆ, ಕೀಳೆಂದು ಸಾಮಾನ್ಯವಾಗಿ ತಿಳಿಯುವ ಯಾವ ಉದ್ಯೋಗವನ್ನಾಗಿ ಈಶಾರ್ಪಣ ಬುದ್ಧಿಯಿಂದ, ತ್ಯಾಗಬುದ್ಧಿಯಿಂದ, ನಿರ್ಮತ್ಸರದಿಂದ ತಮ್ಮ ಪಾಲಿಗೆ ಸಾಧ್ಯವಿದ್ದ ಕಾಯಕವನ್ನು ಕೈಕೊಳ್ಳುವದು — ಈ ಆದರ್ಶಗಳು ಪೂರ್ಣವಾಗಲಿಕ್ಕಿಲ್ಲ ಎಂಬದೇಯು ನಿಮ್ಮ ಪ್ರಶ್ನೆಗೆ ಕಾರಣವೆಂದು ತಿಳಿಯುತ್ತೇನೆ. ಎರಡೂ ಗುರಿಗಳನ್ನು — ವರ್ಷದ ಅಭ್ಯಾಸದ ಪೂರ್ತಿ ಮತ್ತು ಸ್ವಾವಲಂಬನ, ಸ್ವಾರ್ಥತ್ಯಾಗಾದಿಗುಣಗಳು — ಸಾಧಿಸಲಿಕ್ಕಾಗದಿದ್ದರೆ ಮೊದಲನೆಯದು ಅಪೂರ್ತಿಯಾದರೂ ವಿಶೇಷ ನೊಂದುಕೊಳ್ಳುವ ಕಾರಣವಿಲ್ಲ-ಅದು ಹೆಚ್ಚಾಗಿ ಪುಸ್ತಕೀ ವಿದ್ಯೆಯ ಸ್ವರೂಪದ್ದು ಅಥವಾ ಅನುಭವವಿದ್ದವರ ಸಲಹೆಯನ್ನು ಪಡೆದುಕೊಳ್ಳದೆ ತಯಾರಿಸಿದ ಅಭ್ಯಾಸ ಪತ್ರಿಕೆಯಾದ್ದರಿಂದ ಅಷ್ಟು ಪೂರ್ತಿಮಾಡುವದು ಯಾರಿಂದಲೂ ಸಾಧ್ಯವಾಗಲಿಕ್ಕಿಲ್ಲ. ಆದರೆ ಜೀವನ ಶಿಕ್ಷಣದ ಮುಖ್ಯ ಆದರ್ಶಗಳನ್ನು ಅತ್ಯಲ್ಪವಾಗಿಯಾದರೂ ನಿಜವಾಗಿ ಮನಃಪೂರ್ವಕವಾಗಿ ಸಾಧಿಸಿದರೆ ತಿಳಿದವರು ಸೈಯನ್ನದೆ ಇರಲಾರರು.

ಪ್ರ. ಮೂಲೋದ್ಯೋಗವು ಬಾಲಕರಲ್ಲಿಯ ಉತ್ಪಾದಕ ಶಕ್ತಿಯನ್ನು ಉದಾತ್ತೀಕರಿಸಿದೆಯೋ? ಅದಕ್ಕೆ ಎಷ್ಟರ ಮಟ್ಟಿಗೆ ಮೂಲೋದ್ಯೋಗ ಶಾಲೆಗಳು ಕಾರಣಗಳಾಗಿವೆ?

ಉ. ವಿದ್ಯಾರ್ಥಿಗಳಲ್ಲಿ ಹೇಳಿಕೊಳ್ಳುವಷ್ಟು ಉತ್ಪಾದಕ ಕಾರ್ಯಕ್ಷಮತೆಯು ಬಂದಿಲ್ಲದಿರುವದೇನೋ ನಿಜ. ಇದಕ್ಕೆ ಕಾರಣಗಳಿಲ್ಲದಿಲ್ಲ. ಮುಖ್ಯವಾಗಿ ಮೂಲೋದ್ಯೋಗ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಲ್ಲಿ ಮೂಲೋದ್ಯೋಗದ ಸಾರ್ಥಕತೆಯ ಬಗೆಗೆ ಅಚಲ ವಿಶ್ವಾಸ ಮತ್ತು ಕರ್ತವ್ಯದಕ್ಷತೆಯ ಅಭಾವವೇ ಕಾರಣವಲ್ಲವೇ?

(ಹಿಂದಿನ ಪುಟದಿಂದ ಬಂದುದು)

(ಈ ಸದರಿನಲ್ಲಿ ವಾಡಿಕೆಯಂತೆ ಕೊಡುವ ಇನ್ನಿತರ ಸಂಗತಿಗಳನ್ನು ಸ್ಥಳಾಭಾವದ ಮೂಲಕ ಈ ಸಂಚಿಕೆಯಲ್ಲಿ ಕೊಡಲಾಗಲಿಲ್ಲ. ಮಹತ್ವದ ಸುದ್ದಿಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು. —ಪ್ರ. ಸಂ.)

ಜ ಸಾಹಿತ್ಯ ! ★ ಜ್ಞಾನರಸ ಸಾಹಿತ್ಯ ★ ಶಾಶ್ವತ ಸಾ

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರಜ ಗದ್ವಿಖ್ಯಾತ ಕಥಾಸಂಗ್ರಹ)	....	....		೧-
೨.	೭೭ ಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	....	....		೧-
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	....	....	....	೧-
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	....	....	....	೦-
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)		....		೧-
೬.	ಮುಗಿಲ ಜೇನ (ಉತ್ಸಾಹದಾಯಕವಾದ ಕವನ ಸಂಕಲನ)	....	....		೧-
೭.	ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು)	....	....	....	೦-
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	....		೧-
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	....	....	....	೧-
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	....	....	....	೧-
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	....	....		೧-
೧೨.	ಗರತಿಯ ಬಾಳು (ನಿತ್ಯ ಜೀವನದ ರಸಪುಷ್ಟಿ)	....	....	....	೧-
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಊರುಗೋಲು)	....	....	....	೦-
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	....	....	....	೧-
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	....	....	....	೧-

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆ.
ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿ

— ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯೂ ಕಾದಿಡಬೇಕಾದ ಕೃತಿಗಳು —

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ

ಭಾರತೀ ಸಾಹಿತ್ಯ ಭಂಡಾರ ಯರಸಾಳ

ಅವರಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೊರಟ

' ಜನರಲ್ ' ಕಥೆ-ಕವನ ಸಂಕಲನಗಳು ನಾಡಿನ ನಾಲ್ಕು ದಿಕ್ಕಿನಿಂದ ೨೫೦ ಸಾಹಿತಿಗಳ ಕೃತಿಗಳು ಹಾಗೂ ಪರಿ
ಮೊರೆಯುವ ಕೃತಿಗಳು ಮಾತ್ರ ಸೇರಿವೆ. ಹೊಸ ಪ್ರಯೋಗ

ಕಣಿಕಲ್ಲು [ಕಥಾಸಂಕಲನ] ಭಾಗ ೧ .... ೦—೧೨—೦ **ಪುಟಚೆಂಡು** [ಕವಿತಾ ಸಂಕಲನ] ಭಾಗ ೧....೦—
೧ ರಿಂದ ೪ ವರ್ಗಗಳಿಗಾಗಿ ೪೦ ಜನರ ಕಥೆಗಳು ೧ ರಿಂದ ೪ ವರ್ಗಗಳಿಗಾಗಿ ೧೨೪ ಜನರ ಕವಿತೆ
ಕಣಿಕಲ್ಲು ಭಾಗ ೨ .... ೦—೧೨—೦ **ಪುಟಚೆಂಡು** ಭಾಗ ೨ .... ೦—
೫ ರಿಂದ ೭ ವರ್ಗಗಳಿಗಾಗಿ ೩೭ ಜನರ ಕಥೆಗಳು. ೫ ರಿಂದ ೭ ವರ್ಗಗಳಿಗಾಗಿ ೧೦೪ ಜನರ ಕವಿತೆ

ವಿದ್ಯಾರ್ಥಿಗಳು, ವಿದ್ಯಾರ್ಥಿ-ವಾಚನಾಲಯ ಸಹಕಾರಿ ಸಂಘಗಳು ಹೆಚ್ಚು ಪ್ರತಿ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿ

— ವ್ಯಾಪಾರಿಗಳಿಗೂ ಧಾರಾಳವಾದ ಕಮಿಶನ್ —

ಭಾರತೀ ಸಾಹಿತ್ಯ ಭಂಡಾರ ಯ

ಅಂಚೆ :— ಮನಗೂಳಿ— **ಜಿ.** ವಿಜಾ

Printed by Shri S. F. Kattimani at Manohar Power Printing Press, Hubli. Edited and Pub
by Sjts S. P. Patil, B.M. Shintri, S. R. Tatti & Smti. P. A. Bhaskar at the Kannada Prat
Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

(ವಿಶೇಷ ಸಂಚಿಕೆ)

ಪ್ರಧಾನ ಸಂಪಾದಕರು: ಶ್ರೀ ಎಸ್. ಪಿ. ಪಾಟೀಲ

ಡಿ ಪತ್ರಿಕೆ
-೬-೦

ಅಕ್ಟೋಬರ ೧೯೫೫

ವಾ. ಚಂದಾ
೪-೦-೦

ಅವನಾರಮ್ಮ!

೧

ಅವನಾರಮ್ಮ ಅವನಾರಮ್ಮ
ಶಾಂತಿಯ ನಗೆಯನು ಸೂಸುವನು !
ಶುಭ್ರ ವಸ್ತ್ರವ ಧರಿಸಿಹನಾತ
ರಾಟೆಯ ತಿರುವುತ ಕುಳಿತಿಹನು !!

೨

ಬಟ್ಟೆಯ ಬಿಳುಪನು ತೋರುವನಾತ
ಹೊಟ್ಟೆಯ ಕಾಟವ ತಪ್ಪಿಸಲು !
ತುಷ್ಟತೆ ಜೀವನ ಗೈಯುತ ಶಾಂತಿಯ
ವೃಷ್ಟಿಯ ಗರೆಯುತಲನುದಿನದಿ !!

೩

ಉಡುಗೆಯು ಒಂದೇ ಹೊದಿಕೆಯು ಒಂದೇ
ಒಂದೇ ಬಣ್ಣದ ಬಟ್ಟೆಗಳು !
ನೋಡುವ ನೋಟವು ಎಲ್ಲರಿಗೊಂದೇ
ಭೇದವ ತೊರೆದಿಹ ಕಣ್ಣುಗಳು !!

೪

ಬಡಕಲು ದೇಹದ ಬಡವನು ಏನವ
ಮೊಗಕಳೆ ತೋರಿದೆ ಶಾಂತಿಯನು !
ಮುದಕನು ಆದರೂ ಕಾಂತಿಯ ವರುಣದಿ
ಮೆರೆಯುತ ಜಗವನೆ ನೋಡುವನು !!

೫

ಅರಿಯುವರಾರು ಅವನೊಳ ನುಡಿಯನು
ಅರಿಯದ ಮಾನವ ಬಾಳುವನೇ ?
ಅರಳಿದ ಮಲ್ಲಿಗೆ ಕಾಂತಿಯು ಬೀರುವ
ಶಾಂತಿ ಸಿನಾದವ ಬೆರೆಸಿಹನು !!

ಶ್ರೀ ಎಚ್. ಆರ್. ಬಂಡೀವಡ್ಡರ,
ಆಲವಗೇರಿ.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ; ಧಾರವಾಡ.

— ಸಹಸಂಪಾದಕರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ಶೆಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧ | **ಅಕ್ಟೋಬರ, ೧೯೫೫** | **ಸಂಚಿಕೆ ೫**

— ಪರಿವಿಡಿ —

೧	ಸಂಪಾದಕೀಯ	....	೨
೨	ನಯೀ-ತಾಲೀಮ ಅರ್ಥಾತ್ ಮೂಲ ಶಿಕ್ಷಣ	ಶ್ರೀ ಶಿಂತ್ರಿ ಬಸಪ್ಪನವರು	೫
೩	ಕರ್ನಾಟಕದಲ್ಲಿ ಜೀವನ ಶಿಕ್ಷಣದ ಮುನ್ನಡೆ	ಶ್ರೀ ಎಚ್. ಎ. ಸಿಗ್ಗಾಂವ	೯
೪	ಜೀವನ ಶಿಕ್ಷಣದಲ್ಲಿ ಸಮವಾಯ	ಶ್ರೀ ರೋಹಿಡೆಕರ ಶ್ಯಾಮರಾಯರು	೧೪
೫	ಮೂಲೋದ್ಯಮದಿಂದ ಜೀವನ ಶಿಕ್ಷಣ	ಶ್ರೀ ಮಿರ್ಜಿ ಅಣ್ಣಾರಾಯರು	೨೧
೬	ಕಾಯಕ ಶಿಕ್ಷಣ	ಡಾ. ಬಿ. ಎಸ್. ಗದ್ದಗೀಮಠ	೨೫
೭	ಮುಂಬಯಿ ರಾಜ್ಯದ ಮೂಲೋದ್ಯೋಗದ ಪ್ರದರ್ಶನ (ವರದಿ.)	ಶ್ರೀ ಎ. ರಾ. ರಾವೂತ	೩೧
೮	ಸ್ವಾವಲಂಬಿ ಶಿಕ್ಷಣ	ಶ್ರೀ ಮ. ಗು. ಹಂದ್ರಾಳ	೩೬
೯	ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (೧೯೫೬) ಯ ಪ್ರಕಟನೆ		೩೮
೧೦	ಮಹಾತ್ಮಾ ಗಾಂಧೀಜಿಯವರ ಜೀವನದಲ್ಲಿಯ ಮೈಲುಗಲ್ಲುಗಳು		೩೯
೧೧	ಮೂಲ ಶಿಕ್ಷಣ	ಶ್ರೀ ಎಸ್. ವ್ಹಿ. ಜೇವೂರ	೪೧
೧೨	ಪ್ರಾಥಮಿಕ ಶಿಕ್ಷಣ ಪ್ರಪಂಚ	....	೪೪
೧೩	ಅವನಾರಮ್ಮ !	ಶ್ರೀ ಎಚ್. ಆರ್. ಬಂಡಿವಡ್ಡರ.	ಕವ್ಹರ ೨

ಸಂಪಾದಕೀಯ

ರಾಷ್ಟ್ರಪಿತನ ಜಯಂತಿ

ಅಕ್ಟೋಬರ ೨ ನೆಯ ದಿನವು ಮಹಾತ್ಮರ ಜನ್ಮದಿನವು. ಅಂದಿನಿಂದ ದಿನಾಂಕ ೧೧ರ ವರೆಗೆ ನಮ್ಮ ದೇಶದ ಎಲ್ಲ ಕಡೆಗೂ ಮಹಾತ್ಮರ ವಿಧಾಯಕ ಕಾರ್ಯಕ್ರಮದ ಭಾಗವಾಗಿ ಅನೇಕ ಚಟುವಟಿಕೆಗಳು ಕೈಕೊಳ್ಳಲ್ಪಡುವವು. ಭಾರತೀಯರಿಗೆ ಮಹಾತ್ಮರ ಜಯಂತಿಯ ಆಚರಣೆಯೆಂದರೆ ಅದೊಂದು ರಾಷ್ಟ್ರೀಯ ವಿಧಾಯಕ ಉತ್ಸವವಾಗಿದೆ. ಈ ಹತ್ತು ದಿನಗಳಲ್ಲಿ ಗ್ರಾಮೋದ್ಧಾರ, ಖಾದಿಯ ಪ್ರಸಾರ, ಅಸ್ಪೃಶ್ಯತೆಯ ನಿವಾರಣೆ, ಶ್ರಮದಾನ ಮತ್ತು ಮಹಾತ್ಮರ ತತ್ವಗಳ ಪ್ರಚಾರ ಹಾಗೂ ಆಚರಣೆ ಇವೇ ಮೊದಲಾದ ಚಟುವಟಿಕೆಗಳು ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ನಡೆಯುವವು. ಗ್ರಾಮೋದ್ಧಾರವೇ ಮಹಾತ್ಮರ ಕನಸಾಗಿತ್ತು. ಭಾರತದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಬೇಕಾದರೆ ಹಳ್ಳಿಗಳ ಉದ್ಧಾರವಾಗಬೇಕೆಂದು ಅವರು ಪದೇ ಪದೇ ಹೇಳುತ್ತಿದ್ದರು. ತಮ್ಮ ದೀರ್ಘಾಯುಷ್ಯದ ಕೊನೆಯ ಬಹುಭಾಗವನ್ನು ಹಳ್ಳಿಗಳಲ್ಲಿಯೇ ಕಳೆದು ಅವುಗಳ ಪುನರುತ್ಥಾನಕ್ಕಾಗಿ ಮಾರ್ಗದರ್ಶನ ಮಾಡಿದರು. ರಾಷ್ಟ್ರೀಯ ಸಭೆಯ ಅಧಿವೇಶನಗಳು ಸಹ ಹಳ್ಳಿಗಳಲ್ಲಿಯೇ ನಡೆದವು. ಅವರ ವಿಧಾಯಕ ಕಾರ್ಯಕ್ರಮದಲ್ಲಿ ಗ್ರಾಮೋದ್ಧಾರಕ್ಕೆ ಮಹತ್ವದ ಸ್ಥಾನವಿದೆ. ಅಂತೆಯೇ ಸ್ವಾತಂತ್ರ್ಯ ಬಂದ ನಂತರ ಗ್ರಾಮಸುಧಾರಣಾ ಸಪ್ತಾಹವು ವಾರ್ಷಿಕೋತ್ಸವವಾಗಿ ಪರಿಣಮಿಸಿತು. ಈ ಸಪ್ತಾಹದಲ್ಲಿ ಹಳ್ಳಿಗರೂ, ಪಟ್ಟಣಿಗರೂ, ಶಾಲೆಕಾಲೇಜುಗಳ ಶಿಕ್ಷಕರೂ ವಿದ್ಯಾರ್ಥಿಗಳೂ ಬೇರೆ ಬೇರೆ ಖಾತೆಗಳ ಅಧಿಕಾರಿಗಳೂ, ಗೊಬ್ಬರ ಕುಣಿಗಳನ್ನು ತೋಡುವದು, ರಸ್ತೆಗಳನ್ನು ಸರಿಪಡಿಸುವದು, ಪಂಚವಾರ್ಷಿಕ ಯೋಜನೆ, ಸಾಕ್ಷರತೆಯ ಪ್ರಸಾರ, ಪಾನಪ್ರತಿಬಂಧ, ಹರಿಜನೋದ್ಧಾರ, ಪ್ರಥಮ ಚಿಕಿತ್ಸೆ, ಹಳ್ಳಿಗಳ ಸ್ವಚ್ಛತೆ, ಇತ್ಯಾದಿ ರಚನಾತ್ಮಕ ಕೆಲಸಗಳನ್ನು ಈ ಸಲವೂ ಮಾಡಿರಲಿಕ್ಕೆ ಸಾಕು. ಇಂಥ ಕಾರ್ಯಕ್ಕೆ ಹೆಚ್ಚಿನ ಉತ್ತೇಜನ ದೊರೆಯಲೆಂದು ಸರಕಾರದವರು ಅತ್ಯುತ್ತಮ ಕೆಲಸ ಮಾಡಿದ ಹಳ್ಳಿಗರಿಗೆ ಬಹುಮಾನ ಕೊಡುವ ಸ್ತುತ್ಯ ಉಪಕ್ರಮವನ್ನು ಇಟ್ಟುಕೊಂಡಿದ್ದಾರೆ. ಹೀಗೆ ಸಮಾಜ ಸರಕಾರಗಳೆರಡೂ ಸಹಕರಿಸಿ ಮಹಾತ್ಮರು ತೋರಿಸಿದ ಮಾರ್ಗವನ್ನೇ ಮುಂದುವರಿಸುವದೇ ಅವರ ಜಯಂತಿಯ ನಿಜವಾದ ಆಚರಣೆಯಾಗುವದರಲ್ಲಿ ಯಾವ ಸಂದೇಹವಿಲ್ಲ. ಇದುವೇ ಅವರ ದಿವ್ಯ ಜೀವನದಿಂದ ನಾವು ಕಲಿಯಬೇಕಾದುದು ಮತ್ತು ಈಗಿನ ಭಾರತಕ್ಕೆ ಬೇಕಾದುದು.

ಮುಂಬಯಿ ರಾಜ್ಯದ ಜೀವನಶಿಕ್ಷಣ ಸಂಸ್ಥೆಗಳಲ್ಲಿ ತಯಾರಾದ ವಸ್ತುಗಳ ಪ್ರದರ್ಶನ

ಸಪ್ಟಂಬರ ತಿಂಗಳ ದಿನಾಂಕ ೨೭ ರಂದು ನಮ್ಮ ರಾಜ್ಯದ ಜೀವನ ಶಿಕ್ಷಣ ಕಾಲೇಜುಗಳಲ್ಲಿ ಸಿದ್ಧವಾದ ವಸ್ತುಗಳ ಹಾಗೂ ಶೈಕ್ಷಣಿಕ ಉಪಕರಣಗಳ ಪ್ರದರ್ಶನವು ಪುಣೆಯಲ್ಲಿ ಜರುಗಿತು. ನಮ್ಮ ರಾಜ್ಯದ ಎಲ್ಲ ಜಿಲ್ಹೆಗಳ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಇದರಲ್ಲಿ ಭಾಗವಹಿಸಿದ್ದವು. ಚಿತ್ರಪಟ, ಆಲೇಖ, ನಕಾಶೆ, ಶೈಕ್ಷಣಿಕ ಉಪಕರಣ, ಖಾದಿ ಬಟ್ಟೆ, ರಟ್ಟಿನಮತ್ತು ಕಟ್ಟಿಗೆಯ ವಸ್ತುಗಳು, ಒಕ್ಕಲುತನದ ಉಪಕರಣ ಹಾಗೂ ಆವಿಷ್ಕರಣದ ಹೊತ್ತಿಗೆಗಳು ಪ್ರದರ್ಶನದಲ್ಲಿ ಇರಿಸಲ್ಪಟ್ಟಿದ್ದವು. ದಿ. ೨೭ರಂದು ಮುಂಜಾನೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮುರಾರಜಿ ದೇಸಾಯಿಯವರು ಪ್ರದರ್ಶನವನ್ನು ಉದ್ಘಾಟಿಸಿದರು. ಮುಖ್ಯಮಂತ್ರಿಗಳು ಮಾತಾಡುತ್ತ ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗ ಇವುಗಳ ಮಹತ್ವವನ್ನು ಸಭಿಕರಿಗೆ ತಿಳಿಸಿದರು. ಪ್ರಾಥಮಿಕ ಶಾಲೆಗಳನ್ನು

ಜೀವನಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವ ಕಾರ್ಯವು ಭರದಿಂದ ಸಾಗುವದೆಂದು ಹೇಳಿದರು. ಜೀವನ ಶಿಕ್ಷಣಕ್ಕೆ ಸಂಬಂಧಿಸಿದವರೆಲ್ಲರೂ ಅಚಲವಾದ ಶ್ರದ್ಧೆಯಿಂದಲೂ ನಿಸ್ವಾರ್ಥ ಬುದ್ಧಿಯಿಂದಲೂ ಅವಿಶ್ರಾಂತವಾಗಿಯೂ ದುಡಿಯುವದು ಅತ್ಯವಶ್ಯವೆಂದು ಸ್ಪಷ್ಟವಾಗಿ ಹೇಳಿದರು. ಯಾರಿಗೆ ಇದು ಸಾಧಿಸುವದಿಲ್ಲವೋ ಅವರೆಲ್ಲರಿಗೆ ಈ ಕ್ಷೇತ್ರದಲ್ಲಿ ಸ್ಥಾನವಿಲ್ಲವೆಂದು ಎಚ್ಚರಿಕೆ ಕೊಟ್ಟರು. ಜೀವನ ಶಿಕ್ಷಣವು ಭವ್ಯ ಭಾರತವನ್ನು ಕಟ್ಟುವದರಲ್ಲಿ ಯಾವ ಪಾತ್ರವನ್ನು ವಹಿಸುವದೆಂಬುದನ್ನೂ ಇಂಥ ಪ್ರದರ್ಶನಗಳಿಂದ ಜನಸಾಮಾನ್ಯರ ಮೇಲೆ ಆಗುವ ಪರಿಣಾಮಗಳನ್ನೂ ಕುರಿತು ಒಳ್ಳೆಯ ಅಂತಃಕರಣಪೂರ್ವಕವಾಗಿ ವಿವರಿಸಿ ಕೊನೆಗೆ ಪ್ರದರ್ಶನದ ಬಗೆಗೆ ತಮಗಾದ ಆನಂದವನ್ನು ಸಹ ವ್ಯಕ್ತಮಾಡಿದರು.

ಪುಣೆ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ

ಹೋದ ತಿಂಗಳ ೨೯ರಂದು ಪುಣೆ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಮಾತನಾಡುತ್ತ ನಮ್ಮ ರಾಜ್ಯಪಾಲರಾದ ಡಾ. ಹರೆಕೃಷ್ಣ ಮಹತಾಬರವರು ಶಿಕ್ಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ನಮ್ಮ ಮನಸ್ಸು ಹಳೆ ಹಾಗೂ ಹೊಸ ಪದ್ಧತಿಗಳ ನಡುವೆ ಸಿಕ್ಕು ದ್ವಿಭಾಗವಾಗಿದೆ ಎಂದರು. ಹಳ್ಳಿಗಳಿಗೂ ಪಟ್ಟಣಗಳಿಗೂ ಬೇರೆ ಬೇರೆಯಾದ ಶಿಕ್ಷಣವಿರಬೇಕೆಂಬ ವಿಚಾರವನ್ನು ಉಗ್ರವಾಗಿ ಖಂಡಿಸಿದರು. ವಿಷಯಗಳನ್ನು ಅನುಸರಿಸಿಯಾಗಲಿ ಇಲ್ಲವೆ ವೃತ್ತಿಗಳಿಗನುಸರಿಸಿಯಾಗಲಿ ಬೇರೆ ಬೇರೆ ಮಾದರಿಯ ಶಿಕ್ಷಣ ರೀತಿಗಳಿರುವದು ತಪ್ಪೆಂದು ಹೇಳಿದರು. ಪಟ್ಟಣಗಳಲ್ಲಿರುವ ಜನಸಂಖ್ಯೆಯ ಬಹುಭಾಗವು ಹಳ್ಳಿಗಳಿಂದಲೇ ಬಂದಿರುವದರಿಂದ ನಗರವಾಸಿಗಳಿಗೆ ಲಾಭದಾಯಕ ವೃತ್ತಿಗಳನ್ನು ಮೀಸಲಿರಿಸಿ ಹಳ್ಳಿಯ ಜನರಿಗೆ ತಮ್ಮ ಜೀವನಕ್ಕೆ ಅವಶ್ಯವಾದ ಸಾಮಾನ್ಯ ಶಿಕ್ಷಣ ಕೊಡುವದು ಯೋಗ್ಯವಾಗಲಾರದೆಂದೂ ಹಾಗೆ ಮಾಡುವದರಿಂದ ಹಳ್ಳಿ ಹಾಗು ಪಟ್ಟಣಗಳ ನಡುವಿನ ಅಂತರವು ಹೆಚ್ಚಾಗಬಹುದೆಂದೂ ತಿಳಿಸಿದರು. ಇದರಿಂದ ಅನೇಕ ಸಾಮಾಜಿಕ ಸಮಸ್ಯೆಗಳು ಉದ್ಭವಿಸುವವೆಂದು ಸೂಚಿಸಿದರು. ಅವರು ದೇಶದ ಬಡತನ ಹಾಗೂ ನಿರುದ್ಯೋಗಿಗಳಿಂದ ಉಂಟಾದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವದಕ್ಕೆ ಬೇರೆ ಬೇರೆ ಮಾದರಿಯ ಶಿಕ್ಷಣ ಪದ್ಧತಿಗಳನ್ನು ಕಾರ್ಯಗತ ಮಾಡಲು ಬಂದಿರಬಹುದೆಂದು ಹೇಳಿ ತಮ್ಮ ಭಾಷಣ ಮುಗಿಸಿದರು.

ಕೇಂದ್ರ ಗೃಹಮಂತ್ರಿ ಪಂಡಿತ ಪಂತರ ಕರ್ನಾಟಕ ಸಂಚಾರ

ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿ ಮುಂದಿನ ತಿಂಗಳ ಮೊದಲನೆಯ ವಾರದಲ್ಲಿ ಪಂಡಿತ ವಲ್ಲಭ ಪಂತರು ಧಾರವಾಡಕ್ಕೆ ಬರುತ್ತಿರುವುದು ಎಲ್ಲರಿಗೂ ಸಂತೋಷದ ಸುದ್ದಿಯಾಗಿರಲು ಸಾಕು. ಅವರು ಇಲ್ಲಿಗೆ ಬರುತ್ತಿರುವದು ಇದೇ ಮೊದಲನೆಯ ಸಾರೆಯಾಗಿದ್ದರಿಂದ ಅವರ ಭೆಟ್ಟಿಗೆ ಹೆಚ್ಚಿನ ಕಳೆ ಹಾಗೂ ಮಹತ್ವ ಬಂದಿರಬಹುದು. ಎಲ್ಲರಿಗೂ ಗೊತ್ತಿದ್ದಂತೆ ಅವರೊಬ್ಬ ಮೇಧಾವಿ ರಾಜಕಾರಣಿ; ಅರ್ಥ ಹಾಗೂ ಆಡಳಿತ ಶಾಸ್ತ್ರ ಪಾರಂಗತರಾಗಿದ್ದಾರೆ. ೧೯೩೭ ರಿಂದ ತಮ್ಮ ಪ್ರಾಂತವಾದ ಉತ್ತರ ಪ್ರದೇಶದ ಆಡಳಿತವನ್ನು ಒಳ್ಳೆಯ ದಕ್ಷತೆಯಿಂದ ಸಾಗಿಸಿದ ರಾಜನೀತಿ ಪ್ರವೀಣರಿವರು. ಮುಖ್ಯ ಪ್ರಧಾನರ ಆಗ್ರಹದ ಕರೆಗೆ ಓಗೊಟ್ಟು ಕೇಂದ್ರಕ್ಕೆ ಹೋಗಿ ಭಾರತದ ರಾಜಕಾರಣದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಇಂಥ ಪ್ರತಿಭಾವಂತ ಅತಿಥಿಗಳಿಗೆ ಕನ್ನಡಿಗರು ಹೃತ್ಪೂರ್ವಕ ಸ್ವಾಗತವನ್ನು ಕೋರದಿರರು.

ನಮ್ಮ ಪತ್ರಿಕೆಯ ವಿಶೇಷ ಸಂಚಿಕೆ

ಈ ಮೊದಲು ಮೂರು ತಿಂಗಳಿಗೊಮ್ಮೆ ನಮ್ಮ ಪತ್ರಿಕೆಯ ನಿತ್ಯದ ಪುಟಗಳನ್ನು ಹೆಚ್ಚಿಸಿ ಮಹತ್ವದ ವಿಷಯಗಳನ್ನು ನಮ್ಮ ಓದುಗರ ಗಮನಕ್ಕೆ ತರುತ್ತ ಬಂದ ಈ ಬಗೆಯನ್ನು ಬದಲಿಸಿ ಇನ್ನು ಮುಂದೆ ಆರ್ಕ್ಟೋಬರ ತಿಂಗಳ ಸಂಚಿಕೆಯೊಂದರಲ್ಲಿಯೇ ಸುಮಾರು ೧೬ ಪುಟಗಳನ್ನು ಹೆಚ್ಚಿಸಿ ಅದನ್ನೇ ವಿಶೇಷ ಸಂಚಿಕೆಯನ್ನಾಗಿ ಪರಿವರ್ತಿಸಬೇಕೆನ್ನುವ ನಮ್ಮ ಹೊಸ ಯೋಜನೆಯು ಸಾಧ್ಯವಾದುದಕ್ಕೆ ನಮಗೆ ತುಂಬ ಸಂತೋಷ. ಈ ಸಂಚಿಕೆಯನ್ನು ಹೆಚ್ಚು ಆಕರ್ಷಣೀಯವಾಗುವಂತೆ ಮಾಡುವ

ಉದ್ದೇಶದಿಂದ ಶಿಕ್ಷಣದ ವಿವಿಧ ರಂಗಗಳಲ್ಲಿ ಕೆಲಸ ಮಾಡುತ್ತಿರುವ ಮಹನೀಯರಿಗೆ ತಮ್ಮ ಅನುಭವದ ಲಾಭವನ್ನು ನಮ್ಮ ಓದುಗರಲ್ಲಿ ಪ್ರಾಮುಖ್ಯರಾದ ಪ್ರಾಥಮಿಕ ಶಿಕ್ಷಕರಿಗೆ ನೀಡಬೇಕೆಂದು ಬೇಡಿಕೊಂಡಂತೆ ಅನೇಕ ಸಹೋದ್ಯೋಗಿಗಳು ತಕ್ಕ ಪರಿಶ್ರಮ ವಹಿಸಿ ಲೇಖಗಳನ್ನು ಕಳಿಸಿ ಮಹದುಪಕಾರ ಮಾಡಿದ್ದಾರೆ. ಈ ವಿಶೇಷ ಸಂಚಿಕೆಯಲ್ಲಿ 'ಜೀವನ ಶಿಕ್ಷಣಕ್ಕೆ ಸಂಬಂಧಿಸಿದವುಗಳನ್ನು ಮಾತ್ರ ಸಮಾವೇಶ ಮಾಡಲಾಗಿದೆ. ಉಳಿದವುಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಸಿದ್ಧಿಪಡಿಸುವೆವು. ಈ ನಮ್ಮ ಯೋಜನೆಯು ಕಾರ್ಯಗತವಾಗಲು ಅವಶ್ಯವಾದ ಸಹಕಾರಗಳನ್ನು ನೀಡಿದ ಹಾಗೂ ಲೇಖಗಳನ್ನು ಕಳಿಸಿ ನಮಗೆ ಪ್ರತ್ಯಕ್ಷ ಸಹಾಯ ಸಲ್ಲಿಸಿದ ಮಹನೀಯರೆಲ್ಲರ ಉಪಕಾರವನ್ನು ಸಂಪಾದಕ ಮಂಡಲವು ಹೃತ್ಪೂರ್ವಕವಾಗಿ ಸ್ಮರಿಸುತ್ತದೆ. ಇದರಂತೆ ಮುಂದೆಯೂ ಸಹ ಶಿಕ್ಷಣಾಭಿಮಾನಿಗಳೆಲ್ಲರೂ ತಮ್ಮ ನೆರವು ನೀಡುವರೆಂದು ನಾವು ನೆರೆ ನಂಬಿದ್ದೇವೆ.

ರಾಜ್ಯ ಪುನರ್ಘಟನಾ ಆಯೋಗದ ಶಿಫಾರಸು

ಭಾರತದ ಒಕ್ಕೂಟ ಹಾಗು ಘಟಕಗಳ ಕಲ್ಯಾಣವನ್ನು ಸಾಧಿಸಲು ಅನುಕೂಲವಾಗುವಂತೆ, ಒಕ್ಕೂಟದ ರಾಜ್ಯಗಳ ಪುನರ್ಘಟನೆಯ ಸಮಸ್ಯೆಯನ್ನು ಇಡಿಯಾಗಿ ಪರಿಶೀಲಿಸಿ ವರದಿ ಮಾಡಲು ಕೇಂದ್ರ ಸರಕಾರದಿಂದ ೧೯೫೩ರ ಡಿಸೆಂಬರ ತಿಂಗಳಲ್ಲಿ ಅತ್ಯುನ್ನತಾಧಿಕಾರವುಳ್ಳ ಸಮಿತಿಯು ನೇಮಿಸಲ್ಪಟ್ಟಿತ್ತು. ಶ್ರೀ ಸೈಯದ ಫಜಲ ಅಲಿ, ಶ್ರೀ ಹೃದಯನಾಥ ಕುಂಝ್ರು ಹಾಗು ಶ್ರೀ ಪಣಿಕ್ಕರ ಈ ಮೂವರು ಆ ಆಯೋಗದ ಸದಸ್ಯರಾಗಿದ್ದು ಶ್ರೀ ಸೈಯದ ಫಜಲ ಅಲಿಯವರೇ ಅದರ ಅಧ್ಯಕ್ಷರಾಗಿದ್ದರು. ಅವರು ತಮ್ಮ ವರದಿಯನ್ನು ೧೯೫೫ ಸಪ್ಟಂಬರ ತಿಂಗಳ ಕೊನೆಗೆ ಕೇಂದ್ರ ಸರಕಾರಕ್ಕೆ ಸಾದರ ಪಡಿಸಿದರು. ಇದೇ ತಿಂಗಳು ದಿನಾಂಕ ೧೦ರಂದು ಅವರು ಮಾಡಿದ ಶಿಫಾರಸುಗಳು ಪ್ರಸಿದ್ಧಿಸಲ್ಪಟ್ಟಿರುವವು. ಸಮಿತಿಯವರು ಇಡೀ ಸಮಸ್ಯೆಯನ್ನು ಆಡಳಿತದ ಅನುಕೂಲತೆ, ಆರ್ಥಿಕ ಸಂಬಂಧ, ಭಾಷೆಯ ಸೌಕರ್ಯ ಹಾಗೂ ಒಕ್ಕೂಟದ ಐಕ್ಯತೆ ಇವೆಲ್ಲವುಗಳ ದೃಷ್ಟಿಯಿಂದ ಪರಿಶೀಲಿಸಿ ಈಗಿದ್ದ 'ಅ' 'ಬ' 'ಕ' ಹಾಗು 'ಡ' ವರ್ಗದ ೨೭ ಘಟಕಗಳನ್ನು ಪುನರ್ಘಟಿಸಿ ಕೇವಲ ೧೬ ರಾಜ್ಯಗಳನ್ನು ಸೂಚಿಸಿದ್ದಾರೆ. ದಿಲ್ಲಿ, ಮಣಿಪುರ ಹಾಗೂ ಅಂದಮಾನ ನಿಕೋಬಾರ ಇವುಗಳ ಆಡಳಿತೆಯು ನೇರವಾಗಿ ಕೇಂದ್ರ ಸರಕಾರದಿಂದ ನಡೆಯುವದು. ಇನ್ನು ಮುಂದೆ ಭಾರತದಲ್ಲಿರತಕ್ಕ ೧೬ ರಾಜ್ಯಗಳು ಇಂತಿವೆ, (೧) ಮದ್ರಾಸ, (೨) ಕೇರಳ, (೩) ಕರ್ನಾಟಕ, (೪) ಹೈದರಾಬಾದ, (೫) ಆಂಧ್ರ, (೬) ಮುಂಬಯಿ, (೭) ವಿದರ್ಭ, (೮) ಮಧ್ಯಪ್ರದೇಶ, (೯) ರಾಜಸ್ಥಾನ, (೧೦) ಪಂಜಾಬ, (೧೧) ಉತ್ತರ ಪ್ರದೇಶ, (೧೨) ಬಿಹಾರ, (೧೩) ಪಶ್ಚಿಮ ಬಂಗಾಲ, (೧೪) ಆಸಾಮ, (೧೫) ಓಡಿಸಾ, ಮತ್ತು (೧೬) ಜಮ್ಮು-ಕಾಶ್ಮೀರ. ಆಯೋಗದ ಶಿಫಾರಸಿನ ಪ್ರಕಾರ ರಾಜಪ್ರಮುಖರ ಹುದ್ದೆಗಳು ಕೊನೆಗೊಳ್ಳುವವಾದರೂ ಅವರ ವೈಯಕ್ತಿಕ ಸ್ಥಾನಮಾನಗಳು ಹಾಗೆಯೇ ಉಳಿಯುವವು.

ಕನ್ನಡಿಗರ ನಲವತ್ತು ವರುಷಗಳ ಕನಸು ನನಸಾಯಿತು. ಹೊಸ ಕರ್ನಾಟಕವು ಸುಮಾರು ೭೬೭೩೦ ಚೌ. ಮೈಲುಗಳ ಕ್ಷೇತ್ರವುಳ್ಳದ್ದಾಗಿ ಅದರ ಜನಸಂಖ್ಯೆ ೧ಕೋಟಿ ೯೦ ಲಕ್ಷವಾಗುವದು. ಅದರಲ್ಲಿ ಬಳ್ಳಾರಿ, ಹೊಸಪೇಟೆ, ಶಿರಗುಪ್ಪ ಹಾಗು ಮಲ್ಲಾಪುರವ್ ಇವುಗಳನ್ನು ಬಿಟ್ಟು ಉಳಿದ ಮೈಸೂರು, ಚಂದಗಡ ತಾಲೂಕನ್ನು ಹೊರತುಪಡಿಸಿ ಉಳಿದ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಹೆಗಳು, ಕಾಸರಗೋಡ ತಾಲೂಕನ್ನು ಬಿಟ್ಟು ಉಳಿದ ಮಂಗಳೂರ ಜಿಲ್ಹೆ, ಈಗಿನ ಹೈದರಾಬಾದ ರಾಜ್ಯದ ರಾಯಚೂರ ಹಾಗು ಕಲಬುರ್ಗಿ ಜಿಲ್ಹೆಗಳು ಕೊಯಿಮತ್ತೂರ ಜಿಲ್ಹೆಯ ಕೊಳ್ಳೆಗಾಲ ತಾಲೂಕು ಹಾಗು ಕೊಡಗು ಇಷ್ಟೆಲ್ಲ ಭಾಗಗಳು ಸಮಾವೇಶವಾಗುವವು. ಬಳ್ಳಾರಿಯನ್ನು ಆಂಧ್ರಕ್ಕೆ ಕೊಡಮಾಡಿದ ಬಗ್ಗೆ ಆಯೋಗದವರು ತಮ್ಮ ಕಾರಣಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಸ್ವತಂತ್ರ ಕರ್ನಾಟಕ ಪ್ರಾಂತವನ್ನು ಪಡೆಯಲು ಕನ್ನಡಿಗರು ಮಾಡಿದ ದೀರ್ಘಕಾಲದ ಪ್ರಯತ್ನಗಳು ಈಗ ಫಲಿಸಿದವು. ಈ ಸಂದರ್ಭದಲ್ಲಿ ಕರ್ನಾಟಕದ ಏಕೀಕರಣದ ಸಲುವಾಗಿ ಪರಿಶ್ರಮಿಸಿದ ಎಲ್ಲ ಮಹನೀಯರ ಮಹತ್ಕಾರ್ಯದ ಅರಿವಾಗದಿರದು.





...ರ್ಯದರ್ಶಿ
...ಾಡ.
...ದು ಆಚಾರ್ಯ
...” ಪತ್ರಿಕೆಯ
...ಅನುವಾದವು.]
...ಶೀವು ಅಥವಾ
...ಟ್ಟಳವಾದ ಕಲ್ಪ
...ಟ್ಟುಕೊಂಡು
...ಲೆ ನೂಲಲಿಕ್ಕೆ
... ಜ್ಞಾನವನ್ನು
...ವಾಯಿತೆಂದು
...ುವಿಕೆ ಮತ್ತು
...ರೈಸಿದರೆ ಅದು
... ತಿಳಿವಳಿಕೆ.
...ಡಿ ವಿಷಯಗ
...ರ್ಣ ಮೂಲ
... ಸಂಬಂಧೀಕ
...ಲ್ಲವೋ ಎಂಬು
...ವಷ್ಟೇ ಅಲ್ಲದೆ
...ವರ ಗ್ರಹಿಕೆ.
...ಭಿಪ್ರಾಯಗಳು
... ಬಗೆಗೆ ಸ್ವಲ್ಪ
...ಂದ ಹೊಸ
...ನಯೀ ತಾಲೀ
...ಂವ ಮಕ್ಕಳು

ಉದ್ದೇಶದಿಂದ ಶಿಕ್ಷಣದ ವಿವಿಧ ರಂಗಗಳಲ್ಲಿ ಕೆಲಸ ಮಾಡುತ್ತಿರುವ ಮಹನೀಯರಿಗೆ ತಮ್ಮ ಅನುಭವದ ಲಾಭವನ್ನು ನಮ್ಮ ಓದುಗರಲ್ಲಿ ಪ್ರಮುಖ್ಯರಾದ ಪ್ರಾಥಮಿಕ ಶಿಕ್ಷಕರಿಗೆ ನೀಡಬೇಕೆಂದು ಬೇಡಿಕೊಂಡಂತೆ ಅನೇಕ ಸಹೋದ್ಯೋಗಿಗಳು ತಕ್ಕ ಪರಿಶ್ರಮ ವಹಿಸಿ ಲೇಖಗಳನ್ನು ಕಳಿಸಿ ಮಹದುಪಕಾರ ಮಾಡಿದ್ದಾರೆ. ಈ ವಿಶೇಷ ಸಂಚಿಕೆಯಲ್ಲಿ 'ಜೀವನ ಶಿಕ್ಷಣಕ್ಕೆ ಸಂಬಂಧಿಸಿದವುಗಳನ್ನು ಮಾತ್ರ ಸಮಾವೇಶ ಮಾಡಲಾಗಿದೆ. ಉಳಿದವುಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಸಿದ್ಧಿಸುವೆವು. ಈ ನಮ್ಮ ಯೋಜನೆಯು ಕಾರ್ಯಗತವಾಗಲು ಅವಶ್ಯವಾದ ಸಹಕಾರಗಳನ್ನು ನೀಡಿದ ಹಾಗೂ ಲೇಖಗಳನ್ನು ಕಳಿಸಿ ನಮಗೆ ಪ್ರತ್ಯಕ್ಷ ಸಹಾಯ ಸಲ್ಲಿಸಿದ ಮಹನೀಯರೆಲ್ಲರ ಉಪಕಾರವನ್ನು ಸಂಪಾದಕ ಮಂಡಲವು ಹೃತ್ಪೂರ್ವಕವಾಗಿ ಸ್ಮರಿಸುತ್ತದೆ. ಇದರಂತೆ ಮುಂದೆಯೂ ಸಹ ಶಿಕ್ಷಣಾಭಿಮಾನಿಗಳೆಲ್ಲರೂ ತಮ್ಮ ನೆರವು ನೀಡುವರೆಂದು ನಾವು ನೆರೆ ನಂಬಿದ್ದೇವೆ.

ರಾಜ್ಯ ಪುನರ್ಘಟನಾ ಆಯೋಗದ ಶಿಫಾರಸು

ಭಾರತದ ಒಕ್ಕೂಟ ಹಾಗು ಘಟಕಗಳ ಕಲ್ಯಾಣವನ್ನು ಸಾಧಿಸಲು ಅನುಕೂಲವಾಗುವಂತೆ, ಒಕ್ಕೂಟದ ರಾಜ್ಯಗಳ ಪುನರ್ಘಟನೆಯ ಸಮಸ್ಯೆಯನ್ನು ಇಡಿಯಾಗಿ ಪರಿಶೀಲಿಸಿ ವರದಿ ಮಾಡಲು ಕೇಂದ್ರ ಸರಕಾರದಿಂದ ೧೯೫೩ರ ಡಿಸೆಂಬರ ತಿಂಗಳಲ್ಲಿ ಅತ್ಯುನ್ನತಾಧಿಕಾರವುಳ್ಳ ಸಮಿತಿಯು ನೇಮಿಸಲ್ಪಟ್ಟಿತ್ತು. ಶ್ರೀ ಸೈಯದ ಫಜಲ ಅಲಿ, ಶ್ರೀ ಹೃದಯನಾಥ ಕುಂಝ್ರು ಹಾಗು ಶ್ರೀ ಪಣಿಕ್ಕರ ಈ ಮೂವರು ಆ ಆಯೋಗದ ಸದಸ್ಯರಾಗಿದ್ದು ಶ್ರೀ ಸೈಯದ ಫಜಲ ಅಲಿಯವರೇ ಅದರ ಅಧ್ಯಕ್ಷರಾಗಿದ್ದರು. ಅವರು ತಮ್ಮ ವರದಿಯನ್ನು ೧೯೫೫ ಸಪ್ಟಂಬರ ತಿಂಗಳ ಕೊನೆಗೆ ಕೇಂದ್ರ ಸರಕಾರಕ್ಕೆ ಸಾದರ ಪಡಿಸಿದರು. ಇದೇ ತಿಂಗಳು ದಿನಾಂಕ ೧೦ರಂದು ಅವರು ಮಾಡಿದ ಶಿಫಾರಸುಗಳು ಪ್ರಸಿದ್ಧಿ ಸಲ್ಪಟ್ಟಿರುವವು. ಸಮಿತಿಯವರು ಇಡೀ ಸಮಸ್ಯೆಯನ್ನು ಆಡಳಿತದ ಅನುಕೂಲತೆ, ಆರ್ಥಿಕ ಸಂಬಂಧ, ಭಾಷೆಯ ಸೌಕರ್ಯ ಹಾಗೂ ಒಕ್ಕೂಟದ ಐಕ್ಯತೆ ಇವೆಲ್ಲವುಗಳ ದೃಷ್ಟಿಯಿಂದ ಪರಿಶೀಲಿಸಿ ಈಗಿದ್ದ 'ಅ' 'ಬ' 'ಕ' ಹಾಗು 'ಡ' ವರ್ಗದ ೨೭ ಘಟಕಗಳನ್ನು ಪುನರ್ಘಟಿಸಿ ಕೇವಲ ೧೬ ರಾಜ್ಯಗಳನ್ನು ಸೂಚಿಸಿದ್ದಾರೆ. ದಿಲ್ಲಿ, ಮಣಿಪುರ ಹಾಗೂ ಅಂದಮಾನ ನಿಕೋಬಾರ ಇವುಗಳ ಆಡಳಿತೆಯು ನೇರವಾಗಿ ಕೇಂದ್ರ ಸರಕಾರದಿಂದ ನಡೆಯುವದು. ಇನ್ನು ಮುಂದೆ ಭಾರತದಲ್ಲಿರತಕ್ಕ ೧೬ ರಾಜ್ಯಗಳು ಇಂತಿವೆ, (೧) ಮದ್ರಾಸ, (೨) ಕೇರಳ, (೩) ಕರ್ನಾಟಕ, (೪) ಹೈದರಾಬಾದ, (೫) ಆಂಧ್ರ, (೬) ಮುಂಬಯಿ, (೭) ವಿದರ್ಭ, (೮) ಮಧ್ಯಪ್ರದೇಶ, (೯) ರಾಜಸ್ಥಾನ, (೧೦) ಪಂಜಾಬ, (೧೧) ಉತ್ತರ ಪ್ರದೇಶ, (೧೨) ಬಿಹಾರ, (೧೩) ಪಶ್ಚಿಮ ಬಂಗಾಲ, (೧೪) ಆಸಾಮ, (೧೫) ಓಡಿಸಾ, ಮತ್ತು (೧೬) ಜಮ್ಮು-ಕಾಶ್ಮೀರ. ಆಯೋಗದ ಶಿಫಾರಸಿನ ಪ್ರಕಾರ ರಾಜಪ್ರಮುಖರ ಹುದ್ದೆಗಳು ಕೊನೆಗೊಳ್ಳುವವಾದರೂ ಅವರ ವೈಯಕ್ತಿಕ ಸ್ಥಾನಮಾನಗಳು ಹಾಗೆಯೇ ಉಳಿಯುವವು.

ಕನ್ನಡಿಗರ ನಲವತ್ತು ವರುಷಗಳ ಕನಸು ನನಸಾಯಿತು. ಹೊಸ ಕರ್ನಾಟಕವು ಸುಮಾರು ೭೨೩೦ ಚೌ. ಮೈಲುಗಳ ಕ್ಷೇತ್ರವುಳ್ಳದ್ದಾಗಿ ಅದರ ಜನಸಂಖ್ಯೆ ೧ಕೋಟಿ ೯೦ ಲಕ್ಷವಾಗುವದು. ಅದರಲ್ಲಿ ಬಳ್ಳಾರಿ, ಹೊಸಪೇಟೆ, ಶಿರಗುಪ್ಪ ಹಾಗು ಮಲ್ಲಾಪುರಮ್ ಇವುಗಳನ್ನು ಬಿಟ್ಟು ಉಳಿದ ಮೈಸೂರು, ಚಂದಗಡ ತಾಲೂಕನ್ನು ಹೊರತುಪಡಿಸಿ ಉಳಿದ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಹೆಗಳು, ಕಾಸರಗೋಡ ತಾಲೂಕನ್ನು ಬಿಟ್ಟು ಉಳಿದ ಮಂಗಳೂರ ಜಿಲ್ಹೆ, ಈಗಿನ ಹೈದರಾಬಾದ ರಾಜ್ಯದ ರಾಯಚೂರ ಹಾಗು ಕಲಬುರ್ಗಿ ಜಿಲ್ಹೆಗಳು ಕೊಯಿಮತ್ತೂರ ಜಿಲ್ಹೆಯ ಕೊಳ್ಳೆಗಾಲ ತಾಲೂಕು ಹಾಗು ಕೊಡಗು ಇಷ್ಟೆಲ್ಲ ಭಾಗಗಳು ಸಮಾವೇಶವಾಗುವವು. ಬಳ್ಳಾರಿಯನ್ನು ಆಂಧ್ರಕ್ಕೆ ಕೊಡಮಾಡಿದ ಬಗ್ಗೆ ಆಯೋಗದವರು ತಮ್ಮ ಕಾರಣಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಸ್ವತಂತ್ರ ಕರ್ನಾಟಕ ಪ್ರಾಂತವನ್ನು ಪಡೆಯಲು ಕನ್ನಡಿಗರು ಮಾಡಿದ ದೀರ್ಘಕಾಲದ ಪ್ರಯತ್ನಗಳು ಈಗ ಫಲಿಸಿದವು. ಈ ಸಂದರ್ಭದಲ್ಲಿ ಕರ್ನಾಟಕದ ಏಕೀಕರಣದ ಸಲುವಾಗಿ ಪರಿಶ್ರಮಿಸಿದ ಎಲ್ಲ ಮಹನೀಯರ ಮಹತ್ಕಾರ್ಯದ ಅರಿವಾಗದಿರದು.

ರಾಜ್ಯಪುನರ್ಘಟನಾ ಆಯೋಗದವರು ಸೂಚಿಸಿದಂತೆ ಸಿದ್ಧಪಡಿಸಿದ

೧. ನವಭಾರತ ೨. ಏಕೀಕೃತ ಕರ್ನಾಟಕ

—ಕರ್ಮವೀರದ ಕೃಪೆಯಿಂದ.




ನವ ಕರ್ನಾಟಕ
ರಾಜ್ಯಪುನರ್ಘಟನಾ ಆಯೋಗದ
ಸೂಚನೆ ಮೇರೆಗೆ
ಇದು ಹೊಸಮುಂಬಯಿ ರಾಜ್ಯಕ್ಕೆ ಕೊಡಮಾಡಿದ ಚಂದಗಡ ತಾಲೂಕು.
ಕಲಬುರ್ಗಿ
ವಿಜಾಪೂರ
ಬಾಗಲಕೋಟೆ
ರಾಯಚೂರು
ಬೆಳಗಾವಿ
ಆದವಾನಿ
ಆಲೂರು
ಹೊಸಪೇಟೆ
ಬಳ್ಳಾರಿ
ಧಾರವಾಡ
ಹುಬ್ಬಳ್ಳಿ
ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ, ರಾಯದುರ್ಗ ತಾಲೂಕುಗಳು ಮೊದಲೆ ಆಂಧ್ರಕ್ಕೆ ಹೋಗಿದ್ದವು
ಉಳಿದ ಬಳ್ಳಾರಿ
ಕೊಟ್ಟೂರು
ಕಾರವಾರ
ಈಗ ಆಂಧ್ರಕ್ಕೆ ಕೊಡಮಾಡಿರುವ ಬಳ್ಳಾರಿ, ಹೊಸಪೇಟೆ, ಸಿರಗುಪ್ಪಿ ತಾಲೂಕುಗಳು ಇಲ್ಲಿವೆ
ದಾವಣಗೆರೆ
ಚಿತ್ರದುರ್ಗ
ಭಟಕಳ
ಶಿವಮೊಗ್ಗ
ಭದ್ರಾವತಿ
ಕಡೂರು
ಚಿಕ್ಕಮಗಳೂರು
ತುಮಕೂರು
ಕೋಲಾರ
ಬೆಂಗಳೂರು
ಕೋಲಾರಗಣಿ
ಹಾಸನ
ಮಂಗಳೂರು
ಮಂಡ್ಯ
ಕಾಸರಗೋಡು
ಮಡಿಕೇರಿ
ಕೊಡಗು
ಮೈಸೂರು
ಕೊಳ್ಳೆಗಾಲ
ಇದು ಮದ್ರಾಸಿನಿಂದ ಕರ್ನಾಟಕಕ್ಕೆ ಕೊಡಮಾಡಿದ ಕೊಳ್ಳೆಗಾಲ
ಹಳೇ ರಾಜ್ಯಗಳು.
ಸಂಕಲ್ಪಿತ ಕರ್ನಾಟಕದ ಗಡಿಗಳು.
ಜಿಲ್ಲಾ ಗಡಿಗಳು
ಇದು ಕೇರಳಕ್ಕೆ ಕೊಡಮಾಡಿದ ಕಾಸರಗೋಡು

ನಯೀ ತಾಲೀಮ ಅರ್ಥಾತ್ ಮೂಲಶಿಕ್ಷಣ

ಅನುವಾದಕರು:— ಶ್ರೀ ಶಿಂತ್ರಿ ಬಸಪ್ಪನವರು, ಬಿ. ಎ., ಬಿ. ಟಿ.

ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

[ಓರಿಸಾ ರಾಜ್ಯದಲ್ಲಿಯ ರಾಜಸುನಖಲಾ ಎಂಬಲ್ಲಿ ದಿನಾಂಕ ೧೭-೪-೧೯೫೫ರಂದು ಆಚಾರ್ಯ ವಿನೋಬಾ ಭಾವೆಯವರು ಶಿಕ್ಷಕ-ಶಿಕ್ಷಕಿಯರಿಗೋಸ್ಕರ ಹಿಂದೀಯಲ್ಲಿ ಮಾಡಿದ ಭಾಷಣವು "ಹರಿಜನ" ಪತ್ರಿಕೆಯ ೧೮-೬-೧೯೫೫ ದಿನಾಂಕದ ಸಂಚಿಕೆಯಲ್ಲಿ ಇಂಗ್ಲೀಷಿನಲ್ಲಿ ಮುದ್ರಿತವಾಗಿದೆ. ಪ್ರಸ್ತುತ ಲೇಖವು ಅದರ ಅನುವಾದವು.]

ಹೋದ ಸಲ ಆವಡಿಯಲ್ಲಿ ಕಲೆತ ಅಖಿಲ ಭಾರತ ಕಾಂಗ್ರೆಸ್ಸಿನ **ಅಧಿನಿವೇಶನದಲ್ಲಿ** ನಯೀ ತಾಲೀಮದ ಬಗೆಗೊಂದು **ಗೊತ್ತುವಳಿಯು** ಪಾಸು ಮಾಡಲ್ಪಟ್ಟಿದೆಯಷ್ಟೇ. ಅದು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲ ನೆಹರೂರವರಿಂದ **ಮುಂಡಿಸಲ್ಪಟ್ಟಿ**ತು. ಹತ್ತು ವರ್ಷಗಳ ನಂತರ ಮೂಲ ಶಿಕ್ಷಣವನ್ನು ತನ್ನ ಶಿಕ್ಷಣಕ್ರಮವನ್ನಾಗಿ ಸರಕಾರವು ಸ್ವೀಕರಿಸುವದೆಂದು ಆ ಗೊತ್ತುವಳಿಯಲ್ಲಿ ಸಾರಲಾಗಿದೆ. ಆದುದರಿಂದ, **ಈಗ** ನಡೆಸಲ್ಪಡುವ ನಯೀ ತಾಲೀಮ (ಹೊಸ ಶಿಕ್ಷಣ)ದ ಸಾಲೆಗಳು ಮಾದರಿಯ ಮೂಲ ಶಿಕ್ಷಣ ಸಾಲೆಗಳಾಗಬೇಕು. ಹೀಗಾದ ಮಾತ್ರಕ್ಕೇನೇ ಹೊಸ ಶಿಕ್ಷಣವು ಜನತೆಯ ಮನಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಬಲ್ಲದು ಮತ್ತು ರಾಷ್ಟ್ರವು ಅದನ್ನು ಅಂಗೀಕರಿಸಬಲ್ಲದು. ಇಲ್ಲದಿದ್ದರೆ, ಸರಕಾರದಿಂದ ನಡೆಸಲ್ಪಟ್ಟ ಮೂಲ ಶಿಕ್ಷಣ ಸಾಲೆಗಳು ಹೇಳುವದೊಂದು ಮಾಡುವದು ಮತ್ತೊಂದು ಎಂದು ಜನತೆ ಅನ್ನಬಹುದು. ಮೂಲ ಶಿಕ್ಷಣದ ಒಲವಿನ ಸಾಲೆಗಳ ಈಗಿನ ಸ್ಥಿತಿ-ಗತಿಗಳನ್ನು **ನೋಡಿ**ದರೆ, ವಿಷ್ಣುವಿನ ನರಸಿಂಹಾವತಾರದಂತೆ ತೋರುತ್ತಿವೆ; **ಇತ್ತ ಪೂರ್ಣ** ಮನುಷ್ಯನೂ ಅಲ್ಲ, ಅತ್ತ ಪೂರ್ಣ ಪಶುವೂ ಅಲ್ಲ; ಇತ್ತ ಪೂರ್ಣ ಹೊಸ ಶಿಕ್ಷಣವೂ ಅಲ್ಲ; ಅತ್ತ **ಪೂರ್ಣ ಹಳೆ** ಶಿಕ್ಷಣವೂ ಅಲ್ಲ. ಆದುದರಿಂದ ಮೂಲ ಶಿಕ್ಷಣದ **ಹಲವು** ಮಾದರಿ ಸಾಲೆಗಳನ್ನು ನಡೆಯಿಸಿ **ತೋರಿಸುವದು ಈಗ** ಅತ್ಯಂತ ಮಹತ್ವದ್ದಿದೆ. ಹಾಗೆ ಮಾಡುವ ಮೊದಲು ನಯೀ ತಾಲೀಮ ಅಥವಾ ಮೂಲ ಶಿಕ್ಷಣ ಅಂದರೇನು ಎಂಬುದರ ನಿಚ್ಚಳವಾದ ಕಲ್ಪನೆಯನ್ನು ನಮ್ಮ ಮನಸ್ಸಿನಲ್ಲಿ ಮಾಡಿಟ್ಟುಕೊಂಡು ನಾವು ಕಾರ್ಯಪ್ರವೃತ್ತರಾಗುವದೊಳಿತು.

ತಕಲಿಯಿಂದ ಇಲ್ಲವೆ ರಾಟೆಯ ಮೇಲೆ ನೂಲಲಿಕ್ಕೆ ಮಕ್ಕಳಿಗೆ ಕಲಿಸಿ ಅದರ ಬಗೆಗೆ ಅಲ್ಪ ಸ್ವಲ್ಪ ಜ್ಞಾನವನ್ನು ಮಾಡಿಕೊಟ್ಟರೆ ಅದು ಮೂಲಶಿಕ್ಷಣವಾಯಿತೆಂದು ಎಷ್ಟೋ ಜನರ ನಂಬಿಕೆ. ಮಕ್ಕಳ ಕಲಿಯುವಿಕೆ ಮತ್ತು ಜ್ಞಾನ ಇವುಗಳತ್ತ ಕಡಿಮೆ ಲಕ್ಷ್ಯವನ್ನು ಪೂರೈಸಿದರೆ ಅದು ಹೊಸ ಶಿಕ್ಷಣವಾಗುವದೆಂದು ಹಲವರ ತಿಳುವಳಿಕೆ. ಮೂಲೋದ್ಯೋಗಕ್ಕೆ ಹೇಗಾದರೂ ಮಾಡಿ ವಿಷಯಗಳನ್ನು ಸಂಬಂಧಿಸಿ ಕಲಿಸಿದರೆ, ಅದು ಸಂಪೂರ್ಣ ಮೂಲ ಶಿಕ್ಷಣವಾಯಿತೆಂದು ಬೇರೆ ಹಲವರ ಕಲ್ಪನೆ. ಸಂಬಂಧೀಕರಣವು ಸ್ವಾಭಾವಿಕವಾದದ್ದಾಗಿದೆಯೋ ಇಲ್ಲವೋ ಎಂಬುದನ್ನು ಅವರು ಗಣನೆಗೆ ತಂದುಕೊಳ್ಳುವದಿಲ್ಲವಷ್ಟೇ ಅಲ್ಲದೆ ಅದು ಅಷ್ಟೊಂದು ಗಮನಾರ್ಹವಲ್ಲವೆಂದು ಅವರ ಗ್ರಹಿಕೆ.

ಮೇಲೆ ಹೇಳಿದ ಮೂರೂ ಅಭಿಪ್ರಾಯಗಳು ದೋಷಯುಕ್ತವಿವೆ. ಮೂಲೋದ್ಯೋಗದ ಬಗೆಗೆ ಸ್ವಲ್ಪ ಜ್ಞಾನವನ್ನು ಮಕ್ಕಳಿಗೆ ಮಾಡಿ **ಕೊಡುವದರಿಂದ ಹೊಸ** ಶಿಕ್ಷಣದ ಉದ್ದೇಶವು ಸಫಲವಾಗಲಾರದು. ನಯೀ ತಾಲೀಮದ ಮುಖಾಂತರ ಶಿಕ್ಷಣವನ್ನು **ಹೊಂದುವ** ಮಕ್ಕಳು



ನವ ಕರ್ನಾಟಕ
ರಾಜ್ಯಪುನರ್ಘಟನಾ ಆಯೋಗದ
ಸೂಚನೆ ಮೇರೆಗೆ
ಕಲಬುರ್ಗಿ
ವಿಜಾಪುರ
ಬಾಗಲಕೋಟೆ
ರಾಯಚೂರು
ಬೆಳಗಾವಿ
ಧಾರವಾಡ
ಹುಬ್ಬಳ್ಳಿ
ಕಾರವಾರ
ಆದವಾನಿ
ಆಲೂರು
ಹೊಸಪೇಟೆ
ಬಳ್ಳಾರಿ
ರಾಯದುರ್ಗ
ಉಳಿದ ಬಳ್ಳಾರಿ
ಕೊಟ್ಟೂರು
ದಾವಣಗೆರೆ
ಚಿತ್ರದುರ್ಗ
ಭಟಕಳ
ಶಿವಮೊಗ್ಗ
ಭದ್ರಾವತಿ
ಕಡೂರು
ಚಿಕ್ಕಮಗಳೂರು
ತುಮಕೂರು
ಹಾಸನ
ಕೋಲಾರ
ಬೆಂಗಳೂರು
ಕೋಲಾರಗಣಿ
ಮಂಗಳೂರು
ಮಂಡ್ಯ
ಕಾಸರಗೋಡು
ಮಡಿಕೇರಿ
ಕೊಡಗು
ಮೈಸೂರು
ಕೊಳ್ಳೆಗಾಲ
ಇದು ಹೊಸ ಮುಂಬಯಿ ರಾಜ್ಯಕ್ಕೆ ಕೊಡಮಾಡಿದ ಚಂದಗಡ ತಾಲೂಕು.
ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ರಾಯದುರ್ಗ ತಾಲೂಕುಗಳು ಮೊದಲೆ ಆಂಧ್ರಕ್ಕೆ ಹೋಗಿದ್ದವು
ಈಗ ಆಂಧ್ರಕ್ಕೆ ಕೊಡಮಾಡಿರುವ ಬಳ್ಳಾರಿ, ಹೊಸಪೇಟೆ, ಸಿರಗುಪ್ಪಿ ತಾಲೂಕುಗಳು ಇಲ್ಲಿವೆ
ಇದು ಮದ್ರಾಸಿನಿಂದ ಕರ್ನಾಟಕಕ್ಕೆ ಕೊಡಮಾಡಿದ ಕೊಳ್ಳೆಗಾಲ.
ಇದು ಕೇರಳಕ್ಕೆ ಕೊಡಮಾಡಿದ ಕಾಸರಗೋಡು
ಹಳೇ ರಾಜ್ಯಗಳು.
ಸಂಕಲ್ಪಿತ ಕರ್ನಾಟಕದ ಗಡಿಗಳು
ಜಿಲ್ಲಾ ಗಡಿಗಳು

ನಯೀ ತಾಲೀಮ ಅರ್ಥಾತ್ ಮೂಲಶಿಕ್ಷಣ

ಅನುವಾದಕರು:— ಶ್ರೀ ಶಿಂತ್ರಿ ಬಸಪ್ಪನವರು, ಬಿ. ಎ., ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

[ಓರಿಸಾ ರಾಜ್ಯದಲ್ಲಿಯ ರಾಜಸುನಖಲಾ ಎಂಬಲ್ಲಿ ದಿನಾಂಕ ೧೭-೪-೧೯೫೫ರಂದು ಆಚಾರ್ಯ ವಿನೋಬಾ ಭಾವೆಯವರು ಶಿಕ್ಷಕ-ಶಿಕ್ಷಕಿಯರಿಗೋಸ್ಕರ ಹಿಂದೀಯಲ್ಲಿ ಮಾಡಿದ ಭಾಷಣವು " ಹರಿಜನ " ಪತ್ರಿಕೆಯ ೧೮-೬-೧೯೫೫ ದಿನಾಂಕದ ಸಂಚಿಕೆಯಲ್ಲಿ ಇಂಗ್ಲೀಷಿನಲ್ಲಿ ಮುದ್ರಿತವಾಗಿದೆ. ಪ್ರಸ್ತುತ ಲೇಖವು ಅದರ ಅನುವಾದವು.]

ಹೋದ ಸಲ ಆವಡಿಯಲ್ಲಿ ಕಲೆತ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿನಿವೇಶನದಲ್ಲಿ ನಯೀ ತಾಲೀಮದ ಬಗೆಗೊಂದು ಗೊತ್ತುವಳಿಯು ಪಾಸು ಮಾಡಲ್ಪಟ್ಟಿದೆಯಷ್ಟೇ. ಅದು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲ ನೆಹರೂರವರಿಂದ ಮಂಡಿಸಲ್ಪಟ್ಟಿತು. ಹತ್ತು ವರ್ಷಗಳ ನಂತರ ಮೂಲ ಶಿಕ್ಷಣವನ್ನು ತನ್ನ ಶಿಕ್ಷಣಕ್ರಮವನ್ನಾಗಿ ಸರಕಾರವು ಸ್ವೀಕರಿಸುವದೆಂದು ಆ ಗೊತ್ತುವಳಿಯಲ್ಲಿ ಸಾರಲಾಗಿದೆ. ಆದುದರಿಂದ, ಈಗ ನಡೆಸಲ್ಪಡುವ ನಯೀ ತಾಲೀಮ (ಹೊಸ ಶಿಕ್ಷಣ)ದ ಸಾಲೆಗಳು ಮಾದರಿಯ ಮೂಲ ಶಿಕ್ಷಣ ಸಾಲೆಗಳಾಗಬೇಕು. ಹೀಗಾದ ಮಾತ್ರಕ್ಕೇನೇ ಹೊಸ ಶಿಕ್ಷಣವು ಜನತೆಯ ಮನಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಬಲ್ಲದು ಮತ್ತು ರಾಷ್ಟ್ರವು ಅದನ್ನು ಅಂಗೀಕರಿಸಬಲ್ಲದು. ಇಲ್ಲದಿದ್ದರೆ, ಸರಕಾರದಿಂದ ನಡೆಸಲ್ಪಟ್ಟ ಮೂಲ ಶಿಕ್ಷಣ ಸಾಲೆಗಳು ಹೇಳುವದೊಂದು ಮಾಡುವದು ಮತ್ತೊಂದು ಎಂದು ಜನತೆ ಅನ್ನಬಹುದು. ಮೂಲ ಶಿಕ್ಷಣದ ಒಲವಿನ ಸಾಲೆಗಳ ಈಗಿನ ಸ್ಥಿತಿ-ಗತಿಗಳನ್ನು ನೋಡಿದರೆ, ವಿಷ್ಣುವಿನ ನರಸಿಂಹಾವತಾರದಂತೆ ತೋರುತ್ತಿವೆ; ಇತ್ತ ಪೂರ್ಣ ಮನುಷ್ಯನೂ ಅಲ್ಲ, ಅತ್ತ ಪೂರ್ಣ ಪಶುವೂ ಅಲ್ಲ; ಇತ್ತ ಪೂರ್ಣ ಹೊಸ ಶಿಕ್ಷಣವೂ ಇಲ್ಲ; ಅತ್ತ ಪೂರ್ಣ ಹಳೆ ಶಿಕ್ಷಣವೂ ಅಲ್ಲ. ಆದುದರಿಂದ ಮೂಲ ಶಿಕ್ಷಣದ ಹಲವು ಮಾದರಿ ಸಾಲೆಗಳನ್ನು ನಡೆಸಿ ತೋರಿಸುವದು ಈಗ ಅತ್ಯಂತ ಮಹತ್ವದ್ದಿದೆ. ಹಾಗೆ ಮಾಡುವ ಮೊದಲು ನಯೀ ತಾಲೀಮ ಅಥವಾ ಮೂಲ ಶಿಕ್ಷಣ ಅಂದರೇನು ಎಂಬುದರ ನಿಚ್ಚಳವಾದ ಕಲ್ಪನೆಯನ್ನು ನಮ್ಮ ಮನಸ್ಸಿನಲ್ಲಿ ಮಾಡಿಟ್ಟುಕೊಂಡು ನಾವು ಕಾರ್ಯಪ್ರವೃತ್ತರಾಗುವದೊಳಿತು.

ತಕಲಿಯಿಂದ ಇಲ್ಲವೆ ರಾಟೆಯ ಮೇಲೆ ನೂಲಲಿಕ್ಕೆ ಮಕ್ಕಳಿಗೆ ಕಲಿಸಿ ಅದರ ಬಗೆಗೆ ಅಲ್ಪ ಸ್ವಲ್ಪ ಜ್ಞಾನವನ್ನು ಮಾಡಿಕೊಟ್ಟರೆ ಅದು ಮೂಲಶಿಕ್ಷಣವಾಯಿತೆಂದು ಎಷ್ಟೋ ಜನರ ನಂಬಿಕೆ. ಮಕ್ಕಳ ಕಲಿಯುವಿಕೆ ಮತ್ತು ಜ್ಞಾನ ಇವುಗಳತ್ತ ಕಡಿಮೆ ಲಕ್ಷ್ಯವನ್ನು ಪೂರೈಸಿದರೆ ಅದು ಹೊಸ ಶಿಕ್ಷಣವಾಗುವದೆಂದು ಹಲವರ ತಿಳಿವಳಿಕೆ. ಮೂಲೋದ್ಯೋಗಕ್ಕೆ ಹೇಗಾದರೂ ಮಾಡಿ ವಿಷಯಗಳನ್ನು ಸಂಬಂಧಿಸಿ ಕಲಿಸಿದರೆ, ಅದು ಸಂಪೂರ್ಣ ಮೂಲ ಶಿಕ್ಷಣವಾಯಿತೆಂದು ಬೇರೆ ಹಲವರ ಕಲ್ಪನೆ. ಸಂಬಂಧೀಕರಣವು ಸ್ವಾಭಾವಿಕವಾದದ್ದಾಗಿದೆಯೋ ಇಲ್ಲವೋ ಎಂಬುದನ್ನು ಅವರು ಗಣನೆಗೆ ತಂದುಕೊಳ್ಳುವದಿಲ್ಲವಷ್ಟೇ ಅಲ್ಲದೆ ಅದು ಅಷ್ಟೊಂದು ಗಮನಾರ್ಹವಲ್ಲವೆಂದು ಅವರ ಗ್ರಹಿಕೆ.

ಮೇಲೆ ಹೇಳಿದ ಮೂರೂ ಅಭಿಪ್ರಾಯಗಳು ದೋಷಯುಕ್ತವಿವೆ. ಮೂಲೋದ್ಯೋಗದ ಬಗೆಗೆ ಸ್ವಲ್ಪ ಜ್ಞಾನವನ್ನು ಮಕ್ಕಳಿಗೆ ಮಾಡಿ ಕೊಡುವದರಿಂದ ಹೊಸ ಶಿಕ್ಷಣದ ಉದ್ದೇಶವು ಸಫಲವಾಗಲಾರದು. ನಯೀ ತಾಲೀಮದ ಮುಖಾಂತರ ಶಿಕ್ಷಣವನ್ನು ಹೊಂದುವ ಮಕ್ಕಳು

ಮೂಲೋದ್ಯೋಗದಲ್ಲಿ ನೈಪುಣ್ಯವನ್ನು ಹೊಂದಬೇಕು. ಮೀನವು ಹೇಗೆ ಸ್ವಾಭಾವಿಕವಾಗಿಯೂ ನಿರಾಯಾಸವಾಗಿಯೂ ನೀರಿನಲ್ಲಿ ಈಜಾಡುತ್ತದೆಯೋ ಹಾಗೆಯೇ ಮಕ್ಕಳು ಮೂಲೋದ್ಯೋಗವನ್ನು ಸ್ವಾಭಾವಿಕವಾಗಿಯೂ ನಿರಾಯಾಸವಾಗಿಯೂ ಮಾಡಲು ಶಕ್ತರಾಗಬೇಕು.

ಇಲ್ಲಿಯ ಹಲವು ಮಕ್ಕಳಿಗೆ ಶಿಷ್ಯವೇತನವು ಸಿಕ್ಕುತ್ತಿದೆಯೆಂದು ನನ್ನ ಕೇಳಿಕೆ. ಮಕ್ಕಳು ದಿನಾಲು ನಾಲ್ಕು ತಾಸಿನಂತೆ ಮೂಲೋದ್ಯೋಗದಲ್ಲಿ ಕೆಲಸ ಮಾಡುವದರಿಂದ ಸಾಕಷ್ಟು ಹಣವನ್ನು ದುಡಿಯುವರು. ಆದುದರಿಂದ, ಅವರು ವರ್ಷದ ಕೊನೆಯ ನಾಲ್ಕು ತಿಂಗಳುಗಳ ಶಿಷ್ಯವೇತನವನ್ನು ಬಿಟ್ಟು ಕೊಡಬಲ್ಲರು. ಅವರು ಒಂದು ವೇಳೆ ಹಾಗೆ ಮಾಡಲು ಶಕ್ತರಾಗದಿದ್ದರೆ, ಅವರಿಗೆ ಕಲಿಸಿದ ಉದ್ಯೋಗವು ನಿರುಪಯುಕ್ತವಾದದ್ದೆಂದೂ ಸಾಲೆಯನ್ನು ಬಿಟ್ಟಮೇಲೆ ಅವರು ಅದನ್ನು ಕೈಗೊಳ್ಳಲಾರರೆಂದೂ ಧ್ವನಿತವಾಗುತ್ತಿದೆ. ಒಂದು ಸಾಲೆಯಲ್ಲಿ ಮಕ್ಕಳಿಗೆ ಯುದ್ಧ ಶಾಸ್ತ್ರದಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆಯೆಂದು ತಿಳಿಯಿರಿ. ಸಾಲೆಯನ್ನು ಬಿಟ್ಟ ಮೇಲೆ ಒಂದು ಮಗುವೂ ಸಹ ಯುದ್ಧದಲ್ಲಿ ಭಾಗ ವಹಿಸುವದಿಲ್ಲವೆಂದು ತಿಳಿಯಿರಿ. ಹಾಗಾದರೆ, ಆ ಸಾಲೆಯಲ್ಲಿ ಆ ಶಾಸ್ತ್ರದ ಬಗೆಗೆ ಕೊಟ್ಟ ತರಬೇತಿಯ ಪ್ರಯೋಜನವೇನು ? ನಮ್ಮ ಸಾಲೆಯಲ್ಲಿ ಕಲಿತ ಮಕ್ಕಳು ದೊಡ್ಡವರಾದ ಮೇಲೆ ದಿನಾಲು ನಾಲ್ಕು ತಾಸಿನಂತೆ ಮೂಲೋದ್ಯೋಗದಲ್ಲಿ ದುಡಿದು ಮುಂದೆ ತಮ್ಮ ಉಪಜೀವನವನ್ನು ಸಾಗಿಸುವಷ್ಟು ಯೋಗ್ಯತೆಯನ್ನೂ ಪ್ರಾವೀಣ್ಯವನ್ನೂ ಪಡೆಯಬೇಕು. ಅವರು ಅಲ್ಪ ಸ್ವಲ್ಪ ನೂಲುವದನ್ನು ನೇಯುವದನ್ನು ಕಲಿತು ಸಮಯೋಚಿತವಾಗಿ ನಮೂನೆಗಳನ್ನು ಮಾತ್ರ ತಯಾರಿಸಲು ಶಕ್ತರಾದರೆ, ನಮ್ಮ ಧ್ಯೇಯವು ಎಂದೂ ಕೈಗೂಡಲಾರದು.

ಸಾಲೆಯಲ್ಲಿ ಕೇವಲ ಕಲಿಸುವದಿರುತ್ತದೆಯಾದುದರಿಂದ ಶಿಕ್ಷಕರು ಮೂಲೋದ್ಯೋಗದಲ್ಲಿ ಪಾರಂಗತರಾಗಿರುವದು ಇಷ್ಟವಿಲ್ಲವೆಂದು ಹಲವರು ವಾದಿಸಬಹುದು ತಾಯಿಯು ಮಗುವಿಗೆ ಉಣ್ಣಲು ಕಲಿಸುತ್ತಾಳೆ. ಮಗುವು ಊಟ ಮಾಡಲು ಕಲಿತಿತೆಂದು ತಿಳಿಯಿರಿ. ಇನ್ನು ಮೇಲೆ ಅದಕ್ಕೆ ಉಣ್ಣುವದು ಇಷ್ಟವಿಲ್ಲವೆಂದು ನಾವು ವಾದಿಸುವದಿಲ್ಲವಷ್ಟೇ. ಹೇಗೆ ಊಟಮಾಡಬೇಕೆಂಬುದನ್ನಷ್ಟೇ ಕಲಿತರೆ ಸಾಲದು. ಮಾನವನು ತನ್ನ ಜೀವಮಾನದಲ್ಲಿ ದಿನಾಲು ತನ್ನ ಆಹಾರವನ್ನು ದೊರಕಿಸಬೇಕಷ್ಟೇ. ಉಣ್ಣುವದು ಹೇಗೆ ನಮ್ಮೆಲ್ಲರ ನಿತ್ಯದ ರೂಢಿಯಾಗಿದೆಯೋ ಹಾಗೆಯೇ ನಮ್ಮ ಮೂಲ ಶಿಕ್ಷಣ ಸಾಲೆಗಳಲ್ಲಿಯ ಮಕ್ಕಳೂ ಶಿಕ್ಷಕರೂ ಮೂಲೋದ್ಯೋಗದಲ್ಲಿ ದಿನಾಲು ನಾಲ್ಕು ತಾಸು ಕೆಲಸ ಮಾಡುವ ಚಟವನ್ನಿಟ್ಟುಕೊಳ್ಳಬೇಕು; ಅವರು ತಮ್ಮ ತಮ್ಮ ಕಸಬಿನಲ್ಲಿ ಪಾರಂಗತರಾಗಬೇಕು; ಆ ಹಳ್ಳಿಯಲ್ಲಿಯ ಒಕ್ಕಲಿಗರೂ ಬಡಿಗರೂ ಆಯಾ ಕಸಬಿನ ಬಗೆಗೆ ಕಲಿತುಕೊಳ್ಳಲು ಅವರಿದ್ದೆಡೆಗೆ ಧಾವಿಸಿ ಬರುವಂತಾಗಬೇಕು. ಉಪಕರಣಗಳನ್ನು ಸರಿಪಡಿಸುವ ಹಾಗೂ ಸುಧಾರಿಸುವ ಕಲೆಯೂ ಗೊತ್ತಿರಬೇಕು. ಹಳ್ಳಿಗಳಲ್ಲಿಯ ಕಸಬುಗಳೆಲ್ಲ ಹಾಳಾಗಿ ಹೋಗಿವೆ. ಅವುಗಳನ್ನೆಲ್ಲ ಹೊಸ ಶಿಕ್ಷಣದ ಮೂಲಕ ಪುನರುಜ್ಜೀವನಗೊಳಿಸುವದು ನಮ್ಮ ಉದ್ದೇಶವು.

ಮೂಲ ಶಿಕ್ಷಣವು ಪುಸ್ತಕಗಳಿಗೆ ಅಷ್ಟೊಂದು ಮಹತ್ವವನ್ನು ಕೊಡುವದಿಲ್ಲವಾದರೂ ಜ್ಞಾನಕ್ಕೆ ತುಂಬಾ ಮನ್ನಣೆಯಿದೆ. ಈ ಹೊಸ ಶಿಕ್ಷಣದಲ್ಲಿ ಮಗುವು ತನ್ನ ನಿತ್ಯದ ಹೋರೆಯಲ್ಲಿ ಸ್ವಾಭಾವಿಕವಾಗಿ ಸಂಪಾದಿಸಿದ ಬಹಳಷ್ಟು ಜ್ಞಾನವು ಅದಕ್ಕೆ ಸಾಕಷ್ಟಾಗುವದೆಂದು ಬಹಳ ಜನರ ನಂಬಿಕೆಯಿದೆ. ಆದರೆ, ಈ ಕಲ್ಪನೆಯು ತಪ್ಪು ದಾರಿಯನ್ನು ಹಿಡಿಸುವಂತಹದಾಗಿದೆ. ಮೂಲ ಶಿಕ್ಷಣದ ಮುಖಾಂತರ ಮಕ್ಕಳು ಜೀವನಕ್ಕೆ ಅವಶ್ಯವಿದ್ದ ಎಲ್ಲ ಮೂಲ ಸಂಗತಿಗಳನ್ನು ಕಲಿಯತಕ್ಕದ್ದು. ಇತಿಹಾಸದೊಳಗಿನ ಉದ್ದುದ್ದ ಸಂಗತಿಗಳನ್ನು ಕಲಿಯುವದು ಹಾಗೂ ಕೆಲಸಕ್ಕೆ ಬಾರದ ಅರಸರ ಹೆಸರುಗಳನ್ನು ಮುಖಪಾಠ ಮಾಡುವದು ಅವಶ್ಯವಿಲ್ಲ. ಅದು ಮಕ್ಕಳ ಮನಸಿನ ಮೇಲೆ ನಿಷ್ಕಾರಣವಾದ ಹೊರೆಯನ್ನು ಹೇರುತ್ತಿದೆ. ಆದರೆ, ಜೀವನಕ್ಕೂ ಜೀವನದ ವಿಕಾಸಕ್ಕೂ ಅವಶ್ಯವಾಗಿ ಬೇಕಾಗುವ ಸಂಗತಿಗಳ ಬಗೆಗೆ ಸಂಪೂರ್ಣವಾದ ಜ್ಞಾನವು ಮಕ್ಕಳಿಗಿರುವದು ಅಗತ್ಯವಿದೆ. ವೇದಾಂತ, ಧಾರ್ಮಿಕ ವಿಷಯ, ನೈತಿಕ ವಿಚಾರ, ಇವುಗಳ ಬಗೆಗೆ ಜ್ಞಾನವು ಅವಶ್ಯವಿದೆ. ಸಮಾಜಶಾಸ್ತ್ರ, ಮಾನವನ ಪ್ರಗತಿ ಇವುಗಳನ್ನು ಮಕ್ಕಳು ಅರಿತಿರಬೇಕು. ನಮ್ಮ ಹಾಗೂ ಬೇರೆ ಸಮಾಜಗಳ ಪ್ರಗತಿಯೂ ವೈಶಿಷ್ಟ್ಯಗಳೂ ಅವರಿಗೆ ಗೊ

ಬೇಕು. ಶಾಸ್ತ್ರೀಯ ವಿಷಯದ ಮೂಲ ತತ್ತ್ವಗಳ ಪರಿಚಯವು ಅವರಿಗಿರಬೇಕು. ಆರೋಗ್ಯ, ಆಹಾರ, ಸ್ವಚ್ಛತೆ, ಪಾಕಶಾಸ್ತ್ರ ಇವುಗಳನ್ನು ಕುರಿತು ಅವರಿಗೆ ನಿಚ್ಚಳವಾದ ಮತ್ತು ಸಂಪೂರ್ಣವಾದ ಕಲ್ಪನೆಯಿರಬೇಕು. ಜೀವನಾವಶ್ಯಕವಾದ ಆವ ಜ್ಞಾನದ ಕೊರತೆಯೂ ನಯೀ ತಾಲೀಮುದಲ್ಲಿರಕೂಡದು. ಭಾಷೆಯ ಉಪಯೋಗದಲ್ಲಿ ಅವರು ನಿಷ್ಣಾತರಿರಬೇಕು. ತಮ್ಮ ವಿಚಾರಗಳನ್ನು ಸ್ಪಷ್ಟವಾಗಿಯೂ ಪರಿಣಾಮಕಾರಿಯಾಗಿಯೂ ಹೇಳುವ ಕಲೆಯನ್ನು ಹಸ್ತಗತ ಮಾಡಿಟ್ಟುಕೊಳ್ಳಬೇಕು. ಬರಹವು ದುಂಡಗಿದ್ದು ಚಿತ್ತಾಕರ್ಷಕವಿರಬೇಕು. ಸಾಹಿತ್ಯದಲ್ಲಿಯೂ ಗಮನವಿರಬೇಕು. ಒಟ್ಟಿನಲ್ಲಿ, ಈ ಹೊಸ ಶಿಕ್ಷಣದಲ್ಲಿ ಆವ ಜ್ಞಾನದ ಕೊರತೆಯು ಇರಕೂಡದು. ಕೆಲಸಕ್ಕೆ ಬಾರದ ಜ್ಞಾನಕ್ಕೆ ಮಾತ್ರ ಎಡೆ ಇರಕೂಡದು.

ಈಗಿನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಮನಸಿನ ಮೇಲೆ ನಿರುಪಯುಕ್ತವಾದ ಒಜ್ಜೆಯನ್ನು ಹೇರುವದುಂಟು ಮತ್ತು ನೂರಕ್ಕೆ ೩೩ರಂತೆ ಗುಣಗಳನ್ನು ಪಡೆದವರು ಪಾಸಾಗುವರೆಂದು ಸಾರುವದುಂಟು. ಹೀಗೆ ಮಾಡುವದರಿಂದ ನೂರಕ್ಕೆ ೬೭ರಷ್ಟು ಜ್ಞಾನವನ್ನು ವಿದ್ಯಾರ್ಥಿಗಳು ಮರೆತು ಬಿಡಲು ಅನುಕೂಲತೆಯನ್ನು ಒದಗಿಸಿ ಕೊಟ್ಟಂತಾಯಿತು! ತಿಳಿದು ನೋಡಿದರೆ, ನೂರಕ್ಕೆ ೧೦೦ರಷ್ಟು ಜ್ಞಾನವನ್ನು ಜತನದಿಂದಿಟ್ಟುಕೊಳ್ಳಬೇಕು. ರೊಟ್ಟಿಯನ್ನು ನೂರಕ್ಕೆ ೮೦ರಷ್ಟು ಚನ್ನಾಗಿ ತಯಾರಿಸುವ ಅಡಿಗೆಯವನನ್ನು ಯಾರು ಇಟ್ಟು ಕೊಳ್ಳುವರು? ಅದರಂತೆ ಎಳ್ಳು ಕಾಳಷ್ಟು ಸಹ ಕಡಿಮೆ ಜ್ಞಾನವುಳ್ಳವನಿಗೆ ತೇರ್ಗಡೆ ಹೊಂದಲು ಆಸ್ಪದವಿರಬಾರದು. ಜ್ಞಾನವನ್ನು ಹೊಂದುವದಿದ್ದರೆ, ಅದನ್ನು ಸಂಪೂರ್ಣವಾಗಿ ಹೊಂದಬೇಕು ಇಲ್ಲವೆ ಎನನ್ನೂ ಹೊಂದದೆ ಇರಬೇಕು; ರೂಪಾಯಿಯಲ್ಲಿ ಹದಿನಾರಾಣೆ ಜ್ಞಾನವನ್ನು ಪಡೆಯಬೇಕು. ಇಲ್ಲವೆ ಎನನ್ನೂ ಪಡೆಯದೆ ಇರಬೇಕು. ಒಬ್ಬನು ನೂರಕ್ಕೆ ೮೦ರಷ್ಟು ಜೀವಂತವಿದ್ದು ೨೦ರಷ್ಟು ಸತ್ತಿದ್ದಾನೆಂದು ಅನ್ನಲು ಬಂದೀತೇ? ಅವನು ಜೀವಂತವಿದ್ದರೆ ನೂರಕ್ಕೆ ನೂರರಷ್ಟು ಜೀವಂತವಿರಬೇಕು, ಸತ್ತಿದ್ದರೆ ನೂರಕ್ಕೆ ನೂರರಷ್ಟು ಸತ್ತಿರಬೇಕು; ಅವನು ಸಂಪೂರ್ಣವಾಗಿ ಜೀವಂತವಿರಬೇಕು ಇಲ್ಲವೆ ಪೂರಾ ಸತ್ತಿರಬೇಕು. ಪ್ರಮಾಣಕ್ಕೆ ಇಲ್ಲಿ ಇಂಬಿಲ್ಲ. ಅದರಂತೆ ಜ್ಞಾನದಲ್ಲಿಯೂ ಸಹ ಅದಕ್ಕೆ ಎಡೆ ಇಲ್ಲ. ಜ್ಞಾನವು ಸಂಪೂರ್ಣ ಹಾಗೂ ನಿಶ್ಚಿತವಿರಬೇಕು; ಅನಿಶ್ಚಿತ ಜ್ಞಾನವು ಜ್ಞಾನವೇ ಅಲ್ಲ. ತಾವು ದೊರಕಿಸಿದ ಜ್ಞಾನದಲ್ಲಿ ನೂರಕ್ಕೆ ೬೭ರಷ್ಟನ್ನು ಮರೆತು ಬಿಡಲು ವಿದ್ಯಾರ್ಥಿಗಳಿಗೆ ನಮ್ಮ ವಿಶ್ವವಿದ್ಯಾಲಯಗಳು ಅವಕಾಶವನ್ನು ಕಲ್ಪಿಸಿ ಕೊಟ್ಟಿವೆ. ಕಾರಣವೆಂದರೆ, ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಕಲಿಸುವ ಜ್ಞಾನದ ಬಹಳಷ್ಟು ಭಾಗವು ನಿಷ್ಪ್ರಯೋಜಕವಿರುತ್ತಿದೆ.

ಹೊಸ ಶಿಕ್ಷಣದ ಮೂಲಕ ಸಂಪಾದಿಸಿದ ಜ್ಞಾನದಲ್ಲಿ ಎಳ್ಳಷ್ಟು ಮರೆಯಲು ಅವಕಾಶವಿಲ್ಲ. ಕಲಿಸಿದ ಜ್ಞಾನವು ನೆನಪಿನಲ್ಲಿಟ್ಟುಕೊಳ್ಳಲು ಯೋಗ್ಯವಿದೆಯಾದುದರಿಂದ ಮಗುವು ಅದನ್ನು ಸಂಪೂರ್ಣವಾಗಿ ನೆನಸಿಡುತ್ತದೆ; ಯಾಕಂದರೆ, ಆ ಜ್ಞಾನವು ಮಗುವಿಗೆ ಮುಂದೆ ತನ್ನ ಜೀವಮಾನದಲ್ಲಿ ಅತ್ಯುಪಯುಕ್ತವಾದದ್ದಿರುತ್ತದೆ. ಮಾನವನು ತನ್ನ ಜ್ಞಾನಕ್ಕೋಸ್ಕರ ಸಂಪಾದಿಸಿದ್ದನ್ನು ಎಂದೂ ಮರೆಯುವದಿಲ್ಲ; ಮರೆತ ಜ್ಞಾನವು ಜ್ಞಾನವೇ ಅಲ್ಲ. ಮರೆಯದಂತಹ ಜ್ಞಾನವನ್ನು ನಾವು ನಮ್ಮ ಮೂಲ ಶಿಕ್ಷಣದ ಮುಖಾಂತರ ಮಕ್ಕಳಿಗೆ ಕಲಿಸಬೇಕು. ಹೊಸ ಶಿಕ್ಷಣವು ಜ್ಞಾನಸಂಪನ್ನರನ್ನು ತಯಾರಿಸಿ ನಮಗೆ ಒದಗಿಸಿ ಕೊಡುವ ಯೋಗ್ಯತೆಯನ್ನು ಪಡೆಯಬೇಕು.

ಈಗ ನಾವು ಮೂಲೋದ್ಯೋಗಕ್ಕೆ ಸಂಬಂಧಿಸಿ ಕಲಿಸುವ ಪ್ರಶ್ನವನ್ನಷ್ಟು ವಿವೇಚಿಸುವಾ. ಅದಕ್ಕೆ ಸಂಬಂಧೀಕರಣ (Co-relation)ವೆಂಬ ಅಭಿಧಾನವಿದೆ. ಅದನ್ನು ನಾವು ಸಮವಾಯವೆಂದೂ ಕರೆಯುತ್ತೇವೆ. 'Co-relation' ಎಂಬ ಇಂಗ್ಲೀಷ ಶಬ್ದವನ್ನು ಕೇಳಿದ ಕೂಡಲೆ ಅದು ಏನಿರಬೇಕೆಂದು ನನಗೆ ಬಹಳ ಆಶ್ಚರ್ಯವಾಯಿತು. ನಮ್ಮ ಪರಿಸ್ಥಿತಿಗೆ ಒಗ್ಗುವಂತಹ ಮೂಲ ಶಿಕ್ಷಣ (ಬುನಿಯಾದಿ ತಾಲೀಮು)ವನ್ನು ನಾವು ಕಂಡು ಹಿಡಿದಿದ್ದೇವೆ. ಆವ ಸಾಹೇಬರೂ ಅದನ್ನು ನಮ್ಮ ಸಲುವಾಗಿ ಕಂಡು ಹಿಡಿಯಲಿಲ್ಲ. ಅದಕ್ಕೆ ಅನುರೂಪವಾದ ಇಂಗ್ಲೀಷ ಶಬ್ದವನ್ನು ಹುಡುಕುವ ಹೊಣೆಯು ನಮ್ಮ ಮೇಲಿರಲಿಲ್ಲ. ಆ ಇಂಗ್ಲೀಷ ಶಬ್ದವನ್ನು ನಮ್ಮ ಮಿತ್ರರು ತಂದು ಕೊಟ್ಟು ಪಾಶ್ಚಾತ್ಯರಲ್ಲಿಯೂ ಸಹ ನಮ್ಮಂತಹ ದೊಂಗು ಶಿಕ್ಷಣಕ್ರಮವು ಅಸ್ತಿತ್ವದಲ್ಲಿರುವದೆಂದು ಹೇಳಿದರು. ಆದರೆ, ಬೇರೆಯವರ ಶಿಕ್ಷಣಕ್ರಮವನ್ನು ಅನುಕರಿಸು

ವದು ನಮಗೆ ಇಷ್ಟವಿಲ್ಲ. ನಮ್ಮದೇ ಆದ ಶಿಕ್ಷಣಕ್ರಮವನ್ನು ನಾವು ವಿಕಾಸಗೊಳಿಸೋಣ. ಅದಕ್ಕೆ ಅನುರೂಪವಾದ ಇಂಗ್ಲೀಷ ಶಬ್ದವನ್ನುಪಯೋಗಿಸುವ ಗೋಜಿಗೆ ನಾವು ಹೋಗುವದು ಬೇಡ. ನಮಗೆ ಬೇಕಾದದ್ದು ಸಮವಾಯ. ಅದು ಏನೆಂಬುದನ್ನು ಇಲ್ಲಿ ನಾನು ತಿಳಿಯಪಡಿಸುವೆ.

ಮಣ್ಣು ಮತ್ತು ಮಣ್ಣಿನಿಂದ ತಯಾರಿಸಲ್ಪಟ್ಟ ಮಡಿಕೆ ಇವೆರಡರಲ್ಲಿ ನಿಕಟ ಸಂಬಂಧವಿದೆ. ಆ ಸಂಬಂಧವನ್ನು ಮಾತಿನಿಂದ ಇಲ್ಲವೆ ಶಬ್ದಗಳಿಂದ ರೂಪಿಸುವದು ಶಕ್ಯವಿಲ್ಲ. ಮಣ್ಣು ಮತ್ತು ಮಡಿಕೆ ಇವೆರಡೂ ಭಿನ್ನವಸ್ತುಗಳೋ ಇಲ್ಲವೆ ಒಂದೇ ವಸ್ತುವೋ ? ಇವೆರಡು ಬೇರೆ ಬೇರೆ ವಸ್ತುಗಳೆಂದು ನೀವು ಅನ್ನುತ್ತಿದ್ದರೆ, ಮಣ್ಣನ್ನು ಬಿಟ್ಟು ಮಡಿಕೆಯನ್ನು ತಕ್ಕೊಂಡು ಹೋಗಿರೆಂದು ನಾನು ನಿಮಗೆ ಕೇಳಿಕೊಳ್ಳುತ್ತೇನೆ. ಅವೆರಡೂ ಒಂದಕ್ಕೊಂದು ಅಷ್ಟೊಂದು ಐಕ್ಯದಿಂದ ಹೊಂದಿಕೊಂಡಿವೆ; ಅವುಗಳನ್ನು ಬೇರ್ಪಡಿಸುವದು ಶಕ್ಯವಿಲ್ಲ. ಮಣ್ಣು ಇದ್ದಲ್ಲಿ ಮಡಿಕೆ ಇರುವದುಂಟು. ಆದರೆ, ಮಣ್ಣು ಮತ್ತು ಮಡಿಕೆ ಇವೆರಡೂ ಒಂದೇ ಎಂದು ನೀವು ಅನ್ನುತ್ತಿದ್ದರೆ, ನಿಮ್ಮ ಎದುರಿಗಿದ್ದ ಮಣ್ಣಿನಲ್ಲಿ ನೀರು ತುಂಬಲು ನಾನು ನಿಮ್ಮನ್ನು ಕೇಳಿಕೊಳ್ಳುವೆ. ಅದನ್ನು ಸಹ ಮಾಡಲು ನಿಮಗೆ ಶಕ್ಯವಿಲ್ಲ. ಈ ವಾದದ ಸಾರಾಂಶವಿಷ್ಟೆ. ಅವೆರಡು ವಸ್ತುಗಳು ಒಂದಕ್ಕೊಂದು ಅಷ್ಟೊಂದು ಐಕ್ಯದಿಂದ ಹೊಂದಿಕೊಂಡಿರುವದರಿಂದ ಅವು ಭಿನ್ನ ವಸ್ತುಗಳೆಂದು ತೋರಿಸಿಕೊಡಲು ಶಕ್ಯವಿಲ್ಲ; ಅದರಂತೆಯೇ, ಅವೆರಡೂ ಒಂದರಿಂದ ಒಂದು ಅಷ್ಟೊಂದು ಭಿನ್ನವಾಗಿರುವದರಿಂದ ಅವು ಒಂದೇ ವಸ್ತುವೆಂದು ತೋರಿಸಿ ಕೊಡಲೂ ಶಕ್ಯವಿಲ್ಲ. ಎರಡು ವಸ್ತುಗಳ ಪರಸ್ಪರ ಸಂಬಂಧವನ್ನು ಗೊತ್ತು ಹಚ್ಚುವಾಗ ಅವುಗಳಲ್ಲಿ ಹುದುಗಿದ್ದ ಐಕ್ಯ ಭಿನ್ನತೆಗಳನ್ನು ಕಂಡು ಹಿಡಿಯುವದು ನಿಮಗೆ ಶಕ್ಯವಾಗದಿದ್ದರೆ, ಅಲ್ಲಿ ಸಮವಾಯ ಸಂಬಂಧವಿರಲೇಕು. ನಮ್ಮ ಮೂಲ ಶಿಕ್ಷಣದಲ್ಲಿ ಕೈಕೆಲಸ ಮತ್ತು ಜ್ಞಾನ ಇವೆರಡರಲ್ಲಿ ಸಮವಾಯವಿದೆ. ಕಾರ್ಯವು ನಡೆವಾಗ ಆವುದಾದರೊಂದು ಕ್ಷಣದಲ್ಲಿ ಅದು ಜ್ಞಾನಕ್ಕೆ ಸಂಬಂಧಿಸಿದೆಯೋ ಇಲ್ಲವೆ ಕೆಲಸಕ್ಕೆ ಸಂಬಂಧಿಸಿದೆಯೋ ಎಂಬುದನ್ನು ತೋರಿಸಿ ಕೊಡಲು ಶಕ್ಯವಿಲ್ಲ.

ಇದು ನಮ್ಮ ಪದ್ಧತಿಯ ಪರಿಚಯವು. ರಾಮಚಂದ್ರನು ವಿಶ್ವಾಮಿತ್ರ ಋಷಿಯ ಆಶ್ರಮದಲ್ಲಿದ್ದಾಗ ಆತನು ಯಜ್ಞವನ್ನು ಸಂರಕ್ಷಿಸುವ ಹೊರೆಯನ್ನು ಕೈಕೊಂಡಿದ್ದೂ ನಿಜ. ಹಾಗೂ ಸೈನಿಕ ಜ್ಞಾನವನ್ನು ಪಡೆದದ್ದೂ ನಿಜ. ಯಜ್ಞವನ್ನು ಕಾಪಾಡುತ್ತಿರುವ ಕ್ರಮದಲ್ಲಿಯೇ ಜ್ಞಾನವನ್ನು ಸಂಪಾದಿಸಿದನಲ್ಲವೆ? ನಮ್ಮ ಶಿಕ್ಷಣ ಕ್ರಮದಲ್ಲಿ ಕೆಲಸ ಮತ್ತು ಜ್ಞಾನ ಇವೆರಡನ್ನು ವಿಂಗಡಿಸಿ ತೋರಿಸುವ ಗೋಜಿಗೆ ಹೋಗುವದಿಲ್ಲ. ಜ್ಞಾನವನ್ನು ಹೊಂದುವ ಕ್ರಮವು ನಡೆದಾಗ ಕೆಲಸವೂ ಸಾಗಿರುತ್ತಿದೆ, ಕೆಲಸದ ಕ್ರಮವು ಸಾಗಿದಾಗ ಜ್ಞಾನವನ್ನು ಗ್ರಹಣ ಮಾಡುವದೂ ನಡೆದಿರುತ್ತದೆ. ಕೆಲಸ ಮತ್ತು ಜ್ಞಾನ ಇವೆರಡೂ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿರುತ್ತಿವೆ. ಆದುದರಿಂದ, ಅವೆರಡರಲ್ಲಿ ಅನುಬಂಧವನ್ನು ಮಾಡಿ ತೋರಿಸುವ ಅಗತ್ಯವೇಇಲ್ಲ. ಹೊರಗಿನ ಆವುದೋ ಒಂದು ಸಂಗತಿಯ ಮಾಧ್ಯಮದಿಂದ ಜ್ಞಾನವನ್ನು ಪಡೆಯಲು ಇಲ್ಲಿ ಆಸ್ಪದವೇ ಇಲ್ಲ. ಜ್ಞಾನವು ಕೈಕೆಲಸದ ಮೂಲಕ ಬೆಳೆಯುತ್ತ ನಡೆಯುವದು, ಮತ್ತು ವಿದ್ಯಾರ್ಥಿಯು ಜ್ಞಾನದ ಮುಖಾಂತರ ಕೈಕೆಲಸದಲ್ಲಿ ತರಬೇತಿಯನ್ನು ಹೊಂದುವನು. ಇದುವೇ ನಮ್ಮ ಶಿಕ್ಷಣ ಕ್ರಮದ ಸಂಕ್ಷಿಪ್ತ ವಿವರಣೆ. ಕೈಕೆಲಸ ಮತ್ತು ಜ್ಞಾನ ಎಂಬೆರಡು ಹಾಳಿಯ ತುಂಡುಗಳನ್ನು ಟಾಚಣಿಯಿಂದ ಚುಚ್ಚಿ ಒಂದನ್ನಾಗಿಸಿದಂತಹ ಶಿಕ್ಷಣ ಕ್ರಮವು ನಮ್ಮದಲ್ಲ. ಈ ನಮ್ಮ ಕ್ರಮದಲ್ಲಿ ಕೆಲಸ ಮತ್ತು ಜ್ಞಾನ ಇವೆರಡೂ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟ ಬಟ್ಟೆಯಂತಿವೆ.

ನಯೀ ತಾಲೀಮದ ಬಗೆಗೆ ಜನತೆಯಲ್ಲಿ ನೆಲೆಗೊಂಡಿದ್ದ ತಪ್ಪು ಕಲ್ಪನೆಗಳನ್ನು ಕುರಿತು ಇಲ್ಲಿಯವರೆಗೆ ವಿವೇಚಿಸಿದ್ದಾಯಿತು. ಈಗ ಅದರ ಮಹತ್ವಪೂರ್ಣವಾದೊಂದು ದೃಷ್ಟಿ ಕೋನವನ್ನು ನಿಮ್ಮೆಲ್ಲರ ಮುಂದೆ ಇಡಬಯಸುವೆ. ಈಗಿದ್ದ ಸಮಾಜ ರಚನೆಯನ್ನು ಕಾಯಮವಾಗಿಟ್ಟುಕೊಳ್ಳಬೇಕೆಂಬ ಇಚ್ಛೆಯಿಂದೊಡಗೂಡಿ ನೀವು ಮೂಲ ಶಿಕ್ಷಣವನ್ನು ಕಲಿಸಲಾರಿರಿ. ಈಗ ಸಮಾಜದಲ್ಲಿ ರೂಢವಾಗಿದ್ದ ಆರ್ಥಿಕ ರಚನೆಯನ್ನು ಹೊಸ ಶಿಕ್ಷಣವು ಕಟುವಾಗಿ ವಿರೋಧಿಸುತ್ತಿದೆ. ಮೂಲಶಿಕ್ಷಣವು ಮೂಲೋದ್ಯೋಗದ ಮೂಲಕ ಎಲ್ಲ ವಿಷಯಗಳ ಜ್ಞಾನವನ್ನು ಮಾಡಿಕೊಡುತ್ತಿದೆಯೆಂದು ಅನ್ನುತ್ತಿದ್ದರೆ, ಅದು ಸಂಪೂರ್ಣವಾಗಿ ತಪ್ಪು. ನಯೀ ತಾಲೀಮವು ಇಲ್ಲವೆ ಹೊಸ

ಶಿಕ್ಷಣವು ಹೊಸ ಸಮಾಜ ರಚನೆಯನ್ನು ಹುಟ್ಟಿಸಲೇಬೇಕು. ಹಾಗೆ ಮಾಡದ ಹೊರತು ಅದು ಬದುಕಿ ಉಳಿಯಲಾರದು. ಶಿಕ್ಷಕರ ಸಂಬಳದಲ್ಲಿ ಕಂಡುಬರುವ ಅಸಮಾನತೆ, ಪದವಿ(degree) ಗಳ ಮೇಲಿಂದ ಹೆಚ್ಚಿಚ್ಚು ಸಂಬಳ ಕೊಡುವ ಪದ್ಧತಿ, ಇವು ಪ್ರಚಲಿತವಿದ್ದ ಈಗಿನ ಸಮಾಜ ರಚನೆಯಲ್ಲಿ ಉಳಿದು ಬಾಳಲು ನಯೀ ತಾಲೀಮಕ್ಕೆ ಸ್ಥಾನವೇ ಸಿಗಲಾರದು. ಹೊಸ ಶಿಕ್ಷಣದಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಬಳದಲ್ಲಿ ಅಸಮಾನತೆಗಳು ಇರುವದಾದರೆ, ರಾಜ್ಯಭಾರದಲ್ಲಿ ಕ್ರಾಂತಿಯು ಸಂಭವಿಸುವದು ಬಗೆ ಹೇಗೆ ? ಈಗ ಜಾರಿಯಲ್ಲಿದ್ದ ಆಡಳಿತೆಯ ಯಂತ್ರದಲ್ಲಿ ಸಂಬಳಗಳು ಶೈಕ್ಷಣಿಕ ಅರ್ಹತೆ(qualification)ಗಳ ಮೇಲಿಂದ ಕೊಡಲ್ಪಡುತ್ತಿವೆಯಲ್ಲದೆ ಹಲವಾರು ಹೆಚ್ಚಿಚ್ಚು ಸಂಬಳಗಳ ತರಗತಿ (grade)ಗಳಿವೆ. ನಯೀ ತಾಲೀಮವು ಇವುಗಳನ್ನೆಲ್ಲ ಕಿತ್ತೊಗೆಯುವದು. ಈ ಅನಿಷ್ಟಗಳನ್ನೆಲ್ಲ ಅದು ವಿರೋಧಿಸದಿದ್ದರೆ ಹಾಗೂ ಅವುಗಳನ್ನು ನಿವಾರಿಸುವ ಉಪಾಯಗಳನ್ನು ಅದು ಕೈಕೊಳ್ಳದಿದ್ದರೆ, ನಯೀ ತಾಲೀಮವೆಂಬ ಹೆಸರು ಅದಕ್ಕೆ ಅನ್ವರ್ಥವಾಗಲಾರದು. ನಯೀ ತಾಲೀಮದ ತತ್ತ್ವದಂತೆ ದೈಹಿಕ ಹಾಗೂ ಮಾನಸಿಕ ಶ್ರಮಗಳು ನೈತಿಕವಾಗಿಯೂ ಆರ್ಥಿಕವಾಗಿಯೂ ಒಂದೇ ಎಂದು ಗಣಿಸಲ್ಪಡುವವು; ಶೈಕ್ಷಣಿಕ ಅರ್ಹತೆಗಳ ಮೇಲಿಂದ ಸಂಬಳಗಳ ತರಗತಿಗಳು ಇರಲಾರವು· ಎಲ್ಲ ಕೆಲಸಗಳ ದರ್ಜೆಯು ಒಂದೇ ಎಂದು ತಿಳಿಯಲ್ಪಡುವದು. ಸಾರಾಂಶವೇನೆಂದರೆ, ಈಗ ರೂಢಿಯಲ್ಲಿದ್ದ ಆರ್ಥಿಕ ರಚನೆಯನ್ನೆಲ್ಲ ನಾವು ಆಮೂಲಾಗ್ರವಾಗಿ ಮಾರ್ಪಡಿಸಬೇಕು. ಅದನ್ನು ನಯೀ ತಾಲೀಮವು ಸಾಧಿಸಬಲ್ಲದು.

ಕರ್ನಾಟಕದಲ್ಲಿ ಜೀವನ ಶಿಕ್ಷಣದ ಮುನ್ನಡೆ

ಲೇಖಕರು : ಶ್ರೀ ಎಚ್. ಎ. ಸಿಗ್ಗಾಂವ, ಕ್ರ್ಯಾಫ್ಟ ಆರ್ಗನಾಯಝರ, ಧಾರವಾಡ.

ಪೂಜ್ಯ ಬಾಪೂಜಿಯವರ ಪುಣ್ಯದ ಫಲವಾಗಿ ಹಿಂದುಸ್ತಾನವು ದಾಸ್ಯದ ಸಂಕೋಲೆಗಳನ್ನು ಹರಿದೊಗೆಯಿತು ೧೯೪೭ ನೆಯ ಅಗಸ್ಟದಲ್ಲಿ ಭಾರತಕ್ಕೆ ಸ್ವಾತಂತ್ರ್ಯವು ಸಿಗುವ ಕನಸನ್ನು ಕಂಡರೇನೋ ನಮ್ಮ ರಾಷ್ಟ್ರಪಿತರು ! ಅಂತೆಯೇ ಅದರ ೧೦ ವರುಷದ ಪೂರ್ವದಲ್ಲಿಯೇ ನಮಗೆ ಸಿಗಲಿರುವ ಸ್ವಾತಂತ್ರ್ಯವನ್ನು ಕಾಯ್ದುಕೊಂಡು ಹೋಗುವಂಥ ವ್ಯಕ್ತಿಗಳನ್ನು ನಿರ್ಮಿಸಲು ಹವಣಿಸಿ ಅವರು ಒಂದು ಹೊಸ ಸಮಾಜವನ್ನು ಕಟ್ಟುವದಕ್ಕಾಗಿ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಸೂಚಿಸಿದರು. ನಮಗೆ ಸಿಗುತ್ತಿದ್ದ ಶಿಕ್ಷಣಕ್ಕೆ ಹಾಳು ಶಿಕ್ಷಣವೆಂದು ಹಳಿದರು. ದೇಶಕ್ಕೆ ಆವಶ್ಯವಿದ್ದ ಬಾಳು ಶಿಕ್ಷಣದ ಬೀಜಗಳನ್ನು ಬಿತ್ತಿದರು. ಅವರ ವಿಚಾರ ಧಾರೆಯ ಪ್ರಭಾವದಿಂದ ದೇಶದಾದ್ಯಂತ ಹೊಸ ವಿಚಾರಗಳು ಅಂಕುರಿಸಿದವು. ಶಿಕ್ಷಣ ತಜ್ಞರ ತರ್ಕ ವಿತರ್ಕ, ಚರ್ಚೆ; ಟೀಕೆ, ಸಭೆ, ಸಮ್ಮೇಲನಗಳಾಗಿ ಪೂಜ್ಯ ಗಾಂಧೀಜಿಯವರ ಹೊಸ ವಿಚಾರಗಳು ಒಂದು ಮೂರ್ತ ಸ್ವರೂಪವನ್ನು ತಾಳಿದವು. ಅವರ ಶೈಕ್ಷಣಿಕ ವಿಚಾರಗಳ ಮೂರ್ತ ಸ್ವರೂಪವೇ ''ನಯಿ ತಾಲೀಮ'' ಅಂದರೆ ''ಹೊಸ ಶಿಕ್ಷಣ'' ಅರ್ಥಾತ್ "ಮೂಲ ಶಿಕ್ಷಣ" ಇಲ್ಲವೆ "ಜೀವನ ಶಿಕ್ಷಣ." ಭಾರತದ ಶಿಕ್ಷಣದ ಇತಿಹಾಸದಲ್ಲಿ

ಒಂದು ಹೊಸ ಯುಗವು ಪ್ರಾರಂಭವಾಯಿತು. ದೇಶದ ಪ್ರತಿಯೊಂದು ಪ್ರಾಂತದಲ್ಲಿ ಈ ಹೊಸ ವಿಚಾರಗಳ ಪ್ರಯೋಗಗಳು ಆರಂಭವಾದವು. ಪ್ರಗತಿಶೀಲ ವಿಚಾರಗಳಿಗೆ ಯಾವಾಗಲೂ ಸ್ವಾಗತವನ್ನೀಯುವ ನಮ್ಮ ಕರ್ನಾಟಕವೂ ಈ ಹೊಸ ಶಿಕ್ಷಣದ ಪ್ರಯೋಗವನ್ನು ಯಶಸ್ವಿಯನ್ನಾಗಿ ಮಾಡಿ ತೋರಿಸಲು ಟೊಂಕ ಕಟ್ಟಿ ನಿಂತು ಜಯದ ಪತಾಕೆ ಎತ್ತಿ ಹಿಡಿದು ಇಡೀ ಭಾರತಕ್ಕೆ ತೋರಿಸಿದೆ, ತೋರಿಸುತ್ತಾ ಇದೆ. ಈ ಜಯ ಘೋಷಣೆಯನ್ನು ಮಾಡುತ್ತಿರುವ ನಮ್ಮೆಲ್ಲರಿಗೆ ಇದೊಂದು ಹೆಮ್ಮೆಯ ವಿಷಯ. ಪೂಜ್ಯ ಗಾಂಧೀಜಿಯವರ ಕನಸನ್ನು ನನಸನ್ನಾಗಿ ಮಾಡುತ್ತಿರುವ ವೀರ ಸೇನಾನಿಗಳಲ್ಲವೆ ನಾವೆಲ್ಲರು? ನಾವು ಸಾಧಿಸುತ್ತಿರುವ ಪ್ರಗತಿಯನ್ನು ಸ್ವಲ್ಪ ಅವಲೋಕಿಸುವಾ. ಅದನ್ನು ಅವಲೋಕಿಸಿ ಪುನ: ಮುನ್ನಡೆಯನ್ನಿಡಲು ಸಿದ್ಧರಾಗುವಾ.

ಸಿಂಹಾವಲೋಕನ

೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕಿತು. ಸರಿಯಾಗಿ ಇದರ ೧೦ ವರ್ಷ ಪೂರ್ವದಲ್ಲಿ ಗಾಂಧೀಜಿಯವರು ಹರಿಜನದಲ್ಲಿ ಹೊಸ ಶಿಕ್ಷಣದ ವಿಚಾರ ಧಾರೆಯನ್ನು ಹರಿಬಿಟ್ಟರು; ತತ್ಪರಿಣಾಮವಾಗಿ ವರ್ಧಾದಲ್ಲಿ ಶಿಕ್ಷಣ ತಜ್ಞರ ಒಂದು ಸಮ್ಮೇಲನವು ಕೂಡಿತು. ಈ ಸಮ್ಮೇಲನವು ಡಾ. ಝಾಕೀರ ಹುಸೇನರ ಸಮಿತಿಯನ್ನು ಹುಟ್ಟಿಸಿತು. ೧೯೩೮ ರಲ್ಲಿ ಈ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿತು. ಈ ವರದಿಯ ಪರಿಣಾಮದಿಂದ ನಯೀ ತಾಲೀಮ ಸಂಘವು ನಿರ್ಮಾಣವಾಯಿತು. ಈ ಸಂಘದ ನೇತೃತ್ವದಲ್ಲಿ ವರ್ಧಾದಲ್ಲಿ ವಿದ್ಯಾಮಂದಿರ ಟ್ರೇನಿಂಗ ಸಂಸ್ಥೆಯು ಜನ್ಮತಾಳಿತು. ೧೯೩೮ರ ನವ್ಹಂಬರದಲ್ಲಿ ಈ ಸಂಸ್ಥೆಗೆ ನಮ್ಮ ಪ್ರಾಂತದಿಂದ (ಕರ್ನಾಟಕದಿಂದ) ಐವರು ಶಿಕ್ಷಣ ತಜ್ಞರು ತರಬೇತಿಗಾಗಿ ಹೋಗಿದ್ದರು. ಅವರು ತಿರುಗಿ ಬಂದು ಧಾರವಾಡದಲ್ಲಿ ಎಷ್ಟೋ ಶಿಕ್ಷಕರಿಗೆ ಅಲ್ಪಾವಧಿ ತರಬೇತಿಯನ್ನು ನೀಡಿದರು. ಆ ಮೇಲೆ ಧಾರವಾಡದಲ್ಲಿ ಇವರು ಒಂದು ವರ್ಧಾ ರಾಷ್ಟ್ರೀಯ ಶಿಕ್ಷಣ ಕೇಂದ್ರವನ್ನು ತೆರೆದರು. ಈ ಅಲ್ಪಾವಧಿ ತರಬೇತು ಪಡೆದ ಶಿಕ್ಷಕರಿಂದ ಧಾರವಾಡದ ಸಮೀಪ ೧೯ ಮೂಲಶಿಕ್ಷಣ ಶಾಲೆಗಳು ಪ್ರಾರಂಭವಾದುವು. ಈ ಹೊಸ ಶಿಕ್ಷಣದ ಬೆಳಕು ಕರ್ನಾಟಕದಲ್ಲಿ ಪ್ರಜ್ವಲಿಸಲು ಪ್ರಾರಂಭವಾಗಿ ಬೆಳಕನ್ನು ಬೀರುತ್ತಿದೆ.

ಅಷ್ಟರಲ್ಲಿ ಪುಣೆಯಲ್ಲಿ ಮೊದಲನೆಯ ನಯೀ ತಾಲೀಮ ಸಮ್ಮೇಲನವು ಕೂಡಿತು. ಅದಕ್ಕೆ ನಮ್ಮಲ್ಲಿಂದ ಕಾರ್ಯಕರ್ತರೂ ಹೋಗಿ ತಾವು ಪಡೆದ ಪ್ರಗತಿಯ ಅರಿವನ್ನು ಎಲ್ಲರಿಗೂ ಮಾಡಿದರು.

ಅಷ್ಟರಲ್ಲಿ ೨ನೆಯ ಮಹಾಯುದ್ಧವು ಸಾರಲ್ಪಟ್ಟು ಈ ಶಿಕ್ಷಣದ ಪಾಲಕರಾದ ಕಾಂಗ್ರೆಸ ಮಂತ್ರಿಮಂಡಳಗಳು ೧೯೩೯ರಲ್ಲಿ ರಾಜ್ಯ ಸೂತ್ರಗಳನ್ನು ಬಿಟ್ಟುಕೊಟ್ಟಿದ್ದರು.

ಆದರೂ ಕರ್ನಾಟಕದಲ್ಲಿ ಪ್ರಾರಂಭವಾದ ಮೂಲ ಶಿಕ್ಷಣದ ಪ್ರಯೋಗವು ನಿಲ್ಲಲಿಲ್ಲ. ಮಹಾಯುದ್ಧದ ಕಾರ್ಮೋಡಗಳು ಕವಿದಿದ್ದರೂ ನಮ್ಮ ಕಾರ್ಯಕರ್ತರು ಕುಸಿಯಲಿಲ್ಲ. ಅವ್ಯಾಹತವಾಗಿ ೧೯೪೫ರ ವರೆಗೆ ಕರ್ನಾಟಕದಲ್ಲಿ ನಯೀ ತಾಲೀಮದ ನಂದಾದೀಪವು ಬೆಳಗಿತು.

ಅಷ್ಟರಲ್ಲಿ ನಯೀ ತಾಲೀಮದ ತಾತರೂ ಇತರ ರಾಷ್ಟ್ರ ನಾಯಕರೂ ಜೇಲಿನಿಂದ ಹೊರಬಿದ್ದು ವರ್ಧಾದಲ್ಲಿ ಪುನಃ ಒಂದು ಸಮ್ಮೇಲನವನ್ನು ೧೯೪೬ರಲ್ಲಿ ಕೂಡಿಸಿದರು. ಯಾವ ಪೋಷಕರು ಇಲ್ಲದಿದ್ದರೂ ಈ ಶಿಕ್ಷಣವು ೧೯೩೯ರಿಂದ ೧೯೪೫ರ ವರೆಗೆ ತನ್ನ ಅಂತಃಶಕ್ತಿಯಿಂದ ಬಾಳಿದ್ದು ಎಲ್ಲರಿಗೂ ಗೋಚರವಾಯಿತು. ಅದಕ್ಕೆ ಪೂಜ್ಯ ಬಾಪೂಜಿಯವರು ಆಶೀರ್ವದಿಸಿ ಅದನ್ನು ಮುಂದುವರಿಸಲೂ ವಿಸ್ತರಿಸಲೂ ಎಲ್ಲರಿಗೂ ಆದೇಶವಿತ್ತರು.

ಮುನ್ನಡೆ

ಗಾಂಧೀಜಿಯವರ ಆಶೀರ್ವಾದದಿಂದ ಎಲ್ಲ ಕಡೆಗೆ ಪುನಃ ಚಟುವಟಿಕೆಗಳು ಭರದಿಂದ ಸಾಗಿದವು ಬೇರೆ ಬೇರೆ ಪ್ರಾಂತಗಳಲ್ಲಿ ಈ ಶಿಕ್ಷಣದ ವಿಸ್ತರಣೆಯ ಯೋಜನೆಗಳು ರಚಿಸಲ್ಪಟ್ಟವು. ಆ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲು ಕಾರ್ಯಕರ್ತರನ್ನು ವರ್ಧಾಕ್ಕೆ ತರಬೇತಿಗಾಗಿ ಕಳುಹಿಸಿದರು. ೧೯೪೬-೧೯೪೭ರಲ್ಲಿ ಕರ್ನಾಟಕವೂ ತನ್ನ ಸುಪುತ್ರರನ್ನು ಈ ನಯೀ ತಾಲೀಮದ ದೀವಟಿಗೆಯನ್ನು ತರಲು ಕಳಿಸಿತು. ಅಷ್ಟರಲ್ಲಿ ಮೂಲ ಶಿಕ್ಷಣವು ಜೀವನವನ್ನೇ ತನ್ನ ರಂಗವನ್ನಾಗಿ ಮಾಡಿಕೊಂಡು 'ಜೀವನ ಶಿಕ್ಷಣ' ಎಂದು ಗಾಂಧೀಜಿಯವರಿಂದ ನಾಮಕರಣ ಹೊಂದಿ ಎಲ್ಲರ ಮನಸ್ಸನ್ನು ಆಕರ್ಷಿಸಿತ್ತು. ಈ ಜೀವನ ಶಿಕ್ಷಣದ ವಿಸ್ತರಣೆಯ ಕಾರ್ಯದ ಪೂರ್ವಸಿದ್ಧತೆಯೆಂದು ಎಷ್ಟೋ ಶಾಲೆಗಳಲ್ಲಿ ಮೊದಲು

ಮೂಲೋದ್ಯೋಗವನ್ನು ಸೇರಿಸಿದರು. ಅಂತೆಯೇ ಎಷ್ಟೋ ಶಾಲೆಗಳು "ಮೂಲೋದ್ಯೋಗ ಶಾಲೆ"ಗಳಾದವು. ಅವುಗಳಿಗಾಗಿ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿ ಮೂಲೋದ್ಯೋಗದ ಅಲ್ಪಾವಧಿ ತರಬೇತಿ ಕೇಂದ್ರಗಳು ತೆರೆಯಲ್ಪಟ್ಟವು. ನೂರಾರು, ಸಾವಿರಾರು ಶಿಕ್ಷಕರು ನಮ್ಮ ಪ್ರಾಂತದಲ್ಲಿ ಈ ಶಿಕ್ಷಣವನ್ನು ಪಡೆಯಲು ಮುಂದೆ ಬಂದರು. ಧಾರವಾಡ, ರೋಣ, ಕರ್ಜಗಿ, ಗೋಪನಕೊಪ್ಪ, ಬಿಜಾಪೂರ, ಬಾಗಲಕೋಟೆ, ಕಮತಗಿ, ತಾಂಬೆ, ಬೆಳಗಾಂವ, ಗುರ್ಲಹೊಸೂರ, ಬೈಲಹೊಂಗಲ, ಹುದಲಿ, ಕಾರವಾರ, ಕುಮಠೆ ಇತ್ಯಾದಿ ಸ್ಥಳಗಳಲ್ಲಿ ಈ ಅಲ್ಪಾವಧಿ ತರಬೇತಿ ವರ್ಗಗಳು ಶಿಕ್ಷಕರನ್ನು ನೂಲುವ ನೇಯುವ ಮೂಲೋದ್ಯೋಗಗಳಲ್ಲಿ ತರಬೇತಿಯನ್ನು ನೀಡಿದವು. ಕಾಗದ ಮತ್ತು ರಟ್ಟಿನ ಕೆಲಸಗಳಲ್ಲಿ ತರಬೇತು ಕೊಡುವಂಥ ಯೋಗ್ಯ ಅಧಿಕಾರಿಗಳನ್ನು "ಜಾಮಿಯಾ ಮಿಲಿಯಾ" ಸಂಸ್ಥೆ ದಿಲ್ಲಿ ಅಲ್ಲಿಗೆ ಕಳಿಸಿ ಅವರು ಬಂದನಂತರ ಧಾರವಾಡ ಮತ್ತು ಕಲಾದಗಿಯಲ್ಲಿ ಆ ಮೂಲೋದ್ಯೋಗದಲ್ಲಿ ಎಷ್ಟೋ ಶಿಕ್ಷಕರಿಗೆ ತರಬೇತಿಯನ್ನು ಕೊಟ್ಟರು. ಕಟ್ಟಿಗೆಯ ಕೆಲಸಕ್ಕಾಗಿ ಪುಣೆಯ ಹತ್ತರ ಇದ್ದ ಔಂಧಕ್ಕೆ ನಾಲ್ಕೂ ಜಿಲ್ಲೆಗಳಿಂದ ಶಿಕ್ಷಕರು ಹೋದರು. ಒಕ್ಕಲತನದಲ್ಲಿ ತರಬೇತಿಗಾಗಿ ದೇವಿಹೊಸೂರ, ಕುಮಠೆ, ಅರಭಾವಿ ಈ ಊರುಗಳಲ್ಲಿದ್ದ ಒಕ್ಕಲತನ ಶಾಲೆಗಳಿಗೆ ಶಿಕ್ಷಕರು ಬಂದರು. ಹೀಗೆ ಎಲ್ಲ ಪ್ರಕಾರದ ಉದ್ಯೋಗಗಳಲ್ಲಿ ತರಬೇತಿ ಹೊಂದಿದ ನಂತರ ನಾಲ್ಕೂ ಜಿಲ್ಲೆಗಳಲ್ಲಿ ೧೯೪೮ರಲ್ಲಿ ಕೆಳಗೆ ತೋರಿಸಿದ ಪ್ರಕಾರ ಶಾಲೆಗಳಲ್ಲಿ ಮೂಲೋದ್ಯೋಗವು ಪ್ರಾರಂಭವಾಯಿತು.

ಜಿಲ್ಲೆಗಳು	ಶಾಲೆಗಳ ಸಂಖ್ಯೆ
ಧಾರವಾಡ	೧೪೮ (೧೭ ಜೀವನ ಶಿಕ್ಷಣ ಶಾಲೆಗಳ ಹೊರತಾಗಿ)
ಬೆಳಗಾಂವ	೧೪೫
ವಿಜಾಪೂರ	೧೩೦
ಕಾರವಾರ	೭೨

ಅದೇ ಸಮಯಕ್ಕೆ ಎಲ್ಲ ಶಿಕ್ಷಣಾಧಿಕಾರಿಗಳನ್ನು ಪುಣೆ, ಧಾರವಾಡ, ಗೋಪನಕೊಪ್ಪ (೧೯೫೦-೫೧)ಗಳಲ್ಲಿ ತರಬೇತಿಕೊಟ್ಟು ಮೇಲ್ವಿಚಾರಣೆಗೆ ಯೋಗ್ಯರನ್ನಾಗಿ ಮಾಡಿದರು. ಪದವೀಧರರಿಗಾಗಿ ೧೯೪೭ರಲ್ಲಿ ಬಿ. ಟಿ. ಕಾಲೇಜದಲ್ಲಿ ಒಂದು ವರ್ಗವನ್ನು ತೆರೆದರು. ಮುಂದೆ ೧೯೪೮ರಲ್ಲಿ ಧಾರವಾಡದಲ್ಲಿಯೇ ಒಂದು ಜೀವನ ಶಿಕ್ಷಣ ಕೇಂದ್ರವನ್ನು ಪ್ರತ್ಯೇಕವಾಗಿ ತೆರೆದರು. ಇದು ಈಗಲೂ ಪದವೀಧರರಿಗೆ ಜೀವನ ಶಿಕ್ಷಣದಲ್ಲಿ ತರಬೇತಿ ಕೊಟ್ಟು ಟ್ರೇನಿಂಗ ಸಂಸ್ಥೆಗಳಿಗಾಗಿ ಶಿಕ್ಷಕರನ್ನು, ಶಾಲೆಗಳಿಗಾಗಿ ಮೇಲ್ವಿಚಾರಕರನ್ನು ತಯಾರಿಸುತ್ತಿದೆ. ಇದಲ್ಲದೆ ೧೯೪೭ರಲ್ಲಿ ಕರ್ನಾಟಕದಲ್ಲಿದ್ದ ೧೯ ಟ್ರೇನಿಂಗ ಕಾಲೇಜುಗಳಲ್ಲಿ ಮೂಲೋದ್ಯೋಗವನ್ನು ಕಡ್ಡಾಯದ ವಿಷಯವನ್ನಾಗಿ ಮಾಡಿದರು. ೧೯೪೭-೪೮ರ ತರುವಾಯ ಹೊರಬಿದ್ದ ಎಲ್ಲ ಶಿಕ್ಷಕರು ಒಂದಿಲ್ಲೊಂದು ಮೂಲೋದ್ಯೋಗದಲ್ಲಿ ತರಬೇತಿ ಪಡೆದಿದ್ದಾರೆ.

ಹೀಗೆ ನಮ್ಮ ಕರ್ನಾಟಕದಲ್ಲಿ 'ಜೀವನ ಶಿಕ್ಷಣ'ದ ಪ್ರಸಾರಕ್ಕಾಗಿ ಪೂರ್ವ ಸಿದ್ಧತೆಯು ಅವ್ಯಾಹತವಾಗಿಯೂ, ಬಹುಮುಖವಾಗಿಯೂ ಸಾಗಿತು. ಈ ವ್ಯಾಪಕ ಸ್ವರೂಪದ ಮುನ್ನಡೆಯು ನಮ್ಮೆಲ್ಲರಿಗೆ ಹೆಮ್ಮೆಯ ಮಾತು. ಅನಂತರದ ಸಂಗತಿಯು.

ವಿಸ್ತರಣೆ

ಜೀವನ ಶಿಕ್ಷಣದ ಪುರಸ್ಕರ್ತರು ಇಷ್ಟಕ್ಕೆ ಸಮಾಧಾನ ಭಾವ ಹೊಂದಲಿಲ್ಲ. ಜೀವನ ಶಿಕ್ಷಣದ ವಿಸ್ತರಣೆಯ ಕಾರ್ಯವನ್ನು ಮುಂದುವರಿಸಬೇಕಾಗಿತ್ತು. ಈ ಕಾರ್ಯಕ್ಕಾಗಿಯೇ ಎಷ್ಟೋ ಶಾಲೆಗಳನ್ನು ಮೂಲೋದ್ಯೋಗ ಶಾಲೆಗಳೆಂದು ಪರಿವರ್ತಿಸಿಟ್ಟರು. ಆದ್ದರಿಂದ ಮುಂದಿನ ಕಾರ್ಯವನ್ನು ಪ್ರಾರಂಭಿಸಿದರು.

೧೯೩೯ರಲ್ಲಿ ತೆರೆದ ವರ್ಧಾ ರಾಷ್ಟ್ರೀಯ ಶಿಕ್ಷಣ ಕೇಂದ್ರವು ೧೯೪೮ರ ವರೆಗೆ ಅವ್ಯಾಹತವಾಗಿ ಸೇವೆಸಲ್ಲಿಸುತ್ತಾ ಬಂದು ಪ್ರತಿ ವರುಷ ಸುಮಾರು ೩೦-೪೦ ಶಿಕ್ಷಕರನ್ನು ತರಬೇತು ಮಾಡಿ ಕಳಿಸುತ್ತಿತ್ತು. ಇನ್ನು ಜೀವನ ಶಿಕ್ಷಣದ ವಿಸ್ತರಣೆಯ ಕಾರ್ಯದಲ್ಲಿ ಈ ಅಲ್ಪ ಪ್ರಮಾಣದ ಸಂಖ್ಯೆಯು ಸಾಲದಾಗಿರುವದನ್ನು ಕಂಡು ಹಿಡಿದು ಆ ಸಂಸ್ಥೆಯನ್ನು ೧೯೪೯ರಲ್ಲಿ ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಲೀನಗೊಳಿಸಿ ಹೊರಬೀಳುವ ಜೀವನ ಶಿಕ್ಷಣ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಿದರು. ೧೯೫೦ರಲ್ಲಿ ಉಳಿದೆಲ್ಲ ಸರಕಾರೀ ಮತ್ತು ಖಾಸಗಿ

ಟ್ರೇನಿಂಗ ಕಾಲೇಜುಗಳಿಗೂ ಜೀವನ ಶಿಕ್ಷಣದ ಅಭ್ಯಾಸ ಪತ್ರಿಕೆಯನ್ನು ಅನುಸರಿಸಲು ಆದೇಶವಿತ್ತರು. ಎಲ್ಲ ಕಾಲೇಜುಗಳು ಈ ಕಾರ್ಯರಂಗಕ್ಕೆ ೧೯೫೦ರಿಂದ ಇಳಿದು ಹೊಸ ಅಭ್ಯಾಸ ಪತ್ರಿಕೆಯನ್ನು ಪ್ರಾರಂಭಿಸಿ ೧೯೫೨ರಿಂದ ಜೀವನ ಶಿಕ್ಷಣದಲ್ಲಿ ತರಬೇತು ಹೊಂದಿದ ಶಿಕ್ಷಕರನ್ನು ನಮ್ಮ ಪ್ರಾಂತಕ್ಕೆ ನೀಡಹತ್ತಿದವು. ಖಾಸಗಿ ಕಾಲೇಜುಗಳೂ ೧೯೫೦ರಲ್ಲಿ ಈ ಹೊಸ ಅಭ್ಯಾಸ ಪತ್ರಿಕೆಯನ್ನು ಬಳಕೆಯಲ್ಲಿ ತಂದು ೧೯೫೨ರಿಂದ ಜೀವನ ಶಿಕ್ಷಣದಲ್ಲಿ ತರಬೇತು ಹೊಂದಿದ ಶಿಕ್ಷಕರನ್ನು ಕೊಡಮಾಡಹತ್ತಿದವು. ೧೯೫೦ರಲ್ಲಿ ಜೀವನ ಶಿಕ್ಷಣ ಶಾಲೆಗಳ ಸಂಖ್ಯೆಯನ್ನೂ ಹೆಚ್ಚಿಸಿದವು. ಧಾರವಾಡ ಜಿಲ್ಹೆಯ ಹಾವೇರಿ ತಾಲೂಕಿನಲ್ಲಿ ಹೊಸರಿತ್ತಿ ಸಮೀಪದಲ್ಲಿ ೧೯ ಶಾಲೆಗಳೂ, ಬಿಜಾಪೂರ ಜಿಲ್ಹೆಯ ಬಾಗಲಕೋಟೆಯ ತಾಲೂಕಿನಲ್ಲಿ ೧೭ ಶಾಲೆಗಳೂ ಕಾರವಾರ ಜಿಲ್ಹೆಯ ಕುಮಠೆ ತಾಲೂಕಿನಲ್ಲಿ ೨೦ ಶಾಲೆಗಳೂ ಹೊಸತಾಗಿ ಜೀವನ ಶಿಕ್ಷಣ ಶಾಲೆಗಳಲ್ಲಿ ಪರಿವರ್ತಿಸಲ್ಪಟ್ಟವು. (ಬೆಳಗಾಂವ ಜಿಲ್ಹೆಯ ಬೈಲಹೊಂಗಲ ತಾಲೂಕಿನಲ್ಲಿ ೧೭ ಶಾಲೆಗಳನ್ನು ಮಾರ್ಪಡಿಸುವ ಬಗ್ಗೆ ಕಾಗದ ಪತ್ರಗಳು ನಡೆದು ಸಕಾಲಕ್ಕೆ ಈ ಕೆಲಸವು ಪೂರ್ತಿಯಾಗದ್ದರಿಂದ ಆ ಜಿಲ್ಹೆಯಲ್ಲಿ ೧೯೫೦ರಲ್ಲಿ ಜೀವನ ಶಿಕ್ಷಣ ಶಾಲೆಗಳು ತೆರೆಯಲ್ಪಡಲಿಲ್ಲ.) ಹೀಗೆ ಕರ್ನಾಟಕದಲ್ಲಿ ೧೯೫೦ರಲ್ಲಿದ್ದ ಜೀವನ ಶಿಕ್ಷಣ ಶಾಲೆಗಳ ಸಂಖ್ಯೆಯು ಕೆಳಗಿನಂತಿತ್ತು :—

ಜಿಲ್ಹೆ	ಕ್ಷೇತ್ರ	ಸಾಲೆಗಳ ಸಂಖ್ಯೆ	ವಿವರಗಳು
(೧) ಧಾರವಾಡ	ಧಾರವಾಡ ಕ್ಷೇತ್ರ	೧೯	೧೯೩೮ರಲ್ಲಿ ತೆರೆದದ್ದು
,,	,, ,,	೯	ಹೊಸತಾಗಿ ,,
(೨) ,,	ಹೊಸರಿತ್ತಿ ,,	೧೯	,, ,,
(೩) ಬಿಜಾಪೂರ	ಬಾಗಲಕೋಟೆ ,,	೧೭	,, ,,
(೪) ಕಾರವಾರ	ಕುಮಠೆ ,,	೨೦	,, ,,
		ಒಟ್ಟು ೮೪	

ಇವಲ್ಲದೆ ಧಾರವಾಡದ ಗಂಡು ಮತ್ತು ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜುಗಳ ಪ್ರ್ಯಾಕ್ಟಿಸಿಂಗ ಶಾಲೆಗಳನ್ನೂ ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾಡಿದರು. ಹೀಗೆ ಒಟ್ಟು ೮೭ ಜೀವನ ಶಿಕ್ಷಣ ಶಾಲೆಗಳು ನಮ್ಮ ಪ್ರಾಂತದಲ್ಲಿ ಕೆಲಸ ಮಾಡ ಹತ್ತಿದವು.

ಕಳೆದ ವರುಷ ಅಂದರೆ ೧೯೫೪ರಲ್ಲಿ ಪುನಃ ಕೆಲವು ಶಾಲೆಗಳನ್ನು ಹೆಚ್ಚಿಸಿದರು. ಸಮಾಜ ವಿಕಾಸ ಕ್ಷೇತ್ರದಲ್ಲಿ ಹುಕ್ಕೇರಿ ಕ್ಷೇತ್ರದಲ್ಲಿ ೧೨ ಮೂಲೋದ್ಯೋಗ ಶಾಲೆಗಳೂ, ಇಂಡೀ ತಾಲೂಕಿನಲ್ಲಿ ಇರುವ ೯ ಮೂಲೋದ್ಯೋಗ ಶಾಲೆಗಳೂ ಜೀವನ ಶಿಕ್ಷಣ ಶಾಲೆಗಳಾದವು. ಅದೇ ವರುಷ ಹುಬ್ಬಳ್ಳಿ ಮುನಸಿಪಾಲ್ಟಿಯ ಹದ್ದಿಯಲ್ಲಿ ಒಂದು, ಜಮುಖಂಡಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಶಾಲೆ ಇನ್ನೊಂದು ಹೀಗೆ ೨ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾಡಿದರು. ಆದ್ದರಿಂದ ೧೯೫೪ರಲ್ಲಿ ನಮ್ಮ ಪ್ರಾಂತದಲ್ಲಿ ಒಟ್ಟು ೧೦೯ ಜೀವನ ಶಿಕ್ಷಣ ಶಾಲೆಗಳಿದ್ದವು. ಈ ವರುಷ ಮಾರ್ಚದಲ್ಲಿ (೧೯೫೫) ಧಾರವಾಡ ಜಿಲ್ಹೆಯಲ್ಲಿ ಪುನಃ ೨೦ ಹೊಸ ಶಾಲೆಗಳಾಗಿವೆ. ಅದ್ದರಿಂದ ಈಗ ಜೀವನ ಶಿಕ್ಷಣ ಶಾಲೆಗಳ ಸಂಖ್ಯೆಯು ೧೨೯ಕ್ಕೆ ಏರಿದೆ. ಇದೇ ಅಗಸ್ಟ ತಿಂಗಳಲ್ಲಿ ಮೆ. ಡಾಯರೆಕ್ಟರ ಸಾಹೇಬರಿಂದ ೭ನೇ ಇಯತ್ತೆ ವರೆಗಿದ್ದ ಎಲ್ಲ ಮೂಲೋದ್ಯೋಗ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾರ್ಪಡಿಸಲು ಆಜ್ಞೆ ಬಂದಿದೆ. ಈ ಎಲ್ಲ ಜಿಲ್ಹೆಗಳ ಏ. ಓ. ಸಾಹೇಬರು ಈ ಕೆಲಸದಲ್ಲಿ ತೊಡಗಿದ್ದಾರೆ. ವರುಷಾಂತ್ಯದಲ್ಲಿ ನಮ್ಮ ನಾಲ್ಕೂ ಜಿಲ್ಹೆಗಳಲ್ಲಿ ಎಷ್ಟೋ ಜೀವನ ಶಿಕ್ಷಣ ಶಾಲೆಗಳು ಕೆಲಸ ಮಾಡುತ್ತಿರುವದನ್ನು ನಾವು ನೋಡಬಹುದು.

ಈ ಶಾಲೆಗಳ ಮೇಲ್ವಿಚಾರಣೆ, ತಪಾಸಣೆ ಮತ್ತು ಮಾರ್ಗ ದರ್ಶನಗಳು ಸರಿಯಾಗಿ ಸಾಗಲೆಂದು ಪ್ರತಿಯೊಂದು ಜಿಲ್ಹೆಯಲ್ಲಿ ಈಗ ಪ್ರತ್ಯೇಕವಾಗಿ ಮೇಲ್ವಿಚಾರಕರನ್ನು ೧೯೫೩ ಅಗಸ್ಟ ತಿಂಗಳಿಂದ ಇಡಲಾಗಿದೆ.

ಈಗ ನಮ್ಮ ಪ್ರಾಂತದಲ್ಲಿದ್ದ ಮೂಲೋದ್ಯೋಗ ಶಾಲೆಗಳ ಮತ್ತು ಜೀವನ ಶಿಕ್ಷಣ ಶಾಲೆಗಳ ವಿಹಂಗಮ ನೋಟವು ಕೆಳಗಿನ ಪತ್ರಿಕೆಗಳಿಂದ ವಿದಿತವಾಗುವದು :—

ಜೀವನ ಶಿಕ್ಷಣ ಶಾಲೆಗಳು

ಜಿಲ್ಹೆ	ಸಾಲೆಗಳ ಸಂಖ್ಯೆ	ವಿವರಗಳು
(೧) ಧಾರವಾಡ	೧೭ ಜಿಲ್ಹಾ ಸ್ಕೂಲ ಬೋರ್ಡ ೨ ಮು. ಸ್ಕೂ. ಬೋರ್ಡ, ಧಾರವಾಡ	೧೯೩೮ರಲ್ಲಿ ತೆರೆಯಲಾಯಿತು.
(೨) ,, ,,	೯ ಜಿ. ಸ್ಕೂ. ಬೋರ್ಡ ೨ ಸರಕಾರಿ	೧೯೫೦ರಲ್ಲಿ ,,
,,	೧೯ ಜಿ. ಸ್ಕೂ. ಬೋರ್ಡ	,, ,,
(೩) ಬಿಜಾಪೂರ	೧೭ ,, ,,	,, ,,
(೪) ಕಾರವಾರ	೨೦ ,, ,,	,, ,,
(೫) ಬೆಳಗಾಂವ	೧೨ ,, ,,	೧೯೫೪ರಲ್ಲಿ ಸಮಾಜ ವಿಕಾಸ ಕ್ಷೇತ್ರದಲ್ಲಿ
(೬) ಬಿಜಾಪೂರ	೯ ,, ,,	,, ,,
(೭) ಧಾರವಾಡ	೧ ಮು. ಸ್ಕೂ. ಬೋರ್ಡ, ಹುಬ್ಬಳ್ಳಿ	,, ,,
(೮) ಬಿಜಾಪೂರ	೧ ಸರಕಾರಿ ಟ್ರೇ. ಕಾಲೇಜ ಜಮಖಂಡಿ	೧೯೫೫ರಲ್ಲಿ
(೯) ಧಾರವಾಡ	೨೦ ಜಿ. ಸ್ಕೂ. ಬೋರ್ಡ, ಧಾರವಾಡ	,,
	೧೨೯	

ಮೂಲೋದ್ಯೋಗ ಶಾಲೆಗಳು

ಜಿಲ್ಹೆ	ಶಾಲೆಗಳ ಸಂಖ್ಯೆ	ವಿವರಗಳು
ಧಾರವಾಡ	೧೩೦	ಜಿಲ್ಹಾ ಸ್ಕೂಲ ಬೋರ್ಡ
ಬಿಜಾಪೂರ	೧೦೪ ೨	,, ,, ಮು. ಸ್ಕೂಲ ಬೋರ್ಡ
ಬೆಳಗಾಂವ	೧೪೦ ೨	ಜಿಲ್ಹಾ ಸ್ಕೂಲ ಬೋರ್ಡ ಮು. ಸ್ಕೂಲ ಬೋರ್ಡ
ಕಾರವಾರ	೫೨	ಜಿಲ್ಹಾ ಸ್ಕೂಲ ಬೋರ್ಡ
	ಒಟ್ಟು ೪೩೦	

ಈ ಪ್ರಕಾರ ನಮ್ಮ ನಾಲ್ಕು ಜಿಲ್ಹೆಗಳಲ್ಲಿ ೧೨೯ ಜೀವನ ಶಿಕ್ಷಣ ಶಾಲೆಗಳೂ ೪೩೦ ಮೂಲೋದ್ಯೋಗ ಶಾಲೆಗಳೂ ಸದ್ಯಕ್ಕೆ ಕೆಲಸ ಮಾಡುತ್ತವೆ. ಈ ೪೩೦ ಶಾಲೆಗಳಲ್ಲಿ ಈ ವರ್ಷದಲ್ಲಿ ಪೂರ್ಣ ಪ್ರಾಥಮಿಕ ಶಾಲೆಗಳನ್ನು

ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾಡುವವರಿದ್ದಾರೆ. ಸ್ವಲ್ಪೇ ದಿನಗಳಲ್ಲಿಯೇ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಜೀವನ ಶಿಕ್ಷಣ ಶಾಲೆಗಳು ತೀವ್ರ ಗತಿಯಿಂದ ತಮ್ಮ ಕಾರ್ಯವನ್ನು ಸಾಗಿಸುವದರಲ್ಲಿ ತಿಲ ಮಾತ್ರವೂ ಸಂದೇಹವಿಲ್ಲ.

ಉಪಸಂಹಾರ

ನಾವು ನಮ್ಮ ಶಾಲೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ನೋಡಿ ಹಿಂದಕ್ಕೆ ನಮ್ಮ ಶಾಲೆಗಳಿಗೆ ಸಂದರ್ಶನವಿತ್ತ ಸಾರ್ಜಂಟ ಸಮಿತಿಯವರು, ಮುಖ್ಯ ಮಂತ್ರಿಗಳು ಹೊಗಳಿದ್ದಾರೆ. ಮೊನ್ನೆ ಮೊನ್ನೆ ಕೇಂದ್ರ ಸರಕಾರದ ಸಲಹೆಗಾರರಾದ ಶ್ರೀ ಸಿ. ವ್ಹಿ. ರಾಮಮೂರ್ತಿಯವರು ನಮ್ಮ ಶಾಲೆ ಕಾಲೇಜುಗಳಿಗೆ ಭೆಟ್ಟಿಯನ್ನಿತ್ತು ಆನಂದ ಮತ್ತು ಸಂತೋಷಗಳನ್ನು ಪ್ರಕಟಿಸಿದ್ದಾರೆ. ಇಂಡೋನೇಶಿಯಾದಿಂದ ಬಂದ ಓರ್ವ ಶಿಕ್ಷಣ ತಜ್ಞರು ನಮ್ಮ ಜೀವನ ಶಿಕ್ಷಣ ಶಾಲೆಗಳನ್ನು ನೋಡಿ ತಮ್ಮ ದೇಶದಲ್ಲಿ ಇಂಥ ಶಾಲೆಗಳನ್ನು ತೆರೆಯಲು ವಿವರಗಳನ್ನೂ ಟಿಪ್ಪಣಿಗಳನ್ನೂ ತೆಗೆದುಕೊಂಡು ಹೋಗಿದ್ದಾರೆ. ಅಖಿಲ ಭಾರತ ಜೀವನ ಶಿಕ್ಷಣ ಪರಿಶೀಲನೆಯ ಸಮಿತಿಯು ಇದೇ ಜುಲೈ ತಿಂಗಳಲ್ಲಿ ನಮ್ಮ ಶಾಲೆ ಕಾಲೇಜುಗಳನ್ನು ಕಂಡು ಮುಕ್ತ ಕಂಠದಿಂದ ಹೊಗಳಿದರಲ್ಲದೆ ಮುಖ್ಯ ಮಂತ್ರಿಯಾಗಿ ಅವರನ್ನು ಒಂದು ಶಾಲೆಯಲ್ಲಿ ಸ್ವಾಗತಿಸಿ ಶಾಲೆಯ ಎಲ್ಲ ಕಾರ್ಯಕಲಾಪಗಳನ್ನು ತೋರಿಸಿದ್ದಕ್ಕಾಗಿ ಆನಂದ ಪಟ್ಟು ಆ ವಿದ್ಯಾರ್ಥಿನಿಗೆ ೧೫ ರೂಪಾಯಿಗಳ ಬಹುಮಾನವಿತ್ತ ಸಂಗತಿಯು ಎಲ್ಲರಿಗೂ ತಿಳಿದಿದೆ. ಇವು ಪ್ರಗತಿಯ ಲಕ್ಷಣಗಳಲ್ಲವೇ ?

ಜೀವನ ಶಿಕ್ಷಣದಲ್ಲಿ ಸಮವಾಯ

ಲೇಖಕರು :— ಶ್ರೀ ರೋಹಿಡೇಕರ ಶಾಮರಾಯರು ಕೊಲ್ಹಾಪೂರ

ಹೊಸಹಾದಿ

ಯಾವುದೇ ಕ್ರಾಂತಿಕಾರಕ ವಿಚಾರವು ಜನರ ಮುಂದೆ ಬಂದ ಕೂಡಲೆ, ಮೊದಲು ಅದಕ್ಕೆ ವಿರೋಧವು ಕಂಡು ಬರುವುದು ಸೃಷ್ಟಿಯ ನಿಯಮ. ೧೯೩೭ರಲ್ಲಿ ಮಹಾತ್ಮಾಜಿಯವರು ಜನರ ಮುಂದಿಟ್ಟ ವರ್ಧಾ ಶಿಕ್ಷಣ ಯೋಜನೆಯೂ ಒಂದು ಕ್ರಾಂತಿಕಾರಕ ವಿಚಾರ. ಅದುದರಿಂದ ಮೊದಲು ಅದಕ್ಕೆ ಸಂಬಂಧಿಸಿ, ವಿರೋಧ, ತಪ್ಪು ತಿಳಿವಳಿಕೆ, ಟೀಕೆ-ಪ್ರತಿಟೀಕೆ ಇವೆಲ್ಲ ನಡೆದದ್ದರಲ್ಲಿ ಆಶ್ಚರ್ಯವಿಲ್ಲ.

ಫೀ ಇಲ್ಲದೆ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಿ ದೊರೆಯಬೇಕು ಎಂಬ ತತ್ತ್ವಕ್ಕೆ ಯಾರ ವಿರೋಧವೂ ಇರಲಿಲ್ಲ. ಮಾತೃಭಾಷೆಯ ಮುಖಾಂತರವೇ ಈ ಶಿಕ್ಷಣವನ್ನು ಕೊಡಬೇಕು ಎಂಬುದನ್ನೂ ಎಲ್ಲರೂ ಒಪ್ಪಿಕೊಂಡರು. ಆದರೆ ಅವರಿಗೆ ಕೊಡತಕ್ಕ ಜ್ಞಾನ ಹಾಗೂ ಅವರಲ್ಲಿ ವಿಕಾಸವಾಗತಕ್ಕ ನೈಪುಣ್ಯವೆಲ್ಲ ಶಕ್ಯವಿದ್ದಷ್ಟು ಮಟ್ಟಿಗೆ ಉತ್ಪಾದಕ ಮೂಲೋದ್ಯೋಗದ ಮುಖಾಂತರ ಕೊಡಲ್ಪಡಬೇಕು ಎಂಬುದನ್ನು ಮಾತ್ರ ಒಪ್ಪಿಕೊಳ್ಳಲು ಅನೇಕ ಶಿಕ್ಷಣ ತಜ್ಞರು ಸಿದ್ಧರಿರಲಿಲ್ಲ. ಅಲ್ಲದೆ ಈ ಉದ್ಯೋಗದಿಂದ ಶಾಲೆಯಲ್ಲಿ ಬಂದ ಉತ್ಪನ್ನದಿಂದ ಶಿಕ್ಷಣದ ವೆಚ್ಚದ ಕೆಲವು ಭಾಗವು ನಡೆಯಬೇಕು ಎಂಬುದಕ್ಕಂತೂ ಅತೀವ ವಿರೋಧವು ಕಂಡು ಬಂದಿತು.

ಯಾಕೆ ಈ ಹೊಸಹಾದಿ ?

ಆದರೆ ಹಿಂದುಸ್ತಾನದ ಅಂದಿನ ಪರಿಸ್ಥಿತಿಯಲ್ಲಿ ಈ ಕಡೆಯ ಎರಡು ತತ್ತ್ವಗಳನ್ನು ಒಪ್ಪಿಕೊಂಡ ವಿನಃ ಶಿಕ್ಷಣವನ್ನು ಸಾರ್ವತ್ರಿಕವಾಗಿ ಹಾಗೂ ಪುಕ್ಕಟೆಯಾಗಿ ಕೊಡಲು ಸಾಧ್ಯವಿರಲಿಲ್ಲ. ಇದಕ್ಕೂ ಹೆಚ್ಚಾಗಿ ಶೈಕ್ಷಣಿಕ ದೃಷ್ಟಿಯಿಂದ ನೋಡಿದರೂ ಕೇವಲ ಪುಸ್ತಕೀ ವಿದ್ಯೆಗಿಂತ, ಚಟುವಟಿಕೆಗಳ ಮುಖಾಂತರ ಬಾಲಕರಿಗೆ ದೊರೆತ ವಿದ್ಯೆಯಿಂದ ಅವರ ಸರ್ವಾಂಗೀಣ ವಿಕಾಸಕ್ಕೆ ಹೆಚ್ಚಿನ ಬಲಬರುತ್ತದೆಂಬುದನ್ನು ಶಿಕ್ಷಣ ತಜ್ಞರು ಅಮೇರಿಕೆಯಂತಹ ಮುಂದುವರಿದ ದೇಶದಲ್ಲಿಯೂ ಒಪ್ಪಿಕೊಂಡು ಪ್ರಚಾರದಲ್ಲಿ ತರಹತ್ತಿದ್ದರು. ಮಹಾತ್ಮಾಜಿಯವರು ಇದಕ್ಕೂ ಒಂದು ಹೆಜ್ಜೆ ಮುಂದೆ ಇಟ್ಟರು. ಒಂದಕ್ಕೊಂದು ಸಂಬಂಧವಿಲ್ಲದ ತರತರದ ಚಟುವಟಿಕೆಗಳಿಂದ ಬಾಲಕರ ಮನರಂಜನೆಯಾಗಬಹುದು; ವಿದ್ಯೆಯನ್ನು ಕಲಿಸಲು ಮಕ್ಕಳ ಒಲವನ್ನು ಪಡೆಯಬಹುದು. ಆದರೆ ಶಿಕ್ಷಣವು ಮುಗಿದ ಬಳಿಕ, ಸ್ವಾವಲಂಬಿಯಾಗಿ ಬಾಳುವ ಧೈರ್ಯವು ಅವರಲ್ಲಿ ಬರಲಾರದು; ಅಲ್ಲದೆ, ವಿದ್ಯೆ ಕಲಿಯುವಾಗಲೂ ದಿನನಿತ್ಯ ತಮ್ಮ ಪ್ರಗತಿಯನ್ನು ತಾವೇ ಅಳೆದುಕೊಳ್ಳಲು ಹೆಚ್ಚು ಅನುಕೂಲವಾಗಲಾರದು. ಇಡಿಯ ಶಿಕ್ಷಣವು ಸುಸಂಬದ್ಧವಾಗಲಾರದು. ಅದಕ್ಕಾಗಿ ಸ್ಥಾನಿಕ ಪರಿಸ್ಥಿತಿಗನುಸರಿಸಿ ಒಂದು ಉತ್ಪಾದಕ ಉದ್ಯೋಗವನ್ನು ಮೂಲೋದ್ಯೋಗವನ್ನಾಗಿಟ್ಟುಕೊಂಡು ಅದರ ಮುಖಾಂತರ ಶಕ್ಯವಿದ್ದಷ್ಟು, ಎಲ್ಲ ವಿದ್ಯೆಯನ್ನೂ ಕೊಡುತ್ತ ಹೋದರೆ, ವಿದ್ಯೆಯು ಹೆಚ್ಚು ಮನನವಾಗುವುದು, ತಿಳಿಯುವುದು, ಮತ್ತು ಸ್ವಾವಲಂಬನ, ಸಹಕಾರ, ಉದ್ಯೋಗಪ್ರಿಯತೆ, ರಚನಾತ್ಮಕ ಶಕ್ತಿಯ ಅನುಭವ, ಆತ್ಮವಿಶ್ವಾಸ ಇವೆಲ್ಲ ಬಾಲಕರಲ್ಲಿ ವಿಕಸಿತವಾಗಿ ಅವರ ಸರ್ವಾಂಗೀಣ ಉನ್ನತಿಯು ಸಾಧಿಸುವುದು. ಇದೇ ಮಹಾತ್ಮಾಜಿಯವರು ಮೊದಲು ಹಾಕಿಕೊಟ್ಟ ಹೊಸಹಾದಿ. ಸಮವಾಯದ ಮೂಲತತ್ತ್ವ ಇದರಲ್ಲಿ ಅಡಕವಾಗಿದೆ.

ಜೀವನ ಶಿಕ್ಷಣ

"ಶಿಕ್ಷಣವು ಸ್ವಾವಲಂಬಿಯಾಗುವುದೇ ಈ ಯೋಜನೆಯ ಯಶಸ್ಸಿನ ಪರೆಗಲ್ಲು" ಎಂದು ಮಹಾತ್ಮಾಜಿಯವರು ಹೇಳಿದ್ದು ನಿಜ. ಆದರೆ ಝಾಕೀರ ಹುಸೇನ ಸಮಿತಿಯವರು ಅದರ ಸ್ವಾವಲಂಬನ ತತ್ತ್ವಕ್ಕಿಂತಲೂ ಅದರಲ್ಲಿ ಅಡಕವಾದ ಶೈಕ್ಷಣಿಕ ತತ್ತ್ವಕ್ಕೆ ಹೆಚ್ಚು ಮಹತ್ವ ಕೊಟ್ಟರು. ಕೇವಲ ಓದು, ಬರೆಹಗಳ ಮುಖಾಂತರ ದೊರೆತ ವಿದ್ಯೆ ನಿಜವಾದ ಉಪಯುಕ್ತತೆಯುಳ್ಳದ್ದಲ್ಲ; ಆದರೆ ಚಟುವಟಿಕೆ, ಉತ್ಪಾದಕ ಕ್ರಿಯೆ, ಹಾಗೂ ಪ್ರತ್ಯಕ್ಷ ಜೀವನದ ಅನುಭವ ಇವುಗಳ ಮುಖಾಂತರ ದೊರೆತ ವಿದ್ಯೆ ಕೂಡಲೆ ರಕ್ತಗತವಾಗಿ ಶೀವ್ರ ಸ್ಥಿರವಾಗಿ ನಿಲ್ಲುವುದು ಮತ್ತು ಜೀವನಕ್ಕೆ ಉಪಯುಕ್ತವಾಗುವುದು ಎಂಬುದಕ್ಕೆ ಮಾನಸಶಾಸ್ತ್ರದ ಶಿಕ್ಷಣಶಾಸ್ತ್ರದ ಆಧಾರಗಳನ್ನು ಕೊಟ್ಟು ಸಮವಾಯದ ವಿಧಾನವನ್ನು ತಿಳಿಯಪಡಿಸಿದರು. ೧೯೪೫ರಲ್ಲಿ ಮಹಾತ್ಮಾಜಿಯವರು ಇಡಿಯ ಜೀವನವೇ ನಮ್ಮ ಶಿಕ್ಷಣದ ಅಡಿಗಲ್ಲು. ಅದರ ಆಧಾರದ ಮೇಲೆಯೇ ನಮ್ಮ ಶಿಕ್ಷಣದ ಮಂದಿರವು ನಿರ್ಮಿತವಾಗಬೇಕೆಂಬ ತತ್ತ್ವವನ್ನು ನಿಲ್ಲಿಸಿದರು. ಅಂದಿನಿಂದ ವರ್ಧಾ ಶಿಕ್ಷಣ ಯೋಜನೆಗೆ ಹೆಚ್ಚಿನ ವ್ಯಾಪಕತೆಯುಂಟಾಗಿ ಜೀವನ ಶಿಕ್ಷಣದ ಸ್ವರೂಪವನ್ನು ಪಡೆಯಿತು. ಮೂಲೋದ್ಯೋಗವೊಂದೇ ಶಿಕ್ಷಣದ ಕೇಂದ್ರವಾಗಿರದೆ, ಅದರ ಜೊತೆಗೆ ನಮ್ಮ ಸುತ್ತಲಿನ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳೂ ಕೇಂದ್ರಗಳಾಗಿ, ಇವು ಮೂರೂ ಕೂಡಿ ಸಮವಾಯದ ವಿಧಾನಕ್ಕೆ ಆಧಾರಸ್ತಂಭಗಳಾಗಿ ನಿಂತಿವೆ. ಇದೇ ಜೀವನ ಶಿಕ್ಷಣ.

ತಪ್ಪು ಕಲ್ಪನೆಗಳು

“ ಶೀಳೀತು ಬಿಡ್ರಿ. ಸಾಲ್ಯಾಗ ತಕಲೀ, ರಾಟಿ, ಮಗ್ಗಾ ಇಟ್ಟು ನೂಲಾಕ-ನೇಯಾಕ ಕಲಿಸಿದರಾತು; ಇದು ಹೊಂಯಿಂದಲ್ಲೊ ನಿಮ್ಮ ಗಾಂಧೆಪ್ಪ ಹೇಳಿದ್ದ ?” ಎಂದು ಕೇಳುವ ತಿಳಿಯದ ಜನರಿಗೇನು ಕೊರತೆಯಿಲ್ಲ. ಉಳಿದ ವಿಷಯಗಳ ಜೊತೆಗೆ ಕೇವಲ ನೂಲುವುದನ್ನು ನೇಯುವದನ್ನು ಅಥವಾ ಒಕ್ಕಲತನವನ್ನು ಅಥವಾ ಬಡಿಗತನವನ್ನು ಕಲಿಸಿದ ಮಾತ್ರಕ್ಕೆ ಅವು ಜೀವನ ಶಿಕ್ಷಣ ಶಾಲೆಗಳಲ್ಲ. ಅವು ಮೂಲೋದ್ಯೋಗ ಶಾಲೆಗಳು. ಅವುಗಳಲ್ಲಿ ನಡೆಯುತ್ತಿರುವ ಕಲಿಸುವ ವಿಧಾನವು ಸಾಮಾನ್ಯ ಶಾಲೆಗಳಲ್ಲಿದ್ದಂತೆ ಇದೆ, ಸಮವಾಯವಲ್ಲ.

“ ಅಲ್ಲಾ ಮುಂಜಾನಿಂದ ಸಂಜೀತನಾ ನೂಲಾಕ ನೇಯಾಕ ಕಲಿಸಿದರ, ನಮ್ಮ ಮಕ್ಕಳಿಗೆ ವಿದ್ಯಾ ಯಾನ

ಬರಬೇಕು ?'' ಎಂದು ಕೇಳುವವರೂ ಇದ್ದಾರೆ. ಶಾಲೆಗಳಲ್ಲಿ ವಿದ್ಯೆ (ಎಂದರೆ ಪುಸ್ತಕೀ ವಿದ್ಯೆ) ಯನ್ನು ಪೂರ್ಣ ನಿಲ್ಲಿಸಿ, ಯಾವಾಗಲೂ ಏನಾದರೊಂದು ಉದ್ಯೋಗ ಮಾಡಲು ಹಚ್ಚುತ್ತಾರೆಂದು ಇವರ ತಿಳಿವಳಿಕೆ. ಆದರೆ ಸಮವಾಯ ಶಿಕ್ಷಣ ವಿಧಾನದಲ್ಲಿ ಪುಸ್ತಕದಲ್ಲಿದ್ದ ವಿದ್ಯೆಯು ಬರುತ್ತದಿಷ್ಟೇ ಅಲ್ಲ, ಅದು ಹೆಚ್ಚು ದೃಢವಾಗಿ ಮನನವಾಗುತ್ತಿದೆ ಎಂಬುದನ್ನು ಅವರು ತಿಳಿಯಬೇಕು.

"ಜಗತ್ತಿನಾಗ ನೂಲೂದು ನೇಯೂದು ಬಿಟ್ರೆ ಮತ್ತೊಂದ ಇಲ್ಲೇ ಇಲ್ಲೇನು ? ಅದನ್ನs ಯಾಕ ತೊಗೋಬೇಕು ?" ಎಂಬುದು ಮೂರನೆಯ ಪ್ರಶ್ನೆ. ನೂಲುವುದು ನೇಯುವುದನ್ನೇ ತೆಗೆದುಕೊಳ್ಳಬೇಕೆಂದು ಯಾರು ಹೇಳುವರು ? ನಿಮ್ಮ ಊರಿನ ಸ್ಥಾನಿಕ ಪರಿಸ್ಥಿತಿಗೆ ಯೋಗ್ಯವಾದ ಬೇರೆ ಉತ್ಪಾದಕ ಉದ್ಯೋಗವನ್ನು ತೆಗೆದುಕೊಂಡರೂ ಬರುವದು. ಉದಾಹರಣಾರ್ಥವಾಗಿ, ಕೆಲವು ಶಾಲೆಗಳಲ್ಲಿ ಒಕ್ಕಲುತನವಿದೆ; ಕೆಲವು ಕಡೆಗಳಲ್ಲಿ ಬಡಿಗತನವಿದೆ. ಇದರಂತೆಯೇ, ಗಡಿಗೆ ಮಡಿಕೆಗಳನ್ನು ಮಾಡುವುದು, ಚರ್ಮದ ಕೆಲಸ, ಹೊಲಿಗೆಯ ಕೆಲಸ, ಅಥವಾ ಇನ್ನಿತರ ಯಾವುದೇ ಉತ್ಪಾದಕ ಮುಖ್ಯ ಉದ್ಯೋಗವನ್ನು ಇಟ್ಟುಕೊಳ್ಳಬಹುದು.

"ಇದೆಲ್ಲಾ ಆತ್ರಿ. ಆದ್ರ ಎಲ್ಲಾನೂ ಉದ್ಯೋಗದ ಮುಖಾಂತರೇನೇ ಕಲಿಸಬೇಕಂತ ಯಾಕ ಹಟಾ. ಮತ್ತ ಸಾಧ್ಯರs ಅದs ಏನು ?" ಎನ್ನುವುದು ನಾಲ್ಕನೆಯ ತಪ್ಪು ತಿಳಿವಳಿಕೆ. ಎಲ್ಲವನ್ನೂ ಉದ್ಯೋಗದ ಮುಖಾಂತರವೇ ಕಲಿಸಬೇಕೆಂದು ಯಾರು ಹಟಹಿಡಿದಿರುವರು ? ಶಕ್ಯವಿದ್ದಷ್ಟನ್ನೇ ಅದು ಸಹಜವಾದ ಸಮವಾಯ ಸಾಧ್ಯವಿದ್ದಲ್ಲಿ ಕಲಿಸಬೇಕು ಎಂದು ಮಹಾತ್ಮಾಜಿಯವರೇ ಹೇಳಿರುವರು. ಅಲ್ಲದೆ ಜೀವನ ಶಿಕ್ಷಣದಲ್ಲಿ ಮೂಲೋದ್ಯೋಗವೊಂದೇ ಸಮವಾಯದ ಕೇಂದ್ರವಲ್ಲ. ನೆರೆಹೊರೆಯ ಕೆರೆ, ತೋಟ, ಹಳ್ಳಗಳು, ಹೊಲ, ಬೆಳೆ, ರಾತ್ರಿ, ಹಗಲು, ಮಳೆ, ಮೊದಲಾದ ನೈಸರ್ಗಿಕ ಪರಿಸ್ಥಿತಿ, ಹಬ್ಬ ಹುಣ್ಣಿವೆ, ಜಾತ್ರೆ, ಉತ್ಸವ, ಗುಡಿ-ಗುಂಡಾರ, ಮದುವೆ-ಮುಂಜಿವೆ, ಪುರಾಣ, ಪುಣ್ಯಕತೆ ಮೊದಲಾದ ಸಾಮಾಜಿಕ ಪರಿಸ್ಥಿತಿಯು ಇದಲ್ಲದೆ, ಶಾಲೆ, ಮನೆ, ಓಣಿ, ಹಳ್ಳಿ, ನೆರೆಹೊರೆ ಇವುಗಳ ಸ್ವಚ್ಛತೆ ಮೊದಲಾದ ಸ್ವಚ್ಛತೆಯ ಕೆಲಸವೂ ಜೀವನ ಶಿಕ್ಷಣದಲ್ಲಿ ಸಮವಾಯಕ್ಕೆ ಕೇಂದ್ರಗಳಾಗಿವೆ. ಇವಾವುದಕ್ಕೂ ಸಂಬಂಧಿಸದ ವಿದ್ಯೆ ಅದೆಂತ ವಿದ್ಯೆ ? ಒಂದು ವೇಳೆ ಅಂತಹದೇನಾದರೂ ಕ್ವಚಿತ್ತಾಗಿ ಇದ್ದರೆ ಅದನ್ನು ಕಲಿಯಲೇಬೇಕು, ಕಲಿಸಲೇಬೇಕು ಎಂಬ ಹಟವಿದ್ದರೆ, ಅದನ್ನು ಸಮವಾಯ ಪದ್ಧತಿಯಿಂ ಲೇ ಕಲಿಸಬೇಕೆಂದು ಹಟಹಿಡಿಯಲು ಯಾರೂ ಹೇಳಿಲ್ಲ

"ಹೌದು. ಆದರೆ ಅಭ್ಯಾಸ ಪತ್ರಿಕೆಯಲ್ಲಿ ಕಂಡ ಬರುವ ಇತಿಹಾಸ, ಭೂಗೋಲ, ವ್ಯಾಕರಣ, ಸಾಮಾನ್ಯ ವಿಜ್ಞಾನ ಇವೆಲ್ಲಾ ವಿಷಯಗಳನ್ನು ಸಮವಾಯದಿಂ ಕಲಿಸಲು ಹೇಗೆ ಸಾಧ್ಯ ?" ಎಂಬುದು ಕೆಲವು ಶಿಕ್ಷಕ ಪ್ರಶ್ನೆ. ಇವರಲ್ಲಿ ಕೆಲವರು ಕಲಿಸುವ ಕೆಲಸವನ್ನೇ ಬೇ ರದಿಂದ ಮಾಡುವಂತಹರು. "ಯಾಕ ಇದೆಲ್ಲಾ ಒಣ ಉಸಾಬರಿ ? ಸುಮ್ಮ ಪುಸ್ತಕ ಕೈಯ್ಯಾಗ ಹಿಡಿದು ಕ ಸೂದು ಆರಾಮ ನೋಡಪಾ." ಎಂದು ಹೇಳುವವರಿವರು ಇಂತಹರಿಗೆ ಏನು ಹೇಳಿದರೂ ಮನವರಿಕೆಯಾಗುವದಿಲ್ಲ ಆದ್ದರಿಂದ ಅವರಿಗೆ ಉತ್ತರ ಕೊಡಲು ನಾನು ಯತ್ನಿಸ ವದಿಲ್ಲ. ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರಾಗಲು ಅವರು ಅನರ್ಹರೆಂದು ನನ್ನ ಅಭಿಪ್ರಾಯ. ಆದರೆ ಕೆ ವರು ಮಾತ್ರ ಸಮವಾಯದ ನಿಜವಾದ ಕಲ್ಪನೆ ಮಾ ಕೊಳ್ಳಬೇಕೆಂದು ಈ ಪ್ರಶ್ನೆ ಕೇಳುತ್ತಾರೆ. ಅವರಿಗೆ ನನ್ನ ಉತ್ತರ ಕೆಳಗಿನಂತೆ ಇದೆ.

ಅಸಂಬದ್ಧ ಸಮವಾಯ

೧) ಒಬ್ಬ ಶಿಕ್ಷಕರಿಗೆ ಟಂಡ್ರಾ ಪ್ರದೇಶದ ಜನ ಜೀವನವನ್ನು ಕಲಿಸಬೇಕಾಗಿತ್ತು.

ಶಿಕ್ಷಕ :— ನಾವು ಮೈಮೇಲೆ ಯಾವ ಬಟ್ಟೆಗಳನ್ನು ಧರಿಸುತ್ತೇವೆ ?

ಬಾಲಕರು:— ನೂಲಿನದು.

ಶಿಕ್ಷಕ:— ಮತ್ತೆ ಏತರಿಂದ ಬಟ್ಟೆಗಳನ್ನು ಮಾಡ ತ್ತಾರೆ ?

ಬಾಲಕರು:— ಉಣ್ಣೆಯಿಂದ.

ಶಿಕ್ಷಕ :— ಹಾಗಾದರೆ ಉಣ್ಣೆಯ ಬಟ್ಟೆಗಳನ್ನು ಧ ಸುವ ಟಂಡ್ರಾ ಪ್ರದೇಶದ ಜನರ ಜೀವನದ ಬಗ್ಗೆ ಇಂದ ಅಭ್ಯಾಸ ಮಾಡುವಾ.

ಒಬ್ಬ ಬಾಲಕ :— ಮತ್ತೆ ನಾವೂ ಕೆಲವು ಸ ಉಣ್ಣೆಯ ಬಟ್ಟೆಯನ್ನು ಧರಿಸುತ್ತೇವೆ. ಆಗ ನಾ ಟಂಡ್ರಾ ಪ್ರದೇಶದವರಾಗುತ್ತೇವೇನ್ರಿ ?

ಶಿಕ್ಷಕ :— ಹಾಂಗೆಲ್ಲಾ ಕೇಳಬಾರ್ದು ಸಮ್ಮಗೆ ಕೂಡ್ರು, ಇಲ್ಲಿ ಸಮವಾಯ ಸತ್ತಂತಾಯಿತು.

೨) ಒಬ್ಬ ಶಿಕ್ಷಕನು ಮೇಜಿನ ಮೇಲೆ ಚರಖಾ ತಂದಿಟ್ಟು "ಇದೇನು?" ಎಂದು ಬಾಲಕರನ್ನು ಕೇಳಿದನು.

ಬಾಲಕರು :— ಇದು ಚರಖಾ.

ಶಿಕ್ಷಕ :— ಇದರಿಂದ ಏನು ಮಾಡತ್ತಾರೆ ?

ಬಾಲಕ :— ನೂಲುತ್ತಾರೆ.

ಶಿಕ್ಷಕ :— ನೂಲಿನಿಂದ ಏನು ತಯಾರಾಗುತ್ತದೆ ?

ಬಾಲಕ :— ಬಟ್ಟೆ.

ಶಿಕ್ಷಕ :— ಅಕಬರನ ಕಾಲದಲ್ಲಿ ಚರಖಾದಿಂದ ನೂತು ಬಟ್ಟೆಯನ್ನು ತಯಾರಿಸುತ್ತಿದ್ದರು. ಇಂದು ಆ ಅಕಬರನ ಚರಿತ್ರೆಯನ್ನು ಅಭ್ಯಾಸ ಮಾಡುವಾ.

೩) ಇದು ಸರಿಯಾದ ಸಮವಾಯವಲ್ಲ. ಇನ್ನೊಂದು ಪಾಠದಲ್ಲಿ :

ಶಿಕ್ಷಕ :— (ತನ್ನ ಕೊರಳಲ್ಲಿಯ ದಾರವನ್ನು ತೋರಿಸಿ) ಇದೇನು ?

ಬಾಲಕ :— ಅದು (ಜನಿವಾರ)-(ಶಿವದಾರ)

ಶಿಕ್ಷಕ :— ಅದನ್ನು ಏತರಿಂದ ತಯಾರಿಸುತ್ತಾರೆ ?

ಬಾಲಕ :— ನೂಲಿನಿಂದ.

ಶಿಕ್ಷಕ :— ಮೀನಹಿಡಿಯುವ ಜಾಳಿಗೆಯನ್ನು ಏತರಿಂದ ತಯಾರಿಸುತ್ತಾರೆ ?

ಬಾಲಕ :— ನೂಲಿನಿಂದ ಅಂತ ಕಾಣ್ಸತ್ತದ.

ಶಿಕ್ಷಕ :— ಹೌದು. ಹಾಗಾದರೆ ಇಂದು ಮೀನಗಾರರ ಜೀವನದ ಬಗೆಗೆ ಕಲಿಯುವಾ.

ಇದೂ ಅಸಂಬದ್ಧ ಸಂಬಂಧೀಕರಣವೇ. ಹಾಗಾದರೆ ಸುಸಂಬದ್ಧ ಸಮವಾಯವನ್ನು ಹೇಗೆ ಸಾಧಿಸಬೇಕು?

ಸುಸಂಬದ್ಧ ಸಮವಾಯ

ಮೇಲಿನ ಮೂರು ಉದಾಹರಣೆಗಳಲ್ಲಿ ಶಿಕ್ಷಕನು ಅನುಕ್ರಮವಾಗಿ ಟಂಡ್ರಾ ಪ್ರದೇಶದ ಜನರ ಜೀವನ, ಅಕಬರನ ಚರಿತ್ರೆ, ಮೀನುಗಾರರ ಜೀವನ ಇವನ್ನು ಕಲಿಸುವ ಗುರಿಯಿಟ್ಟುಕೊಂಡು ಹೇಗಾದರೂ ಮಾಡಿ ಮೂಲೋದ್ಯೋಗದೊಡನೆ ಸಂಬಂಧ ಹಚ್ಚಲು ಯತ್ನಿಸಿದನು. ಆದ್ದರಿಂದ ಸಮವಾಯವು ಸಾಧಿಸಲಿಲ್ಲ ಅಥವಾ ಹಾಸ್ಯಾಸ್ಪದವಾಯಿತು.

ಸಮವಾಯದ ಮೊತ್ತಮೊದಲಿನ ಮುಖ್ಯ ತತ್ತ್ವವೆಂದರೆ ಕ್ರಿಯೆ ಹಾಗು ಜ್ಞಾನ ಇವುಗಳ ಅಭಿನ್ನ ಸಂಬಂಧ. ಹಾಲಿನಲ್ಲಿ ತುಪ್ಪ ಬೆರೆತಂತೆ ಅದನ್ನು ಕಡೆದು ತೆಗೆಯಬೇಕಾಗುವುದು. ಕೈಕೊಂಡ ಕ್ರಿಯೆ ನಮ್ಮ ಗುರಿ. ಅದರಲ್ಲಿ ಸಹಜವಾಗಿ ಜ್ಞಾನದ ಉಗಮವಾಗಬೇಕು. ಕೈಕೊಂಡ ಕ್ರಿಯೆಯನ್ನು, ಉಪಕ್ರಿಯೆಗಳನ್ನು ಅಚ್ಚುಕಟ್ಟಾಗಿ ಪೂರ್ಣ ಮಾಡಲು ಯತ್ನಿಸುವಾಗ, ಹೆಜ್ಜೆ ಹೆಜ್ಜೆಗೆ ಅವರ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು, ಏಕೆ ಎಂತು ಎಂಬುದನ್ನು ಅರಿತುಕೊಳ್ಳಲು ಬಾಲಕರನ್ನು ಪ್ರೋತ್ಸಾಹಿಸಬೇಕು. ಅವರಲ್ಲಿ ಜಿಜ್ಞಾಸುವೃತ್ತಿ ಕೆರಳಿದೊಡನೆ, ತಾವಾಗಿಯೇ ಅನೇಕ ಪ್ರಶ್ನೆಗಳನ್ನು ಕೇಳತೊಡಗುವರು. ಅವುಗಳನ್ನು ಸಮರ್ಪಕವಾಗಿ ಚರ್ಚಿಸುತ್ತ ಶಿಕ್ಷಕರು ಸರಿಯಾದ ಜ್ಞಾನವನ್ನು ಕೊಡಬಹುದು.

ಎರಡನೆಯದಾಗಿ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಮತ್ತು ಮೂಲೋದ್ಯೋಗ ಇವೆಲ್ಲ ಕೇಂದ್ರಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು, ಋತುಮಾನ, ಸ್ಥಾನಿಕ ಪರಿಸ್ಥಿತಿ, ಬಾಲಕರ ಯೋಗ್ಯತೆ ಇವುಗಳನ್ನೆಲ್ಲ ಲಕ್ಷದಲ್ಲಿಟ್ಟು ಆರಿಸಿಕೊಳ್ಳಬೇಕು. ಅಂದರೆ ಜ್ಞಾನಾರ್ಜನೆಯ ಪ್ರಸಂಗಗಳು ತಾವಾಗಿಯೇ ಹೆಚ್ಚು ಸಹಜವಾಗಿ ಉದ್ಭೂತವಾಗುವವು. ಶಿಕ್ಷಕನ ಬುದ್ಧಿ ಮಾತ್ರ ಆ ದಿಸೆಯಲ್ಲಿ ಕೆಲಸ ಮಾಡುತ್ತಿರಬೇಕು.

ಮೂರನೆಯದಾಗಿ ಚಟುವಟಿಕೆಗಳ ಉಪಕ್ರಿಯೆಗಳು ಒಪ್ಪೊತ್ತಿನಲ್ಲಿ ಮುಗಿಯುವಂತಹವಿರಬೇಕು. ಅಂದರೆ ಆ ಉಪಕ್ರಿಯೆಗೆ ಪೂರ್ಣತೆಯುಂಟಾಗಿ ಅದರಿಂದ ಶೈಕ್ಷಣಿಕ ಫಲಪ್ರಾಪ್ತಿಯಾಗುವುದು. ಸರಕಾರದವರು ಪ್ರಸಿದ್ಧ ಪಡಿಸಿದ "ವರ್ಧಾ ರಾಷ್ಟ್ರೀಯ ಶಾಲೆಯ ಚಟುವಟಿಕೆಗಳ ಕಾರ್ಯಕ್ರಮದ ಯೋಜನೆ" ಎಂಬ ಪುಸ್ತಿಕೆಯು ಮಾರ್ಗದರ್ಶಕವಾಗಿದೆ.

ನಾಲ್ಕನೆಯದಾಗಿ ಚಟುವಟಿಕೆಯನ್ನು ಸಾಗಿಸುವಾಗ ಶಿಕ್ಷಕರು "ಸುಮ್ಮನೆ ನಾನು ಹೇಳಿದಷ್ಟು ಕೆಲಸ ಮಾಡಿರಿ" ಎಂದು ಸರ್ವಾಧಿಕಾರೀ ಮನೋವೃತ್ತಿಯಿಂದ ವರ್ತಿಸಕೂಡದು. "ಹೇಗಾದರೂ ಕೆಲಸ ಮುಗಿದರೆ ಸಾಕು" ಎಂದು ಅನ್ನಬಾರದು. ಬಾಲಕರಿಗೆ ತಮ್ಮ ಚಟುವಟಿಕೆಯ ಏನು, ಏಕೆ, ಎಂತು ಎಂಬವುಗಳನ್ನೆಲ್ಲ ತಿಳಿದುಕೊಳ್ಳಲು ಅಸ್ಪದವಿರಬೇಕು.

ಚಟುವಟಿಕೆಗಳನ್ನು ಶಿಸ್ತಿನಿಂದ ಸಾಗಿಸಬೇಕು, ಸಲಕರಣೆಗಳ ಸರಿಯಾದ, ಸುವ್ಯವಸ್ಥಿತ ಹಂಚುವಿಕೆ. ಉಪಯೋಗ, ಸಹಕಾರದಿಂದ ಕಾರ್ಯ, ತಿರುಗಿ ಆ ಸಾಧನ-ಸಾಮಗ್ರಿಗಳನ್ನು ಸುವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ಇಡುವುದು ಇವೆಲ್ಲ ಸಂಗತಿಗಳ ಕಡೆಗೆ ಪ್ರತಿನಿತ್ಯ ಲಕ್ಷ್ಯಕೊಡಬೇಕು. ಅಚ್ಚುಕಟ್ಟಾಗಿ ಕೆಲಸ ಮಾಡುವ ಚಟವು ಬಾಲಕರಲ್ಲಿ ನಿರ್ಮಾಣವಾಗಬೇಕು. ಇದು ಐದನೆಯದು.

ಆರನೆಯದಾಗಿ, ಮಾಡಿದ ಕಾರ್ಯಗಳ ವಿವರಗಳನ್ನು ಸುಸಂಬದ್ಧವಾಗಿ ಹೇಳುವುದು ಹಾಗೂ ಬರೆದಿಡುವುದು. ಬಂದ ಅಡೆತಡೆಗಳ ಬಗ್ಗೆ ಚರ್ಚೆ, ಅವುಗಳನ್ನು ನಿವಾರಿಸುವ ರೀತಿಯನ್ನು ತಿಳಿಯುವುದು ಇವನ್ನು ಮರೆಯಲಾಗದು.

ಇಷ್ಟೆಲ್ಲ ಮಾಡಿದ ಬಳಿಕ, ಒಂದು ಮಹತ್ತ್ವದ ಮಾತನ್ನು ಲಕ್ಷ್ಯದಲ್ಲಿಡಬೇಕು. ಪ್ರತಿಯೊಂದು ಒಪ್ಪೊತ್ತಿನಲ್ಲಿ ನಡೆದ ಚಟುವಟಿಕೆಗೆ ಪ್ರತಿನಿತ್ಯ ಹೊಸ ಹೊಸ ವಿಷಯಗಳನ್ನು ಅಭ್ಯಾಸಕ್ರಮದಿಂದ ಆರಿಸಿ ಸಂಬಂಧೀಕರಣ ಮಾಡಿಯೇ ಬಿಡುವೆನೆಂಬ ಹಟಕ್ಕೆ ಬೀಳಕೂಡದು. ಈಗಿನ ಕೃತ್ರಿಮ ಪರಿಸ್ಥಿತಿಯಲ್ಲಿ ನಿಮ್ಮ ಅಭ್ಯಾಸಕ್ರಮದ ಕೆಲವೊಂದು ವಿಷಯ ವಿಭಾಗಗಳಿಗೆ ಚಟುವಟಿಕೆಯೊಂದಿಗೆ ನೇರವಾದ ಸಹಜ ಸಮವಾಯ ದೊರೆಯಲಿಕ್ಕಿಲ್ಲ. ಅಂತಹ ವಿಷಯಗಳನ್ನು ಪ್ರತ್ಯೇಕ ಸಾಮಾನ್ಯ ಪಾಠಗಳಂತೆ ತೆಗೆದುಕೊಳ್ಳಬೇಕು. ಮತ್ತು ಚಟುವಟಿಕೆಗಳಲ್ಲಿ ಪ್ರಾಸಂಗಿಕವಾಗಿ ಸಮವಾಯದಿಂದ ದೊರೆತ ಜ್ಞಾನವನ್ನು ಸುವ್ಯವಸ್ಥಿತಗೊಳಿಸಲು, ದೃಢೀಕರಿಸಲು ಸಾದಾಪಾಠಗಳನ್ನು ತೆಗೆದುಕೊಳ್ಳಬೇಕು.

ಸುಸಂಬದ್ಧವಾದ ಸಮವಾಯವು ಸಾಧಿಸಬಹುದಾದ ಕೆಲವು ಉದಾಹರಣೆಗಳು

೧) ಚಟುವಟಿಕೆ :— ವಸಂತೋತ್ಸವದ ಸಮಯಕ್ಕೆ ಸೃಷ್ಟಿನಿರೀಕ್ಷಣೆ.

ಇಯತ್ತೆ— ೩.

ಸಮವಾಯ ಜ್ಞಾನ :—

ಅ) ಚಿತ್ರಕಲೆ :— ಸೃಷ್ಟಿಯಲ್ಲಿ ಕಾಣುವ ಗಿಡ, ಹೂ, ಎಲೆ, ಪಕ್ಷಿ, ಇವುಗಳ ಸ್ವಚ್ಛಂದ ಚಿತ್ರ.

ಆ) ಭಾಷೆ :— ನಿರೀಕ್ಷಿಸಿದ ನೋಟಗಳ ಬಗ್ಗೆ ಚರ್ಚೆ, ಬರಹ, ಹಾಡು ಇತ್ಯಾದಿ.

ಇ) ಸಾಮಾನ್ಯಜ್ಞಾನ :— ಎಲೆ, ಹೂ, ಪಕ್ಷಿ, ಗಿಡಗಳ ಸಾಮಾನ್ಯ ಅಭ್ಯಾಸ.

ಈ) ಗಣಿತ :— ಕೆಲವು ಟೊಂಗೆಗಳ, ಎಲೆಗಳ, ಬೀಜಗಳ, ಹೂಗಳ ಬಗ್ಗೆ ಲೆಕ್ಕಗಳು, ತಿಂಗಳು, ಋತು, ವರುಷಗಳ ಸಂಬಂಧ-ಅವಧಿ.

ಉ) ಪೌರನೀತಿ :— ವಸಂತ ಮಾಸದಲ್ಲಿಯ ಹಬ್ಬಹುಣ್ಣಿವೆಗಳ ಉತ್ಸವಗಳು.

[ಇದೊಂದೇ ಚಟುವಟಿಕೆಯ ಬೇರೆ ಬೇರೆ ಉಪಕ್ರಿಯೆಗಳನ್ನು ತಕ್ಕೊಂಡರೆ ಅನೇಕ ಪಾಠಗಳನ್ನು ನಡೆಸಲು ಬರುವದು.]

೨) ಇಯತ್ತೆ— ೨.

ಚಟುವಟಿಕೆ :— ಬೀಜ ಬಿತ್ತುವುದು.

ಸಮವಾಯಜ್ಞಾನ :—

ಅ) ಸಾಮಾನ್ಯಜ್ಞಾನ :— ಬೀಜಗಳ ಪ್ರಕಾರಗಳು; ಉತ್ತಮ ಬೀಜಗಳನ್ನು ತಿಳಿಯುವುದು; ಅವುಗಳ ಆಕಾರ, ಬಣ್ಣ, ಭಾರ, ಬೀಜಗಳನ್ನು ನೆಡುವಾಗ ಅವುಗಳ ಮಧ್ಯೆ ಬಿಡಬೇಕಾದ ಅಂತರ; ಯಾಕೆ ?

ಆ) ಭಾಷೆ :— ಬಿತ್ತುವಾಗ ಒಕ್ಕಲಿಗರು ಹಾಡುತ್ತಿರುವ ಹಾಡುಗಳು, ಮಾಡಿದ ಕ್ರಿಯೆಯ ವರ್ಣನೆ.

ಇ) ಗಣಿತ :— ಮಾಡಿದ ಮಡಿಗಳ ಸಂಖ್ಯೆ, ಸಾಲುಗಳ ಎಣಿಕೆ; ಬೀಜಗಳ ಎಣಿಕೆ ಇವೆಲ್ಲವುಗಳ ಪರಸ್ಪರ ಸಂಬಂಧ-ಗುಣಾಕಾರದ ಕಲ್ಪನೆ.

ಇಯತ್ತೆ— ೪.

ಚಟುವಟಿಕೆ :— ಅರೆಯುವ ಕೈರಾಟೆಯಿಂದ ಹತ್ತಿಯನ್ನು ಅರೆಯುವುದು.

ಸಮವಾಯಜ್ಞಾನ :—

ಅ) ಚಿತ್ರಕಲೆ :— ಕೈರಾಟೆಯ ಚಿತ್ರ.

ಆ) ಸಾಮಾನ್ಯಜ್ಞಾನ :— ಕೈರಾಟೆಯ ಬೇರೆ ಬೇರೆ ಭಾಗಗಳ ಅಭ್ಯಾಸ, ಗಿಡ್ಡ ಹಿಡಿಕೆಯ ಶಾಸ್ತ್ರೀಯ ಪರಿಣಾಮ; ಅರೆಯುವ ಕ್ರಿಯೆಯ ಮೇಲೆ ಹವೆಯ ಆರ್ದ್ರತೆ, ಉಷ್ಣತೆ ಇವುಗಳ ಪರಿಣಾಮ, ಕಸರಿನಿಂದ ಅರೆಯುವ ಕ್ರಿಯೆಯ ಮೇಲೆ ಆಗುವ ಪರಿಣಾಮ.

ಇ) **ಗಣಿತ :— ಅರೆದ ಬಳಿಕ ಕಾಣುವ ಅರಳಿ** ಹಾಗೂ **ಕಾಳುಗಳ ಪ್ರಮಾಣ**- ಪ್ರಮಾಣ ಭಾಗದ ಲೆಕ್ಕಗಳು, **ರೇಖಾಚಿತ್ರ**- ವರ್ಗದ ಅರೆಯುವ ಸರಾಸರಿಯ **ಲೆಕ್ಕಗಳು.**

೪) ಇಯತ್ತೆ— ೧.

ಚಟುವಟಿಕೆ :— ಆರೋಗ್ಯ ಕವಾಯತು.

ಉಪಕ್ರಿಯೆಗಳು :— ಹಲ್ಲುತಿಕ್ಕುವುದು, ಕೈಕಾಲು ಮೋರೆ **ತೊಳೆಯುವದು,** ಉಗುರು ತೆಗೆಯುವುದು ಇತ್ಯಾದಿ.

ಸಮವಾಯಜ್ಞಾನ :—

ಅ) ಭಾಷೆ :— ಅವಯವಗಳ ಬಗೆಗೆ ಮಾತು, ವಾಚನ, **ಬರೆಹ.**

ಆ) ಸಾಮಾನ್ಯಜ್ಞಾನ :— ಅವಯವಗಳ **ಸ್ಥೂಲ** ಜ್ಞಾನ, **ಸ್ವಚ್ಛತೆಯ ಸಾಧನಗಳು.**

ಇ) **ಗಣಿತ :—** ಬೆರಳುಗಳ ಎಣಿಕೆ, ಸಣ್ಣ ಬೇರೀಜು, **ವಜಾಭಾಕಿ.**

೫) ಇಯತ್ತೆ— ೬.

ಚಟುವಟಿಕೆ :— ಟಾಗೋರರ ದಿನಾಚರಣೆ.

ಉಪಕ್ರಿಯೆಗಳು :— ಶಾಲೆಯ ಅಲಂಕಾರ, ಟಾಗೋರರ **ಪುಸ್ತಕಗಳ ಸಂಗ್ರಹ;** ಟಾಗೋರರ ಜೀವನದ ಬೇರೆ **ಬೇರೆ ಚಿತ್ರಗಳನ್ನು** ಸಂಗ್ರಹಿಸುವುದು; ಅವರ ಗ್ರಂಥಗಳನ್ನು **ಓದುವುದು;** ಅವರು ಬರೆದ ನಾಟಕಗಳನ್ನು **ಆಡುವುದು ಇತ್ಯಾದಿ.**

ಸಮವಾಯಜ್ಞಾನ :—

ಅ) ಚಿತ್ರಕಲೆ :— ವಿಶ್ವಭಾರತಿಯ ಶೈಲಿಯ ಚಿತ್ರಗಳು.

ಆ) ಭಾಷೆ :— ಟಾಗೋರರ ಜೀವನ ಚರಿತ್ರೆ, ಅವರ **ಗ್ರಂಥಗಳ** ಅಭ್ಯಾಸ, **ನಾಟಕಗಳು.**

ಇ) ಭೂಗೋಲ :— ಬಂಗಾಲ ಪ್ರಾಂತದ ವಿಶೇಷ **ಅಭ್ಯಾಸ.**

[**ಸೂಚನೆ :— ಒಂದೇ** ಪಾಠದಲ್ಲಿ ಇದೆಲ್ಲ ಸಮವಾಯಜ್ಞಾನ **ಬರುವುದಿಲ್ಲ. ಇದೇ ಚಟುವಟಿಕೆಯ** ಬೇರೆ ಬೇರೆ **ಉಪಚಟುವಟಿಕೆಗಳನ್ನು** ಬೇರೆ ಬೇರೆ ಪಾಠಗಳಲ್ಲಿ **ತಕ್ಕೊಳ್ಳಬೇಕು.**]

ಕೆಲವು ತೊಡಕುಗಳಿಗೆ ಉತ್ತರ

೧) ನೂಲುವ ನೇಯುವ ಕ್ರಿಯೆಯಲ್ಲಿ **ಕೇವಲ** ಅವೆರಡೇ ಕ್ರಿಯೆಗಳು ಬೇಸರವಾಗುವವು.

ಉತ್ತರ:— ನೂಲುವ ಕ್ರಿಯೆಯಲ್ಲಿ ಹತ್ತಿಯನ್ನು ಬಿಡಿಸುವುದು; ಸ್ವಚ್ಛಮಾಡುವುದು; ಅದರ ಪ್ರಕಾರಗಳು; ಅರೆಯುವ ರೀತಿಗಳು; ಸಾಧನಗಳು; ಹಿಂಜುವ ಬೇರೆ ಬೇರೆ ರೀತಿಗಳು; ಹಂಜಿಗಳನ್ನು ತಯಾರಿಸುವುದು; ತಕಲಿಯಿಂದ, ರಾಟಿಯಿಂದ ನೂಲುವದು; ನೂಲುವಾಗ ಕೂಡುವ ಬೇರೆ ಬೇರೆ ಆಸನಗಳು; ಇದರಂತೆ ನೇಯ್ಗೆಯಲ್ಲಿಯೂ ಅನೇಕ ಉಪಕ್ರಿಯೆಗಳಿವೆ. ಉದ್ಯೋಗಪ್ರಿಯರಿಗೆ ಬೇಸರ ಬರಲಾರದು. ಓದುವದಕ್ಕೂ ಇದೇ ತೊಡಕಿಗೆ ತಿರುತಿರುಗಿ ಅದೇ ಪುಸ್ತಕ ಓದಲು ಬೇಸರ ಬರುವ ವಿದ್ಯಾರ್ಥಿಗಳಿಗೆ ಕೊರತೆ ಇಲ್ಲ.

೨) ಬಾಲಕರನ್ನು ಬರಿಯ ಕೆಲಸಕ್ಕೆ ಹಚ್ಚಿದರೆ ಅವರಿಗೆ ಜ್ಞಾನ ಹೇಗೆ ಸಿಗಬೇಕು. ?

ಜ್ಞಾನವೆಂದರೆ ಕೇವಲ ಪುಸ್ತಕದಲ್ಲಿದ್ದುದೇ ಜ್ಞಾನ ಎಂಬ ಭ್ರಾಂತಿಯೇ ಈ ತೊಡಕಿಗೆ ಕಾರಣ. ಕೆಲಸವನ್ನು ಮಾಡುವಾಗ ಬಾಲಕರು ಎಂತು, ಏನು ಎಂಬುದನ್ನು ತಿಳಿದುಕೊಳ್ಳಲು ಯತ್ನಿಸಹತ್ತಿದರೆ, ಜ್ಞಾನದ ಭಂಡಾರ ಮುಪ್ಪೆಯೊಡೆದು, ಅದರೊಳಗೆ ಅವರು ಪ್ರವೇಶಿಸುವರು. ಆ ಜ್ಞಾನ ನಿಜವಾದ, ಸ್ಥಿರವಾದ, ಉಪಯುಕ್ತವಾದ ಜ್ಞಾನ.

೩) ಉದ್ಯೋಗವನ್ನು ಯಾವಾಗ ನಡೆಸಬೇಕು ? ಜ್ಞಾನವನ್ನು ಯಾವಾಗ ಕೊಡಬೇಕು ? ಎಲ್ಲವೂ ಗೊಂದಲಮಯವಾಗುತ್ತದೆ.

ಉತ್ತರ :— ನಿರ್ಧರಿಸಿದಷ್ಟು ಉತ್ಪಾದನೆಯನ್ನು ಹೊರಡಿಸುವುದು, ಹಾಕಿಕೊಟ್ಟ ಅಭ್ಯಾಸ ಕ್ರಮದ ವಿಷಯಗಳನ್ನು ಮುಗಿಸುವುದು, ಅನೇಕ ಇತರ ಚಟುವಟಿಕೆಗಳನ್ನು ಸಾಗಿಸುವುದು ಈ ಮೂರು ಸಂಕಟಗಳ ಮಧ್ಯೆ ತಾವು ಸಿಲುಕಿಕೊಂಡಿರುವೆವೆಂಬ ಶಿಕ್ಷಕರು ಈ ಪ್ರಶ್ನೆಯನ್ನು ಕೇಳುವರು. ಸದ್ಯದ ಕೃತ್ರಿಮ ಪರಿಸ್ಥಿತಿಯಲ್ಲಿ ಅವರ ತೊಡಕು ನಿಜವಾಗಿದೆ. ಅವರೂ ಕೆಳಗಿನ ಮಾತನ್ನು ಅವರು ತಿಳಿದುಕೊಳ್ಳಬೇಕು.

ಕೈಕೊಂಡ ಚಟುವಟಿಕೆಯನ್ನು ಪೂರ್ಣಗೊಳಿಸುವುದೇ ಧ್ಯೇಯ. ಆ ಚಟುವಟಿಕೆಯನ್ನು ಸಾಗಿಸುವಾಗ

ಚಾಲಕರಿಗೆ ಕೆಲವೊಂದು ಜ್ಞಾನದ ಅವಶ್ಯಕತೆ ಎನಿಸುವುದು. ಅದು ದೊರೆಯದ ವಿನಃ ಆ ಚಟುವಟಿಕೆಯನ್ನು ಅವರು ತಿಳಿದುಕೊಂಡು ಸಶಾಸ್ತ್ರವಾಗಿ ಪೂರ್ಣಗೊಳಿಸಲಾರರು. ಈ ಅವಶ್ಯಕ ಜ್ಞಾನವನ್ನಷ್ಟೇ ಚಟುವಟಿಕೆ ನಡೆದ್ದಾಗ ಕೊಡಬೇಕು. ಉದಾ :- ಕಟ್ಟಿಗೆಯ ಕುರ್ಚಿಯನ್ನು ಮಾಡಬೇಕಾಗಿದೆ. ಅದಕ್ಕೆ ಯಾವ ಕಟ್ಟಿಗೆ ಉತ್ತಮ ? ಅದಕ್ಕೆ ಬೇಕಾಗುವ ಕಟ್ಟಿಗೆಯ ತುಂಡುಗಳ ಅಳತೆ, ಪ್ರಮಾಣ ಇವುಗಳ ಜ್ಞಾನ ಅತ್ಯವಶ್ಯ. ಚಟುವಟಿಕೆ ನಡೆಸುವಾಗಲೇ ಆ ಜ್ಞಾನವನ್ನು ಕೊಡಬೇಕು. ಚಟುವಟಿಕೆ ಮುಗಿದ ಬಳಿಕ, ಬೇರೆ ಬೇರೆ ಕಟ್ಟಿಗೆಗಳು ಸಿಗತಕ್ಕಸ್ಥಳ, ಅವನ್ನು ಸಾಗಿಸುವ ಸಾಧನಗಳು, ಮಾರ್ಗಗಳು, ಹವೆಯಿಂದ ನೀರಿನಿಂದ ಅವುಗಳ ಮೇಲೆ ಆಗುವ ಪರಿಣಾಮ, ಅಂತಹ ಕಟ್ಟಿಗೆಗಳನ್ನು ತರಿಸುವ ವೆಚ್ಚ ಇತ್ಯಾದಿ ವಿಶೇಷ ವಿವರಗಳನ್ನು ಚರ್ಚಿಸುವುದು ಸಮವಾಯಕ್ಕೆ ಸಂಬಂಧಿಸಿಯೇ ಸಾಗುವುದು. ಹೀಗೆ ಕೊಟ್ಟ ಜ್ಞಾನವನ್ನೇ ದೃಢೀಕರಿಸಲು ಒಂದೆರಡು ಸಾಮಾನ್ಯ ಪಾಠಗಳನ್ನು ಆ ಮೇಲೆ ತೆಗೆದುಕೊಳ್ಳಬೇಕು. ಇದರಿಂದ ಗೊಂದಲಕ್ಕೆ ಅವಕಾಶವಿಲ್ಲ.

೪) ಶಿಕ್ಷಕರಿಗೆ ಇದೊಂದು ದೊಡ್ಡಕಾಟ.

ಈ ಮಾತು ಶಿಕ್ಷಕರ ದೃಷ್ಟಿಕೋನವನ್ನವಲಂಬಿಸಿದೆ. ಈ ಹೊಸ ವಿಧಾನದಿಂದ ಮಕ್ಕಳ ಹೆಚ್ಚಿನ ಹಿತ ಸಾಧಿಸುವುದೆಂದು ತಿಳಿದ ಬಳಿಕ ಹೆಚ್ಚಿನ ಹೊಣೆಯನ್ನು ಹೊರಲು ಶಿಕ್ಷಕರು ಸಿದ್ಧರಾಗಬೇಕು. ಈ ಹೆಚ್ಚಿನ ಹೊಣೆಯನ್ನು ಸಂತೋಷದಿಂದ ಹೊತ್ತು ಕೆಲಸ ಮಾಡುವವರಿಗೆ ಉತ್ತೇಜನ ರೂಪವಾಗಿ ತುಸುಹೆಚ್ಚು ಸಂಬಳ ಕೊಡುವುದು ಯೋಗ್ಯವೆಂದು ನನ್ನ ಅಭಿಪ್ರಾಯ. ಅಲ್ಲದೆ ತಕ್ಕ ಸಾಧನಸಾಮಗ್ರಿಗಳನ್ನು ಸಕಾಲಕ್ಕೆ ಒದಗಿಸುವುದು ಆಡಳಿತದ ಒಂದು ಮಹತ್ತ್ವದ ಭಾಗ.

ಕೊನೆಯ ಮಾತು

ಕೇವಲ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಶಾಲೆಶಾಲೆಗಳ ನಡುವೆ ಸ್ಪರ್ಧೆ ನಡೆಯುವುದು ಅಹಿತಕರ. ಅದರಿಂದ ಸ್ವಚ್ಛತೆ, ಸಮವಾಯ ಜ್ಞಾನ, ಸಹಕಾರ, ಸಂತೋಷದ ವಾತಾವರಣ ಇವು ಇಲ್ಲದಂತಾಗುವವು. ಅದೇ ಮೇರೆಗೆ ಸಮವಾಯ ಜ್ಞಾನದ ಕೇವಲ ನೆವವನ್ನು ಮುಂದೆ ಮಾಡಿ ಉತ್ಪಾದನೆಯ ಕೊರತೆಗೆ ಕಾರಣವಾದ ತಮ್ಮ ಆಲಸ್ಯತನವನ್ನು ತಾರ್ಕಿಕ ವಾದದಲ್ಲಿ ಮುಚ್ಚಿಕೊಳ್ಳಲು ಯತ್ನಿಸುವುದು ಅಷ್ಟೇ ದೊಡ್ಡ ದ್ರೋಹ. ಅನುಭವದಿಂದ ಸಮತೋಲವನ್ನು ತಿಳಿಯಬೇಕು. ಶಾಸ್ತ್ರೀಯ ದೃಷ್ಟಿಯನ್ನಿಟ್ಟುಕೊಂಡು ಆಸ್ಥೆಯುಳ್ಳ ಶಿಕ್ಷಕರು ಪ್ರಯೋಗಗಳನ್ನು ನಡೆಸಬೇಕು; ಅವನ್ನು ಬರೆದಿಡಬೇಕು. ಅವೇ ನಮಗೆ ನಿಜವಾದ ಸಮವಾಯದ ಒಯ್ಯಲು ನೆರವಾಗುವವು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಪ್ರೊ. ಎಸ್. ಕೆ. ಜೋಶಿ, ಮತ್ತು

ಪ್ರೊ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಮೂಲೋದ್ಯಮದಿಂದ ಜೀವನ ಶಿಕ್ಷಣ

ಲೇಖಕರು: ಶ್ರೀ ಮಿರ್ಜಿ ಅಣ್ಣಾರಾಯರು, ಶೇಡಬಾಳ.

ಆಧುನಿಕ ಭಾರತೀಯ ಶಿಕ್ಷಣರಂಗದಲ್ಲಿ ಕ್ರಾಂತಿಯನ್ನುಂಟು ಮಾಡಿದ ಶಿಕ್ಷಣ ಪದ್ಧತಿಗೆ ಮೂಲ ಶಿಕ್ಷಣ, ಜೀವನ ಶಿಕ್ಷಣ, ರಾಷ್ಟ್ರೀಯ ಶಿಕ್ಷಣ ಮತ್ತು ವರ್ಧಾ ಶಿಕ್ಷಣ ಎಂದು ಮೊದಲಾಗಿ ಕರೆಯಲಾಗುತ್ತಿದೆ. ಇವುಗಳಿಗೆಲ್ಲ ಒಂದು ಉದ್ಯಮವು ಮೂಲದಲ್ಲಿ ಶಿಕ್ಷಣದ ತಳಹದಿಯಂತೆ ಇರುವುದರಿಂದ ಇದಕ್ಕೆ ಮೂಲೋದ್ಯಮ ಶಿಕ್ಷಣವೆಂದೂ ಹೇಳಬಹುದು. ಆದರೆ ನಾವಿಲ್ಲಿ "ಮೂಲೋದ್ಯಮದಿಂದ ಜೀವನ ಶಿಕ್ಷಣ" ಎಂಬ ಮಾತನ್ನು ಒಂದು ವಿಶಿಷ್ಟ ಉದ್ದೇಶವನ್ನು ಸ್ಪಷ್ಟಪಡಿಸಲಿಕ್ಕೆಂದು ಬಳಸಿದ್ದಾಗಿದೆ. ಮೂಲ ಉದ್ಯಮವು ಜೀವನ ಶಿಕ್ಷಣದ ಸಾಧನವಾಗಿದೆ—ಎಂಬುದೇ ಆ ವಿಶೇಷ ಅರ್ಥವು. ಈ ಅರ್ಥವನ್ನು ದೃಢೀಕರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಈಗ ಈ ಲೇಖನದ ಮಟ್ಟಿಗೆ 'ಜೀವನ ಶಿಕ್ಷಣ' ಎಂಬ ಹೆಸರನ್ನು ಕೇವಲ ಒಂದು ನವೀನ ಶಿಕ್ಷಣ ಪದ್ಧತಿಯ ನಿದರ್ಶಕವೆಂದು ಸ್ವೀಕರಿಸಿದೆ, ಬಾಲಕನ ಭಾವೀ ಜೀವನ ಕಲೆಯ ಶಿಕ್ಷಣವೇ ಜೀವನ ಶಿಕ್ಷಣ ಎನ್ನುವ ವಿಶಾಲ ಅರ್ಥದಲ್ಲಿ ಉಪಯೋಗಿಸುತ್ತೇವೆ. ಅದರಂತೆ ಮೂಲೋದ್ಯಮದಲ್ಲಿ ಈಗ ಸದ್ಯಕ್ಕೆ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯ ಚಟುವಟಿಕೆಗಳೆಂದು ಸ್ವೀಕರಿಸಲ್ಪಟ್ಟ ನೂಲುವುದು, ನೇಯುವುದು, ಒಕ್ಕಲತನ ಮತ್ತು ಬಡಿಗತನವೇ ಮೊದಲಾದವುಗಳು ಸಮಾವೇಶವಾಗುತ್ತವೆ. ಈ ಉದ್ಯೋಗಗಳು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅತಿ ಮಹತ್ವದ ಕೇಂದ್ರ ಸ್ಥಾನದಲ್ಲಿರುವುದರಿಂದ 'ಮೂಲೋದ್ಯಮ'ವೆಂಬ ವಿಶಿಷ್ಟ ಅರ್ಥವನ್ನು ಹೊಂದಿವೆ. ಹಾಗೆಯೇ ಭಾರತೀಯ ಜೀವನಕ್ಕೂ ಈ ಉದ್ಯೋಗಗಳು ಮೂಲಾಧಾರವಾಗಿರುವುದರಿಂದ ಮೂಲೋದ್ಯೋಗಗಳೆಂದು ಹೇಳಲಿಕ್ಕೆ ತಕ್ಕವುಗಳಾಗಿವೆ. ಆದರಿಂದ ನಮ್ಮ ಶಿಕ್ಷಣಕ್ಕೂ ಜೀವನಕ್ಕೂ ಈ ಉದ್ಯಮಗಳೇ ಮೂಲ ಪ್ರೇರಕ ಶಕ್ತಿಗಳು, ಆಧಾರ ಸ್ಥಾನಗಳು. ಅಂತಲೇ ಮಕ್ಕಳ ಶಿಕ್ಷಣವು ಈ ಉದ್ಯಮಗಳ ಮುಖಾಂತರ ಸಾಗಬೇಕು; ಆ ಶಿಕ್ಷಣದಿಂದ ಅವರ ಭಾವೀ ಜೀವನವು ಸುಂದರವೂ ಸುಖಮಯವೂ ಆಗಬೇಕು. ಅದಕ್ಕೆಂದೇ ಇಲ್ಲಿ ಮೂಲೋದ್ಯಮದಿಂದ ಜೀವನ ಶಿಕ್ಷಣವನ್ನು ಸಾಧಿಸುವ ಕ್ರಮವನ್ನು ಕುರಿತು ಆಲೋಚಿಸಲಾಗುವುದು.

ಶಿಕ್ಷಣವನ್ನು ಪಡೆದ ಪ್ರತಿಯೊಬ್ಬ ಬಾಲಕನ ಜೀವನವು ಸುಂದರವಾಗಬೇಕು. ಇಷ್ಟೇ ಅಲ್ಲ, ಸುಖಮಯವೂ ಆಗಬೇಕು. ಆಗ ಶಿಕ್ಷಣದ ಗುರಿಯು ಸಿದ್ಧಿಸಿದಂತೆ ಆಗುವುದು. ಒಬ್ಬ ವ್ಯಕ್ತಿಯ ಜೀವನವು ಸುಖಮಯವಾಗಲಿಕ್ಕೆ ಆರ್ಥಿಕ ಸ್ವಾವಲಂಬನೆಯ ಅವಶ್ಯಕತೆಯಿದೆ. ಅದನ್ನು—ಶಿಕ್ಷಣ ಹೊಂದಿದ ಮೇಲೆ — ಬಾಲಕನು ಸಂಪಾದಿಸಲು ಅವನು ಪಡೆದ ಶಿಕ್ಷಣವು ಸಹಕಾರಿಯಾಗಬೇಕು. ಇನ್ನು ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದ್ದ ಮಾತ್ರಕ್ಕೆ ಜೀವನವು ಸುಂದರವೂ ಪೂರ್ಣ ಸುಖವುಳ್ಳದ್ದೂ ಆಗುವದೆಂದು ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ ಜೀವನವೂ ಒಂದು ಕಲೆಯಿದೆ. ಅಲ್ಲದೆ ಸುಖವು ಒಬ್ಬ ವ್ಯಕ್ತಿಯ ಬದುಕನ್ನೇ ಅವಲಂಬಿಸಿ ಇರುವದಿಲ್ಲ. ನಮ್ಮ ಪ್ರಪಂಚದಲ್ಲಿ ವ್ಯಕ್ತಿ, ವ್ಯಕ್ತಿಯಾಗಿಯೇ ಬಾಳುತ್ತಿರುವುದಿಲ್ಲ. ಅವನಿಗೆ ಮನೆಯ ಜನರೆಂಬುವರಿರುತ್ತಾರೆ. ಅವರಾಚೆಗೆ ಸಮಾಜವೆಂಬುದೂ ಒಂದಿದೆ. ಇವುಗಳೆಲ್ಲದರ ಪರಿಣಾಮವು ಅವನ ಸುಖದುಃಖದ ಮೇಲಾಗುತ್ತಿದೆ; ಅವನ ಜೀವನ ಸೌಂದರ್ಯದ ಮೇಲೂ ಆಗುತ್ತದೆ. ಆದರಿಂದ ಮನೆ ಹಾಗು ಸಮಾಜಗಳೆರಡನ್ನೂ ತನ್ನ ಸುಂದರ ಜೀವನಕ್ಕೆ ಪೋಷಕವಾಗುವಂತೆ ಅಳವಡಿಸಿಕೊಳ್ಳುವ ಶಿಕ್ಷಣವು ಮಗುವಿಗೆ ಬೇಕು. ಸಮಾಜವೆಂಬ ಬಳ್ಳಿಯ ಶಕ್ತಿ, ಸತ್ವ, ಸಹಕಾರಗಳನ್ನು ಪಡೆದು ವ್ಯಕ್ತಿ ತನ್ನ ಜೀವನವನ್ನು ಅರಳಿಸಿಕೊಳ್ಳಬೇಕು.

ಯಾವುದರ ಸತ್ವದಿಂದ ತಾನು ವಿಕಾಸ ಹೊಂದಿರುವನೋ ಆ ಸಮಾಜದಲ್ಲಿ ಒಂದು ಸುಂದರ ಪುಷ್ಪದಂತೆ ತಾನೊಂದು ಶೋಭೆಯನ್ನುಂಟು ಮಾಡಬೇಕು. ಅಲ್ಲದೆ ನೆರೆಹೊರೆಯವರಿಗೆ ಸುಗಂಧವನ್ನು ಬೀರಬೇಕು. ಮುಂದಿನ ಫಲಕ್ಕೆ ಕಾರಣವಾಗಿ ನಿಲ್ಲಬೇಕು. ಆಗ ಮಾನವ ಜೀವನವು ಸಫಲತೆಯನ್ನು ಹೊಂದುವುದು. ಈ ಸಫಲತೆಯನ್ನು ತಂದುಕೊಡುವುದು ಶಿಕ್ಷಣದ ಸಿದ್ಧಿಯನ್ನು ಅವಲಂಬಿಸಿದೆ.

ಇನ್ನು ಇಂದಿನ ವಿದ್ಯಾರ್ಥಿಯು ನಾಳಿನ ಸಮಾಜದಲ್ಲಿ ಒಬ್ಬ ಉಪಯುಕ್ತ ವ್ಯಕ್ತಿ ಎನಿಸಬೇಕು; ಸಮಾಜಕ್ಕೆ ಭೂಷಣಾಸ್ಪದನೂ ಆಗಿರಬೇಕು. ಮೇಲಾಗಿ ತನ್ನಷ್ಟಕ್ಕೆ ತಾನು ಸುಖಿಯಾಗಿರಬೇಕು. ತನ್ನವರೊಡನೆ ಸುಖದಿಂದ ಬಾಳಿರಬೇಕು. ಅವನ ಜೀವನವು ಸ್ವಾವಲಂಬನ ತತ್ತ್ವವನ್ನು ಮೈಗೂಡಿಸಿಕೊಂಡಿರಬೇಕಾಗುವುದು. ಈ ಸುಂದರ ಸ್ವಯಂಪೂರ್ಣ ಜೀವನಕ್ಕೆ ಅತ್ಯವಶ್ಯವಾದ ಯಾವ ಗುಣಗಳನ್ನು ಈ ಮೂಲ ಶಿಕ್ಷಣವು ಮಕ್ಕಳಲ್ಲಿ ವಿಕಾಸಗೊಳಿಸುತ್ತದೆ? ಅದರಲ್ಲಿ ಮೂಲೋದ್ಯಮದ ಪಾತ್ರವೇನು? ಆ ಪಾತ್ರ ಪ್ರತಿಷ್ಠೆಯಿಂದ ಜೀವನ ಶಿಕ್ಷಣವು ಮಗುವಿಗೆ ಒದಗುವುದು ಹೇಗೆ? ಇವೇ ಮೊದಲಾದ ಪ್ರಶ್ನೆಗಳನ್ನು ಇನ್ನು ಮುಂದೆ ಸಮಾಲೋಚಿಸಬೇಕಾಗುವುದು.

ಮೊದಲು ಒಳ್ಳೆಯ ಬಾಳನ್ನು ಬಾಳಬೇಕೆಂದಿರುವವನಲ್ಲಿ ಇರಬೇಕಾದ ಗುಣಗಳನ್ನು ನಾವು ಕಂಡುಹಿಡಿಯಲು ಯತ್ನಿಸಬೇಕು ಬಾಳಿನ ತಳಹದಿಯು ಲೌಕಿಕ ದೃಷ್ಟಿಯಿಂದ ಒಂದು ಉದ್ಯಮವಾಗಿದೆ. ಉದ್ಯೋಗವಿಲ್ಲದ ಮನುಷ್ಯನು ಲೋಕದಲ್ಲಿ ಜೀವಿಸಲು ಅರ್ಹನೆನಿಸನು. ಆ ಉದ್ಯೋಗವು ಅವನ ಜೀವನಾವಶ್ಯಕ ಸಾಧನಗಳನ್ನು ಒದಗಿಸುವಷ್ಟು ಆರ್ಥಿಕ ಉತ್ಪತ್ತಿಯುಳ್ಳದ್ದಿರಬೇಕು. ಅಲ್ಲದೆ ಲೋಕಹಿತದ ದೃಷ್ಟಿಯಿಂದ ವ್ಯಕ್ತಿಯು ಕೈಕೊಳ್ಳುವಂಥ ಉದ್ಯಮದಿಂದ ಸಮಾಜವು ಅಧೋಗತಿಯ ಮಾರ್ಗಕ್ಕೆ ಇಳಿಯಕೂಡದು. ಮದ್ಯ ತಯಾರಿಕೆ, ಚುಟ್ಟನಿರ್ಮಾಣಗಳಲ್ಲಿ ಧನಸಂಪಾದನೆಯಾಗಬಹುದಾದರೂ ಲೋಕೋಪಕಾರಿ ವ್ಯವಸಾಯಗಳೆಂದು ಅವು ಆಗಲಾರವು. ಅದರಿಂದ ಶಿಕ್ಷಣ ಮುಗಿಸಿಕೊಂಡು ಜೀವನ ರಂಗದಲ್ಲಿ ಕಾಲಿಡುವ ಬಾಲಕರಿಗೆ ಒಂದು ಸದುದ್ಯೋಗವನ್ನು ಕೈಕೊಳ್ಳುವ ಯೋಗ್ಯತೆಯೂ ಅದನ್ನು ನಡೆಯಿಸಿಕೊಂಡು ಹೋಗುವಷ್ಟು ಜ್ಞಾನವೂ ಅತ್ಯವಶ್ಯವಾಗಿ ಬೇಕು. ಇದಕ್ಕಾಗಿ ಆ ಬಾಲಕನಲ್ಲಿ, ವೃತ್ತಿಯಲ್ಲಿ ಆನಂದ, ಸತತೋದ್ಯೋಗ ಪ್ರವೃತ್ತಿ, ತೊಂದರೆಗಳನ್ನು ಎದುರಿಸುವ ಸ್ಥೈರ್ಯ, ಸಮಸ್ಯೆಗಳನ್ನು ಅರಿತು, ಸಯುಕ್ತಿಕವಾಗಿ ಬಿಡಿಸುವ ಪ್ರಜ್ಞೆಗಳ ಬೆಳವಣಿಗೆಯಾಗಿರಲಿಕ್ಕೆಬೇಕು. ಅಂದರೆ ಅವನು ತನ್ನ ವ್ಯವಸಾಯದಲ್ಲಿ ಯಶಸ್ವಿಯಾಗುವನು.

ಇನ್ನು ಈ ಗುಣಗಳನ್ನು ನಾವು ಶಿಕ್ಷಣದ ಕೇಂದ್ರವೆಂದು ಸ್ವೀಕರಿಸುವ ಮೂಲೋದ್ಯಮ ವಿಕಾಸಗೊಳಿಸುತ್ತದೆಯೋ ಹೇಗೆ ಎಂಬುದನ್ನು ಅವಲೋಕಿಸೋಣ. ಇಲ್ಲಿ ಸಮಾಲೋಚನೆಗೆ ಸುಲಭವಾಗಲೆಂದು, ಬಟ್ಟೆ ತಯಾರಿಸುವ ಉದ್ಯಮವನ್ನು - ಈಗ ಪ್ರಾಥಮಿಕ ಶಿಕ್ಷಣದಲ್ಲಿ ಬಹಳ ಕಡೆಗೆ ಮೂಲ ಉದ್ಯಮವೆಂದು ಸ್ವೀಕರಿಸಿರುವ—ನಿರೀಕ್ಷಿಸಲು ಆಯ್ದುಕೊಳ್ಳುವಾ. ಇವರಲ್ಲಿ ಹತ್ತಿಯನ್ನು ಬಿಡಿಸುವದರಿಂದ ಬಟ್ಟೆ ಸಿದ್ಧವಾಗುವವರೆಗೆ ಅನೇಕ ಹಂತಗಳಲ್ಲಿ ಉದ್ಯಮವು ಮುಂದರಿದು, ಒಂದು ಸಿದ್ಧಿಗೆ ಹೋಗಿ ತಲುಪುವುದು. ಆಯಾ ಮೆಟ್ಟಲುಗಳಲ್ಲೆಲ್ಲ ಬಾಲಕನು ದಕ್ಷತೆಯಿಂದ ಕಾರ್ಯ ಮಾಡಿ, ಪೂರೈಸಬೇಕಾಗುವದು. ಹತ್ತಿಯ ಕಸರನ್ನು ಚೆನ್ನಾಗಿ ತೆಗೆಯದಿದ್ದರೆ ನೂಲು ಒಳ್ಳೆಯದು ಹೊರಡದು. ನೂಲು ಒಳ್ಳೆಯದಿರದಿದ್ದ ನೆಯ್ಗೆ ಸಾಧಿಸುವದಿಲ್ಲ ಅದರಿಂದ ಪ್ರತಿಯೊಂದು ವಿಭಾಗದಲ್ಲೂ ಅವನು ಎಚ್ಚರದಿಂದ ಕಾರ್ಯ ನಿರ್ವಹಿಸಬೇಕೆಂಬುದನ್ನು ಅವನು ಅನುಭವದಿಂದ ಕಲಿತುಕೊಳ್ಳುವನ ಅದರಂತೆ ಹತ್ತಿಯಿಂದ ಅರಿವೆ ಸಿದ್ಧವಾಗಲಿಕ್ಕೆ ನಡುಸಾಕಷ್ಟು ಅವಕಾಶವೂ ಹತ್ತುವದು. ಅಲ್ಲಿಯವರೆಗೆ ವಿದ್ಯಾರ್ಥಿಯು ಶಾಂತರೀತಿಯಿಂದ ಶ್ರಮಿಸಬೇಕಾಗುವದು ಸತ್ಫಲ ಪ್ರಾಪ್ತಿಗಾಗಿ ತಾಳ್ಮೆಯಿಂದ ಸತತ ಉದ್ಯೋಗದ ತೊಡಗಿರಲಿಕ್ಕೆ ಬೇಕಾಗುವ ಸುಗುಣ ವೃದ್ಧಿಯು ಶೈಕ್ಷಣಿಕ ಮೂಲೋದ್ಯಮದಿಂದ ಸಹಜವಾಗಿ ಆಗುವದು ಹತ್ತಿ, ಅರಳೆ, ಹಂಜಿ, ನೂಲು, ಹಾಸು, ನೆಯ್ಗೆ ಎಂತ್ಯಾದಿ ಮೆಟ್ಟಲು ಮೆಟ್ಟಲುಗಳಲ್ಲಿ ಕಾರ್ಯ ಮಾಡು ಬಟ್ಟೆ ತಯಾರಿಸುವ ಒಂದು ಗುರಿಯನ್ನು ವಿದ್ಯಾರ್ಥಿಯು ಮುಟ್ಟಬೇಕಾಗಿರುತ್ತದೆ. ಇದನ್ನು ಬಾಲಕನು ಮೈಗೂಡಿಸಿಕೊಳ್ಳುವುದರಿಂದ ಮುಂದೆ ಜೀವನದಲ್ಲಿ ಒಂದು

ಹಿರಿಯ **ಕಾರ್ಯವನ್ನು ಕೈಕೊಂಡು,** ಅದನ್ನು ಒಂದೊಂದು **ಹಂತಗಳಲ್ಲಿ ಪೂರೈಸುತ್ತ, ಕೊನೆಗೆ** ಅಖಂಡವಾದ **ಮಹಾ ಕಾರ್ಯವನ್ನು** ನೆರವೇರಿಸುವ ಶಕ್ತಿಯು ಅವರಲ್ಲಿ **ಸುಪ್ತವಾಗಿಯೇ ವಿಕಾಸಗೊಳ್ಳುತ್ತಿದೆ.** ಉದ್ಯಮದಲ್ಲಿ **ತೊಡಗುವಾಗ, ಹಂಜಿ, ನೂಲು,** ಹಾಸು ಮೊದಲಾದವುಗ**ಳನ್ನು ಜತನ**ದಿಂದ ಕಾಯ್ದಿಡುವುದು; ಅದರಲ್ಲಿ ಹಾಳಿನ **ಪ್ರಮಾಣ ಕಡಿಮೆ**ಯಾಗುವಂತೆ ದಕ್ಷತೆ ವಹಿಸುವುದು **ಇವೇ ಮೊದಲಾದ ಗುಣ**ಗಳು ಮುಂದಿನ ಜೀವನದಲ್ಲಿ **ಅವನು ಕೈಕೊಳ್ಳುವ** ಉದ್ಯೋಗದಲ್ಲಿ ಅತ್ಯುಪಯುಕ್ತವಾದ **ಸುಗುಣಗಳಾಗಿವೆ.**

ಇದ್ದ ಸಾಧನ **ಸಂಪತ್ತಿಯನ್ನು** ಸರಿಯಾಗಿ ಉಪಯೋಗಿ**ಸಿಕೊಂಡು, ಅವುಗಳಿಂದ** ಶಕ್ಯವಿದ್ದಷ್ಟು ಹೆಚ್ಚಿಗೆ ಉಪಯೋಗವನ್ನು **ಪಡೆಯ**ಬೇಕು. ಇದು ಜೀವನ ಸಫಲತೆಯ **ಗುರುಮಂತ್ರವಾಗಿದೆ;** ಸುಖ ಜೀವನದ ತಳಹದಿಯಾಗಿದೆ. **ಈ ಮೂಲ ಮಾತ**ನ್ನು ನಮ್ಮ ಈ ಮೂಲೋದ್ಯಮವು **ಹೇಳಿಕೊಡುವುದು.** ಹತ್ತಿಯ ಕಸರಿನಿಂದ ಗುಂಡು **ಸೂಜಿಗಳನ್ನು ಇಡುವ ಉಂಡೆ**ಯನ್ನೂ ನೂಲಿನ ಕಸರು **ಉಪಯೋಗಿಸಿ ಕರೇ** ಹಲಿಗೆಗಳನ್ನು ಒರಿಸಲಿಕ್ಕೆ ಒಳ್ಳೆಯ **ಮೆತ್ತೆಗಳನ್ನೂ** ವರ್ಗಗಳಲ್ಲಿ ತಯಾರಿಸಿಕೊಳ್ಳಬಹುದು. **ಇಂಥವೆಲ್ಲ** ಚಿಕ್ಕಪುಟ್ಟ ಮಾತುಗಳೆಂದು ತೋರಿದರೂ **ಇವುಗಳ ಹಿಂದೆ ಇರುವ,** ಮಕ್ಕಳ ಗುಣ ವಿಕಾಸದ **ಸತ್ವ ಬಹಳ ಹಿರಿಯದಾಗಿದೆ.** ಅವುಗಳ ವಿಕಾಸದಿಂದ ಮುಂದೆ **ಜೀವನದಲ್ಲಿ ತನ್ನ ಮನೆಯಲ್ಲಿಯೇ** ಸಾಮಾನ್ಯ ದೃಷ್ಟಿಗೆ **ನಿರುಪಯುಕ್ತವೆಂದು ತೋರುವ** ವಸ್ತುಗಳಿಂದಲೇ ಸೌಂದರ್ಯ**ವನ್ನು ಉಪಯುಕ್ತ**ತೆಯನ್ನು ನಿರ್ಮಾಣ **ಮಾಡಿಕೊಳ್ಳುವ ಶಕ್ತಿ**ಯು ಮಕ್ಕಳಲ್ಲಿ ಉಂಟಾಗುತ್ತದೆ. ಕಲ್ಪಕತೆಯು **ಬೆಳೆಯುತ್ತದೆ.**

ಈಗ ವಿವರಿಸಿದ ಗುಣಗಲ್ಲಿ ಬಹಳಷ್ಟು ವ್ಯವಸಾಯಕ್ಕೆ **ಉಪಯುಕ್ತ**ವಾದವುಗಳು ಎಣಿಸುತ್ತವೆ. ಇವುಗಳಿಂದ **ವ್ಯಕ್ತಿಯು ಆರ್ಥಿಕ** ಸ್ವಾವಲಂಬನೆಯನ್ನು ಸಂಪಾದಿಸಲಿಕ್ಕೆ **ಸಮರ್ಥನಾಗಬಹುದು.** ಅದರಿಂದ ಸುಖಜೀವನವನ್ನು **ಪಡೆಯುತ್ತಾನೆ.** ಸಮೃದ್ಧ ಜೀವನವನ್ನು ಹೊಂದುತ್ತಾನೆ. **ಇಷ್ಟರಿಂದಲೇ ಅವನು** ಸುಂದರ ಬಾಳನ್ನು ಬಾಳಿದಂತೆ **ಆಗಲಿಲ್ಲ. ಸಮಾಜದಲ್ಲಿ** ಗಣ್ಯ ಹಾಗೂ ಉಪಯುಕ್ತ ವ್ಯಕ್ತಿಯೆನಿಸ**ಬೇಕಾದರೆ ಇನ್ನೂ ಕೆಲವು** ಸುಗುಣಗಳನ್ನು ಅವನು ಸಂಪಾದಿಸಬೇಕಾಗುತ್ತದೆ. **ಆ ಗುಣಗಳು** ಗೃಹ ಜೀವನದ **ಸುಖಶಾಂತಿಗಳಿಗೂ ಅಷ್ಟೇ ಅವಶ್ಯಕವಾಗಿವೆ.** ಇಂಥ ಗುಣಗಳಲ್ಲಿ **ತ್ಯಾಗ, ಸಹಕಾರ,** ಸಾಂಘಿಕ ಜೀವನ ನಿಷ್ಠೆ, ಸಾಮೂಹಿಕ **ಸುಖದುಃಖಗಳಲ್ಲಿ ಲಾಭಾಲಾಭ**ಗಳಲ್ಲಿ ಸಮಪಾಲುಗಾರಿಕೆಯ **ಅರಿವು, ಮುಂದಾಳುವಿನ** ವಿಚಾರಕ್ಕೆ ವಿಧೇಯನಾಗಿರುವುದು, ತನ್ನ **ಹೊಣೆಯನ್ನು** ಅರಿತು ವರ್ತಿಸುವುದು–ಇವೇ **ಮೊದಲಾದವುಗಳು** ಮುಖ್ಯವಾಗಿವೆ; ರಾಷ್ಟ್ರೀಯ ಜೀವನಕ್ಕೆ ಅವಶ್ಯವಾಗಿವೆ.

ಶಾಲೆಗಳಲ್ಲಿ **ಮೂಲೋದ್ಯಮ** ವರ್ಗಗಳನ್ನು ನಾಗಿಸುವಾಗ ನಾವು ವಿದ್ಯಾರ್ಥಿಗಳಲ್ಲಿ ಗುಂಪುಗಳನ್ನು ನಿರ್ಮಿಸುತ್ತೇವೆ. ಅದಕ್ಕೊಬ್ಬ ಹಿರಿಯಮಣಿಯನ್ನು ನಿಯಮಿಸುತ್ತೇವೆ. ಆ ಗುಂಪಿನ **ಒಡೆತನದಲ್ಲಿ** ಹತ್ತಿಯನ್ನೂ ಕೆಲವು ಉಪಕರಣಗಳನ್ನೂ ಒಪ್ಪಿಸುತ್ತೇವೆ. ಆಗ ಆ ಗುಂಪಿನ ವಿದ್ಯಾರ್ಥಿಗಳಲ್ಲಿ **ಕೆಲವರು ಹತ್ತಿಯ** ಕಸರು ತೆಗೆಯುವರು, **ಕೆಲವರು** ಅರೆಯುವರು, **ಕೆಲವರು** ಹಿಂಜುವರು, ಇನ್ನು ಕೆಲವರು ಹಂಜೀ **ಮಾಡುವರು.** ಇವೆಲ್ಲ ಕೆಲಸಗಳು ಅವರ ಹಿರಿಮಣಿಯ ಆದೇಶದಂತೆ ಸಾಗುವವು. ಒಂದೇ ಕೆಲಸ **ಮಾಡಿ** ಬೇಸತ್ತಾಗ ತಮ್ಮ ತಮ್ಮಲ್ಲಿ ಕೆಲಸವನ್ನು ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವೂ ಅವರಿಗೆ ಇರುತ್ತದೆ ಉಪಕರಣಗಳನ್ನು ಸರಿಯಾಗಿ ಹಾಗೂ ಎಲ್ಲರೂ ಉಪಯೋಗಿಸಲಿಕ್ಕೆ ಬರುವಂತೆ ಸಹಕಾರ ಭಾವದಿಂದ ಹಂಚಿಕೊಳ್ಳುವ **ಕಲೆಯನ್ನು** ಅವರು ಪಡೆಯಬೇಕಾಗುವದು. ಇವುಗಳಿಂದ **ಕೆಳಗಿನ** ತರಗತಿಗಳಲ್ಲಿ ಸಹಕಾರ ಭಾವನೆ, ವಿಧೇಯತೆ. ಸಾಂಘಿಕ ಜೀವನ ನಿಷ್ಠೆಗಳು ಬೆಳೆದುಬರುತ್ತವೆ. **ಅಲ್ಲದೆ ಎಲ್ಲರೂ** ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ದಕ್ಷತೆಯಿಂದಲೂ ಚೆನ್ನಾಗಿಯೂ **ಮಾಡುವುದರಿಂದಲೇ** ಒಟ್ಟು **ಕೆಲಸವು**–ಹಂಜಿಗಳು–**ಒಳ್ಳೆಯದಾಗುವುದು. ಇದರಿಂದ ಹೊಣೆಗಾರಿಕೆಯ ಅರಿವೂ** ಸಮೂಹದ **ಯಶಾಪಯಶದಲ್ಲಿ ಸಮಪಾಲಿನ ಕಲ್ಪನೆಯೂ ಅವರಿಗೆ ಉಂಟಾಗುತ್ತದೆ. ಇದರ ಜೊತೆಗೆ** ತನಗೆ ಮೆಚ್ಚಿಗೆಯಾದುದಾಗಿರುವ **ಅರಳೆ** ಹಿಂಜುವ **ಕೆಲಸವನ್ನು ಹತ್ತಿ** ಅರೆದು ಬೇಸತ್ತ **ಗೆಳೆಯನಿಗೆ ಬಿಟ್ಟುಕೊಡುವಲ್ಲಿ,** ತ್ಯಾಗ ಭಾವನೆಯ **ಬೀಜವು ಈ ಮೂಲೋದ್ಯಮ**ದಲ್ಲಿ ಅಡಗಿರುವುದು. ಇವೆಲ್ಲ ಗುಣಗಳ **ವಿಕಾಸವು ಮಕ್ಕಳ** ಭಾವೀ **ಸಾಮಾಜಿಕ ಜೀವನಕ್ಕೆ ಪೋಷಕವಾಗಿವೆ. ಬಾಲ**

ಕರು ಮೇಲಿನ ವರ್ಗಗಳಿಗೆ ಹೋದಂತೆ ವೈಯಕ್ತಿಕ ಹೊಣೆಗಾರಿಕೆಯೂ ಕಾರ್ಯನಿರ್ವಹಣ ಶಕ್ತಿಯೂ ಬೆಳೆಯುವ ಯೋಜನೆಯು ಈ ಉದ್ಯಮ ಶಿಕ್ಷಣದಲ್ಲಿ ಇದೆ. ಕೆಚ್ಚುವ ವಿಧಾನದಲ್ಲುಂಟಾಗುವ ಕಾರ್ಯದ ಕೆಚ್ಚು, ಹಣಿಗೆ ಬೆಜಗಳನ್ನು ಹಾಯಿಸುವಾಗ ಬರುವ ತೊಡಕುಗಳನ್ನು ಬಿಡಿಸುವ ಕೌಶಲ್ಯ, ತಾಳ್ಮೆಗಳು ಕಾರ್ಯಸಿದ್ಧಿಗೆ ಅತ್ಯವಶ್ಯವಾದ ಗುಣಗಳಾಗಿವೆ. ಇವುಗಳ ವಿಕಾಸದಲ್ಲಿ ಮಕ್ಕಳ ಮುಂದಿನ ಜೀವನದ ಭವ್ಯ ಭವಿಷತ್ತು ನಿರ್ಮಾಣವಾಗುವದಿರುತ್ತದೆ.

ಇವೆಲ್ಲ ಸದ್ಗುಣಗಳ ಬೆಳವಣಿಗೆಯ ಚಿತ್ರವನ್ನು ಕಣ್ಣುಮುಂದೆ ಇಟ್ಟುಕೊಂಡು, ಮೂಲೋದ್ಯಮವನ್ನು ಸಾಗಿಸಿದಾಗ, ಅದರಿಂದ ಮಕ್ಕಳಿಗೆ ಅತ್ಯಮೌಲ್ಯವಾದ ಜೀವನ ಶಿಕ್ಷಣವನ್ನು ಒದಗಿಸಲು ಸಮರ್ಥರಾಗುತ್ತೇವೆ.

ಈ ಶಿಕ್ಷಣದ ಯಶಸ್ಸನ್ನೂ, ಸಫಲತೆಯನ್ನೂ ಮಕ್ಕಳು ತೆಗೆಯುವ ನೂಲಿನ ಗುಂಡಿಗಳ ಸಂಖ್ಯೆಯ ಮೇಲಿಂದಾಗಲಿ, ಅವರು ನೆಯ್ದ ಅರಿವೆಯ ಉದ್ದಗಲಗಳ ಮೇಲಿಂದಾಗಲಿ ಒಮ್ಮೆಲೆ ನಿರ್ಣಯಿಸಲಿಕ್ಕೆ ಬರುವದಿಲ್ಲ. ಅವರು ಸಿದ್ಧಗೊಳಿಸಿದ ವಸ್ತುಗಳಲ್ಲಿಯ ಗುಣ ಹಾಗು ಅಚ್ಚುಕಟ್ಟುತನಗಳನ್ನು ಗಮನಿಸಬೇಕಾದೀತು. ಆದರೂ ಇವಿಷ್ಟೇ ಜೀವನ ಶಿಕ್ಷಣದ ಸಾರ್ಥಕತೆಯ ಒರೆಗಲ್ಲು ಎಂದು ತಿಳಿಯಕೂಡದು. ಒಂದು ಜೀವನ ಶಿಕ್ಷಣ ಶಾಲೆಯಲ್ಲಿ ಹೊಕ್ಕು ತಾಸೆರಡು ತಾಸುಗಳ ನಿರೀಕ್ಷಣೆಯಿಂದ ಅದರ ಪರೀಕ್ಷೆಯು ಎಂದೂ ಆಗಲಾರದು. ಅಷ್ಟರಲ್ಲಿ ತಾನು ಕೊಟ್ಟ ಶಿಕ್ಷಣದ ಪರಿಣಾಮವನ್ನು ಪ್ರತಿಫಲಿಸಿ ತೋರಿಸಲಿಕ್ಕೂ ಯಾವ ಪ್ರತಿಭಾವಂತ ಶಿಕ್ಷಕನಿಗೂ ಸಾಧ್ಯವಿಲ್ಲ. ಅವನ ದಿನಚರಿ, ಲೆಕ್ಕಪತ್ರಗಳೂ ಈ ಕಾರ್ಯದಲ್ಲಿ ಅಳತೆಗೋಲಾಗಿ ನಿಲ್ಲಲಾರವು.

ಅಂದಮೇಲೆ ಜೀವನ ಶಿಕ್ಷಣವನ್ನು ನಿರೀಕ್ಷಿಸುವ ಬಗೆಯು ಹೇಗೆ? ಅದರ ಸಾರ್ಥಕತೆಯ ಸೀಮಾ ರೇಷೆಯು ಯಾವುದು? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದೆ ಸಹಜವಾಗಿ ನಿಲ್ಲುವವು. ಅದಕ್ಕೆ ನಮಗೆ ಇಲ್ಲಿ ಒಂದು ಮಾರ್ಗವು ಸೂಚಿಸುವುದು:— ಜೀವನ ಶಿಕ್ಷಣ ಶಾಲೆಗಳಲ್ಲಿ ಸಹಜವಾಗಿ ಹೋಗಿ, ಮಕ್ಕಳು ಕೆಲಸ ಮಾಡುವ ಪದ್ಧತಿಯನ್ನು ಅವರು ಅದರಲ್ಲಿ ವ್ಯಕ್ತಪಡಿಸುವ ಗುಣಗಳನ್ನೂ ನಿರೀಕ್ಷಿಸಬೇಕು. ಅಲ್ಲದೆ, ಜೀವನ ಶಿಕ್ಷಣ ಶಾಲೆಗಳ ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕೆಲಸ ಒಪ್ಪಿಸಿ, ಅವರ ಹೊಣೆಗಾರಿಕೆಯ ಅರಿವು, ಕಾರ್ಯಕುಶಲತೆಗಳನ್ನು ಪರೀಕ್ಷಿಸಬೇಕಾದೀತು. ಆಗ ನಿಶ್ಚಿತವಾಗಿ ಕೇವಲ ಬೌದ್ಧಿಕ ಶಿಕ್ಷಣವನ್ನೇ ಒದಗಿಸುವ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಲ್ಲೂ ಜೀವನ ಶಿಕ್ಷಣ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲೂ ಅಂತರವು ಕಂಡುಬರುವುದು. ಆಗ ಮೂಲೋದ್ಯಮದಿಂದ ಮಕ್ಕಳು ಪಡೆದ ಜೀವನ ಶಿಕ್ಷಣದ ಮಹಿಮೆಯು ಕಲ್ಪನೆಯು ಬರುವುದು.

ತಿದ್ದುಪಡಿ

ಕಳೆದ ತಿಂಗಳ ಸಂಚಿಕೆಯಲ್ಲಿ ಡಾ. ಬಿ. ಎಸ್. ಗದ್ದಗೀಮಠ ಇವರ "ಕರ್ನಾಟಕ ಗೊಂದಲಿಗರು" ಈ ಲೇಖದಲ್ಲಿಯ ಕೊನೆಯ ವಾಕ್ಯ "ಇದು ಅವಶ್ಯಕವೇ ?" ಎಂಬುದನ್ನು ಬಿಟ್ಟು ಓದಬೇಕಾಗಿ ಕೋರಿದೆ.

ಪ್ರ. ಸಂ.

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕತೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟಣೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ

ಲಿನ್, ಯು, ಟೆಂಗರ

ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಕಾಯಕ ಶಿಕ್ಷಣ

ಲೇಖಕರು : ಡಾ. ಬಿ. ಎಸ್. ಗದ್ದಗೀಮಠ, ಎಮ್.ಎ., ಪಿಎಚ್.ಡಿ., ಲಕ್ಷ್ಮೇಶ್ವರ.

ಹನ್ನೆರಡನೆಯ ಶತಮಾನವು ಕರ್ನಾಟಕ ಇತಿಹಾಸದಲ್ಲಿಯೇ ಮಹಾ ಕ್ರಾಂತಿಯ ಕಾಲ. ಕರ್ನಾಟಕ ಜನಜೀವನವೇ ಎಲ್ಲ ಅಂಗಗಳಲ್ಲಿ ಬದಲಾಯಿತೆಂದು ಹೇಳಬಹುದು. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಲಬು(New methods)ಗಳು ತಲೆಯೆತ್ತಿ ಕರ್ನಾಟಕ ಸಂಪತ್ತು ವಿವಿಧ ಮುಖಗಳಿಂದ ಬೆಳೆದು ಅದರ ಆರ್ಥಿಕ ಪರಿಸ್ಥಿತಿಯೇ ಬದಲಾಗಿ ಶಿವಶರಣರು ಬೆಳಕಿಗೆ ತಂದ "ಕಾಯಕವು" ಜೀವನವಾಗಿಯೂ ಶಿಕ್ಷಣವಾಗಿಯೂ ಧರ್ಮನೀತಿಯಾಗಿಯೂ ಕೊನೆಗೆ ಕರ್ನಾಟಕದಲ್ಲಿ ಕೈಲಾಸವಾಗಿಯೇ ಪರಿಣಮಿಸಿತು. ಕಾಯಕವು ಶಿಕ್ಷಣವಾದ ಮಾತು, ಮೂಲ ಶಿಕ್ಷಣವೇ ಇಂದಿನ ಯಾಂತ್ರಿಕ ಯುಗದ ಅಡಿಗಲ್ಲೆಂದು ಹೇಳುವ ಭಾರತೀಯರಿಗೆ, ಗಮನಾರ್ಹವಾಗಿದೆ.

ವರ್ಣಾಶ್ರಮ ಧರ್ಮದ ಶೈಕ್ಷಣಿಕ ಸ್ವೇಚ್ಛಾವೃತ್ತಿಗೂ ಸ್ವಾರ್ಥತೆಗೂ ಜನವು ಬೇಸತ್ತು ಶಿಕ್ಷಣದ ಹೊಸ ಹಾದಿಯನ್ನೇ ಕಾಯುತ್ತಿತ್ತು. ಇದಕ್ಕೆ ಪ್ರತಿಯಾಗಿ ಬಂಡು ಹೂಡಿದ ಬೌದ್ಧ ಧರ್ಮವಾಗಲಿ, ಜೈನ ಧರ್ಮವಾಗಲಿ ಧರ್ಮ ಬೋಧೆಯನ್ನು ಜನವಾಣಿಯಲ್ಲಿ ತಂದರೂ ಜೀವನ ಶಿಕ್ಷಣವನ್ನು ಬಿತ್ತರಿಸಲಿಲ್ಲ. ಆದುದರಿಂದ ಆರ್ಥಿಕ ದೆಶೆಯಲ್ಲಿ ಜನಜೀವನದಲ್ಲಿ ಏನೂ ಬದಲಾವಣೆಯಾಗಲಿಲ್ಲ. ದೇಶವು ಕಲಿತ ಭಿಕ್ಷುಕರ ಜಂಗುಳಿಗಳಿಂದ ತುಂಬಿ ಹೋಯಿತು; ಆರ್ಥಿಕ ಪರಿಸ್ಥಿತಿಯು ಹದಗೆಟ್ಟ ದೇಶವು ಬಡತನದ ದುರ್ದೆಶೆಯಲ್ಲಿ ಕಾಲಿಟ್ಟಿತು. ಇದನ್ನರಿತು ಮೊದಲು ಜಾಗ್ರತಗೊಂಡ ಕರ್ನಾಟಕದಲ್ಲಿ ಕ್ರಾಂತಿಯು ತಲೆಯೆತ್ತಿ ಕ್ರಿ. ಶ. ೧೨ನೆಯ ಶತಮಾನದಲ್ಲಿ "ಕಾಯಕ"ದೊಂದಿಗೆ ಶಿವಶರಣರು ಉದಯವಾದರು.

ಈ ಮಹಾ ಕ್ರಾಂತಿಯ ಜೆಂಗುಡಿಗನೇ 'ಕಾಯಕ ದಾಸೋಹಿ' ಬಸವಣ್ಣ. ಅವನು ಕಟ್ಟಿದ ಹೊಸ ಸಮಾಜವೇ ಕಾಯಕದಾಸೋಹ ಸಮಾಜ. ಈ ಸಮಾಜ ಸೇವಕರೇ (Social workers) ಶಿವಶರಣರು. ಇವರೇ ವೀರಶೈವ ಸಮಾಜದಲ್ಲಿ ಬಸವಾದಿ ಪ್ರಮಥರೆಂದು ಖ್ಯಾತಿವೆತ್ತಿದ್ದಾರೆ. ಇವರ ಕಾಲವೇ ಕರ್ನಾಟಕದಲ್ಲಿ ಶಿಕ್ಷಣ ಪುನರುಜ್ಜೀವನ (Renaissance) ಕಾಲವೆಂದು ಹೇಳಬಹುದು. ಇದರ ಮಾರ್ಗದರ್ಶಕನಾದ ಬಸವನು ಭಕ್ತನೂ ಅಹುದು; ಧರ್ಮೋದ್ಧಾರಕನೂ ಅಹುದು; ಸಮಾಜ ಸುಧಾರಕ (Social Reformer)ನೂ ಅಹುದು; ಶಿಕ್ಷಣ ತಜ್ಞ(Educationist)ನೂ ಅಹುದು; ಇವೆಲ್ಲವುಗಳನ್ನೊಳಗೊಂಡ ಕಾಯಕ ವಾದಿಯೂ ಅಹುದು. ಆದುದರಿಂದ ಇವೆಲ್ಲವುಗಳನ್ನು ಜನತೆಗೆ ಬಿತ್ತರಿಸಲು ಅವನು ಕೈಕೊಂಡ ಯೋಜನೆಯೇ ಕಲ್ಯಾಣದಲ್ಲಿ 'ಅನುಭವ ಮಂಟಪ'ವೆಂಬ ರೂಪವೆತ್ತಿತು.

ಇಲ್ಲಿಯ ವರೆಗೆ ಸಹೋದರ ಮತಸ್ಥರಿಗೆ ಅನುಭವ ಮಂಟಪದ ಅರ್ಥವೇ ಆಗಿಲ್ಲ. ಹಲಕೆಲವರು ಅದೊಂದು ವೀರಶೈವರ ಕಾಲ್ಪನಿಕ ಊಹೆಯೆಂದು ಗಾಳಿಗೋಪುರ ಕಟ್ಟಿ ಹೋಗಿದ್ದಾರೆ. ಬೇರೆ ಕೆಲವರು ಇನ್ನೂ ಏನೇನೋ ಹೇಳ ಹೋಗಿದ್ದಾರೆ. ಆದರೆ ಅದು ಶಿವಶರಣರ ಐತಿಹಾಸಿಕ ಪ್ರಸಂಗ; ಸಾಂಸ್ಕೃತಿಕ ಶಿಕ್ಷಣ ಪ್ರಸರಣ ಮಹಾಕೇಂದ್ರ. ಅನುಭವ ಮಂಟಪವು ಕೂಲಿಕಾರರ ಸಂಘವಲ್ಲ. ಭಜನೆ ಕೀರ್ತನೆಯನ್ನು ನಡೆಯಿಸಿದ ದಾಸಕೂಟವಲ್ಲ. ಧರ್ಮಗಳ ಪುರಾಣ ಕಥೆಯಲ್ಲ. ಧರ್ಮವಾದಿಗಳ ಸಮ್ಮೇಲನವಲ್ಲ. ನಿರಕ್ಷರಿಗಳಾಗಿ ತೊಳಲುವ, ವರ್ಣಾಶ್ರಮ ಬಂಧನದಲ್ಲಿ ಸಿಲುಕಿ ಬಳಲುವ ಜನತೆಯನ್ನೆತ್ತಿ ಮಾರ್ಗ ತೋರಿಸಲು ನಿರ್ಮಿತವಾದ ಅನುಭಾವಿಗಳ ಸುಸಂಘಟನೆ.

(" The Anubhavamantapa was not Communists' organisation. It was not the prayer hall for the religious congregation of the priests. And it was not the conference of the religions. But it was a Democratic Social organisation of the selfless workers, the Sivasharanas, with profound experience of knowledge and life to lift the illiterate and down-trodden masses of the country from the cruel clutches of the Varnashramas.") ಅಲ್ಲಿ ನಡೆದದ್ದು ಜೀವನ ಶಿಕ್ಷಣ (ಕಾಯಕ)ದೊಡನೆ ಸ್ವೋನ್ನತಿಯ ಸಾಧನೆ ಧರ್ಮ ಬೋಧನೆಯು ಬಂದರೂ ಸ್ವೋನ್ನತಿಯು ಬಲು ಹಿತಮಿತವಾಗಿ ಬಂದಿದೆ. 'ಕಾಯಕವೇ ಕೈಲಾಸ' (Work is Divine)ವೆಂಬುದೇ ಇದರ ಮೂಲ ಉಸುರಾಗಿದೆ.

ಅನುಭವ ಮಂಟಪವು ಜನತೆಗೆ ಕಲಿಸಿದ್ದು ಕಾಯಕ. ಶಿವಶರಣ, ದಾಸೋಹ, ಅರ್ಪಣೆ, ಅನುಭಾವಗಳನ್ನು. ಕಾಯಕವು ಪ್ರತಿಯೊಬ್ಬನು ಕಾಯಕ ನಿರತನಾಗಲು ಜೀವನ ಶಿಕ್ಷಣವನ್ನು ಕಲಿಸುವುದಲ್ಲದೇ ಸ್ವೋನ್ನತಿಗೆ ಸಹಕಾರಿ. ಅದು ಕಲಿಯುವವನನ್ನು ಉದ್ಧಾರ ಮಾಡುವುದಲ್ಲದೆ ಅದರಿಂದ ಕಲಿಸುವವನೂ ಉದ್ಧಾರನಾಗುವನು. ಕಾಯಕವು ಹೊಟ್ಟೆಯ ಹೋರಾಟವಲ್ಲ. ಅದು ನಿತ್ಯ ಜೀವನದ ವಿವಿಧ ಕ್ಷೇತ್ರಗಳಲ್ಲಿ ಉನ್ನತಿಗೆ ಸಾಧನೆ. ಅದು ಜೀವನ ಸ್ವಾವಲಂಬನವಲ್ಲದೆ ಪಾರಮಾರ್ಥದ ಅರಿವೂ ಆಹುದು. (" Kayaka is learning by doing and a means to attain Self-realistion. It does not mean mess work or labour for bread. It means the every day life in all its aspects. It is not only self supporting to oneself but also the means for selfrealisation ") ಈ ಕಾಯಕದ ಮೇಲೆಯೇ ಸ್ಥಿರವಾಗಿ ನಿಂತಿದೆ ವೀರಶೈವ ಧರ್ಮ. ಅದರಲ್ಲಿ ಭಿಕ್ಷಾಟನಕ್ಕೆ ಸ್ಥಾನವಿಲ್ಲ. ಎಲ್ಲವೂ ಕಾಯಕವಾಗಿ ಪರಿಣಮಿಸುವದು. ಆದುದರಿಂದ ಕರ್ನಾಟಕದಲ್ಲಿ ಅದು ಸ್ವಪರಿಪೂರ್ಣ ಧರ್ಮವಾಗಿದೆ. ಇದು ಹೀಗೆ ಸ್ವಪರಿಪೂರ್ಣ ಧರ್ಮವಾಗಬೇಕಾದರೆ ಪರಿಪೂರ್ಣ ಕಾಯಕ ಶಿಕ್ಷಣವೇ ಮೂಲಾಧಾರ. ಇದನ್ನು ಜನತೆಯಲ್ಲಿ ಬಿತ್ತರಿಸಿದವರೇ ಶಿವಶರಣರು.

ಇಲ್ಲಿಯ ವರೆಗೆ ಸಹೋದರ ಮತಸ್ಥರಿಗೆ ವೀರಶೈವರ "ಶಿವಶರಣ" ಎಂಬ ಶಬ್ದದ ಅರ್ಥವು ಪೂರ್ಣವಾಗಿ ತಿಳಿದಿಲ್ಲ. ಶಿವಶರಣನು ಕೇವಲ ಧರ್ಮೋಪದೇಶಕನಲ್ಲ, ಕಾಯಕ ಶಿಕ್ಷಣವನ್ನು ಜನತೆಯಲ್ಲಿ ಹರಡಿ ಜೀವನ ಶಿಕ್ಷಣದ ಮಹತಿಯನ್ನು ತಂದುಕೊಟ್ಟು ನುಡಿದಂತೆ ನಡೆಯುವ ಜೀವನ ಶಿಕ್ಷಕ. 'ಶಿವಶರಣ' ಎಂಬ ಶಬ್ದವನ್ನು ಬಸವಾದಿ ಪ್ರಮಥರೇ ನಿರ್ಮಾಣ ಮಾಡಿ ಸಮಾಜ ಸೇವಕನೆಂದು ಕರೆದು ಶಿವಶರಣರಿಗೆ ಅನುಭವ ಮಂಟಪದಲ್ಲಿ ಮಹಾಸ್ಥಾನವನ್ನು ನಿರ್ಮಿಸಿಕೊಟ್ಟರು. 'ಶಿವಶರಣ ಶಬ್ದವು ಸಮಾಸ ಪದವು. "ಶಿವ' ಎಂದರೆ ಮಹಾದೇವನ 'ಶರಣ' ಎಂದರೆ ರಕ್ಷಣೆ. 'ಶಿವಶರಣ'ನೆಂದರೆ ಮಹಾದೇವನ ರಕ್ಷಣೆ. ನಿರಕ್ಷರಿಗಳಾಗಿ ಅಧಃಪತನರಾದ ಜನಜಂಗುಳಿಗೆ ಮಹಾದೇವನ ರಕ್ಷಣೆಯೇ 'ಶಿವಶರಣ' ಎಂಬ ಶಬ್ದಕ್ಕರ್ಥ. ಬ್ರಾಹ್ಮಣ, ಬೌದ್ಧ, ಜೈನ ಧರ್ಮಗಳ ಪ್ರಭಾವದಲ್ಲಿ ದೇಶದೊಳಗೆ ದಾರಿದ್ರ್ಯತೆಯು ತಾಂಡವವಾಡುತ್ತಿತ್ತು. ಧರ್ಮದ ಸೋಗಿನಲ್ಲಿ ಭಿಕ್ಷಾಟನೆ ತುಂಬಿ ತುಳುಕುತ್ತಿತ್ತು. ಜೀವನ ಹಾದಿಯನ್ನು ತೋರಿಸದೆ ಜನಜಂಗುಳಿಯನ್ನು ಸ್ವಪ್ರಯೋಜನಕ್ಕುಪಯೋಗಿಸುವ (Exploitation) ಈ ಧರ್ಮಗಳಿಗೆ ಜನರು ಬೇಸತ್ತಿದ್ದರು. ಜನರಿಗೆ ಧರ್ಮ ಜೀವನ ದೃಷ್ಟಿಯಲ್ಲಿ ತೀವ್ರ ಬದಲಾವಣೆಯೇ ಬೇಕೆನಿಸಿತ್ತು. ಜನಜಂಗುಳಿಯನ್ನು ಎತ್ತಿ ಹಿಡಿಯಲು ಅಂತಹ ದುಃಸ್ಥಿತಿಯಲ್ಲಿ ಶಿವಶರಣರು ಕಾಯಕ ಶಿಕ್ಷಣವನ್ನು ದೇಶದಲ್ಲಿ ಪ್ರಾರಂಭಿಸಿದರು.

ಕಾಯಕ ಶಿಕ್ಷಣೋದ್ದೇಶ

೧) ಜನಜಂಗುಳಿಯ ನಿರಕ್ಷರತೆಯನ್ನು ನಿರ್ಮೂಲ ಮಾಡಿ ಓದುಬರಹವನ್ನು ಎಲ್ಲರಿಗೂ ಒದಗಿಸುವುದು. ಇದರ ಪರಿಣಾಮವಾಗಿ ಕೀಳಕುಲದವರೆಂದು ತಿರಸ್ಕರಿಸಲ್ಪಟ್ಟ ಜನರಲ್ಲಿ ಅನೇಕರು ಮಹಾಜ್ಞಾನಿಗಳಾಗಿ ಅನುಭಾವಿಗಳಾಗಿ ಹೋದರು.

೨) ಎಲ್ಲರಿಗೂ ಆರ್ಥಿಕ ಸರಿಸಮಾನತೆಯ ಭರವಸೆಯನ್ನೂ ಕೊಡುವುದು.

೩) ಪ್ರತಿಯೊಬ್ಬ ಮಾನವನಿಗೆ ಸಮಾಜದಲ್ಲಿ ಬದುಕಿ ಬಾಳುವ ಹಕ್ಕನ್ನು ಆಶ್ವಾಸಿಸುವುದು.

೪) ಧರ್ಮಕಾರ್ಯಗಳಲ್ಲಿಯೂ ಸಹ ಎಲ್ಲ ಕಸಬುಗಳಿಗೆ ಸಮಾಜ ಸರಿಸಮಾನತೆಯನ್ನು ಒಪ್ಪುವುದು. ಸಮಾಜದಲ್ಲಿ ಎಲ್ಲ ಕಸಬುಗಳೂ ಗೌರವವುಳ್ಳವುಗಳು.

೫) ಭಿಕ್ಷಾಟನ ನಿರ್ಮೂಲ ಮಾಡಿ ಕಾಯಕದರಿಕೆಯನ್ನೂ ಮಹತ್ವವನ್ನೂ ಜನರಿಗೆ ತಿಳಿಸಿಕೊಡುವುದು.

ಈ ಶಿಕ್ಷಣದ ಪ್ರಭಾವವು ಭರತಖಂಡದ ಮೂಲೆಮೂಲೆಗೆ ಹಬ್ಬಿತು. ದಣಿವಿಲ್ಲದ ದುಡಿಮೆ ದೇಶೋನ್ನತಿಯ ಮಾರ್ಗವಾಗಿ, 'ದಾಸೋಹ'ವು ತಲೆಯೆತ್ತಿತು. 'ದಾಸೋಹ'ವು ಯಥೇಷ್ಟಭೋಜನವಲ್ಲ. 'ಸಕಲಸ್ಯ ಅಹಂದಾಸಃ' (I am the Servant of Society) ನಾನು ಸಮಾಜ ಸೇವಕನೆಂಬ ಮಹಾ ಉಚ್ಚ ಕಲ್ಪನೆ. ಇದರ ಕೂಗನ್ನು ಕೇಳಿದ ಜನರು ಇದು ಹೊಸತೆಂದು ಭಾವಿಸಿ ಅದನ್ನರಿತು ಕಲಿಯಲು ಅನುಭಾವಮಂಟಪಕ್ಕೆ ಬಂದರು. ಈ ಶಿಕ್ಷಣದ ಮಾಧ್ಯಮವು ನಾಡ ನುಡಿಯಾದ ಕನ್ನಡವೇ ಆಗಿತ್ತು. ಆದುದರಿಂದ ಅನುಭಾವಮಂಟಪಕ್ಕೆ ಭಾರತದ ಮೂಲೆಮೂಲೆಗಳಿಂದ ಬಂದ ಪರಭಾಷಿಕರು ಮೊದಲು ಕನ್ನಡವನ್ನು ಕಲಿಯಲೇಬೇಕಾಯಿತು. ಇಂಥವರಲ್ಲಿ ಕೆಲವರು ಕನ್ನಡದಲ್ಲಿ ಪ್ರವೀಣರಾಗಿ ತಮ್ಮ ಅನುಭಾವಗಳನ್ನು ವಚನಗಳಲ್ಲಿ ಹೇಳಿದ್ದು ವಚನಶಾಸ್ತ್ರದಿಂದ ಸ್ಪಷ್ಟವಾಗಿ ತಿಳಿದುಬರುವುದು. ಕಾಶ್ಮೀರದ ಅರಸ ಮೋಳಿಗೆಯ ಮಾರಯ್ಯ ಹಾಗೂ ಅವರ ಪತ್ನಿ, ರಾಣಿ ಮ.ಹಾದೇವಿ ಗುಜರಾಥದ ಆದಯ್ಯ ಮೊದಲಾದವರು ಇದಕ್ಕೆ ಸಾಕ್ಷಿಯಾದ್ದಾರೆ

ಕಾರ್ಯರೀತಿ (Working)

೧) ಈ ಕಾಯಕ ಶಿಕ್ಷಣವನ್ನು ಕೃತಿಗೆ ಇಳಿಸಲು ಶಿವಶರಣರು ಮಠಗಳನ್ನೇ ಕೇಂದ್ರಗಳೆಂದು ಆರಿಸಿಕೊಂಡರು.

೨) ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಇಟ್ಟುಕೊಂಡರು. ಆದುದರಿಂದ ಶಿವಶರಣರ ಗ್ರಂಥಗಳು ಕನ್ನಡದ ಹೊರತಾಗಿ ಸಂಸ್ಕೃತದಲ್ಲಾಗಲಿ, ಬೇರೆ ಭಾಷೆಗಳಲ್ಲಾಗಲಿ ನಮಗೆ ದೊರೆಯುವುದಿಲ್ಲ.

೩) ಕಲಿಯುವುದನ್ನು ಕಸಬಿ (Craft) ನ ಮುಖಾಂತರ ಬೇರೆ ಬೇರೆ ಸ್ಥಾನಿಕ ಸ್ಥಿತಿಗಳಿಗನುಸಾರವಾಗಿ ಶಿಕ್ಷಣದ ಮೂಲ ಮಾನವನ್ನಾಗಿ ಈ ಪದ್ಧತಿಯಲ್ಲಿ ಸ್ವೀಕರಿಸಿದರು. ಆದುದರಿಂದ ಎಲ್ಲ ಜನರು ಕಾಯಕ ಪ್ರೇಮಿಗಳಾಗಿ ಸುಖಿಗಳಾದರು.

೪) ಬಹಿರಂಗವಾಗಿ ಮಠದಲ್ಲಿ ಗಂಡಸರೊಡನೆ ಹೆಂಗಸರನ್ನು ಈ ಶಿಕ್ಷಣದಲ್ಲಿ ಬರಮಾಡಿಕೊಂಡರು. ಈ ತರದ ಗೃಹ ಶಿಕ್ಷಣವು ಹೆಂಗಸರಿಗೆ ಮನೆಮಾತಾಗಿತ್ತು.

೫) ಜೀವನ ತತ್ವಗಳನ್ನು ಶಿವಶರಣರು ಕಸಬುಗಳೊಂದಿಗೆ ಕಲಿಸುತ್ತ ಧರ್ಮವನ್ನೂ ಬೋಧಿಸಿದರು. (ಮಹಾತ್ಮಾ ಗಾಂಧಿಯವರ ವರ್ಧಾ ಶಿಕ್ಷಣದಲ್ಲಿ ಧರ್ಮಕ್ಕೆ ಸ್ಥಾನವಿಲ್ಲ.)

೬) ಬಳಕೆಯಲ್ಲಿದ್ದ ಕಸಬುಗಳು.

ಅ) ನೂಲುವುದು ನೇಯುವುದು

ಬ) ಒಕ್ಕಲುತನ

ಕ) ಬಡಿಗೆ ಕಂಬಾರಿಕೆ

ಡ) ಮಡಿವಾಳಿಕೆ

ಇ) ಮೇದಾರಿಕೆ

ಫ) ಹೆಣೆಯುವುದು ಹೊಸೆಯುವುದು

ಗ) ಸಮಗಾರಿಕೆ ಇತ್ಯಾದಿ.....

ಪರಿಣಾಮಗಳು

ಈ ಶಿಕ್ಷಣದ ಪರಿಣಾಮಗಳು ಇಂದಿನ ಶಿಕ್ಷಣ ತಜ್ಞ (Educationist)ರನ್ನು ಚಕಿತಗೊಳಿಸದಿರವು.

೧) ಜನಜಂಗುಳಿ ಸಾಕ್ಷರಿಯಾಯಿತು.

೨) ಜೀವನ ವಿವಿಧಾಂಗಗಳಲ್ಲಿ ಹೆಂಗಸರು ಗಂಡಸರೊಡನೆ ಸರಿಸಮಾನತೆಯನ್ನು ಹೊಂದಿದರು.

೩) ಕಸಬುಗಳ ಮುಖಾಂತರ ವಿದ್ಯೆಯನ್ನು ಜೀವನಕ್ಕೆ ಸಂಬಂಧಿಸಿ ಕಲಿಯುವ ಕಲ್ಪನೆಯು ಸ್ವಚ್ಛಂದವಾಗಿ ಬೆಳೆದು ಬಲು ಯಶಸ್ವಿಯಾಯಿತು. ವೀರಶೈವ ಜನಾಂಗವೇ ಸ್ವಾವಲಂಬಿಯಾಯಿತು.

೪) ದೇಶವು ಅಭಿವೃದ್ಧಿಯಾಗಿ ಭಿಕ್ಷಾಟನೆಯು ನಿರ್ನಾಮವಾಯಿತು. ಪ್ರತಿಯೊಬ್ಬನೂ ಕಸಬಿನ ಅವಾ

ಲ್ಯತೆಯನ್ನರಿತು ಅದರಲ್ಲಿ ವಿಶ್ವಾಸವನ್ನಿಟ್ಟನಲ್ಲದೆ ಇಹ ಲೋಕದ ತನ್ನ ಜೀವನಕ್ಕೂ ಪರಲೋಕದ ಮೋಕ್ಷಕ್ಕೂ ಅದನ್ನೇ ಅವಲಂಬಿಸಿದನು. ಕಾಯಕವು ಈ ಲೋಕ ವನ್ನು ಸ್ವರ್ಗವನ್ನಾಗಿ ಮಾಡಿತು. ಜನರು ಪೂರ್ಣ ಕಾಯಕವನ್ನೇ ಅವಲಂಬಿಸಿ ಈ ಲೋಕದಲ್ಲಿಯೇ ಲಿಂಗಾಂಗ ಸಮರಸರಾದರು.

೫) ಈ ಶಿಕ್ಷಣ ಪದ್ಧತಿಯು ಕಾಯಕ ಶಿಕ್ಷಣ ವನ್ನೇ ಜೀವನದ ಗುರಿಯನ್ನಾಗಿಟ್ಟುಕೊಂಡ ಅನೇಕ ಶಿವಶರಣ (Social workers) ರನ್ನೊದಗಿಸಿ ಕೊಟ್ಟಿತು.

೬) ದೇಶವು ಸಮೃದ್ಧಿಯಾಯಿತು. ಪ್ರತಿಯೊ ಬ್ಬನು ಜೀವನ ಕಸಬುಗಳಲ್ಲಿ ಬಲು ಜಾಗ್ರತನಾದನು.

೭) ದಾಸೋಹವು ಎಲ್ಲರ ಮನವಾಚಾಭಾವನೆ ಯಾಗಿ ಎಲ್ಲವರಲ್ಲಿ ಅರ್ಪಣೆಯು ಜೀವನ ಮಾತಾಯಿತು. ಜೀವನದಲ್ಲಿ ಅನುಭಾವವು ತುಂಬಲು ನುಡಿನಡೆಯಾಗಿ ಎಲ್ಲೆಡೆಯಲ್ಲಿ ಸುಖಶಾಂತಿ ಪಸರಿಸಿದವು.

೮) ಪೌರನೀತಿಯು ಬೆಳೆದು ನಾಡು ಶಿವಮಯ ವಾಯಿತು

ಕಾಯಕಶಿಕ್ಷಣ ಕೇಂದ್ರಗಳು

ವೀರಶೈವರ ಮಠಗಳೇ ಕಾಯಕ ಶಿಕ್ಷಣ ಕೇಂದ್ರಗ ಳಾಗಿದ್ದವು. ಈ ಮಠಗಳಲ್ಲಿ ವಿವಿಧ ತರದ ಶೈಕ್ಷಣಿಕ ಚಟವಟಿಕೆಗಳು ನಿತ್ಯವೂ ನಡೆಯುತ್ತಿದ್ದವು. ಈ ಮಠ ಗಳಲ್ಲಿ ಮುಖ್ಯವಾಗಿ

೧) ವಿರಕ್ತಮಠಗಳು
೨) ಓದಿಸುಮಠಗಳು
೩) ಸಾಲಿಯ ಮಠಗಳು.

ಈ ಎಲ್ಲ ಮಠಗಳಲ್ಲಿ ಮುಖ್ಯವಾಗಿ ೧ ಶೈಕ್ಷಣಿಕ, ೨. ಧಾರ್ಮಿಕ ಹಾಗೂ ೩. ಸಾಮಾಜಿಕ ಚಟವಟಿಕೆ ಗಳು ಸದಾ ನಡೆಯುತ್ತಿದ್ದವು.

ವಿರಕ್ತ ಮಠಗಳು

ಇವು ಎಲ್ಲ ಹಳ್ಳಿಗಳಲ್ಲಿ ಸಣ್ಣ ಅನುಭವ ಮಂಟಪ ಗಳಿದ್ದಂತೆ. ಇವುಗಳಲ್ಲಿ ಧರ್ಮಾಧರ್ಮಗಳ ವಿಶೇಷ ಚರ್ಚೆ ಗಳೂ ಪ್ರವಚನಗಳೂ ಶಾಸ್ತ್ರೋಕ್ತ ವಿವೇಚನೆಗಳೂ ಅನುಭಾವಿಗಳ ಭಾಷಣಗಳೂ ನಡೆಯುತ್ತಿದ್ದವು. ಓದು ಬರಹವನ್ನು ಕಲಿತ ಮೇಲೆ ವಿದ್ಯಾರ್ಥಿಗಳು ಶಾಸ್ತ್ರೋಕ್ತ ವ್ಯಾಸಂಗವನ್ನು ಕೈಕೊಳ್ಳಲು ಇಲ್ಲಿಗೆ ಬರುತ್ತಿದ್ದರು.

ಓದಿಸುಮಠಗಳು

ಈಗ ಇವು ಹಲವೆಡೆಯಲ್ಲಿ 'ಉದಾಸಿ ಮಠ' ಗಳಾಗಿವೆ. ಮೊದಲು ಹಲಕೆಲವು ಹಿರೇಮಠಗಳು ಓದಿಸುವ ಮಠಗಳಾಗಿದ್ದವು. ಈ ಮಠಗಳ ಹೆಸರುಗಳ ಮೇಲಿಂದ ಇವುಗಳಲ್ಲಿ ಕೇವಲ ಓದುಬರಹಗಳನ್ನೊಳ ಗೊಂಡ ಪುಸ್ತಕಜ್ಞಾನ (Bookish knowledge) ವನ್ನೇ ಕೊಡುತ್ತಿದ್ದರು. ಸಾಲಿಯಮಠ (Craft Schools)ಗಳಲ್ಲಿ ಓದುಬರಹವನ್ನು ಕಲಿತ ಹಲಕೆಲವು ವಿದ್ಯಾರ್ಥಿಗಳು ಸಾಹಿತ್ಯಾಭ್ಯಾಸಕ್ಕೆ ಓದಿಸುಮಠಗಳನ್ನು ಸೇರುತ್ತಿದ್ದರು.

ಕಲಿಸಲ್ಪಡುವ ವಿಷಯಗಳು

೧) ಕಾವ್ಯಗಳು ೨) ಶಾಸ್ತ್ರಗಳು ೩) ವಚನ ಹಾಗೂ ಕೈವಲ್ಯ ಸಾಹಿತ್ಯ. ಸಂಸ್ಕೃತ ಸಾಹಿತ್ಯಕ್ಕೂ ಹೆಚ್ಚು ಮಹತ್ವ ಕೊಡುತ್ತಿದ್ದರು. ಈ ಮಠಗಳೇ ಮುಂದೆ ೧೯ನೆಯ ಶತಮಾನದ ಕೊನೆಯಲ್ಲಿಯೂ ೨೦ನೆಯ ಶತಮಾನದ ಆರಂಭದಲ್ಲಿಯೂ ವೀರಶೈವ ಸಂಸ್ಕೃತ ಪಾಠಶಾಲೆಗಳಾಗಿ ಪರಿಣಮಿಸಿದವು. ಹುಬ್ಬಳ್ಳಿ, ಜಮಖಂಡಿ, ಅಬ್ಬಿಗೇರಿ ಮೊದಲಾದ ಸ್ಥಳಗಳಲ್ಲಿ ಓದಿಸು ಮಠಗಳ ಅವಶೇಷಗಳುಳಿದಿವೆ.

ಸಾಲಿಯ ಮಠಗಳು

ಇವು ಹೆಚ್ಚುಕಡಿಮೆ ಈಗಿನ ಮೂಲ ಶಿಕ್ಷಣ ಶಾಲೆಗಳಂತೆ ಇದ್ದವು. ಇವುಗಳಲ್ಲಿ ಓದುಬರಹದೊಡನೆ ಜೀವನ ಶಿಕ್ಷಣ (Basic Education) ವನ್ನೂ ಕಲಿಸುತ್ತಿದ್ದರು. ಓದುವುದು, ಬರೆಯುವುದು, ಲೆಖ್ಖ ಪತ್ರಗಳನ್ನು ಕಲಿಯುವುದು ಎಲ್ಲ ಸಾಲೆಯಮಠಗಳ ಲ್ಲಿಯೂ ಇದ್ದವು. ಹಲಕೆಲವು ಸಾಲಿಯಮಠಗಳಲ್ಲಿ ಇವುಗಳೊಂದಿಗೆ ಹಲಕೆಲವು ಕಸಬು (Crafts) ಗಳನ್ನೂ ಕಲಿಸುತ್ತಿದ್ದರು.

ಪರಿಪಾಠದಲ್ಲಿದ್ದ ಕಸಬುಗಳು

೧) **ಪಡಮು (Cardboard)ಗಳನ್ನೂ** ಕಾಗದ ಗಳನ್ನೂ **ಮಾಡುವುದು** :—

ಇವುಗಳನ್ನು ಮಾಡುವಕ್ರಮವು ಈ ಮಠಗಳಲ್ಲಿ ಈಗಲೂ **ದೊರೆಯುವುದು.** ಪಡಮುಗಳನ್ನು ಮಾಡುವುದಕ್ಕೆ **ಬೇಕಾಗುವ ಸಕಲ** ಸಲಕರಣೆಗಳೂ ಸಿಗುವುವು.

೨) **ಕಡತ** (Roll up boards of the book size) :—

ಕಡತ ಹಾಗೂ ಅದರ ಮೇಲೆ ಬರೆಯುವ ಬಳಪ (Chalk) ಗಳನ್ನು ಈ ಮಠಗಳಲ್ಲಿ ತಯಾರ **ಮಾಡಲು ಕಲಿಸುತ್ತಿದ್ದರು.** ಈ ಕಡತಗಳನ್ನು ಮಾಡುವ **ರೀತಿಯು** ಈ ಮಠಗಳಲ್ಲಿ ಸಿಗುವುದು. ಈ ಕಡತಗಳು **ಎಲ್ಲ ದೊಡ್ಡ** ಮಠಗಳಲ್ಲಿ ಈಗಲೂ **ನೋಡಲು** ದೊರೆಯುವುವು. **ಇವುಗಳಲ್ಲಿ** ಆ ಮಠದ ಲೆಖ್ಖಪತ್ರಗಳೂ ಮಠದ **ಪಟ್ಟಾವಳಿಗಳೂ** ಅಲ್ಲದೆ ಹಲಕೆಲವು ಕಡತಗಳಲ್ಲಿ ವಚನಗಳನ್ನೂ **ಕಾವ್ಯಗಳನ್ನೂ** ಮಂಗಳಾರುತಿಗಳನ್ನೂ ಬರೆದು **ಇಟ್ಟಿದ್ದಾರೆ.** ವಿರಕ್ತಮಠ ಹಾಗೂ ಓದಿಸು ಮಠಗಳ **ಕಡತಗಳಲ್ಲಿ** ಮಠದ ತಾಡವಾಲೆ ಗ್ರಂಥಗಳ ಯಾದಿಯಿರುವುದು. **ಈ** ಮಠಗಳಲ್ಲಿ ದೊಡ್ಡ ವಾಚನಾಲಯಗಳಿದ್ದುದು **ಈಗ್ಯೂ** ಅಲ್ಲಿ ದೊರೆಯುವ ತಾಡವಾಲೆ ಗ್ರಂಥಗಳ ರಾಶಿಯು **ಮೇಲಿಂದ** ಕಂಡುಬರುವುದು.

೩) **ನೂಲುವುದೂ** ನೇಯುವುದು :—

ಉಡುತೊಡುವ ಅರಿವೆಅಂಚಡಿಗಳನ್ನು ನೇಯುವದು :— **ಹಲಕೆಲವು** ಸಾಲಿಯಮಠಗಳಲ್ಲಿ ನೂಲುವ ಹಾಗೂ **ನೇಯುವ ಸಲಕರಣೆಗಳು ನೋಡಲಿಕ್ಕೆ** ಈಗಲೂ ದೊರೆಯುವವು. **ಜಾಡಿ-**ಜಂಬುಳಿಗಳನ್ನೂ ಗುಡಾರ ಪಟ್ಟಿಗಳನ್ನೂ **ನೇಯುತ್ತಿದ್ದರು.**

೪) **ಹೊಸೆಯುವದು** ಹೆಣೆಯುವದು :—

ನುಲಿ, ಶಿವದಾರ, ಹಗ್ಗ, ಮಿಣಿ, ಮೊದಲಾದವುಗಳನ್ನು **ಹೊಸೆಯಲೂ ಜತ್ತಿಗೆ,** ಕಲ್ಲಿ ಮೊದಲಾದವುಗಳನ್ನು **ಹೆಣೆಯಲೂ** ಈ ಮಠಗಳಲ್ಲಿ ಕಲಿಸುತ್ತಿದ್ದರು. ಅಲ್ಲದೆ **ಹಸಬಿ** (Travelling bag)ಗಳನ್ನೂ ಹಡಪ (satchel)ಗಳನ್ನೂ ಹಮ್ಮಣಿ (purse)ಗಳನ್ನೂ ತಯಾರಿಸಲು **ಶಿಕ್ಷಣವು** ಈ ಮಠಗಳಲ್ಲಿ ದೊರೆಯುತ್ತಿತ್ತು.

೫) **ವಿಭೂತಿಯನ್ನು ಮಾಡಲು ಕಲಿಸುತ್ತಿದ್ದರು** ಅಲ್ಲದೆ ಬಣ್ಣಗಳನ್ನು **ತಯಾರಿಸುವುದನ್ನೂ ಬೇಕಾದಾಗ** ಬಣ್ಣ ಬಳೆಯುವುದನ್ನೂ **ಕಲಿಸುತ್ತಿದ್ದರು.** ಕಡತದ ಮೇಲಿನ ಹಲಗೆಗಳಿಗೆ **ಸಾಲಿಯಮಠಗಳಲ್ಲಿಯೇ** ಬಣ್ಣ ಬಳೆಯುತ್ತಿದ್ದರು.

೬) **ಕರಡಿಗೆ,** ಬುಟ್ಟಿ, ಚಾಪಿ, ತಟ್ಟಿ **ಮೊದಲಾದ**ವುಗಳನ್ನು ಹೆಣೆಯಲು **ಹೊಸೆಯಲು ಕಲಿಸುತ್ತಿದ್ದರು.**

೭) ಬಡಿಗೆ **ಕಂಬಾರಿಕೆ** :—

ಬಡಿಗಾರಿಕೆ :—

(ಅ) ತಾಡವಾಲೆಗಳನ್ನು ಸಮನಾಗಿ ಕೊರೆದು ಜೋಡಿಸುವುದು; ಅವುಗಳ ಮೇಲೆ ಹಲಗೆಗಳನ್ನು ಕೊರೆದು ಬಣ್ಣ ಬರೆಯುವುದು.

(ಬ) ನೂಲುವ ರಾಟಿ, ನೇಯುವ ಹಲಗೆ, ಕೋಲು ಮೊದಲಾವುಗಳನ್ನು ತಯಾರಿಸಲು ಕಲಿಸುತ್ತಿದ್ದರು.

(ಕ) ಅಲ್ಲದೆ ಒಕ್ಕಲುತನಕ್ಕೆ ಬೇಕಾಗುವ ಸಾಮಾನುಗಳನ್ನು ಮಾಡಲು ಕಲಿಸುತ್ತಿದ್ದರು. ಇನ್ನೂ ಅನೇಕ ಹಳ್ಳಿಗಳಲ್ಲಿ ಅಯ್ಯನವರೇ ಈ ಬಡಿಗಸಾಲೆಗಳನ್ನು ನಡೆಸಿಕೊಂಡು ಬಂದಿದ್ದಾರೆ.

ಕಂಬಾರಿಕೆ :—

ಅನೇಕ ಸಾಲಿಯಮಠಗಳಲ್ಲಿ ಈಗಲೂ ಬೇಳುಕುಲಿಮೆಗಳ ಅವಶೇಷಗಳಿವೆ. ಕಂಠ (steel pen)ಗಳನ್ನೂ ಕದರುಗಳನ್ನೂ ಲಿಂಗಗಳಿಗೆ ಕಂತೆ, ಒಪ್ಪುಗಳನ್ನು ಹಾಕಲು ಬೇಕಾಗುವ ತ್ಯಾಪಿ ಮೊದಲಾದ ಸಾಮಾನುಗಳನ್ನು ಮಾಡಲು ಈ ಮಠಗಳಲ್ಲಿ ಕಲಿಸುತ್ತಿದ್ದರು. ಅಲ್ಲದೆ ಒಕ್ಕಲುತನಕ್ಕೆ ಬೇಕಾಗುವ ಕುಡ, ಮುಂಜ, ಕುತಗೋಲು ಮೊದಲಾದವುಗಳನ್ನು ಈ ಮಠಗಳಲ್ಲಿ ಮಾಡುತ್ತಿದ್ದರು.

ಈ ಪ್ರಕಾರವಾಗಿ ಈ ಮಠಗಳಲ್ಲಿ ತಯಾರಿಸಿದ ಸಾಮಾನುಗಳಿಗೆ ಪೇಟೆಯಲ್ಲಿ ಉತ್ತಮ ಬೆಲೆಯೂ ಇತ್ತೆಂದು ಶಿವಶರಣರ ಚರಿತ್ರೆಗಳಿಂದಲೂ ಹಲಕೆಲವು ದೊಡ್ಡ ಮಠಗಳ ಇತಿಹಾಸದಿಂದಲೂ ತಿಳಿದು ಬರುವುದು.

೮) ಇನ್ನೂ ಕೆಲವು ಮಠಗಳಲ್ಲಿ ಒಕ್ಕಲುತನವು ಮೂಲ ವಿಷಯವಾಗಿ ಕಲಿಸಲ್ಪಡುತ್ತಿತ್ತು. ಈ ಸಂದರ್ಭದಲ್ಲಿ ನಮಗೆ ಕೃಷಿ ಕರ್ಮದ ಹೊತ್ತಿಗೆಗಳು ಓದಲು ಸಿಗು

ವುವು. ಘನಮಠದಾರ್ಯರ " ಕೃಷಿಜ್ಞಾನ ಪ್ರದೀಪಿಕೆ " ಯೇ ಇದಕ್ಕೆ ಸಾಕ್ಷಿ.

ಈ ಕಾಯಕ ಶಿಕ್ಷಣದಲ್ಲಿ ನೂರೊಂದು ಕಾಯಕಗಳು ಸಮಾವೇಶವಾಗಿದ್ದುವೆಂದು ತಿಳಿದು ಬರುವುದು. ತೆಕ್ಕೆಯಕಾಯಕ, ಆವಿಗೆಯಕಾಯಕ, ಕಂಬದಕಾಯಕ, ಶೂಲದಕಾಯಕ, ವೊಟ್ಟೆಯಕಾಯಕ, ಮೊದಲಾದುವುಗಳು ಪೌರನೀತಿಯನ್ನು ಕಲಿಸಲು ಪ್ರಯೋಗಿಸಲ್ಪಡುತ್ತಿದ್ದುವು. ಕಾಯಕಕ್ಕೆ ಧರ್ಮದ ಹೊದಿಕೆಗಿಂತ ಸಮಾಜ ಶಿಕ್ಷಣದ ಹೊದಿಕೆಯಿದೆ. ಕಾಯಕವು ವೀರಶೈವ ಧರ್ಮತತ್ವ (religious rite) ವಲ್ಲ ಅದು ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಸಿದ್ಧಾಂತಗಳಲ್ಲಿ ಮೂಲತತ್ವವೆಂದು ಗಣನೆಯಾಗುವುದಿಲ್ಲ.

ಸಾಲಿಯ ಮಠಗಳು ತೀರ ಕರ್ನಾಟಕದ ತುಂಬೆಲ್ಲ ಕಂಡು ಬರುವುವು. ಈ ಮಠಗಳು ತೀರ ಇತ್ತೀಚಿಗೆ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ನಿಲ್ಲಿಸಿರುವುವೆಂದು ತಿಳಿದು ಬರುವುದು. ಕನ್ನಡ ಹಳ್ಳಿಗಳಿಗೆ ಮೊದಲು ಓದು ಬರಹವನ್ನು ತಂದು ಕೊಟ್ಟವರೆಂದರೇ ಈ ಶಿವಶರಣರು.

ಶಿವಶರಣರ ಕಾಯಕ ಶಿಕ್ಷಣವೂ ವರ್ಧಾ ಶಿಕ್ಷಣವೂ

ಶಿವಶರಣರು 'ಕಾಯಕವು' ಶಿಕ್ಷಣವೆಂದು ಬಹಿರಂಗವಾಗಿ ಕರೆಯದಿದ್ದರೂ ಈಗಿನ ಶಿಕ್ಷಣದ ವಿವಿಧಾಂಗಗಳು ಕಾಯಕದಲ್ಲಿ ಸಮಾವೇಶವಾಗಿರುವುದನ್ನು ನಾವು ಆಳವಾದ ಅಭ್ಯಾಸದಿಂದ ಮನಗಾಣಬಹುದು. ಆದುದರಿಂದ ನಾನು ಕಾಯಕವು ಒಂದು ಶಿಕ್ಷಣವೆಂದು ಕರೆದಿದ್ದೇನೆ. ಶಿವಶರಣರ ಗ್ರಂಥಗಳನ್ನು ಅಭ್ಯಸಿಸಲು ಅವುಗಳಲ್ಲಿ ಅಗಾಧವಾದ ಒಂದು ಶಿಕ್ಷಣ ಪದ್ಧತಿಯು ಹುದುಗಿಕೊಂಡದ್ದು ತಿಳಿದು ಬರುವುದು. ಅಂದಿನ ಆ ಪ್ರಕ್ಷುಬ್ಧ ವಾತಾವರಣದಲ್ಲಿ ಶಿವಶರಣರು ಈ ಶಿಕ್ಷಣ ಪದ್ಧತಿಯನ್ನೂ ಕಾರ್ಯರಂಗಕ್ಕೆ ಬಲು ಯಶಸ್ವಿಯಾಗಿ ಇಳಿಸಿದರು. ಇದರ ಹೆಚ್ಚಳವು ಸುತ್ತಲೂ ಹಬ್ಬಲು ಈ ಪದ್ಧತಿಯನ್ನರಿತುಕೊಳ್ಳಲು ಭರತಖಂಡದ ಅನೇಕ ಭಾಗಗಳಿಂದ ಜನರು ಬಂದದ್ದನ್ನು ಶಿವಶರಣರ ಇತಿಹಾಸವು ಹೇಳುವುದು.

ಇಂತಹ ಶಿಕ್ಷಣದಲ್ಲಿ ಬೆಳೆದು ಬಂದ ವೀರಶೈವರಿಗೆ ಮಹಾತ್ಮಾಗಾಂಧಿಯವರ ವರ್ಧಾ ಶಿಕ್ಷಣವು ಹೊಸತಲ್ಲ. ಮಹಾತ್ಮಾಗಾಂಧಿಯವರು ಜೈನರ ಪಂಚ ಅಣುವ್ರತ ಹಾಗೂ ಮಹಾವ್ರತಗಳನ್ನು ಜೀವನದ ಕಸಬುಗಳೊಂದಿಗೆ ಸರಿಪಡಿಸಿ ವರ್ಧಾಶಿಕ್ಷಣವನ್ನು ನಿರ್ಮಿಸಿರುವಂತೆ ಕಂಡು ಬರುವುದು. ಅವರಿಗೆ ಈ ವರ್ಧಾಶಿಕ್ಷಣದಲ್ಲಿ ಧರ್ಮ (Relgion) ದ ಪ್ರಶ್ನೆಯು ಪೆಡಂಭೂತವಾಗಿ ನಿಲ್ಲಲು ಅದಕ್ಕೆ ಅವರು ತಮ್ಮ ಶಿಕ್ಷಣ ಪದ್ಧತಿಯಲ್ಲಿ ಸ್ಥಾನವನ್ನೇ ಕೊಡಲಿಲ್ಲ. ಕಾಯಕವನ್ನು ಅರಿಯದ ಸಹೋದರ ಮತಗಳಿಗೆ ಮಹಾತ್ಮಾಜಿಯವರ ವರ್ಧಾಶಿಕ್ಷಣ ಪದ್ಧತಿಯು ಹೊಸದಾಗದೇನು ಮಾಡೀತು? ಆದುದರಿಂದ ಆ ಪದ್ಧತಿಗೆ ಸುತ್ತಲೂ ಸ್ವಾಗತವಾಯಿತು. ಈಗಿನ ಸರಕಾರವು ಮೂಲ ಶಿಕ್ಷಣವೇ ಶಿಕ್ಷಣದ ತಳಹದಿಯಾಗಬೇಕೆಂದು ಕಾಯ್ದೆ ಕಾನೂನುಗಳನ್ನು ಮಾಡಿ ಅದನ್ನು ಈಗ ಜಾರಿಯಲ್ಲಿ ತಂದಿದೆ. ಅದರ ಪ್ರಗತಿಯು ಭರದಿಂದ ಸಾಗಿದೆ.

ಅಪೂರ್ವ ಯಶಸ್ಸು

ಆರಂಭದಿಂದಲೂ ಸರಕಾರಿ ಟ್ರೇ. ಕಾ. ದ ಪ್ರಾ. ಶಾ. ಸ್ಕೂ. ವಿದ್ಯಾರ್ಥಿಯಾಗಿದ್ದ ಕುಮಾರ ಸಂ. ಶಾ. ಭಾವೀಕಟ್ಟಿ ಈತನು ಈ ವರ್ಷ ಧಾರವಾಡ ಕೇಂದ್ರದಲ್ಲಾದ ಜೀವನ ಶಿಕ್ಷಣ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ೮೦೦ರಲ್ಲಿ ೫೨೩ ಗುಣಗಳನ್ನು ದೊರಕಿಸಿ ೧ನೆಯ ನಂಬರು ಪಡೆದಿದ್ದಾನೆ. ಅಲ್ಲದೆ ಈ ಸಲದ ಹೈಸ್ಕೂಲ ಸ್ಕಾಲರಸಿಪ್ಪ ಸಹ ಪಡೆದಿದ್ದಾನೆ.

ಮುಂಬಯಿ ರಾಜ್ಯದ ಮೂಲೋದ್ಯೋಗದ ಪ್ರದರ್ಶನ

(ಶ್ರೀ ಎ. ರಾ. ರಾವೂತ, ಧಾರವಾಡ ಅವರು ವರದಿ ಮಾಡಿದುದು)

ದಿನಾಂಕ ೨೭-೯-೧೯೫೫ ರಿಂದ ೨-೧೦-೫೫ರ ವರೆಗೆ **ಪುಣೆಯ ಸರಕಾರಿ** ಮರಾಠಿ ಟ್ರೇನಿಂಗ ಕಾಲೇಜದಲ್ಲಿ **ಮುಂಬೈ ರಾಜ್ಯದ** ಎಲ್ಲ ಜಿಲ್ಹೆಗಳಲ್ಲಿಯ ಮೂಲೋದ್ಯೋಗ **ಹಾಗೂ** ಜೀವನ ಶಿಕ್ಷಣ ಸಾಲೆಗಳು ಹಾಗೂ ಟ್ರೇನಿಂಗ **ಕಾಲೇಜುಗಳು** ತಯಾರಿಸಿದ ವಸ್ತುಗಳ ಮತ್ತು ಶೈಕ್ಷಣಿಕ **ಉಪಕರಣಗಳ** ಪ್ರದರ್ಶನವು ಜರುಗಿತು. ಪ್ರದರ್ಶನದ **ಸ್ಥಳವು** ತಳಿರು-ತೋರಣಗಳಿಂದ ರಮಣೀಯವಾಗಿ **ಅಲಂಕರಿಸಲ್ಪಟ್ಟಿತ್ತು.** ಆವಾರದ ಮಧ್ಯಭಾಗದಲ್ಲಿ ಕಾಟಕೋನ **ಚೌಕೋನಾಕಾರದ** ಒಂದು ಮಂಟಪವನ್ನು ಹಾಕಿದ್ದು ಅದರ **ನಡುವೆ** ಮಹಾತ್ಮಾಗಾಂಧೀಜಿಯವರ ಪುತ್ಥಳಿಯನ್ನು **ಒಂದು** ಸ್ಥಂಬದ ಮೇಲೇರಿಸಿದ್ದರು. ಅದರ ಸುತ್ತಲೂ **ವರ್ತುಲಾಕಾರವಾಗಿ** ಹೂಬಳ್ಳಿಗಳಿಂದ ಮನೋಹರವಾಗಿ ಅಲಂಕರಿಸಿದ್ದರು. ಮಂಟಪದ ಎಡಬಲಕ್ಕೆ ಷಟ್ಕೋನಾಕೃತಿಯ ಎರಡು ಮಂಟಪಗಳನ್ನು ರಚಿಸಿದ್ದು ಒಂದರಲ್ಲಿ **ಪ್ರಾತ್ಯಕ್ಷಿಕೆಗಳ** ಯೋಜನೆ, ಇನ್ನೊಂದರಲ್ಲಿ "ಅನ್ನಪೂರ್ಣೆಯ" (ಪಾನೀಯ) ಯೋಜನೆಯನ್ನು ಮಾಡಲಾಗಿತ್ತು. **ಮಂಟಪದ** ಹಿಂಭಾಗದಲ್ಲಿಯೇ ಸಭಾಭವನವನ್ನು **ಸುಸಜ್ಜಿತಗೊಳಿಸಲಾಗಿತ್ತು.** ಸಭಾಭವನದಲ್ಲಿಯೇ ಬಣ್ಣ ಬಣ್ಣದ ನಕ್ಷೆಗಳ ಖಾದಿ ಪಡದೆಗಳಿಂದ ರಂಗಸ್ಥಳವು **ಕಂಗೊಳಿಸುತ್ತಲಿತ್ತು.**

ಮಂಟಪದ ಅಕ್ಕಪಕ್ಕಗಳ ಎರಡಂತಸ್ತಿನ ಕೋಣೆಗಳಲ್ಲಿ ಪ್ರದರ್ಶನದ ಏರ್ಪಾಟನ್ನು ಮಾಡಲಾಗಿತ್ತು. ಬಲಪಕ್ಕದ **ಕೆಳ ಅಂತಸ್ತಿನ ಕೋಣೆಗಳಲ್ಲಿ** ೧) ಸೊಲ್ಲಾಪುರ ೨) **ಉತ್ತರ ಸಾತಾರೆ** ೩) ನಾಸಿಕ ೪) ಠಾಣೆ ಮತ್ತು ಡಾಂಗ್ಸ ೫) **ಪಶ್ಚಿಮ** ಖಾನದೇಶ ಮತ್ತು ೬) ರತ್ನಾಗಿರಿ ಜಿಲ್ಹೆಗಳಿಗೂ **ಮೇಲಂತಸ್ತಿನ ಕೋಣೆಗಳಲ್ಲಿ** ೭) ಮುಂಬಯಿ ಮತ್ತು ಕುಲಾಬಾ ೮) ಅಹಮ್ಮದನಗರ ೯) ಬಡೋಚ ೧೦) ಸುರತ ೧೧) ಉತ್ತರ ಸಾತಾರೆ ಮತ್ತು ಕೊಲ್ಹಾಪುರ ೧೨) ಮೆಹಸಾಣಾ, ಸಬರಕಂಥ, ಬನಾಸ್ಕಂಥ ಮತ್ತು ಬಡೋದೆ ೧೩) ಖೇಡಾ ಜಿಲ್ಹೆಗಳಿಗೂ ಒಂದೊಂದು ಕೋಣೆಯನ್ನು ಕೊಡಲಾಗಿತ್ತು. ಮಂಟಪದ ಎಡಪಕ್ಕದ ಕೆಳ ಅಂತಸ್ತಿನ ಕೋಣೆಗಳನ್ನು ೧೪) ಧಾರವಾಡ ೧೫) ಬೆಳಗಾಂವ ೧೬) ವಿಜಾಪುರ ಮತ್ತು ೧೭) ಕಾರವಾರ ಜಿಲ್ಹೆಗಳಿಗೆ ಕೊಟ್ಟಿದ್ದರು. ಸಭಾಭವನದ ಬಲ ಪಕ್ಕದ ಕೋಣೆಯನ್ನು ೧೮) ಅಹಮ್ಮದಾಬಾದ ಮತ್ತು ಅಮರೇಲಿ ಮತ್ತು ಎಡಪಕ್ಕದ ಕೋಣೆಯನ್ನು ೧೯) ಪುಣೆ ಜಿಲ್ಹೆಯವರಿಗೂ ಕೊಟ್ಟಿದ್ದರು. ಹೀಗೆ ಮುಂಬಯಿ ರಾಜ್ಯದಲ್ಲಿಯ ೨೭ ಜಿಲ್ಹೆಗಳ ಪ್ರದರ್ಶನವನ್ನು ಪ್ರೇಕ್ಷಣಿಸಿದಂತೆ ೧೯ ಕೋಣೆಗಳಲ್ಲಿ ಏರ್ಪಡಿಸಲಾಗಿತ್ತು. ೨೬ನೆಯ ತಾರೀಖಿನ ಸಂಜೆ ೫ ಗಂಟೆಯೊಳಗೆ ಪ್ರದರ್ಶನದ ಎಲ್ಲ ಕೋಣೆಗಳು ಚಿತ್ರಪಟ, ಆಲೇಖ, ನಕಾಶೆ, ಶೈಕ್ಷಣಿಕ ಉಪಕರಣ, ಕೈನೂಲಿನ ಬಟ್ಟೆ, ರಟ್ಟಿನ ಮತ್ತು ಕಟ್ಟಿಗೆಯ ವಸ್ತು, ಒಕ್ಕಲುತನದ ಉಪಕರಣ, ಆಟಿಗೆಯ ವಸ್ತು, ಆವಿಷ್ಕರಣದ ಹೊತ್ತಿಗೆಗಳು ಮುಂತಾದವುಗಳಿಂದ ಸುಸಜ್ಜಿತವಾದವು. ಅಷ್ಟರಲ್ಲಿ ಶಿಕ್ಷಣದ ಉಪಮಂತ್ರಿಗಳಾದ ಮಾನ್ಯ ಇಂದುಮತಿ ಶೇಠ, ಡೆಪ್ಯೂಟಿ ಡಾಯರೆಕ್ಟರರಾದ ಡಾ. ಚಿಕ್ಕರಮನೆ ಮತ್ತು ಮಿಮಾಂಶಿಯವರು ಪ್ರದರ್ಶನದ ಸಿದ್ಧತೆಯನ್ನು ನಿರೀಕ್ಷಿಸಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು. ಅವರ ಹಿಂದೆಯೇ ಶಿಕ್ಷಣ ಖಾತೆಯ ಡಾಯರೆಕ್ಟರರಾದ ಡಾ. ಭಾಂಡಾರಕರರು ಬಂದು ತಯಾರಿಯನ್ನು ನೋಡಿ ಸಮಾಧಾನಪಟ್ಟುಕೊಂಡರು.

ದಿನಾಂಕ ೨೭-೯-೧೯೫೫ಕ್ಕೆ ಮುಂಜಾನೆ ಹತ್ತು

ಕಾಲು ಗಂಟೆಗೆ ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಮೊರಾರಜಿ ದೇಸಾಯಿಯವರು ಒಂದು ಗಂಟೆಯ ವರೆಗೆ ೧ ರಿಂದ ೧೯ ಕೋಣೆಗಳಲ್ಲಿ ೨೭ ಜಿಲ್ಲೆಯವರು ಏರ್ಪಡಿಸಿದ ಪ್ರದರ್ಶನವನ್ನು ನೋಡಿಕೊಂಡು ಸಭಾಭವನಕ್ಕೆ ಬರುವಷ್ಟರಲ್ಲಿ ಸಭಾಭವನವು ಮುಂಬಯಿ ರಾಜ್ಯದ ಮಂತ್ರಿ, ಉಪಮಂತ್ರಿ, ಎಮ್. ಎಲ್. ಎ., ಅಧಿಕಾರಿಗಳು, ಪ್ರತಿಷ್ಠಿತ ನಾಗರಿಕರು, ಶಿಕ್ಷಕರು, ಶಿಕ್ಷಕ-ವಿದ್ಯಾರ್ಥಿಗಳು, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮುಂತಾದವರಿಂದ ಕಿಕ್ಕಿರಿದು ತುಂಬಿಹೋಗಿತ್ತು. ಗೌರವ ಸಮರ್ಪಣೆ ಪೀತಾಲಂಕಾರ ಮುಗಿದೊಡನೆ ಪ್ರಾರ್ಥನೆಗೆ ಪ್ರಾರಂಭವಾಯಿತು. ಡಾ. ಭಾಂಡಾರಕರರು ಮತ್ತು ಡಾ. ಚಿಕ್ಕರಮನೆಯವರು ಪ್ರದರ್ಶನದ ಉದ್ದೇಶ ಗೊತ್ತುವಳಿಗಳನ್ನು ವಿಶದೀಕರಿಸಿ, ಮೂಲೋದ್ಯೋಗದಲ್ಲಿ ಶಾಲೆ ಕಾಲೇಜುಗಳೂ ಸಾಧಿಸಿದ ಪ್ರಗತಿಯನ್ನು ಹಿಂದಿಯಲ್ಲಿ ವಿವರಿಸಿ ಹೇಳಿದರು. ತರುವಾಯ ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳನ್ನು, ಪ್ರತಿಷ್ಠಿತ ಆಮಂತ್ರಿತರನ್ನು, ಎಲ್ಲ ಸಭಿಕರನ್ನೂ ಸ್ವಾಗತಿಸಿ ಪ್ರದರ್ಶನದ ಉದ್ಘಾಟನೆ ಮಾಡಲು ಮಾನ್ಯ ಮುಖ್ಯಮಂತ್ರಿಗಳಿಗೆಕೇಳಿಕೊಂಡರು.

ಮಾನ್ಯ ಮೊರಾರಜಿಯವರು ಪ್ರದರ್ಶನವನ್ನು ಉದ್ಘಾಟಿಸುತ್ತ ಜೀವನ ಶಿಕ್ಷಣದಲ್ಲಿಯ ಮೂಲೋದ್ಯೋಗದ ಮಹತಿಯನ್ನು ಹೇಳಿದರು. ಇನ್ನು ಮುಂದೆ ಕೆಲವೇ ವರ್ಷಗಳಲ್ಲಿ ಎಲ್ಲ ಶಾಲೆಗಳು ಜೀವನ ಶಿಕ್ಷಣ ಶಾಲೆಗಳಾಗಲಿವೆ ಎಂಬ ತಮ್ಮ ಸ್ಪಷ್ಟವಾದ ಧೋರಣೆಯನ್ನು ಜಾಹೀರ ಪಡಿಸಿದರು. ಸಾದಾ ಶಾಲೆಗಳನ್ನು ಮೂಲೋದ್ಯೋಗ ಶಾಲೆಗಳನ್ನಾಗಿಯೂ, ಮೂಲೋದ್ಯೋಗ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿಯೂ ಬೇಗನೆ ಪರಿವರ್ತಿಸುವದು ತೀರ ನಿಕಟ ಭವಿಷ್ಯದ ಮಾತಾಗಿದೆ ಎಂಬುದನ್ನು ದೃಢವಾಗಿ ಹೇಳಿದರು. ಈ ಕ್ಷೇತ್ರದಲ್ಲಿ ದುಡಿಯುವವರಲ್ಲಿ ಮೂಲೋದ್ಯೋಗ ಹಾಗೂ ಜೀವನ ಶಿಕ್ಷಣದ ಪ್ರಗತಿಗಾಗಿ ಅಚಲವಾದ ಶ್ರದ್ಧೆಯಿಂದಲೂ, ಅವಿಶ್ರಾಂತವಾಗಿಯೂ ದುಡಿಯಲು ಮನಸ್ಸು ಮಾಡಿ ಕಾರ್ಯ ಪ್ರವೃತ್ತರಾಗುವದು ಅಗತ್ಯವಾಗಿದೆಯೆಂದೂ ಒತ್ತಿ ಹೇಳಿದರು. ಯಾರಿಗೆ ಈ ತೆರನಾದ ಶಿಕ್ಷಣದಲ್ಲಿ ವಿಶ್ವಾಸವಿಲ್ಲವೋ ಅವರೆಲ್ಲರೂ, ಯಾವ ಉಚ್ಚ ಸ್ಥಾನದಲ್ಲಿದ್ದರೂ, ಹೊರ ಹೊರಡಬೇಕೆಂದು ಘಂಟಾಘೋಷವಾಗಿ ಹೇಳಿದರು. ಜೀವನ ಶಿಕ್ಷಣವು ಭಾರತಕ್ಕೆ ಹೇಗೆ ಅನಿವಾರ್ಯವಾಗಿದೆ, ಜೀವನ ಶಿಕ್ಷಣದಿಂದ ಭಾರತಕ್ಕೆ ಆಗುವ ಲಾಭಗಳು ಯಾವವು, ಇಂಥ ಪ್ರದರ್ಶನಗಳಿಂದ ಜನಸಾಮಾನ್ಯರ ಮೇಲೆ ಆಗುವ ಪರಿಣಾಮಗಳು ಯಾವವು ಮುಂತಾದವುಗಳನ್ನು ಕುರಿತು ಸುಮಾರು ಅರ್ಧ ಗಂಟೆಯವರೆಗೆ ಮಾತನಾಡಿದರು. ಕೊನೆಗೆ ಪ್ರದರ್ಶನ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು. ಶ್ರೀ ಮಿಮಾಂಶಿಯವರು ಆಭಾರ ಮನ್ನಿಸಿದರು. ರಾಷ್ಟ್ರಗೀತೆಯೊಂದಿಗೆ ಅಂದಿನ ಮುಂಜಾವಿನ ಕಾರ್ಯಕ್ರಮವು ಮುಕ್ತಾಯವಾಯಿತು.

ಮುಂಬಯಿ ರಾಜ್ಯದಲ್ಲಿಯ ಬೇರೆ ಬೇರೆ ಜಿಲ್ಹೆಯವರು ಸಾಧಿಸಿದ ವೈಶಿಷ್ಟ್ಯಗಳನ್ನು ಕೆಳಗೆ ಕಾಣಿಸಲಾಗಿದೆ. ಆ ವೈಶಿಷ್ಟ್ಯಗಳನ್ನು ಕರ್ನಾಟಕದವರೂ ಅರಿತುಕೊಂಡು ಅವನ್ನು ತಾವೂ ಸಾಧಿಸಲು ಪ್ರಯತ್ನಿಸಬಹುದೆಂದು ಹಾರೈಸಲಾಗಿದೆ.

೧) ಸೊಲ್ಲಾಪುರ:— ರಟ್ಟಿನಿಂದ ತಯಾರಿಸಿದ ಆಟಿಗೆಗಳು, ಶೃಂಗಾರದ ಪೆಟ್ಟಿಗೆ, ತರತರದ ಡಿಝಾಯಿನ ಉಳ್ಳ ಆಸನಗಳು, ಬಣ್ಣಬಣ್ಣದ ಕೋಟಿನ ಅರಿವೆಗಳು, ಒಳ್ಳೆ ಗಾಲೀಚಾಗಳು, ಕಟ್ಟಿಗೆಯಿಂದ ಮಾಡಿದ ಕಬ್ಬು, ಸರಪಳಿಗಳು, ಇತ್ಯಾದಿ. ಈ ಜಿಲ್ಹೆಯವರು ತಯಾರಿಸಿದ ಗಾಲೀಚಾಕ್ಕೆ ೨ನೆಯ ಬಹುಮಾನ ದೊರೆತಿತು.

೨) ಉತ್ತರ ಸಾತಾರೆ:— ಉಣ್ಣೆಯ ಕಂಬಳಿ, ಗೊಂಗಡಿ, ಸ್ವೆಟರ, ಒಳ್ಳೆ ಡಿಝಾಯಿನಿನ ಶರ್ಟಿನ ಹಾಗೂ ಕೋಟಿನ ಅರಿವೆಗಳು.

೩) ನಾಶಿಕ:— ಉದ್ದನ್ನ ಆಸನದ ಪಟ್ಟಿಗಳು, ಗಾಲೀಚಾಗಳು. ಕರೀ ಅರಿವೆಯ ಮೇಲೆ ಉಣ್ಣೆಯಿಂದ ನಕ್ಷೆ ಹಾಕಿದ ಗಾಲೀಚಾಕ್ಕೆ ಒಂದು ಪ್ರಶಸ್ತಿ ಪತ್ರಿಕೆ ದೊರೆಯಿತು.

೪) ಠಾಣೆ ಮತ್ತು ಡಾಂಗ್ಸ:— ಬಿದಿರು, ಗಳಗಳಿಂದ ತಯಾರಿಸಿದ ಬಾಣಬಿಲ್ಲು, ಚಿತ್ರ, ಗಳಗಳಿಂದಲೇ ತಯಾರಿಸಿದ ರಾಟಿ, ಬಿದಿರಿನ ಚಾಪೆ, ಗಾಲೀಚಾ, ತರತರದ ಬಣ್ಣದ ಶರ್ಟು-ಕೋಟಿನ ಅರಿವೆಗಳು, ಕೈಚೀಲಗಳು ಮುಂತಾದವು. ಡಾಂಗ್ಸ ಜಿಲ್ಹೆಯ ಬಿದಿರು ಗಳದ ಕೆಲಸವು ಎಲ್ಲರ ಮನವನ್ನು ಸೆಳೆಯಿತು.

೫) ಪಶ್ಚಿಮ ಖಾನದೇಶ ಮತ್ತು ಪೂರ್ವ ಖಾನದೇಶ:— ಅರಿವೆಯಲ್ಲಿ ತರತರದ ಡಿಝಾಯಿನ ಮತ್ತು

ಬಣ್ಣ, ಸಮವಾಯ ಜ್ಞಾನದ ಪಟಗಳು ಮೆಚ್ಚುಗೆಯನ್ನು ಪಡೆದವು.

೬) **ರತ್ನಾಗಿರಿ** :— ಕಟ್ಟಿಗೆಯ ಸಾಮಾನುಗಳು ಉತ್ತಮವಾಗಿದ್ದವು, ಮುಖ್ಯವಾಗಿ ಆಟಿಗೆಯ ವಸ್ತುಗಳು. ಈ ಜಿಲ್ಹೆಯವರ ಟೇಬಲು ಮತ್ತು ಟ್ರೇ ಬಹುಮಾನ ಪಡೆದವು.

೭) **ಮುಂಬಯಿ ಮತ್ತು ಕುಲಾಬಾ** :— ಕಾಗದದ ಮುದ್ದೆಯಿಂದ ತಯಾರಿಸಿದ ವಸ್ತುಗಳು, ಆಟಿಗೆಗಳು ಮುಖ್ಯವಾಗಿ ಒಂದು ನವಿಲು, ಕಟ್ಟಿಗೆಯ ಆಟಿಗೆಗಳು ಪುಚ್ಛಗರಿಗಳ ಸಂಗ್ರಹ. ಉತ್ತಮ ಕರವಸ್ತ್ರವು ಬಹುಮಾನ ಪಡೆಯಿತು.

೮) **ಅಹಮ್ಮದನಗರ** :— ಈ ಜಿಲ್ಹೆಯು ಮುಂಬಯಿ ರಾಜ್ಯದಲ್ಲಿ ತೃತೀಯ ಸ್ಥಾನ ಪಡೆಯಿತು. ಹಾಳಿನಿಂದ ಸಾಯಕಲ ಸೀಟ, ತುರುಬಿಗೆ ಹಾಕುವ ಮಾಲೆ, ಚಂಡು, ಹಣದ ಚೀಲಗಳನ್ನು ತಯಾರಿಸಿದ್ದರು. ಆಸನ ಜಮಖಾನೆಗಳಲ್ಲಿ ಭಾರತ, ಮುಂಬಯಿ ರಾಜ್ಯದ ನಕಾಶೆ, ನೊಲ, ಅಶೋಕಸ್ತೂಪ ಮುಂತಾದವನ್ನು ನೆಯ್ದಿದ್ದರು. ಗುಡಾರ ಹಾಳಿಗಳಿಂದ ಶಬ್ನಮ್ ಚೀಲಗಳನ್ನು ತಯಾರಿಸಿದ್ದರು. ಒಳ್ಳೆಯ ಡಿಝಾಯಿನ ಹಾಗೂ ಬಣ್ಣಗಳ ಶರ್ಟಿಂಗ ಮತ್ತು ಕೋಟಿಂಗ ನೆಯ್ದಿದ್ದರು. ಸೀರೆ, ಧೋತರ, ಖಣಗಳನ್ನು ನೆಯ್ಯಲಾಗಿತ್ತು. ಕಟ್ಟಿಗೆಯ ಸಾಮಾನುಗಳು ಸಹ ಮೂರು ಬಹುಮಾನ ಪಡೆದವು, ಮುಖ್ಯವಾಗಿ ದೇವರ ಜಗಲಿ.

೯) **ಬಡೋಚ** :— ಈ ಜಿಲ್ಹೆಯ ಕಟ್ಟಿಗೆಯ ಸಾಮಾನುಗಳು ಉತ್ತಮವಾಗಿದ್ದವು. ಮಡಚುವ ಟೀಪಾಯಗಳು, ಒಂದೇ ಟೀಪಾಯಿಯಲ್ಲಿ ಸೇರಿಸಬಹುದಾದ ಮೂರು ನಾಲ್ಕು ಸಣ್ಣ ಸಣ್ಣ ಮಡಿಚುವ ಟೀಪಾಯಿಗಳು, ಮಡಚುವ ಕುರ್ಚಿ, ಮಕ್ಕಳ ಗಾಡಿಯಂತೆ ಉಪಯೋಗಿಸಲು ಬರಬಹುದಾದ ಮಡಚುವ ಗಾಲಿಗಳ ಖುರ್ಚಿಗಳು, ಬಾಳೆಯ ಎಲೆಯ ಚಾಪೆ, ಬೀಸಣಿಕೆಗಳು, ಚರ್ಮದ ಬ್ಯಾಗ ಇತ್ಯಾದಿಗಳು ಪ್ರೇಕ್ಷಣೀಯವಾಗಿದ್ದವು.

೧೦) **ಸುರತ** :— ಆವಿಷ್ಕಾರದ ಪುಸ್ತಕಗಳು, ಸಮವಾಯ ಜ್ಞಾನದ ಪಟಗಳು, ಬಣ್ಣ ಬಣ್ಣದ ಕೋಟಿಂಗ, ಕರವಸ್ತ್ರ, ಕಾಗದದ ಮುದ್ದೆಯ ಆಟಿಗೆಗಳು, ಹಣ್ಣು ಕಾಯಿಗಳು, ಟೇಬಲ ಕ್ಲಾಥ, ಹನಿಕೋಂಬ ಟಾವೆಲ್, ಉಣ್ಣೆಯ ಸ್ಕಾರ್ಫ ಇತ್ಯಾದಿಗಳು ಬಹುಮಾನ ಪಡೆದವು.

೧೧) ದಕ್ಷಿಣ ಸಾತಾರೆ ಮತ್ತು ಕೊಲ್ಹಾಪುರ :— ಕಟ್ಟಿಗೆಯಿಂದ ತಯಾರಿಸಿದ ಮೂಲೋದ್ಯೋಗದ ಉಪಕರಣಗಳು, ಭೂಮಿತಿಯ ಉಪಕರಣಗಳ ಪೆಟ್ಟಿಗೆ, ಅಶೋಕ ಸ್ತೂಪವುಳ್ಳ ಗಾಲೀಚಾ, ಬಾಗಿಲಿಗೆ ಹಾಕುವ ಹೆಣಿಕೆಯ ಪಡದೆಗಳು, ಗೊಂಗಡಿ, ಕಂಬಳಿ ಮತ್ತು ರಗ್ಗುಗಳು ಮೆಚ್ಚುಗೆ ಪಡೆದವು.

೧೨) ಮೆಹಸಾಣಾ, ಸಬರಕಂಥ, ಬನಾಸ್ಕಂಥ, ಮತ್ತು ಬಡೋದೆ :— ಬಣ್ಣಬಣ್ಣದ ಗೀರುಗಳುಳ್ಳ ಅರಿವೆಗಳು, ಸ್ವೆಟರ, ಹಳ್ಳಿಯ ಸ್ತ್ರೀಯರ ನಕ್ಷೆಗಳುಳ್ಳ ಪೆಟಿಕೋಟುಗಳು ಚೆನ್ನಾಗಿದ್ದವು.

೧೩) ಖೇಡಾ :— ಬೀಜ, ಗೊಬ್ಬರಗಳ ನಮೂನೆಗಳು, ಚಿತ್ರಪಟ, ಆಲೇಖಗಳು, ಆವಿಷ್ಕಾರದ ಉತ್ತಮ ಪುಸ್ತಕಗಳು, 'ಹಳ್ಳಿಯ ಸರ್ವೆ' ಮಾಡಿದ ಪುಸ್ತಕಗಳು, ಶೈಕ್ಷಣಿಕ ದೃಷ್ಟಿಯಿಂದ ಉಪಯೋಗವುಳ್ಳ ಚಿತ್ರಗಳುಳ್ಳ ಇಸ್ಪೇಟಿನ ಎಲೆಗಳ ಹಾಗೂ ತಿಕೀಟುಗಳ ಸಂಗ್ರಹದ ಪುಸ್ತಕಗಳು, ಗಾಂಧೀಜಿಯವರ ಸಚಿತ್ರ ಜೀವನ ಚರಿತ್ರೆಯ ಕೈಬರೆಹದ ಪುಸ್ತಕಗಳು ಉತ್ತಮವಾಗಿದ್ದವು. ಯಾಲಕ್ಕಿಯ ಸಿಪ್ಪೆಗಳಿಗೆ ಬಣ್ಣ ಎದ್ದಿ ಕರೀ ಅರಿವೆಯ ಮೇಲೆ ಹೂಬಳ್ಳಿ, ಪಕ್ಷಿಗಳ ನಕ್ಷೆ ಮಾಡಿದ್ದು ಮನಮೋಹಕವಾಗಿತ್ತು.

೧೪) ಅಹಮ್ಮದಾಬಾದ ಮತ್ತು ಅಮ್ರೇಲಿ :— ಗಾಲೀಚಾ, ಹಾಳಾದ ನೂಲಿನ ಜೆಣಿಕೆಯ ಬಾಗಿಲಿನ ಪಡದೆ, ಚೀಲಗಳು, ಹಾಳಿನ ಗೊಂಬೆಗಳು, ಬಣ್ಣ ಬಣ್ಣದ ನಮೂನೆಯ ಅರಿವೆಗಳು, ಗಲಗುಗಳ ಬೀಸಣಿಕೆ, ಶಂಖುಗಳಿಂದ ಮಾಡಿದ ಬಾಗಿಲಿನ ಪಡದೆ, ಮಣ್ಣಿನ ಪಾತ್ರೆಗಳ ಮೇಲೆ ನಕ್ಷೆಗಳು ಆವಿಷ್ಕಾರದ ಕೈಬರೆಹದ ಹೊತ್ತಿಗೆಗಳು ನೆಟ್ಟಗಿದ್ದವು.

೧೫) ಪುಣೆ :— ಈ ಜಿಲ್ಹೆಯು ಮುಂಬೈ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆಯಿತು. ಕಟ್ಟಿಗೆಯ ವಸ್ತುಗಳು ಅನೇಕ ವಿಧವಾಗಿದ್ದವು. ಕುರ್ಚಿ, ಕನ್ನಡಿಯ ಸ್ಟ್ಯಾಂಡ, ದೇವರ ಜಗಲಿ, ಟೀಪಾಯ, ಶೃಂಗಾರ ಪೆಟ್ಟಿಗೆ, ಆಟಿಗೆಯ ವಸ್ತುಗಳು ಗೊಂಬೆಗಳು, ಪ್ರಾಣಿಗಳು ಉತ್ತಮವಾಗಿದ್ದವು. ಕಡ್ಡೀಪೆಟ್ಟಿಗೆಯಲ್ಲಿಯ

ಉಪಯೋಗಿಸಿ ಒಗೆದ ಕಡ್ಡಿಗಳನ್ನು ಬಣ್ಣಗಳಲ್ಲಿ ಎದ್ದಿ ಒಂದು ಅರಿವೆಯ ಮೇಲೆ ಹಚ್ಚಿ ಬಂಗಲೆ, ಗಿಡಗಳ ಸೀನ್ಸ ತಯಾರಿಸಿ ತನ್ನಡಿಯ ಕಟ್ಟಿನಲ್ಲಿ ಹಾಕಿದ್ದರು. ಮಾಸಿಕ ಗಳಿಂದ ಸಂಗ್ರಹಿಸಿದ ಕಥೆಗಳ ಸಂಕಲನ, ಮಣ್ಣಿನ ಮಡಿಕೆಗಳ ಮೇಲೆ ಪೃಥ್ವಿಯ ನಕಾಶೆಗಳನ್ನು ಬಣ್ಣ ಗಳಿಂದ ಬರೆದದ್ದು ಸುಂದರವಾಗಿದ್ದವು. ಅರಿವೆಯ ಲ್ಲಿಯೂ ಸಹ ಅನೇಕ ಡಿಝಾಯಿನ, ಬಣ್ಣಗಳು ಇದ್ದವು. ಹಾಳಿನಿಂದ ತಯಾರಿಸಿದ ವಸ್ತುಗಳು ನೆಟ್ಟಗಿದ್ದವು.

ಕರ್ನಾಟಕದ ಜಿಲ್ಹೆಗಳು

ಧಾರವಾಡ :— ಈ ಜಿಲ್ಹೆಯು ಮುಂಬಯಿ ರಾಜ್ಯದಲ್ಲೆಲ್ಲ ಪ್ರಥಮ ಸ್ಥಾನ ಪಡೆದು ಕರ್ನಾಟಕಕ್ಕೇ ಕೀರ್ತಿಯನ್ನು ತಂದಿತು. ಅರಿವೆಯ ಡಿಝಾಯಿನ, ಒತ್ತುಕಟ್ಟುತನ, ಬಣ್ಣದ ಜೋಡಣೆಗಳು ಮುಂಬಯಿ ರಾಜ್ಯದ ಎಲ್ಲ ಪ್ರತಿನಿಧಿಗಳ ಮನವನ್ನು ಆಕರ್ಷಿಸಿತು. ಟ್ರೇನಿಂಗ ಕಾಲೇಜುಗಳಿಗಾಗಿ ಇಟ್ಟ ಬಹುಮಾನಗಳಲ್ಲಿ ನೂಲು ನೆಯ್ಗೆಯ ಪ್ರಥಮ ಬಹುಮಾನಗಳಲ್ಲಿ ನಾಲ್ಕು ಪ್ರಥಮ ಬಹುಮಾನಗಳನ್ನು ಧಾರವಾಡದ ಸರಕಾರಿ ಕನ್ನಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನವರು ಗುಡಾರ, ಟಾವೆಲ್, ಹುರಿಗಿಂಟ ಶರ್ಟಿಂಗ, ಗಂಡ ಭೇರುಂಡದ ಡಿಝಾಯಿನ ಹಾಕಿದ ಆಸನಗಳಿಗಾಗಿಯೂ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದವರು ಕೈನೂಲಿನ ಹೆಣಿಕೆಯ ಸ್ವೆಟರ ಮತ್ತು ಸೀರೆಗಳಿಗಾಗಿ ಎರಡು ಪ್ರಥಮ ಬಹುಮಾನಗಳನ್ನೂ ಪಡೆದರು. ಧಾರವಾಡ ಜಿಲ್ಹೆಯ ಪ್ರಾಥಮಿಕ ಶಾಲೆಗಳ ಹಾಳಿನ ಗೊಂಬೆ, ಆಸನ, ಗುಡಾರ, ಟಾವೆಲ್, ಒಕ್ಕಲುತನದ ಉಪಕರಣ, ಚಾದರ, ನೂಲಿನ ಗುಂಡಿಗಳು, ಕಾಗದದ ಕೆಲಸ ಕರವಸ್ತ್ರ ಮುಂತಾದವು ಬಹುಮಾನ ಹಾಗೂ ಮೆಚ್ಚೋಲೆಗಳನ್ನು ಪಡೆದವು. ಮಾಹಿತಿ ಪತ್ರಿಕೆಯ ಪಟಗಳು, ನಕಾಶೆ, ಆಲೇಖಗಳು ರಾಜ್ಯದಲ್ಲಿಯೇ ಹೆಸರಾಂತವು. ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಕಸೂತಿಯ ಕೆಲಸವು ಎಲ್ಲರ ಹೃದಯಗಳನ್ನು ಆಕರ್ಷಿಸಿತು.

ಬೆಳಗಾವಿ :— ಈ ಜಿಲ್ಹೆಯು ರಾಜ್ಯದಲ್ಲಿ ೪ನೆಯ ಸ್ಥಾನವನ್ನು ಪಡೆಯಿತು. ಶಾಲೆಗಳ ಕೋಟಿನ ಅರಿವೆ ಹಾಗೂ ಶರ್ಟಿನ ಅರಿವೆಗಳು ಉತ್ತಮವಾಗಿದ್ದುದರಿಂದ ಪ್ರಥಮ ಬಹುಮಾನ ಪಡೆದವು. ಕೈನೂಲಿನ ಹೆಣಿಕೆಯ ಬಾಗಿಲದ ಪಡದೆ, ಗುಡಾರ, ಆಸನ, ಹಾಳಿನಿಂದ ತಯಾರಾದ ವಸ್ತುಗಳು, ಜಮುಖಾನೆಗಳು ಮೆಚ್ಚುಗೆಯನ್ನು ಪಡೆದವು.

ವಿಜಾಪುರ :— ತಟ್ಟಿನ ಗಾಲೀಚಾ, ಗುಡಾರ, ಆಸನ, ಹಾಳಿನಿಂದ ತಯಾರಾದ ಆಟಿಗೆಗಳು, ಅಶೋಕ ವನದಲ್ಲಿ ಸೀತಾ ಹನುಮಂತರ ಸಂದರ್ಶನವನ್ನು ಕಟ್ಟಿಗೆಯಲ್ಲಿ ಕೊರೆದದ್ದು, ಕಥನ ಚಿತ್ರಗಳು, (ಶಿವಾಜಿ-ಭವಾನಿ) ಮುಂತಾದವು ಆಕರ್ಷಣೀಯವಾಗಿದ್ದವು.

ಕಾರವಾರ :— ಈ ಜಿಲ್ಹೆಯು ರಾಜ್ಯದಲ್ಲಿ ೫ನೆಯ ಸ್ಥಾನವನ್ನು ಪಡೆಯಿತು. ಚಿತ್ತರಗಿ ಶಾಲೆಯ ಶರ್ಟಿಂಗ, ನೆಲ್ಲಿಕೇರಿ ಸಾಲೆಯ ಕಟ್ಟಿಗೆಯ ಆಟಿಗೆಗಳು, ಹಳ್ಳಿಯಾಳ ಸಾಲೆಯ ಕಪ್ಪುಬಸಿ ಸ್ಟ್ಯಾಂಡ, ಗೊಂಬೆಗಳಿಂದ ಸಮಗ್ರ ಕತಾಯಿಯ ಪ್ರತ್ಯಕ್ಷಿಕೆ, ಹಂಜಿ ಅರಳೆಗಳಿಂದ ತಯಾರಿಸಿದ ನವಿಲು, ತೇರಗಾಂವಿಯ ಒಕ್ಕಲುತನದ ಉಪಕರಣಗಳು ಉತ್ತಮವಾಗಿದ್ದವು. ಈ ಜಿಲ್ಹೆಯು ಕಟ್ಟಿಗೆಯ ಸಾಮಾನುಗಳನ್ನು ತಯಾರಿಸುವದರಲ್ಲಿ ಹೆಚ್ಚು ಮುಂದೆವರೆದುದು ಕಂಡು ಬಂದಿತು.

ಮುಂಬಯಿ ರಾಜ್ಯದ ಪ್ರದರ್ಶನದಲ್ಲಿ ಶಾಲೆ ಕಾಲೇಜುಗಳಿಂದ ಬಂದ ಉತ್ತಮ ವಸ್ತುಗಳನ್ನು ಕಂಡು ಹಿಡಿಯುವದಕ್ಕಾಗಿ ರಾಜ್ಯದ ಐವರು ಕ್ರ್ಯಾಫ್ಟ ಆರ್ಗನಾಯಝರರನ್ನು ಪರೀಕ್ಷಕರನ್ನಾಗಿ ನೇಮಿಸಲಾಗಿತ್ತು. ಅವರು ಎರಡು ಮೂರು ದಿನ ಹಗಲು ರಾತ್ರಿ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಅಡ್ಡಾಡಿ ಕೆಳಗೆ ಕಾಣಿಸಿದವುಗಳಲ್ಲಿ ಉತ್ತಮವಾದವುಗಳನ್ನು ಆರಿಸಿದರು.

ಅ) ನೂಲು ನೆಯ್ಗೆಯಲ್ಲಿ

೧) ಹುರಿಗಿಂಟ ಶರ್ಟಿಂಗ ೨) ಒಂಟೆಳೆ ಶರ್ಟಿಂಗ ೩) ಕೋಟಿಂಗ ೪) ಆಸನ ೫) ಟಾವೆಲ ೬) ಸೀರೆ ೭) ಡಿಝಾಯಿನ ಅರಿವೆ ೮) ಜಮಖಾನೆ ೯) ಗುಡಾರ ೧೦) ರಗ್ಗ ೧೧) ಕಂಬಳಿ ಗೊಂಗಡಿ ೧೨) ಸ್ಕಾರ್ಫ ೧೩) ಹಾಳಿನ ವಸ್ತುಗಳು ೧೪) ಕೈ ನೂಲಿನಿಂದ ಹೆಣಿಕೆಯ ವಸ್ತುಗಳು.

ಬ) ಕಾಗದ, ರಟ್ಟಿನ ಹಾಗೂ ಕಟ್ಟಿಗೆಯ ಕೆಲಸದಲ್ಲಿ

೧) ಫರ್ನಿಚರ ೨) ಮನೆಯಲ್ಲಿ ಉಪಯೋಗಿಸುವ ವಸ್ತುಗಳು ೩) ಆಟಿಗೆಗಳು ೪) ಮೂಲೋದ್ಯೋಗ

ಉಪಕರಣಗಳು ೫) ಕಾಗದದ ವಸ್ತುಗಳು ೬) ರಟ್ಟಿನ ವಸ್ತುಗಳು ೭) ಕಾಗದದ ಮುದ್ದೆಯ ಸಾಮಾನುಗಳು ೮) ಸಮವಾಯ ಜ್ಞಾನದ ಪಟಗಳು ೯) ಮೂಲೋದ್ಯೋಗದ ಪಟಗಳು ೧೦) ಸಾಮಾನ್ಯ ಮಾಹಿತಿಯ ಪಟಗಳು.

ಕ) ಒಕ್ಕಲುತನದ ಕೆಲಸದಲ್ಲಿ

೧) ಒಕ್ಕಲುತನದ ಚಿತ್ರಪಟ ಆಲೇಖಗಳು
೨) ಆರ್ಥಿಕ ಪ್ರಗತಿ ಪಟಗಳು ೩) ಉಪಕರಣಗಳು.

ಡ) ಸಾಮಾನ್ಯ

೧) ಆವಿಷ್ಕಾರದ ಕೈಬರೆಹದ ಪತ್ರಿಕೆಗಳು
೨) ವಿಶಿಷ್ಟ ವಸ್ತುಗಳು

ಪರೀಕ್ಷಾಮಂಡಲದವರು ೨೯ನೆಯ ದಿನಾಂಕಕ್ಕೆ ತಮ್ಮ ನಿರ್ಣಯವನ್ನು ಒಪ್ಪಿಸಿದರೂ ದಿ. ೩೦-೯-೫೫ಕ್ಕೆ ಮುಂಜಾನೆ ಮುಂಬಯಿ ರಾಜ್ಯದ ರಾಜ್ಯಪಾಲರಾದ ಮಾನ್ಯ ಹರೇಕೃಷ್ಣ ಮಹತಾಬರವರು ಪ್ರದರ್ಶನವನ್ನು ನಿರೀಕ್ಷಿಸಿದ ತರುವಾಯ ಬಹುಮಾನಗಳ ಹಾಗೂ ಮೆಡ್ಲೋಲೆಗಳ ವಿತರಣವನ್ನು ಮಾಡಿದರು. ಪ್ರದರ್ಶನದಲ್ಲಿ ಹಂಚಲಾದ ೧೭೧ ಬಹುಮಾನ ಪ್ರಶಸ್ತಿ ಪತ್ರಿಕೆಗಳಲ್ಲಿ ಕರ್ನಾಟಕದ ನಾಲ್ಕು ಜಿಲ್ಹೆಗಳು ಕೂಡಿ ೫೬ ಅಂದರೆ ಒಟ್ಟು ಬಹುಮಾನ ಪಶಸ್ತಿ ಪತ್ರಿಕೆಗಳ ೧|೩ ರಷ್ಟು ದೊರಕಿಸಿದುದು ಶ್ಲಾಘನೀಯವಾಗಿದೆ. ಧಾರವಾಡ ಜಿಲ್ಹೆಯು ೨೦ ಬಹುಮಾನ ಮೆಡ್ಲೋಲೆಗಳನ್ನು ಪಡೆದು ಪ್ರಥಮ ಸ್ಥಾನವನ್ನು ಪಡೆಯಿತು. ಆಯಾ ಜಿಲ್ಹೆಗಳು ದೊರಕಿಸಿದ ಬಹುಮಾನ ಹಾಗೂ ಪ್ರಶಸ್ತಿ ಪತ್ರಿಕೆಗಳ ಸಂಖ್ಯೆಯನ್ನು ಅವುಗಳೆದುರು ಕೊಟ್ಟಿದೆ.

೧ ಕುಲಾಬಾ	೩.	೧೧ ಬನಾಸ್ಕಂಥ	೧.
೨ ರತ್ನಾಗಿರಿ	೮.	೧೨ ಸಬರಕಂಥ	೧.
೩ ಮುಂಬಯಿ	೨.	೧೩ ಮೆಹಸಾನಾ	೧.
೪ ಅಹಮ್ಮದನಗರ	೧೫.	೧೪ ಅಮರೇಲಿ	೧.
೫ ಪೂ. ಖಾನದೇಶ	೨.	೧೫ ಸುರತ	೮.
೬ ಪ. ಖಾನದೇಶ	೧.	೧೬ ಬಡೋಚ	೧೦.
೭ ಠಾಣೆ	೨.	೧೭ ಕೈರಾ	೮.
೮ ಡಾಂಗ್ಸ	೧.	೧೮ ಬಡೋದೆ	—
೯ ನಾಶಿಕ	೨.	೧೯ ಪಂಚಮಹಲ	—
೧೦ ಅಹಮ್ಮದಾಬಾದ	೧೨.	೨೦ ಪುಣೆ	೧೭.
೨೧ ಸಾತಾರೆ	೪.	೨೫ ವಿಜಾಪುರ	೧೧.
೨೨ ಸೊಲ್ಲಾಪುರ	೪.	೨೬ ಬೆಳಗಾವಿ	೧೩.
೨೩ ಸಾತಾರೆ	೧೨.	೨೭ ಕಾರವಾರ	೧೨.
೨೪ ಕೊಲ್ಲಾಪುರ	—	೨೮ ಧಾರವಾಡ	೨೦.

ಮುಂಬಯಿ ರಾಜ್ಯದ ಮಂತ್ರಿಗಳು, ಶಾಸನ ಸಭಾ ಸದಸ್ಯರು, ಮುಂತಾದವರು ಪ್ರದರ್ಶನವನ್ನು ಕಂಡು ಸಂತುಷ್ಟರಾದರು. ಮುಂಬಯಿ ರಾಜ್ಯದ ರಾಜ್ಯಪಾಲರು ಈಗಿನ ಮಕ್ಕಳು ಸಾಧಿಸಿದ ಪ್ರಗತಿಯನ್ನು ಬಾಯಿತುಂಬ ಹೊಗಳಿದರು. ಕೊನೆಯ ದಿನ ಶಾಸನ ಸಭೆಯ ಅಧ್ಯಕ್ಷರಾದ ಮಾನ್ಯ ಹುಕ್ಕೇರಿಕರರು ಪ್ರದರ್ಶನವನ್ನು ಸಂದರ್ಶಿಸಿ ಗಾಂಧಿ ಜಯಂತಿಯ ಕಾರ್ಯಕ್ರಮದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿ ಪ್ರದರ್ಶನವನ್ನು ಮನಸಾರೆ ಹೊಗಳಿದರು. ಗಾಂಧೀಜಿಯವರ ಜೀವನದ ಮಹಿಮೆಯನ್ನೂ ಅವರ ಜೀವನದ ಆದರ್ಶ ಘಟನೆಗಳನ್ನೂ ಒಂದು ಗಂಟೆಯ ವರೆಗೆ ಸಭಿಕರೆದುರಿಗಿಟ್ಟರು.

ಪ್ರದರ್ಶನದ ಉಪ ಅಂಗವಾಗಿ ಹಾಜರಿದ್ದ ಎಲ್ಲ ಮೂಲೋದ್ಯೋಗ ಶಿಕ್ಷಣಾಧಿಕಾರಿಗಳ ಸಮ್ಮೇಲನವನ್ನೂ ದಿನಾಂಕ ೨೮-೯-೫೫ರಿಂದ ೧-೧೦-೧೯೫೫ರ ವರೆಗೆ ಜರುಗಿಸಲಾಯಿತು.

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ.ಗಳಿಗಾಗಿ)
ಬೆಲೆ : **೦—೨—೬**
ಅಂಚೆವೆಚ್ಚ ರೂ. ೦—೧—೦ ಪ್ರತಿಯೊಂದಕ್ಕೆ
ಪ್ರತಿಗಳು ಸಿಗುವ ಸ್ಥಳ:—
ಪ್ರಧಾನ ಸಂಪಾದಕರು **ಕನ್ನಡ ಪ್ರಾಥಮಿಕ ಶಿಕ್ಷಣ**
ಧಾರವಾಡ.

ಸ್ವಾವಲಂಬಿ ಶಿಕ್ಷಣ

ಲೇಖಕರು : ಶ್ರೀ ಮ. ಗು. ಹಂದ್ರಾಳ, ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

೧೯೩೭ನೆಯ ಜುಲೈ ತಿಂಗಳಲ್ಲಿ ಗಾಂಧೀಜಿಯವರು ಹೊಸ ಶಿಕ್ಷಣದ ಬಗೆಗೆ ತಮ್ಮ ವಿಚಾರಗಳನ್ನು ಹರಿಜನ ಪತ್ರಿಕೆಯಲ್ಲಿ ಪ್ರಕಟಮಾಡಿದರು. ಪ್ರಾಥಮಿಕ ಶಿಕ್ಷಣವು ಸ್ವಾವಲಂಬಿಯಾಗಬೇಕೆಂದೂ ಅವರು ಅಭಿಪ್ರಾಯ ಪಟ್ಟರು. ಈ ವಿಚಾರವು ಶಿಕ್ಷಣ ತಜ್ಞರಿಗಂತೂ ಸಿಡಿಲು ಬಡಿದಂತಾಯಿತು. ಶಿಕ್ಷಣವು ರಾಷ್ಟ್ರ ನಿರ್ಮಾಣ ಕಾರ್ಯ ಗಳಲ್ಲಿ ಮಹತ್ವದ್ದಾಗಿದೆ. ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿಯೂ, ಕಡ್ಡಾಯವಾಗಿಯೂ ದೊರೆಯುವಂತೆ ಮಾಡುವದು ಸರಕಾರದ ಹೊಣೆಯಿದೆ ಹೀಗಿದ್ದು ಪ್ರಾಥಮಿಕ ಶಿಕ್ಷಣವು ಸ್ವಾವಲಂಬಿಯಾಗ ಬೇಕೆಂಬ ತತ್ವವನ್ನು ಏಕೆ ಮನ್ನಿಸಬೇಕು ? ಎಂದು ಕೆಲ ವರು ಆಕ್ಷೇಪಣೆ ಎತ್ತಿದರು.

ಮುಂಬಯಿ ರಾಜ್ಯದಲ್ಲಿ ೧೯೧೧ನೇ ಇಸ್ವಿಯಲ್ಲಿಯೇ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿಯೂ, ಪುಕ್ಕಟೆ ಯಾಗಿಯೂ ದೊರೆಯುವಂತೆ ಮಾಡಬೇಕೆಂದು ಶ್ರೀ ಗೋಪಾಲಕೃಷ್ಣ ಗೋಖಲೆಯವರು ಪ್ರಯತ್ನ ಮಾಡಿ ದರು. ಅವರ ಪ್ರಯತ್ನವು ನಿಷ್ಫಲವಾಯಿತು. ೧೯೩೭ನೇ ಇಸ್ವಿಯ ವರೆಗೂ ಈ ವಿಷಯವನ್ನು ಸರಕಾರವು ಕೈಕೊಳ್ಳ ಲಿಲ್ಲ. ಆಗ ಗಾಂಧೀಜಿಯವರಿಗೆ ಪ್ರತ್ಯಕ್ಷ ಮನವರಿಕೆ ಯಾಯಿತು; ಅದೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಸರಕಾ ರಕ್ಕೆ ಇದು ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಹಾಗೆಯೇ ಬಿಟ್ಟರೆ ಪ್ರಾಥಮಿಕ ಶಿಕ್ಷಣವು ತೀರ ಮಂದಗಾಮಿಯಾಗಿ ಸಾಗುವದು. ಅಲ್ಲದೆ ಪುಸ್ತಕೀಯ ವಿದ್ಯೆಗೆ ಪ್ರಾಧಾನ್ಯ ಕೊಟ್ಟದ್ದರಿಂದ ಮಕ್ಕಳ ಜೀವನವು ಹಾಳಾಗುತ್ತಿದೆ. ಆದ್ದ ರಿಂದ ಶಿಕ್ಷಣವು ಉತ್ಪಾದಕ ಉದ್ಯಮದ ಮುಖಾಂತರ ದೊರೆಯಬೇಕು. ಶಿಕ್ಷಣವು ಸಜೀವವಾಗುವದು; ಸ್ವಾವ ಲಂಬಿಯೂ ಆಗಬಲ್ಲದು. ಈ ವಿಚಾರವು ಗಾಂಧೀಜಿ ಯವರಿಗೆ ಹೊಳೆಯಿತು. ಇನ್ನಾವ ಮಾರ್ಗದಿಂದಲೂ ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆಯಾಗಿಯೂ ಕಡ್ಡಾ ಯವಾಗಿಯೂ ಪರಿಣಾಮಕಾರಕವಾಗಿಯೂ ಕೊಡಲಿ ಕ್ಕಾಗುವದಿಲ್ಲವೆಂದು ಗಾಂಧೀಜಿಯವರು ಖಂಡಿತವಾಗಿ ನಂಬಿದರು, ಹಾಗೆ ತಿಳಿಸಿ ಹೇಳಿದರು. ೧೯೩೭ರಲ್ಲಿ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಸರಕಾರವು ಸ್ಥಾಪನೆಯಾಗಿದ್ದ ರಿಂದ ರಾಷ್ಟ್ರೀಯ ಶಿಕ್ಷಣವನ್ನು ಪ್ರಯೋಗ ಮಾಡಲು ಅನುವು ದೊರೆಯಿತು. ರಾಷ್ಟ್ರೀಯ ಶಿಕ್ಷಣವು ಒಂದು ಸ್ವರೂಪವನ್ನು ತಾಳಿತು.

ಸ್ವಾವಲಂಬಿ ಶಿಕ್ಷಣದ ಬಗೆಗೆ ೧೯೩೭ನೆಯ ಅಕ್ಟೋಬರ ತಿಂಗಳಲ್ಲಿ ಸೇರಿದ ವರ್ಧಾ ಶಿಕ್ಷಣ ಸಮ್ಮೇಲನದಲ್ಲಿ ಚರ್ಚೆಯಾಯಿತು. ಡಾ. ಝಾಕೀರ ಹುಸೇನ ಮತ್ತು ಪ್ರೊ. ಕೆ. ಟಿ. ಶಹಾ ಇವರು ಈ ತತ್ವವನ್ನು ಬಲವಾಗಿ ವಿರೋಧಿಸಿದರು. ಅಮೇರಿಕೆಯಲ್ಲಿ ಜಾನ್ ಡ್ಯೂಯಿ ಅವರು ಸ್ವಾವಲಂಬಿ ಶಿಕ್ಷಣದ ಬಗೆಗೆ ಮಾಡಿದ ಪ್ರಯತ್ನವು ಯಶಸ್ವಿಯಾಗಿಲ್ಲವೆಂದೂ, ಶಿಕ್ಷಕರು ಬಡಮಕ್ಕಳ ಶ್ರಮವನ್ನು ಸುಲಿಗೆ ಮಾಡಬಹುದೆಂದೂ, ಹೀಗೆ ಸಂಭವಿಸಿದಲ್ಲಿ ಪುಸ್ತಕಗಳಿಗಿಂತ ತಕಲಿಯು ಕೀಳೆಂದು ಸಿದ್ಧವಾಗುವದೆಂದೂ ಡಾ. ಝಾಕೀರ ಹುಸೇನರು ಪ್ರತಿಪಾದಿಸಿದರು. ಈ ವಿಚಾರಗಳಿಗೆ ಗಾಂಧೀಜಿಯವರು ತಾತ್ವಿಕ ದೃಷ್ಟಿಯಿಂದ ಉತ್ತರಕೊಟ್ಟರು. ಜಾನ್ ಡ್ಯೂಯಿ ಅವರ ಯೋಜನೆಯು ದೊಡ್ಡ ಪ್ರಮಾಣದಲ್ಲಿ ಪ್ರಯೋಗವಾಗಲಿಲ್ಲವೆಂದೂ, ಗಾಂಧೀಜಿಯವರ ಯೋಜನೆಯು ಗ್ರಾಮನಿಷ್ಠವಾದುದೆಂದೂ, ಮನೆಯಲ್ಲಿ ತಮ್ಮ ತಂದೆ ತಾಯಂದಿರ ಸೂಚನೆ ಗಳಂತೆ ವರ್ತಿಸಿದರೆ, ಮಕ್ಕಳು ಅವರ ಗುಲಾಮರಾಗುವದಿಲ್ಲ. ಹಾಗೆಯೇ ಶಾಲೆಗಳಲ್ಲಿ ಗುರುಗಳೆಂದರೆ ಮಕ್ಕಳ ಹಿತೈಷಿಗಳು, ಅವರ ಮಾತುಗಳಂತೆ ಮಕ್ಕಳು ಕೆಲಸ

ಮಾಡಿದರೆ, ಅದು ಗುಲಾಮಗಿರಿಯಲ್ಲವೆಂದೂ ಅವರು ಸಮರ್ಥಿಸಿದರು.

ಆಚಾರ್ಯ ವಿನೋಬಾ ಅವರೂ ಗಾಂಧೀಜಿಯವರ ವಿಚಾರವನ್ನೇ ಎತ್ತಿಹಿಡಿದರು. ಅವರ ಮಾತುಗಳಲ್ಲಿಯೇ ಹೇಳುವದಾದರೆ, "ಪ್ರಾಥಮಿಕ ಶಿಕ್ಷಣವು ಪುಕ್ಕಟೆ ಮತ್ತು ಸ್ವಾವಲಂಬಿ ಆಗಬೇಕೆಂಬ ಸೂಚನೆಯನ್ನು ಓದಿದಾಕ್ಷಣವೇ ಅದು ಸ್ವಯಂ ಸಿದ್ಧವಾದುದೆಂದು ನನಗೆ ಅನ್ನಿಸಿತು. ಅದು ಹೊಸತು ಇರಲಿಕ್ಕಿಲ್ಲ; ಆದರೆ ಹೊಸ ಬೆಳಕಿನಲ್ಲಿ ಅದನ್ನು ನಿವೇದಿಸಲಾಗಿದೆ. ಮನುಷ್ಯನು ದೈಹಿಕ ಶ್ರಮವನ್ನು ಬಿಟ್ಟಿದ್ದರಿಂದಲೇ ಜಗತ್ತಿನಲ್ಲಿ ರೋಗಗಳು ಬೆಳೆದಿವೆ ಎಂದು ನನಗೆ ಖಾತ್ರಿಯಾಗಿದೆ. ಗಾಂಧೀಜಿಯವರ ಕ್ರಾಂತಿಕಾರಕ ಸೂಚನೆಯು ಒಂದೇ ಹೊಡೆತದಿಂದ ಆ ರೋಗಗಳನ್ನು ದೂರಿಡಬಹುದು." ಕಾಕಾ ಕಾಲೇಲಕರರೂ ಕೂಡ ಸ್ವಾವಲಂಬಿ ಶಿಕ್ಷಣದ ವಿಚಾರವನ್ನು ಪುಷ್ಟೀಕರಿಸಿದರು. ಅವರ ಮಾತುಗಳಲ್ಲಿಯೇ ಹೇಳುವುದಾದರೆ —

" ಶಿಕ್ಷಣವನ್ನು ಸ್ವಾವಲಂಬಿಯಾಗಿ ಮಾಡುವಾಗ್ಯ ಮಕ್ಕಳ ಶ್ರಮದ ಸುಲಿಗೆ ಮಾಡಬಹುದೆಂದು ಭಯಪಡಲಾಗಿದೆ. ನನಗೆ ಅಂಥ ಅಂಜಿಕೆಗಳಿಲ್ಲ. ಯಾಕಂದರೆ ಶಿಕ್ಷಕರು ಸ್ವತಃ ಕೆಲಸ ಮಾಡದ ಹೊರತು ಮಕ್ಕಳನ್ನು ಕೆಲಸ ಮಾಡಹಚ್ಚಲಾರರು. ಇದಲ್ಲದೆ ಕೆಲಸದ ವಿವರಣಾ ಪಟಗಳನ್ನು ಶಾಲೆಗಳಲ್ಲಿ ಇಡಲಾಗುವದು ಮತ್ತು ಮೇಲ್ವಿಚಾರಕರು ಜಾಗರೂಕತೆ ವಹಿಸುವರು. "

ಶಿಕ್ಷಣವು ಸ್ವಾವಲಂಬಿಯಾಗಬೇಕೆಂಬ ತತ್ವ ಪ್ರಣಾಲಿಯನ್ನು ವಿವೇಚಿಸಿದ್ದಾಯಿತು. ಗಾಂಧೀಜಿಯವರಂತೂ ಸ್ವಾವಲಂಬವೇ ಮೂಲ ಶಿಕ್ಷಣದ ಒರೆಗಲ್ಲು (Self-sufficiency is the acid test of Basic Education) ಎಂದು ಸಾರಿದರು; ಕೊನೆಯ ವರೆಗೂ ಅವರು ಈ ಅಭಿಪ್ರಾಯವನ್ನು ಬದಲಿಸಲಿಲ್ಲ; ಇದರಲ್ಲಿ ಸತ್ವವಿದೆ. ಇವನ್ನರಿಯವುದೇ ನಮ್ಮೆಲ್ಲರಿಗೂ ಮಹತ್ವದ್ದಾಗಿದೆ.

ಶಿಕ್ಷಣದ ವೆಚ್ಚವು ಬಹು ಮುಖವಾಗಿದೆ. ಶಾಲೆಗೆ ಕಟ್ಟಡ ಬೇಕು, ಉಪಕರಣಗಳು ಬೇಕು, ಶಿಕ್ಷಕರು ಬೇಕು, ಆಟದ ಬಯಲು ಬೇಕು, ಕೈತೋಟಕ್ಕೆ ಚಿಕ್ಕ ಹೊಲ ಬೇಕು. ಈ ವೆಚ್ಚಗಳಲ್ಲಿ ಯಾವ ಭಾಗವನ್ನು ಪೂರೈಸಿದರೆ, ಶಿಕ್ಷಣವು ಸ್ವಾವಲಂಬಿಯಾಗಬಲ್ಲದು ? ಮಕ್ಕಳ ದುಡಿತದಿಂದ ಈ ಎಲ್ಲ ವೆಚ್ಚಗಳನ್ನು ನೀಗಿಸುವದು ಅಸಾಧ್ಯವಾದುದು. ಶಿಕ್ಷಕರ ವೇತನದಷ್ಟು ಹಣವನ್ನು ಮಕ್ಕಳ ಶ್ರಮದ ಫಲವಾಗಿ ಹೊರಡಿಸಬಹುದೇ ಎಂದು ಗಾಂಧೀಜಿಯವರಿಗೆ ಸಮಸ್ಯೆಯಾಗಿ ಪರಿಣಮಿಸಿತು. ಝಾಕೀರ ಸಮಿತಿಯವರು ಈ ಸಮಸ್ಯೆಯನ್ನು ಪರಿಶೀಲಿಸಿ ನೋಡಿದರು. ನೂಲುವ ನೇಯುವ ಉದ್ಯೋಗವುಳ್ಳ ಒಂದು ಶಾಲೆಯನ್ನು ಮಾದರಿಯಾಗಿ ಇಟ್ಟುಕೊಂಡು ಮಕ್ಕಳ ಉತ್ಪನ್ನವನ್ನು ಲೆಕ್ಕ ಮಾಡಿದರು. ತಿಂಗಳಿಗೆ ೨೫ ರೂಪಾಯಿಗಳಂತೆ ಏಳು ವರ್ಷಗಳಲ್ಲಿ ಒಬ್ಬ ಶಿಕ್ಷಕನ ಒಟ್ಟು ವೇತನವು ೨೧೦೦ ರೂಪಾಯಿ ಆಗುವದು. ಒಬ್ಬ ಶಿಕ್ಷಕನಿಗೆ ೩೦ ವಿದ್ಯಾರ್ಥಿಗಳಂತೆ ೭ ವರ್ಷಗಳಲ್ಲಿ ಒಟ್ಟು ಉತ್ಪನ್ನವು ೧೭೨೫ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದೆ. ಹೀಗೆ ಲೆಕ್ಕ ಮಾಡಿ, ಶಿಕ್ಷಕರ ಪಗಾರದ ಬಹುಭಾಗವನ್ನು ಮಕ್ಕಳ ಕೆಲಸದಿಂದ ಹೊರಡಿಸಬಹುದೆಂದು ಸಮಿತಿಯವರು ತಿಳಿಸಿದ್ದಾರೆ.

ಇನ್ನೊಂದು ವಿಚಾರ. ಶಿಕ್ಷಕರ ಪಗಾರವು ಯಾವಾಗಲೂ ೨೫ ರೂಪಾಯಿ ಉಳಿಯುವದಿಲ್ಲ. ಅಲ್ಲದೆ ಇದು ೧೯೩೭ ನೇ ಇಸ್ವಿಯಲ್ಲಿ ಮೂಡಿದ ವಿಚಾರ. ಆಗ ಮಹಾಯುದ್ಧವು ಪ್ರಾರಂಭವಾಗಿರಲಿಲ್ಲ. ಈಗಂತೂ ಶಿಕ್ಷಕರ ವೇತನದ ಪ್ರಮಾಣವು ಹೆಚ್ಚಾಗಿದೆ; ಇದಲ್ಲದೆ ತುಟ್ಟಿಭತ್ತೆಯನ್ನೂ ಕೊಡಲಾಗುತ್ತಿದೆ. ಹೀಗಿರುವಾಗ ಮಕ್ಕಳ ಕೆಲಸದ ಉತ್ಪನ್ನಕ್ಕೂ ಶಿಕ್ಷಕರ ವೇತನಕ್ಕೂ ಸಾಮೀಪ್ಯ ಉಳಿಯುವದಿಲ್ಲ, ಇದಲ್ಲದೆ ಈಗ ಪರಿಸ್ಥಿತಿಯು ತೀರ ಭಿನ್ನವಾಗಿದೆ. ಭಾರತವು ಸ್ವಾತಂತ್ರವಾಗಿದೆ. ಶಿಕ್ಷಣವು ರಾಷ್ಟ್ರನಿರ್ಮಾಣ ಕಾರ್ಯವೆಂದು ಎಣಿಸಲಾಗಿದೆ. ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿಯೂ, ಕಡ್ಡಾಯವಾಗಿಯೂ ದೊರೆಯಬೇಕೆಂದು ಸರಕಾರವು ಈಗ ಹೊಣೆ ಹೊತ್ತಿದೆ. ಅಲ್ಲದೆ ಗಾಂಧೀಜಿಯವರ ತತ್ವ ಪ್ರಣಾಲಿಯಂತೆ ರೂಪುಗೊಂಡ ಮೂಲ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡುವ ಯತ್ನವೂ ನಡೆದಿದೆ. ಪ್ರಾಥಮಿಕ ಶಾಲೆಗಳಲ್ಲಿ ಉದ್ಯೋಗಗಳನ್ನು ಸೇರಿಸುವದರಿಂದ ಸಾಮಾನ್ಯ ಶಿಕ್ಷಣದ ಈಗಿನ ಶಾಲೆಗಳಿಗಿಂತ ಹೆಚ್ಚು ವೆಚ್ಚ ಬರುವದು ಸ್ವಾಭಾವಿಕ.

ಈ ಹೆಚ್ಚಿನ ವೆಚ್ಚವನ್ನು ಮಕ್ಕಳ ಉತ್ಪನ್ನದಿಂದ ಹೊರಡಿಸಬಹುದೆಂದು ಅಂಕೆ ಸಂಖೆಗಳು ಹೇಳುತ್ತಿವೆ. (Craft Education can be made self-supporting). ಇದಲ್ಲದೆ ಮಕ್ಕಳಿಗೆ ತಾವು ಮಾಡಿದ ವಸ್ತುಗಳು ಕಡಿಮೆ ಬೆಲೆಗೆ ದೊರೆಯುವಂತೆ ಮಾಡಬಹುದು. ಉದ್ಯೋಗಗಳನ್ನು ಹೆಚ್ಚೆಚ್ಚು ವ್ಯವಸ್ಥಿತ ಸ್ವರೂಪದಲ್ಲಿ ಸಂಘಟಿಸಿದಂತೆ, ಮಕ್ಕಳ ಪ್ರಾವೀಣ್ಯವೂ ಬೆಳೆದಂತೆ, ಉತ್ಪನ್ನವು ಹೆಚ್ಚು ಪ್ರಮಾಣದಲ್ಲಿ ದೊರೆಯುವುದು. ಅಧಿಕ ಉತ್ಪನ್ನವನ್ನು ಮಕ್ಕಳ ಹಿತಕ್ಕಾಗಿಯೇ ಉಪಯೋಗಿಸಬಹುದು. ಜೀವನ ಸತ್ವ ಗುಳಿಗೆಗಳನ್ನು ಹಂಚುವ, ಹಾಲು ಕೊಡುವ ವ್ಯವಸ್ಥೆಯನ್ನು ಮುಂದೆ ಸಾಲೆಗಳಲ್ಲಿ ಮಾಡಬಹುದು. ಕೊನೆಯದಾಗಿ, ಸ್ವಾವಲಂಬಿ ಶಿಕ್ಷಣವು ಸ್ವಾವಲಂಬಿ ವ್ಯಕ್ತಿಗಳನ್ನು ಸಿದ್ಧ ಮಾಡುವದು. ಸ್ವಾವಲಂಬನ ಪ್ರವೃತ್ತಿಯುಳ್ಳ, ಕ್ರಿಯಾತ್ಮಕ ಚೈತನ್ಯವುಳ್ಳ, ಸತ್ಯ ಅಹಿಂಸೆಗಳಲ್ಲಿ ಶ್ರದ್ಧೆಯುಳ್ಳ, ಸಹಕಾರ ಜೀವಿಗಳಿಂದ ಕೂಡಿದ ಸ್ವಾವಲಂಬಿ ಸಮಾಜವನ್ನು ನಿರ್ಮಾಣ ಮಾಡುವದು. ಇದುವೇ ಮೂಲ ಶಿಕ್ಷಣದ ಹಿರಿಮೆ. ಮಹಾತ್ಮಾಜಿಯವರ ಸಂದೇಶ.

ಪ್ರಕಟನೆ

ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ, ೧೯೫೭

೧೯೫೭ನೆಯ ಇಸ್ವಿಯಲ್ಲಿ ಜರುಗಲಿರುವ ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆಗೆ ಕೂಡ್ರಲು ಪರವಾನಿಗೆಗಾಗಿ ಮಾಡಿಕೊಳ್ಳುವ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ತಾರೀಖು ೨೦ನೆಯ ನವ್ಹಂಬರ ೧೯೫೬ ಎಂದು ನಿಶ್ಚಯಿಸಲಾಗಿದೆ. ಹೊರಗಿನಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರು ಅಪೇಕ್ಷಿಸಿದಲ್ಲಿ ಪರೀಕ್ಷೆಯ ಎಲ್ಲ ವಿಷಯಗಳಲ್ಲಿ-ತಾತ್ವಿಕ ಹಾಗೂ ಪ್ರಾಯೋಗಿಕ-ಕೂಡ್ರಬಹುದೆಂದು ಖಾತೆಯವರು ರಿಯಾಯತಿ ಕೊಟ್ಟಿರುವರು. ಇಂಥ ಉಮೇದವಾರರಿಗೆ ಸದ್ಯಕ್ಕೆ ಪ್ರಚುರದಲ್ಲಿರುವ ನಿಯಮಗಳನ್ವಯ ಸವಲತ್ತಿನ ಗುಣಗಳ ಲಾಭವು ದೊರಕುವದು. ಆದರೆ ಕೆಲವು ವಿಷಯಗಳಲ್ಲಿ ಮುಕ್ತತೆ (Exemption) ಪಡೆದುಕೊಂಡು ಪ್ರಾ. ಶಿ. ಪ್ರ. ಪರೀಕ್ಷೆಗೆ ಹೊರಗಿನಿಂದ ಕೂಡ್ರುವ ಉಮೇದವಾರರಿಗೆ ಈ ಸವಲತ್ತಿನ ಲಾಭವು ಸಿಗುವದಿಲ್ಲ.

ಧಾರವಾಡ ಹಾಗೂ ಹುಬ್ಬಳ್ಳಿ ಕೇಂದ್ರಗಳಲ್ಲಿ ೧೯೫೭ರಲ್ಲಿ ಜರಗುವ ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಗೆ ಹೊರಗಿನಿಂದ ಕೂಡ್ರಬಯಸುವ ಉಮೇದವಾರರು ಪರವಾನಿಗೆಗಾಗಿ ತಮ್ಮ ಅರ್ಜಿಗಳನ್ನು ೨೦ನೆಯ ನವ್ಹಂಬರ ೧೯೫೬ನೆಯ ದಿನಾಂಕದೊಳಗಾಗಿ ತಲುಪುವಂತೆ ನಮ್ಮ ಕಚೇರಿಗೆ ನೇರವಾಗಿ ಕಳಿಸಬೇಕು. ಆ ದಿನಾಂಕದ ನಂತರ ತಲುಪುವ ಅರ್ಜಿಗಳನ್ನು ನಿರಾಕರಿಸಲಾಗುವದು. ಪರವಾನಿಗೆಗಾಗಿ ಮಾಡಿಕೊಳ್ಳಲಾದ ಅರ್ಜಿಗಳು ಕೆಳಗಿನ ವಿವರಗಳನ್ನೊಳಗೊಂಡಿರಬೇಕು :—

೧) ಉಮೇದವಾರರ ಹೆಸರು.
೨) ಈ ಮೊದಲು ಪ್ರಾ. ಶಿ. ಪ್ರ. ಪರೀಕ್ಷೆಗೆ ಯಾವ ಕಾಲೇಜದ ಮುಖಾಂತರ ಕುಳಿತಿದ್ದಿರಿ?
೩) ಹೋದ ಸಲ ಪರೀಕ್ಷೆಗೆ ಕುಳಿತ ವರ್ಷ ಹಾಗೂ ಸೀಟ ನಂಬರ:-
೪) ಎಲ್ಲ ವಿಷಯಗಳಲ್ಲಿ ಪರೀಕ್ಷೆಗೆ ಕೂಡ್ರಲು ಅಪೇಕ್ಷಿಸುವಿರೋ ?
೫) ವಿಷಯಗಳಲ್ಲಿ ಮುಕ್ತತೆ (Exemption) ಪಡೆಯಲು ಅಪೇಕ್ಷಿಸುವಿರೋ ?
೬) ಉಮೇದವಾರರ ವಿಳಾಸ.

ಉಮೇದವಾರರಿಗೆ ಕೇಂದ್ರಗಳನ್ನು ಬದಲಿಸಲು ಅನುಮತಿಯನ್ನು ಕೊಡಲಾಗುವದಿಲ್ಲ.

ಎ. ಇ. ಧಾರವಾಡ ಇವರ ೧-೧೦-೧೯೫೬ರ
ನಂ. ಪಿ. (ಪಿಟಿಸಿ) ೧೮೦೧ರನ್ವಯ

ಸಹಿ/- x x x
ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳ ಪರವಾಗಿ

ಮಹಾತ್ಮಾ ಗಾಂಧೀಜಿಯವರ ಜೀವನದಲ್ಲಿಯ ಮೈಲುಗಲ್ಲುಗಳು

೧೮೬೯– ಅಕ್ಟೋಬರ ೨. ಪೋರಬಂದರದಲ್ಲಿ ಜನನ.

೧೮೮೩– ಕಸ್ತೂರಬಾಯಿಯವರೊಂದಿಗೆ ವಿವಾಹ.

೧೮೮೭– ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ.

೧೮೮೮– ಇಂಗ್ಲಂಡಕ್ಕೆ ಜಲಪರ್ಯಟನ.

೧೮೯೧– ಅವರ ಮಾತೋಶ್ರಿಯವರ ನಿಧನ. ಭಾರತಕ್ಕೆ ಮರಳಿದುದು.

೧೮೯೩– ದಕ್ಷಿಣ ಆಫ್ರಿಕೆಗೆ ತೆರಳಿದುದು.

೧೮೯೪– ನಾತಾಳ ಸುಪ್ರೀಮ ಕೋರ್ಟಿನ ವಕೀಲರೆಂದು ನೇಮಿಸಲ್ಪಟ್ಟದ್ದು. ನಾತಾಳ ಭಾರತೀಯರ ಕಾಂಗ್ರೆಸ್ಸಿನ ಸ್ಥಾಪನೆ.

೧೮೯೬– ಭಾರತಕ್ಕೆ ಬಂದು ದಕ್ಷಿಣ ಆಫ್ರಿಕೆಯ ಭಾರತೀಯರ ಪರವಾಗಿ ಚಳವಳಿಯನ್ನು ಆರಂಭಿಸಿ ದಕ್ಷಿಣ ಆಫ್ರಿಕೆಗೆ ಹೋದುದು.

೧೮೯೯– ಬೋರಯುದ್ಧ– ಭಾರತೀಯರ ಸ್ವಯಂ–ಸೇವಕ ಪಥಕವನ್ನಾರಂಭಿಸಿದ್ದು.

೧೯೦೧– ಭಾರತಕ್ಕೆ ಬಂದು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ದ ಸ್ವಯಂಸೇವಕರಾದದ್ದು.

೧೯೦೨– ಟ್ರಾನ್ಸವಾಲದಲ್ಲಿಯ ಭಾರತೀಯರ ಸಮಸ್ಯೆಗಳನ್ನು ಎದುರಿಸಲು ದ. ಆಫ್ರಿಕೆಗೆ ಹೋದದ್ದು.

೧೯೦೪– 'ಇಂಡಿಯನ್ ಓಪಿನಿಯನ್' ಪತ್ರಿಕೆಯನ್ನು ಸ್ಥಾಪಿಸಿದ್ದು ಹಾಗೂ ಸಂಪಾದಿಸಿದ್ದು.

೧೯೦೬– ಬ್ರಹ್ಮಚರ್ಯವನ್ನು ಪಾಲಿಸುವ ಬಗ್ಗೆ ಪ್ರತಿಜ್ಞೆಗೈದದ್ದು.

೧೯೦೭– 'ಸತ್ಯಾಗ್ರಹ ಮತ್ತು ಸೇವೆ' ಕೈಕೊಳ್ಳುವ ಉದ್ದೇಶದಿಂದ ವಕೀಲಿವೃತ್ತಿಯನ್ನು ಬಿಟ್ಟದ್ದು. ೪೮ ಘಂಟೆಗಳಲ್ಲಿ ಟ್ರಾನ್ಸವಾಲ ಬಿಡಲು ಆದೇಶ.

೧೯೦೮– ಟ್ರಾನ್ಸವಾಲ ಬಿಡದ್ದರಿಂದ ೨ ತಿಂಗಳ ಕಾರಾಗೃಹವಾಸದ ಶಿಕ್ಷೆ ವಿಧಿಸಲ್ಪಟ್ಟದ್ದು. ಜ. ಸ್ಮಟ್ಸರೊಂದಿಗೆ ಆದ ಒಪ್ಪಂದದ ಮೇರೆಗೆ ಬಿಡುಗಡೆ.

೧೯೧೦– ಜೋಹಾನ್ಸಬರ್ಗದ ಸಮೀಪದಲ್ಲಿ ಟಾಲ್‌ಸ್ಟಾಯ್ ಫಾರ್ಮ ಸ್ಥಾಪಿಸಿದ್ದು.

೧೯೧೧– ಫಾರ್ಮದಲ್ಲಿ ಇಬ್ಬರು ನಿವಾಸಿಗಳ ಶೀಲಸಂವರ್ಧನೆಗಾಗಿ ಉಪವಾಸ ಮಾಡಿದ್ದು.

೧೯೧೩– ನವ್ಹಂಬರ–ಟ್ರಾನ್ಸವಾಲದಲ್ಲಿ ಪ್ರವೇಶಿಸಿ ಸತ್ಯಾಗ್ರಹ ಪ್ರಾರಂಭಿಸಿದ್ದಕ್ಕಾಗಿ ಸೆರೆಹಿಡಿಯಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದು. ಮತ್ತೆ ಸೆರೆಹಿಡಿಯಲ್ಪಟ್ಟು ೯ ತಿಂಗಳ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟದ್ದು. ಡಿಸೆಂಬರದಲ್ಲಿ ಬಿಡುಗಡೆ ಮಾಡಲ್ಪಟ್ಟದ್ದು.

೧೯೧೪– ಜಾನೇವರಿ– ಸತ್ಯಾಗ್ರಹ ತಡೆಹಿಡಿದದ್ದು.
ಜುಲೈ– ಇಂಗ್ಲಂಡಕ್ಕೆ ಪ್ರಯಾಣ.
ಆಗಸ್ಟ– ಮೊದಲನೆಯ ಮಹಾಯುದ್ಧ ಪ್ರಾರಂಭ. ಭಾರತೀಯ ಸ್ವಯಂಸೇವಕ ಪಥಕವನ್ನು ಲಂಡನ್ನದಲ್ಲಿ ಆರಂಭಿಸಿದ್ದು.

೧೯೧೫– ಜಾನೇವಾರಿ– ಕೈಸರ-ಈ-ಹಿಂದ ಬಂಗಾರದ ಪದಕವನ್ನು ಬಹುಮಾನವಾಗಿ ಪಡೆದದ್ದು.
ಮೇ– ಸಾಬರಮತಿಯಲ್ಲಿ **ಸತ್ಯಾಗ್ರಹ ಆಶ್ರಮ** ಸ್ಥಾಪನೆ.

೧೯೧೫-೧೬ - ಕಾರ್ಮಿಕರ ಸಮಸ್ಯೆಗಳನ್ನು ಅಭ್ಯಸಿಸಲು ಭಾರತ ಮತ್ತು ಬರ್ಮಾಗಳಲ್ಲಿ ಪ್ರವಾಸ.
ಎಪ್ರಿಲ– ಚಂಪಾರಣ್ಯದಲ್ಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಸಂಶೋಧಿಸಿದರು. ಸೆರೆ ಹಿಡಿಯಲ್ಪಟ್ಟು ಬಿಡುಗಡೆ ಮಾಡಲ್ಪಟ್ಟರು. ರೈತರ ಅಡಚಣೆಗಳನ್ನು

ಕುರಿತು ವಿಚಾರಿಸಲು ನೇಮಿಸಿದ ಸಮಿತಿಯ ಸದಸ್ಯರಾದದ್ದು.

೧೯೧೮– ಮಾರ್ಚ– ಅಹಮ್ಮದಾಬಾದದಲ್ಲಿಯ ಕಾರ್ಮಿಕರ ಸಲುವಾಗಿ ಉಪವಾಸ ಮಾಡಿದ್ದು. ಕೈರಾ ಸತ್ಯಾಗ್ರಹದ ಆರಂಭ.

೧೯೧೯– ಅಖಿಲ ಭಾರತ ಸತ್ಯಾಗ್ರಹ ಆಂದೋಲನದ ಪ್ರಾರಂಭ. ಪಂಜಾಬದಲ್ಲಿ ಪ್ರವೇಶಿಸಕೂಡದೆಂಬ ಆದೇಶದ ವಿರುದ್ಧ ವರ್ತಿಸಿದ್ದರಿಂದ ಸೆರೆಹಿಡಿದು ಮುಂಬಯಿಗೆ ತರಲ್ಪಟ್ಟದ್ದು. ಹಿಂಸಾಚಾರದ ಆರಂಭ. ಅಮೃತಸರದಲ್ಲಿ ಜಾಲಿಯನ್‌ವಾಲಾ ಬಾಗದ ಕಗ್ಗೊಲೆ. ಸಾಬರಮತಿಯಲ್ಲಿ ಮೂರು ದಿನಗಳ ಉಪವಾಸ— ಸತ್ಯಾಗ್ರಹ ತಡೆಹಿಡಿದದ್ದು. 'ನವಜೀವನ' ಮಾಸಿಕ (ಗುಜರಾತಿ) ಮತ್ತು "ಯಂಗ ಇಂಡಿಯಾ" ವಾರಪತ್ರಿಕೆಯ ಸಂಪಾದಕರಾದದ್ದು. ಅಖಿಲ ಭಾರತ ಖಿಲಾಫತ್ ಸಮ್ಮೇಲನದ ಅಧ್ಯಕ್ಷರಾದುದು.

೧೯೨೦– ವ್ಹಾಯಿಸರಾಯರಿಗೆ ಯುದ್ಧದ ಪದಕಗಳನ್ನು ಮರಳಿ ಒಪ್ಪಿಸುವ ಬಗ್ಗೆ ಪತ್ರ— ಕಲಕತ್ತಾದಲ್ಲಿ ಕಾಂಗ್ರೆಸ್‌ದ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳವಳಿಯ ಸೂಚನೆಯ ಸ್ವೀಕಾರ– ಅಹಮ್ಮದಾಬಾದಿನಲ್ಲಿ ಗುಜರಾತ ವಿದ್ಯಾಪೀಠದ ಸ್ಥಾಪನೆ. ಸ್ವರಾಜ್ಯಗಳಿಸುವದೇ ಕಾಂಗ್ರೆಸ್‌ದ ಧ್ಯೇಯವೆಂಬ ಅವರ ಗೊತ್ತುವಳಿಯನ್ನು ನಾಗಪೂರ ಕಾಂಗ್ರೆಸ್‌ದಲ್ಲಿ ಸ್ವೀಕರಿಸಿದ್ದು.

೧೯೨೧– ಕಾಂಗ್ರೆಸಿಗೆ ಸದಸ್ಯರನ್ನು ಮಾಡಿಕೊಳ್ಳುವದರ ಆರಂಭ. ದೇಶದಾದ್ಯಂತ ೨೦ ಲಕ್ಷ ಚರಖಗಳನ್ನು ಪೂರೈಸಿದ್ದು– ಪರದೇಶಿ ಅರಿವೆಯ ನಿಷೇಧ.

೧೯೨೨– ಬಾರ್ಡೋಲಿಯಲ್ಲಿ ಸತ್ಯಾಗ್ರಹ ಪ್ರಾರಂಭಿಸುವ ಬಗ್ಗೆ ವ್ಹಾಯಿಸ್‌ರಾಯರಿಗೆ ಪತ್ರ– ಚೌರಿಚೌರಾದಲ್ಲಿಯ ಹಿಂಸೆ- ೫ ದಿನಗಳ ಉಪವಾಸ ಮಾಡಿದ್ದು ಹಾಗೂ ಸತ್ಯಾಗ್ರಹವನ್ನು ಬಿಟ್ಟುಕೊಟ್ಟದ್ದು. ರಾಜಕೀಯ ಅಪರಾಧಕ್ಕಾಗಿ ೬ ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟದ್ದು.

೧೯೨೪– ಜೇಲಿನಿಂದ ಬಿಡುಗಡೆ. ಯಂಗ ಇಂಡಿಯಾ ಹಾಗೂ ನವಜೀವನಗಳ ಸಂಪಾದಕತ್ವವನ್ನು ಆರಂಭಿಸಿದ್ದು. ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ೨೧ ದಿನಗಳ ಉಪವಾಸ. ಬೆಳಗಾವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು.

೧೯೨೫– ಅಖಿಲ ಭಾರತ ನೂಲುವವರ ಸಮಿತಿಯ ಸ್ಥಾಪನೆ. ಆಶ್ರಮದ ನಿವಾಸಿಗಳ ಬಗ್ಗೆ ೭ ದಿನಗಳ ಉಪವಾಸ.

೧೯೨೯– ಲಾಹೋರದ ಕಾಂಗ್ರೆಸಿನಲ್ಲಿ ಪೂರ್ಣ ಸ್ವರಾಜ್ಯದ ಗೊತ್ತುವಳಿಯನ್ನು ಸ್ವೀಕರಿಸಿದ್ದು.

೧೯೩೦– ಅವಿಧೇಯತೆಯ ಚಳವಳಿಯನ್ನು ಪ್ರಾರಂಭಿಸಲು ಅಧಿಕಾರ ದೊರಕಿದ್ದು. ದಾಂಡಿಗೆ ಪ್ರಯಾಣ. ವಿಚಾರಣೆಯಿಲ್ಲದೆ ಸೆರೆಯಲ್ಲಿಡಲ್ಪಟ್ಟದ್ದು. ಭಾರತದಾದ್ಯಂತ ಹರತಾಳ.

೧೯೩೧– ಅನಿರ್ಬಂಧ ಬಿಡುಗಡೆ. ಗಾಂಧಿ-ಅರ್ವಿನ್ ಒಪ್ಪಂದ. ೨ನೆಯ ದುಂಡು ಮೇಜಿನ ಪರಿಷತ್ತಿಗೆ ಹಾಜರಾದದ್ದು.

೧೯೩೨– ವಿಚಾರಣೆ ಇಲ್ಲದೆ ಸೆರೆಮನೆಗೆ ಒಯ್ಯಲ್ಪಟ್ಟದ್ದು. ಜೇಲಿನಲ್ಲಿ ಮರಣಾಂತಿಕ ಉಪವಾಸ.

೧೯೩೩– 'ಹರಿಜನ' ವಾರಪತ್ರಿಕೆ ಹಿಂದಿ ಹಾಗೂ ಇಂಗ್ಲೀಷದಲ್ಲಿ ಪ್ರಾರಂಭಿಸಿದ್ದು. ಆತ್ಮಶುದ್ಧಿಗಾಗಿ ೨೧ ದಿನಗಳ ಉಪವಾಸ. ಅನಿರ್ಬಂಧ ಬಿಡುಗಡೆ. ಚಳವಳಿಯನ್ನು ೬ ವಾರಗಳ ವರೆಗೆ ತಡೆಹಿಡಿದದ್ದು. ಮುಂಬಯಿ ಸರಕಾರಕ್ಕೆ ಚಳವಳಿಯನ್ನು ಪ್ರಾರಂಭಿಸುವ ನಿರ್ಣಯವನ್ನು ತಿಳಿಸಿದ್ದು. ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿಡಲಾಯಿತು. ಬಿಡುಗಡೆ ಮಾಡಲ್ಪಟ್ಟು ಮತ್ತೆ ಸೆರೆಹಿಡಿಯಲಾಯಿತು. ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಪ್ರಚಾರ ಕಾರ್ಯದಲ್ಲಿ ತಡೆಯುಂಟು ಮಾಡಿದ್ದಕ್ಕೆ ಉಪವಾಸ. ಅನಿರ್ಬಂಧ ಬಿಡುಗಡೆ. ಹರಿಜನೋದ್ಧಾರಕ್ಕಾಗಿ ಪ್ರವಾಸ.

೧೯೩೪– ಮುಂಬಯಿ ಕಾಂಗ್ರೆಸ್ ಅಧಿವೇಶನ. ರಾಜಕೀಯದಿಂದ ಹೊರಬಿದ್ದು ವಿಧಾಯಕ ಕಾರ್ಯದಲ್ಲಿ ತೊಡಗಿದ್ದು. ಅಖಿಲ ಭಾರತ ಗ್ರಾಮೋದ್ಯೋಗ ಸಮಿತಿಯನ್ನು ಉದ್ಘಾಟಿಸಿದ್ದು.

೧೯೩೭– ವರ್ಧಾದಲ್ಲಿ ಸೇರಿದ ಶೈಕ್ಷಣಿಕ ಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸಿ ತಮ್ಮ ಶೈಕ್ಷಣಿಕ ವಿಚಾರಗಳನ್ನು ಜಾಹೀರಪಡಿಸಿದ್ದು.

೧೯೩೯– ರಾಜಕೋಟದಲ್ಲಿಯ ಆಡಳಿತೆಯ ಸುಧಾರಣೆಗಾಗಿ ಆಮರಣ ಉಪವಾಸ– ದ್ವಿತೀಯ ಮಹಾಯುಧ್ಧದ ಆರಂಭ.

೧೯೪೦– ಯುದ್ಧದ ಪರಿಸ್ಥಿತಿಯ ಬಗ್ಗೆ ವ್ಹಾಯಿಸರಾಯರೊಂದಿಗೆ ಚರ್ಚೆ. ವೈಯಕ್ತಿಕ ಸತ್ಯಾಗ್ರಹ.

೧೯೪೨– ಕ್ರಿಪ್ಸ್ ಮಿಶನ್‌ದ ಸಂದರ್ಶನ. "ಚಲೇ ಜಾವ ಚಳವಳಿ". ಸೆರೆ ಹಿಡಿಯಲ್ಪಟ್ಟು ಪುಣೆಯ ಆಗಾಖಾನರ ಅರಮನೆಯಲ್ಲಿಡಲಾಯಿತು. ಭಾರತದಲ್ಲಿಯ ಗೊಂದಲಗಳ ಬಗ್ಗೆ ವ್ಹಾಯಿಸರಾಯ ಹಾಗೂ ಸರಕಾರದೊಂದಿಗೆ ಪತ್ರವ್ಯವಹಾರ.

೧೯೪೩– ೨೧ ದಿನಗಳ ಉಪವಾಸ ಮುಗಿಸಿದ್ದು.

೧೯೪೪– ಕಸ್ತೂರಬಾ ಅವರ ನಿಧನ. ಅನಿರ್ಬಂಧ ಬಿಡುಗಡೆ, ಗಾಂಧಿ-ಜಿನ್ನಾ ಮಾತುಕತೆ ಕಸ್ತೂರಬಾ ಸ್ಮಾರಕಕ್ಕೆ ೧೧೦ ಲಕ್ಷ ರೂ.ಗಳ ಹಮ್ಮಿಣಿ ಅರ್ಪಣೆ.

೧೯೪೫– ಸಿಮ್ಲಾ ಸಮ್ಮೇಲನ.

೧೯೪೬– ಆಹಾರ ಪರಿಸ್ಥಿತಿಯ ಬಗ್ಗೆ ವ್ಹಾಯಿಸ್‌ರಾಯರೊಂದಿಗೆ ಚರ್ಚೆ. ಬಂಗಾಲಕ್ಕೆ ಶಾಂತಿಯ ನಿಯೋಗ. ಜಿನ್ನಾರೊಂದಿಗೆ ಸಂಯುಕ್ತ ವಿನಂತಿ. ಬ್ರಿಟಿಶ್ ಮಂತ್ರಿಮಂಡಳದ ನಿಯೋಗದವರೊಂದಿಗೆ ಚರ್ಚೆ, ಜಿನ್ನಾ, ವಾವ್ಹೆಲ್‌ರೊಂದಿಗೆ ಮಾತುಕತೆ.

೧೯೪೭– ಭಾರತದ ಸ್ವಾತಂತ್ರ್ಯ. ನೌಖಾಲಿಯಲ್ಲಿ ಶಾಂತಿಗಾಗಿ ಪ್ರವಾಸ. ಏಸಿಯಾ ರಾಷ್ಟ್ರಗಳ ಸಮ್ಮೇಲನ.

೧೯೪೮– ಹಿಂದು-ಮುಸ್ಲಿಮ್ ಐಕ್ಯಕ್ಕಾಗಿ ಉಪವಾಸ. (ಜಾನೇವರಿ) ಪ್ರಾರ್ಥನಾ ಸಭೆಯಲ್ಲಿ ಬಾಂಬಿನ ಸ್ಫೋಟ. ಸಾಯಂ ಪ್ರಾರ್ಥನೆಯ ಕಾಲಕ್ಕೆ ಗುಂಡಿಗೆ ಆಹುತಿ.

(ಸಂ.– ಶ್ರೀ ವ್ಹಿ. ಎ. ಉಮರಾಣಿ ಅವರು.)

ಮೂಲ ಶಿಕ್ಷಣ

ಲೇಖಕರು: ಶ್ರೀ ಎಸ್. ವ್ಹಿ. ಜೇವೂರ, ಜಿಲ್ಲಾ ಶಿಕ್ಷಣಾಧಿಕಾರಿಗಳು, ಬೆಳಗಾವ.

ಸದ್ಯದ ಪ್ರಾಥಮಿಕ ಶಿಕ್ಷಣದಲ್ಲಿ ಮೂಲೋದ್ಯೋಗದ ಶಿಕ್ಷಣಕ್ಕೆ ಯೋಗ್ಯ ಸ್ಥಾನ ಕೊಡಲು ಎಲ್ಲ ರೀತಿಯಿಂದಲೂ ಪ್ರಯತ್ನ ನಡೆದಿದೆ ಹಾಗೂ ಮೂಲ ಶಿಕ್ಷಣದ ಮಹತ್ವದ ಅಂಶಗಳನ್ನು ಎಲ್ಲ ಶಾಲೆಗಳಲ್ಲಿ ಬರಬರುತ್ತ ಬಳಕೆಯಲ್ಲಿ ತರುವ ಧೋರಣವನ್ನು ಇಟ್ಟುಕೊಳ್ಳಲಾಗಿದೆ. ಆದರೆ ಕೆಲ ಜನರಲ್ಲಿ ನಮ್ಮ ಮೊದಲಿನ ಶಿಕ್ಷಣ ಬೇರೆ, ಈಗಿನ ಹೊಸ ಶಿಕ್ಷಣ ಬೇರೆ ಎಂಬ ತಪ್ಪು ಕಲ್ಪನೆ ಇರುವದು ಕಂಡುಬರುತ್ತದೆ. ಅಂತೆಯೇ ಕೆಲವು ಶಿಕ್ಷಕರು "ನಾವು ಹಳೆಯವರು, ನಮಗೆ ಹೊಸದೇನೂ ಗೊತ್ತಿಲ್ಲ" ಅನ್ನುವ ರೂಢಿಯುಂಟು. ಈಗಾಗಲೇ ಕೆಲ ಶಾಲೆಗಳಲ್ಲಿ ಮೂಲೋದ್ಯೋಗವು ಕೆಲವು ವರ್ಷಗಳಿಂದ ನಡೆದಿದ್ದರೂ ಆದರಲ್ಲಿ ಅಡಕವಾದ ಮೂಲ ಕಲ್ಪನೆಯನ್ನು ತಿಳಿದುಕೊಳ್ಳಲಿಕ್ಕೆ ಅಥವಾ ಕೃತಿಯಲ್ಲಿ ತರಲಿಕ್ಕೆ ಪ್ರಯತ್ನವನ್ನು ಯಾವದೇ ತರದಿಂದ ಮಾಡಲಾಗುವದಿಲ್ಲ. ಯಾವದೇ ಶಿಕ್ಷಣ ಪದ್ಧತಿಯಲ್ಲಿಯೇ ಆಗಲಿ, ಶಿಕ್ಷಕರು ಯಾವಾಗಲೂ ಮೈಮುರಿದು ದುಡಿಯಬೇಕಾದದ್ದು ಅಗತ್ಯವಾಗಿದೆ. ಮೊದಲಿನ ಪದ್ಧತಿಯಲ್ಲಿ ಬೌದ್ಧಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯವಿತ್ತು. ಈಗ, ಶಿಕ್ಷಣವನ್ನು, ಜೀವನದ ಒಂದು ಅಂಗವಾಗಿ, ಜೀವನದ ತಳಹದಿಯನ್ನು ಹಿಡಿದುಕೊಂಡು ಕೊಡಬೇಕಾಗಿದೆ. ಕೆಲಸದಲ್ಲಿ ಮಾತ್ರ ಕಡಿಮೆಯಾಗಿಲ್ಲ,

ಆದರೆ ಒಂದು ವಿಶೇಷ ದೃಷ್ಟಿ ಬರಬೇಕಾದದ್ದು ಅತ್ಯವಶ್ಯವಾಗಿದೆ. ಒಟ್ಟಿನ ಮೇಲೆ ಶಿಕ್ಷಣವೆಂದರೆ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡುವದೇ ಆಗಿರುತ್ತದೆ. ಮೊದಲಿನ ಶಿಕ್ಷಣದಲ್ಲಿ ಚಟುವಟಿಕೆಗೆ, ಸುತ್ತಲಿನ ನೈಸರ್ಗಿಕ ಹಾಗು ಸಾಮಾಜಿಕ ಪರಿಸ್ಥಿತಿಗೆ, ಜೀವನದ ಬೇಡಿಕೆಗೆ, ಸ್ವಾವಲಂಬನಕ್ಕೆ—ಹೀಗೆ ಕೆಲವು ಮುಖ್ಯ ಮಾತುಗಳಿಗೆ ಯಾವದೇ ತರದ ವಿಶೇಷ ಅವಕಾಶವಿರಲಿಲ್ಲ. ಕೆಲಕೆಲವು ಕಡೆಯಲ್ಲಿ ಬಡಿಗತನವು ಕೇವಲ ಕೆಲವು ಮೇಲಿನ ವರ್ಗಗಳಲ್ಲಿ ಕಲ್ಪಿಸಲ್ಪಡುತ್ತಿತ್ತು. ಆದರೆ ಅದನ್ನು ಜೀವನಕ್ಕೆ ಸಮನ್ವಯಿಸಿ ಅದರ ಕೂಡ ಬರುವ ಮಾತುಗಳಿಗೆ ಅಷ್ಟು ಲಕ್ಷ್ಯಕೊಡುತ್ತಿರಲಿಲ್ಲ. ಮತ್ತು ಆ ಕೆಲಸದ ಪ್ರಮಾಣವಾದರೂ ಬಹಳೇ ಕಡಿಮೆ ಇತ್ತು. ಅದರಂತೆ ರಾಷ್ಟ್ರದ ಇತಿಹಾಸ, ಪರಂಪರೆ, ನಾಡಿನ ಹಬ್ಬ-ಹುಣ್ಣಿವೆ ಇವುಗಳಿಗೆ ಯಾವದೇ ವಿಶೇಷ ಸ್ಥಾನವಿರಲಿಲ್ಲ. ಶಾರೀರಿಕ ಶಿಕ್ಷಣವನ್ನು ತಕ್ಕೊಂಡರೆ, ಕೇವಲ ಕೆಲವು ವಿದ್ಯಾರ್ಥಿಗಳು ಮಾತ್ರ ಮಲಖಂಬ, ಹಾರಿ ಇವುಗಳ ಉಪಯೋಗ ಮಾಡುತ್ತಿದ್ದರು. ಪ್ರವಾಸ, ನಿರೀಕ್ಷಣೆ, ಚರ್ಚೆ ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸುವದು ಮತ್ತು ಅದನ್ನು ಸರಾಗವಾಗಿ ಬೆಳಿಸಿಕೊಂಡು ಹೋಗುವದು ಇವೆಲ್ಲವು ಯೋಗ್ಯ ಸ್ಥಾನವನ್ನು ದೊರಕಿಸಿಕೊಂಡಿರಲಿಲ್ಲ.

ಆದರೆ ಸದ್ಯಕ್ಕೆ ಮೂಲ ಶಿಕ್ಷಣದ ಮೂಲಕ ಇವೆಲ್ಲ ಸಂಗತಿಗಳು ನಮ್ಮ ಶಿಕ್ಷಣದಲ್ಲಿ ಅವಶ್ಯವಾಗಿ ಬರಬೇಕಾಗಿವೆ. ಕೇವಲ ಮೂಲೋದ್ಯೋಗ ಶಾಲೆಗಳು ಎಂದು ಈಗ ಯಾದಿಯಲ್ಲಿದ್ದ ಶಾಲೆಗಳಲ್ಲಿ ಮಾತ್ರ ಈ ತರದ ಹೊಸ ದೃಷ್ಟಿ ಬರಬೇಕೆಂದರೆ ಅದು ಪರಿಸ್ಥಿತಿಯನ್ನು ಚನ್ನಾಗಿ ತಿಳಕೊಂಡ ಹಾಗೆ ಆಗಲಾರದು. ಅಂತೆಯೇ ಮೊನ್ನೆ ಮೊನ್ನೆ ಎಲ್ಲ ಶಾಲೆಯವರಿಗೆ ಶಕ್ಯವಿದ್ದಷ್ಟು ಮೂಲ ಶಿಕ್ಷಣದ ಅಂಶಗಳನ್ನು ಎಲ್ಲ ಶಾಲೆಗಳಲ್ಲಿಯೂ ಶಿಕ್ಷಣದ ರಂಗಕ್ಕಿಳಿಸುವ ಸಲುವಾಗಿ ಹೇಳಿದ್ದಾಯಿತು; ತಿಳಿಸಿದ್ದಾಯಿತು. ಮೂಲ ಶಿಕ್ಷಣ ಶಾಲೆಗಳಲ್ಲಂತೂ ಶಿಕ್ಷಣವು ಸ್ವಾಭಾವಿಕವಾಗಿ ಚಟುವಟಿಕೆಗಳ ಮುಖಾಂತರ ಜೀವನಕ್ಕೆ ಹೊಂದಿಕೊಂಡು ಹೋಗಬೇಕೆಂಬ ಮಾತು ನಿಜ. ಆದರೆ ಉಳಿದ ಶಾಲೆಗಳಲ್ಲಿ ಮೊದಲಿನ ಹಾಗೆಯೇ ಶಿಕ್ಷಣವು ಸಾಗಬೇಕೆಂಬ ಅರ್ಥವಲ್ಲ. ಹೊಸ ಅಭ್ಯಾಸ ಪತ್ರಿಕೆಯು ಸಾಕಷ್ಟು ಹಗುರಾಗಿದೆ. ಸ್ವಲ್ಪ ಜ್ಞಾನವಾದರೂ ಅಡ್ಡಿಯಿಲ್ಲ. ಅದು ಚನ್ನಾಗಿ ದೊರಕಿಸಿಕೊಂಡಂತಹದಿರಬೇಕು. ಶಾಲೆಯ ಜೀವನದ ವಿವಿಧ ಸನ್ನಿವೇಶಗಳಲ್ಲಿ ಅದು ಹುಟ್ಟಲಿಕ್ಕೆ ಅನುವಾಗಬೇಕು. ಚಟುವಟಿಕೆಗಳಲ್ಲಿ ಒಂದು ಯಾಂತ್ರಿಕತೆ ಬರಬಾರದು. ಕಲಿಸುವ ಕಾಲಕ್ಕೆ ಉದ್ಭವಿಸಬಹುದಾದ ಸನ್ನಿವೇಶಗಳನ್ನು ಊಹಿಸಿ, ಸಮನ್ವಯವನ್ನು ಸಾಗಿಸಬೇಕು. ಹತ್ತಿಯನ್ನು ಸ್ವಚ್ಛ ಮಾಡುವ ಕಾಲಕ್ಕೆ ಕೆಳಗಿನ ವರ್ಗಗಳಲ್ಲಿ ಭೂಗೋಲ, ಪೌರನೀತಿ, ಗಣಿತ, ಭಾಷೆ ಅಲ್ಲದೆ ಸಂತೆ, ಹಂಗಾಮು ಇವೆಲ್ಲವುಗಳನ್ನು ಅಡಕು ಮಾಡಬಹುದು. ಹತ್ತಿಯ ಹೊಲಕ್ಕೆ ಬೇರೆ ಬೇರೆ ಕಾಲದಲ್ಲಿ ಹೋಗಿ ನಿರೀಕ್ಷಣೆ ಮಾಡಿಕೊಂಡು ಅದರ ಬಗ್ಗೆ ವರ್ಗಕ್ಕೆ ಯೋಗ್ಯ ಆಗುವ ಹಾಗೆ ಚರ್ಚೆ ಮಾಡಬೇಕು. ಹೊಲ ಹೆಚ್ಚು ಕಡಿಮೆ ಒಂದೇ ಇದ್ದರೂ ಬೇರೆ ಬೇರೆ ಅವಸ್ಥೆಯಲ್ಲಿ ಬೇರೆ ಬೇರೆ ರೀತಿಯಿಂದ ಅಲ್ಲಿಯ ಸಂಗತಿಗಳ ನಿರೀಕ್ಷಣೆ ಮತ್ತು ಪರಿಶೀಲನೆಯಾಗಬೇಕು. ಯಾವ ಪ್ರಕಾರ ಒಂದು ಕವಿತೆಯನ್ನು ಒಬ್ಬ ವಿದ್ಯಾರ್ಥಿಯು ಮಾಧ್ಯಮಿಕ ಶಾಲಾ ಪ್ರಮಾಣ ಪತ್ರದ ಪರೀಕ್ಷೆಗಾಗಿ ಓದಿ ಅದನ್ನೇ ಮುಂದೆ ಪದವೀಧರನಾಗಲಿಕ್ಕೆ ಬೇರೆ ರೀತಿಯಿಂದ ಓದಬೇಕಾಗುತ್ತದೆಯೋ, ಅದೇ ಪ್ರಕಾರ ಈ ನಮ್ಮ ಭೆಟ್ಟಿ ಅಥವಾ ದೃಷ್ಟಿಕೋನವಿರಬೇಕು. ಇದಕ್ಕಾಗಿ ಗುರೂಜಿಯುವರು ಮತ್ತು ಅಕ್ಕವರು ಬಹಳೇ ಕಾಳಜಿಯಿಂದ ತಮ್ಮ ಚಟುವಟಿಕೆಯ ಪೂರ್ವಾಲೋಚನೆ ಮಾಡಿ ಅದನ್ನು ಸಿದ್ಧಪಡಿಸಬೇಕು.

ಯಾವದೇ ಕೆಲಸವು ನಿರೀಕ್ಷಣೆಯ ಮುಖಾಂತರವೂ ಪ್ರತ್ಯಕ್ಷ ಅನುಭವವನ್ನು ಹೊಂದುವಂತೆಯೂ ಸಾಗಿದರೆ, ಆದರಿಂದ ಒಂದಿಲ್ಲೊಂದು ರೀತಿಯಿಂದ ಒಡೆದು ಕಾಣಬಹುದಾದ ಪರಿಣಾಮ ನಿದರ್ಶನಕ್ಕೆ ಬಂದೇ ಬರಬಹುದು. ಸಣ್ಣ ಹುಡುಗರಿಗೆ ಅರಿವೆಗಳನ್ನು ಒಗೆಯಲಿಕ್ಕೆ ಹಚ್ಚಿದರೆ, ಅವರು ಸ್ವಲ್ಪಮಟ್ಟಿಗಾದರೂ ಅವುಗಳನ್ನು ಸ್ವಚ್ಛ ಮಾಡುವರು. ಒಂದುವೇಳೆ, ಅವರಿಗೆ ದೊಡ್ಡವರ ಹಾಗೆ ಮಾಡಲಿಕ್ಕೆ ಆಗಲಿಕ್ಕಿಲ್ಲ. ಅದೇ ಪ್ರಕಾರ ಕಸ ಹೊಡೆಯುವದು, ತಾವು ಸ್ವಚ್ಛಾಗಿರುವದು ಇವೆಲ್ಲ ಸಾಗುತ್ತವೆ. ಗುರೂಜಿಯುವರ ಮಾರ್ಗದರ್ಶನದಲ್ಲಿ ನಡೆದಂಥ ಮಾತುಗಳನ್ನು ಕೆಡಿಸುವದು ಸಾಧ್ಯವಿಲ್ಲ; ಸಾಧ್ಯವಿರಬಾರದು. ಅವರ ಕೆಲಸದಲ್ಲಿ ಕೆಲವೊಂದು ಸಮರ್ಥತೆ ಅಥವಾ ಪರಿಪೂರ್ಣತೆಯ ಅಭಾವ ನಾವು ಕಾಣುವೆವು.

ಆದರೆ ಬೀಳುತ್ತ ಏಳುತ್ತ ಮಗು ಹೇಗೆ ನಡೆಯಲು ಕಲಿಯುವದೋ ಅದೇ ಪ್ರಕಾರ ಅದು ಚಟುವಟಿಕೆಗಳಲ್ಲಿ ಪ್ರಗತಿಹೊಂದುವದು. ಆದರಲ್ಲಿಯೂ ಕೆಲ ಮಗುಗಳು ಬೇಗ ಕಲಿಯುತ್ತವೆ; ಕೆಲವು ಹಿಂದುಗಡೆ. ಇದು ಅವರವರ ದೇವದತ್ತ ಗುಣಧರ್ಮದ ಪ್ರಕಾರ ಸಾಗುತ್ತದೆ. ಅದರಂತೆಯೇ ಅವರ ಪ್ರಗತಿ ಚ ಟು ವ ಟಿ ಕೆ ಗ ಳ ಮುಖಾಂತರ ಸಾಲೆಗಳಲ್ಲಿ ಆಗಬೇಕು. ತಂದೆತಾಯಿಗಳು ಮನೆಯಲ್ಲಿ ಮಗುವಿಗೆ ಮಾತಾಡಲಿಕ್ಕೆ, ನಡೆಯಲಿಕ್ಕೆ, ಉ । ಮಾಡಲಿಕ್ಕೆ ಕಲಿಸುವದಾದರೆ, ಸಾಲೆಯಲ್ಲಿ ಮಕ್ಕಳಿ.. ಅಂತಹ ವಿಷಯುಗಳನ್ನೇ ಹೆಚ್ಚು ದೃಢೀಕರಣ ಮಾಡಬೇಕಾಗುವದು. ಮನೆಯಲ್ಲಿ ಕೆಲವು ಮಾತುಗಳನ್ನು ಅಷ್ಟು ಚನ್ನಾಗಿ ಸಾಧಿಸಲಿಕ್ಕೆ ಆಗಲಿಕ್ಕಿಲ್ಲ. ಅಂತೆಯೇ ಸಾಲೆಗಳಲ್ಲಿ ಅವುಗಳನ್ನು ಚನ್ನಾಗಿ ಸಾಧಿಸಿಕೊಳ್ಳಬೇಕು. ಹಿಂದಕ್ಕೆ ಸಾಲೆಗಳು ಅಸ್ತಿತ್ವದಲ್ಲಿ ಬರಬೇಕಾದರೆ ಇದೇ ಮಾತು ನಮ್ಮ ನಿದರ್ಶನಕ್ಕೆ ಹೆಚ್ಚು ಹೆಚ್ಚಾಗಿ ಬರುತ್ತದೆ. ಶೈಕ್ಷಣಿಕ ಇತಿಹಾಸದಲ್ಲಿ ನಾವು ಸುಮಾರು ಎರಡುನೂರು ವರ್ಷಗಳಿಂದ ಮನೆಗಳಲ್ಲಿಯೇ ಹೆಚ್ಚಾಗಿ ಶಿಕ್ಷಣ ಕೊಡುವದನ್ನು ಕಾಣುತ್ತೇವೆ. ಅದು ಕೇವಲ ತಮ್ಮ ಮನೆತನದ ಉದ್ಯೋಗ ಹೆಚ್ಚುಕಡಿಮೆ ಸಾಗಿಸಿಕೊಂಡು ಹೋಗಲಿಕ್ಕೆ ಮಾತ್ರವಿತ್ತು. ಬರಬರುತ್ತ ಮನೆಯಲ್ಲಿ ಶಿಕ್ಷಣ ಕೊಡುವ ಪರಿಪಾಠ ಕಡಿಮೆಯಾಗಿ, ಹೆಚ್ಚು ಹೆಚ್ಚು ಗುರೂಜಿಯವರ ಮೇಲೆ ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಯಿತು. ಬ್ರಿಟಿಶರ ಕಾಲಕ್ಕಂತೂ ಸಾಲೆಗಳಲ್ಲಿ ಪುಸ್ತಕೀಯ ಜ್ಞಾನದ ಪ್ರಕಾರವೇ ಮುಖ್ಯ ಮಾತಾಗಿ ಹೋಯಿತು. ಅದರಿಂದ ಮನೆಗಳಲ್ಲಿ ಶಿಕ್ಷಣ ಕೊಡುವ ರೂಢಿ ಕಡಿಮೆಯಾಗಿ ಕೊನೆಗೆ ಬಹುಶಃ ಇಲ್ಲದ ಹಾಗಾಯಿತು. ಇಂಥ ಪರಿಸ್ಥಿತಿಯಲ್ಲಿ ನಮಗೆ ಬಹು ದೊಡ್ಡ ಸಂಖ್ಯೆಯಲ್ಲಿ ಎಲ್ಲರಿಗೂ ಉಪಯೋಗವಾಗುವ ಶಿಕ್ಷಣವನ್ನು ಕೊಡಬೇಕಾಗಿದೆ. ಬ್ರಿಟಿಶರ ಕಾಲದಲ್ಲಿ ನಾವು ಮತ್ತೊಂದು ಮಾತನ್ನು ಗಮನಿಸಬೇಕು. ಅದಾವುದೆಂದರೆ ಯಾವ ಜನರಿಗೆ ಕೇವಲ ವಿದ್ಯೆಯ ಮುಖಾಂತರವೇ ಹೊಟ್ಟೆ ಹೊರಕೊಳ್ಳುವ ಮಾರ್ಗವಿತ್ತೋ ಅವರೇ ಶಿಕ್ಷಣ ತಕ್ಕೊಳ್ಳುತ್ತಿದ್ದರು. ಸದ್ಯಕ್ಕೆ ಒತ್ತಾಯ ಶಿಕ್ಷಣದ ಮೂಲಕ ಎಲ್ಲರಿಗೂ ಒಗ್ಗುವಂತಹ ಸಜೀವ ಮತ್ತು ಸ್ವಾಭಾವಿಕ ಶಿಕ್ಷಣವನ್ನು ನಾವು ಕೊಡಬೇಕಾಗಿದೆ. ಎಲ್ಲ ಮನೆಗಳಲ್ಲಿ ಇದ್ದ ಪರಿಸ್ಥಿತಿ ಚನ್ನಾಗಿ ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಶಿಕ್ಷಣವು ವರ್ಗಗಳಲ್ಲಿ ನಡೆಯಬೇಕಾಗಿದೆ. ಕೆಲವರು ಮನೆಯಲ್ಲಿ ಮಕ್ಕಳಿಗೆ, ಹೆಚ್ಚು ಶ್ರಮವಹಿಸಿ ಮಾರ್ಗದರ್ಶನ ಮಾಡುತಿದ್ದರೆ ಬಹಳೇ ಉತ್ತಮ.

ಸದ್ಯದ ಸಮಾಜ ರಚನೆಯಲ್ಲಿ ಬಹುಶ: ತಂದೆಯ ಹೋರೆಯನ್ನೇ ಮಗನು ನಡೆಸಿಕೊಂಡು ಹೋಗುವನು. ಈ ಮಾತನ್ನು ಹೇಳುವ ಕಾಲಕ್ಕೆ ಹಳ್ಳಿಗಳಲ್ಲಿ ಇರುವ ಬಹುಸಂಖ್ಯಾಕ ಒಕ್ಕಲಿಗರನ್ನು ನಾವು ಲಕ್ಷದಲ್ಲಿಡಬೇಕು. ಸ್ವಲ್ಪ ದೊಡ್ಡ ಊರುಗಳಲ್ಲಿ ಈ ಮಾತು ಅಷ್ಟುಮಟ್ಟಿಗೆ ಅನ್ವಯಿಸಲಿಕ್ಕಿಲ್ಲ. ದೊಡ್ಡ ಪ್ರಮಾಣದಲ್ಲಿ ಸಾಲೆಗಳ ಮುಖಾಂತರ ಶಿಕ್ಷಣ ನಡೆಯಿಸುವ ಸಂದರ್ಭದಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಉಪಯೋಗ ಬೀಳುವ ಶಿಕ್ಷಣವೇ ಯೋಗ್ಯ ಶಿಕ್ಷಣ. ಇದರ ಹೊರತಾಗಿ ನೂಲುವದು, ನೇಯುವದು, ಬಡಿಗತನ ಇವೆಲ್ಲವುಗಳೂ ಶಿಕ್ಷಣದಲ್ಲಿ ಸ್ಥಾನ ಪಡೆದಿರುತ್ತವೆ. ಒಟ್ಟಿನಮೇಲೆ ಮೂಲ ಶಿಕ್ಷಣದ ಧೋರಣವೆಂದರೆ ಮಕ್ಕಳು ತಮ್ಮ ಮನೆಯ ಹೋರೆಯನ್ನಾಗಲಿ ಅಥವಾ ಬೇರೆ ಜೀವನೋಪಯೋಗಿಯಾದ ಹೋರೆಯನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಹೋಗಲು ಅರ್ಹರಾಗಬೇಕು ಎಂಬ ಮಾತೇ ಆಗಿರುತ್ತದೆ.

ಇಂತಹ ಮೂಲ ಶಿಕ್ಷಣದ ಪರಿಣಾಮವನ್ನು ನಾವು ಸ್ವಲ್ಪದರಲ್ಲಿ ಸಿಂಹಾವಲೋಕನ ಮಾಡಬೇಕಾದರೆ, ವಿದ್ಯಾರ್ಥಿಗಳು ಹೆಚ್ಚು ದಿಟ್ಟರೂ, ಸ್ವಾವಲಂಬಿಗಳೂ, ಸ್ವತಂತ್ರ ಸಾರ ವಿಚಾರ ಮಾಡುವಂಥವರೂ ಆಗಿದ್ದಾರೆಂದು ಹೇಳಬಹುದು. ಈ ತರದ ತರಬೇತಿ ಯಥಾರ್ಥವಾಗಬೇಕಾದರೆ ಬಹುಮಟ್ಟಿಗೆ ಜವಾಬದಾರಿ ಗುರೂಜಿಯವರ ಮೇಲೆಯೇ ಇರುತ್ತದೆ. ಅಂಥವರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗಿ ಅವರ ದೃಷ್ಟಿಕೋನ ಬದಲಾದರೆ ಮೂಲ ಶಿಕ್ಷಣದ ಯಥೋಚಿತ ಪ್ರಗತಿಯಾಗಿ ದೇಶದ ಕಲ್ಯಾಣವಾದಂತಾಗುವದು. ಮಕ್ಕಳು ತಯಾರು ಮಾಡುವ ಅರಿವೆ ಅಥವಾ ಇತರ ಸಾಮಾನುಗಳು, ಅವರ ಚಿಕಿತ್ಸಕ ಬುದ್ಧಿ, ಉದ್ಯೋಗ ಪ್ರಿಯತೆ, ದಿಟ್ಟತನ, ವ್ಯವಹಾರ ಜ್ಞಾನ ಇವೆಲ್ಲ ಶಿಕ್ಷಕನ ಕಾರ್ಯದ ಬಗ್ಗೆ ಒರೆಗೆ ಹಚ್ಚುವಂಥ ಮಾತಾಗಿವೆ. ಅವರು ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟು ಆ ಪ್ರಕಾರ ಶಿಕ್ಷಣದಲ್ಲಿ ದುಡಿದರೆ ತಮ್ಮ ಪ್ರವೃತ್ತಿಯನ್ನು ಚನ್ನಾಗಿ ಸಾಗಿಸಿಕೊಂಡು ಹೋಗುವದಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಒಂದು ದೊಡ್ಡ ಸೇವೆಯನ್ನು ಮಾಡಿದಂತಾಗುವದು.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಅಗಸ್ಟ, ೧೯೫೫

ಹಾನಗಲ್ಲ— ೧:— ಊರ ಜನರ ವರ್ಗಣಿಯಿಂದ ತರಿಸಿದ ಹೊಸ ಘಡಿಯಾರದ ಉದ್ಘಾಟನ ಸಮಾರಂಭವನ್ನು ಶ್ರೀ ಜಿ. ಆರ್. ದೇಸಾಯಿ, ಬಿ.ಎ., ಕಲ್ಲಾಪೂರ ಇವರು ನೆರವೇರಿಸಿದರು. ಶ್ರೀ ಎಸ್. ಸಿ. ಸಿಂಧೂರ, ಎಮ್.ಎಲ್.ಎ., ಅವರು ಅಧ್ಯಕ್ಷತೆ ವಹಿಸಿದ್ದರು.

ಇಂಡಿ— ೧೫:— ಸಮಾಜ ವಿಕಾಸ ಯೋಜನಾಧಿಕಾರಿಗಳಾದ ಶ್ರೀ ಸ. ಮ. ವಾಲಿ ಅವರು ಇಂಡಿ ತಾಲೂಕ ಗುರುಗಳ "ಸ್ವಾತಂತ್ರ್ಯೋದಯ" ವಾಚನಾಲಯವನ್ನು ಉದ್ಘಾಟಿಸಿದರು. ೨೫೬ ಸದಸ್ಯರು ಪ್ರತಿಯೊಬ್ಬರು ರೂ. ೧ ರಂತೆ ನಿಧಿ ಸಲ್ಲಿಸಿದ್ದಾರೆ.

ಸಿಂದಗಿ— ೧೫:— ಇಲ್ಲಿಯ ತಾಲೂಕಾ ಶಿಕ್ಷಕರ ವಾಚನಾಲಯವು ಶ್ರೀ ಪಿ. ಕೆ. ನವಲಗುಂದ ಮಾಮಲೇದಾರ, ಸಿಂದಗಿ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು. ಶ್ರೀ ಎಸ್. ಆರ್. ದೇಸಾಯಿ ಅವರು ರೂ. ೧೮ ಬೆಲೆಯ ೧೬ ಪುಸ್ತಕಗಳನ್ನು ಕಾಣಿಕೆಯಾಗಿ ಕೊಟ್ಟರು.

ಕಾರವಾರ— ೧೫:— ಇಲ್ಲಿಯ ಉರ್ದು ಗಂಡು ಮಕ್ಕಳ ಶಾಲೆಯವರು ಸ್ಥಳೀಯ ಜನರಿಂದ ರೂಪಾಯಿ ೪೪-೧೪-೬ ವರ್ಗಣಿ ಕೂಡಿಸಿ ಬಾಲಕರಿಗಾಗಿ ವಾಚನಾಲಯವನ್ನು ಪ್ರಾರಂಭಿಸಿದರು.

ವಜ್ಜರಮಟ್ಟಿ ೧೫:— **(ಮುಧೋಳ)** ಸರಕಾರಿ ವೈದ್ಯರಾದ ಶ್ರೀ ಕೆ. ಎಲ್. ಪಂಚಾಳ ಇವರು ಒಂದು ಹೊಸ ಥರ್ಮಾಮೀಟರ ಮತ್ತು ಬಡ ವಿದ್ಯಾರ್ಥಿಗಳಿಗಾಗಿ ೧೦ ಗಾಂಧಿ ಟೊಪ್ಪಿಗೆಗಳನ್ನು ಕೊಟ್ಟಿರುವರು.

ಕೆವಡಿಮಟ್ಟಿ ೧೮:— ಶ್ರೀ ಎಸ್. ಎಸ್. ಪಾಟೀಲ ವಕೀಲ, ಮುದ್ದೇಬಿಹಾಳ ಅವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಭೆಯಲ್ಲಿ ಶ್ರೀ ಸಿದ್ಧಪ್ಪಗೌಡ ಪಾಟೀಲ ಅವರು ೧೫೦೧ ರೂ. ಗಳನ್ನು ಹೊಸ ಶಾಲಾ ಮಂದಿರದ ಕಟ್ಟಡದ ಬಗ್ಗೆ ಶ್ರೀ ಪಿ. ಎಮ್. ನಾಡಗೌಡ, ಚೇರಮನ್ ಡಿ. ಎಸ್. ಬಿ. ವಿಜಾಪೂರ ಅವರಿಗೆ ಅರ್ಪಿಸಿದರು. ಶ್ರೀ ಗೋವಪ್ಪಗೌಡ ಪಾಟೀಲ ಇವರು ಕಟ್ಟಡಕ್ಕಾಗಿ ಒಂದು ಎಕರೆ ತಮ್ಮ ಸ್ವಂತ ಜಮೀನನ್ನು ದಾನವಾಗಿ ಕೊಟ್ಟರು.

ಲಚ್ಯಾಣ— ೨೪:— ಇಲ್ಲಿಯ ಎಸ್. ಎಸ್. ಟ್ರೇನಿಂಗ ಕಾಲೇಜದಲ್ಲಿ ಚಿತ್ರಕಲಾ ಹಾಗೂ ಮೂಲ ಶಿಕ್ಷಣ ಕೈಗಾರಿಕೆಗಳ ಪ್ರದರ್ಶನವನ್ನು ಶ್ರೀ ಡಿ. ಜಿ. ಬಡಿಗೇರ, ಮುಂಬಯಿ ರಾಜ್ಯದ ಡ್ರಾಯಿಂಗ ಇನಸ್ಪೆಕ್ಟರ ಅವರು ಉದ್ಘಾಟಿಸಿದರು.

ಇಳಕಲ್ಲ— ೩೮:— ಇಲ್ಲಿಯ ಉರ್ದು ಸಾಲೆಯಲ್ಲಿ ನಾಲ್ಕು ಕೋಣೆಗಳಿಗೆ ಫರಸಿ ಮತ್ತು ರಿಪೇರಿ ಮಾಡಿಸಿದ ಬಗ್ಗೆ ಊರವರು ರೂ. ೩೫೬-೯-೦ ಕೂಡಿಸಿ ಕೊಟ್ಟಿರುವರು.

[ಈ ಸದರಿನಲ್ಲಿಯ ಸಪ್ಟಂಬರ, ೧೯೫೫ರ ಸಂಗತಿಗಳನ್ನು ಮತ್ತು "ನಮ್ಮ ಸಮಸ್ಯೆಗಳು" ಈ ಭಾಗವನ್ನು ಸ್ಥಳಾಭಾವದ ಮೂಲಕ ಪ್ರಸಿದ್ಧಿಸಲಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ತಪ್ಪದೇ ಹಾಕಲಾಗುವದು.
—ಪ್ರ ಸಂ.]

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿಯ ಚಟುವಟಿಕೆಗಳು.

೧೯೫೫ನೆಯ ಇಸ್ವಿಯ ಅಗಸ್ಟ ೧೫ರಂದು ಸರದಾರ ಪಾಟೀಲ ವೀರನಗೌಡರ ಹಸ್ತದಿಂದ ಧ್ವಜಾರೋಹಣ.

ಡಾ. ಎಸ್. ಡಬ್ಲ್ಯು. ಮೆಣಸಿನಕಾಯಿ ಪ್ರಿನ್ಸಿಪಾಲ, ಕೃಷಿ ಮಹಾವಿದ್ಯಾಲಯ ಅವರು ಟೆಂಗಿನ ಅಗಿಗಳನ್ನು ನೆಟ್ಟದ್ದು.

ಶಿಕ್ಷಕ ವಿದ್ಯಾರ್ಥಿಗಳು ಹೊಲದಲ್ಲಿ ಕಾರ್ಯಪ್ರವೃತ್ತರಾಗಿರುವದು.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಅಗಸ್ಟ, ೧೯೫೫

ಹಾನಗಲ್ಲ— ೧:— ಊರ ಜನರ ವರ್ಗಣಿಯಿಂದ ತರಿಸಿದ ಹೊಸ ಘಡಿಯಾರದ ಉದ್ಘಾಟನ ಸಮಾರಂಭವನ್ನು ಶ್ರೀ ಜಿ. ಆರ್. ದೇಸಾಯಿ, ಬಿ.ಎ., ಕಲ್ಲಾಪೂರ ಇವರು ನೆರವೇರಿಸಿದರು. ಶ್ರೀ ಎಸ್. ಸಿ. ಸಿಂಧೂರ, ಎಮ್.ಎಲ್.ಎ., ಅವರು ಅಧ್ಯಕ್ಷತೆ ವಹಿಸಿದ್ದರು.

ಇಂಡಿ— ೧೫:— ಸಮಾಜ ವಿಕಾಸ ಯೋಜನಾಧಿಕಾರಿಗಳಾದ ಶ್ರೀ ಸ. ಮ. ವಾಲಿ ಅವರು ಇಂಡಿ ತಾಲೂಕ ಗುರುಗಳ "ಸ್ವಾತಂತ್ರ್ಯೋದಯ" ವಾಚನಾಲಯವನ್ನು ಉದ್ಘಾಟಿಸಿದರು. ೨೫೬ ಸದಸ್ಯರು ಪ್ರತಿಯೊಬ್ಬರು ರೂ. ೧ ರಂತೆ ನಿಧಿ ಸಲ್ಲಿಸಿದ್ದಾರೆ.

ಸಿಂದಗಿ— ೧೫:— ಇಲ್ಲಿಯ ತಾಲೂಕಾ ಶಿಕ್ಷಕರ ವಾಚನಾಲಯವು ಶ್ರೀ ಪಿ. ಕೆ. ನವಲಗುಂದ ಮಾಮಲೇದಾರ, ಸಿಂದಗಿ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು. ಶ್ರೀ ಎಸ್. ಆರ್. ದೇಸಾಯಿ ಅವರು ರೂ. ೧೭ ಬೆಲೆಯ ೧೬ ಪುಸ್ತಕಗಳನ್ನು ಕಾಣಿಕೆಯಾಗಿ ಕೊಟ್ಟರು.

ಕಾರವಾರ— ೧೫:— ಇಲ್ಲಿಯ ಉರ್ದು ಗಂಡು ಮಕ್ಕಳ ಶಾಲೆಯವರು ಸ್ಥಳೀಯ ಜನರಿಂದ ರೂಪಾಯಿ ೪೪-೧೪-೬ ವರ್ಗಣಿ ಕೂಡಿಸಿ ಬಾಲಕರಿಗಾಗಿ ವಾಚನಾಲಯವನ್ನು ಪ್ರಾರಂಭಿಸಿದರು.

ವಜ್ಜರಮಟ್ಟಿ ೧೫:— (ಮುಧೋಳ) ಸರಕಾರಿ ವೈದ್ಯರಾದ ಶ್ರೀ ಕೆ. ಎಲ್. ಪಂಚಾಳ ಇವರು ಒಂದು ಹೊಸ ಥರ್ಮಾಮೀಟರ ಮತ್ತು ಬಡ ವಿದ್ಯಾರ್ಥಿಗಳಿಗಾಗಿ ೧೦ ಗಾಂಧಿ ಟೊಪ್ಪಿಗೆಗಳನ್ನು ಕೊಟ್ಟಿರುವರು.

ಕವಡಿಮಟ್ಟಿ ೧೮:— ಶ್ರೀ ಎಸ್. ಎಸ್. ಪಾಟೀಲ ವಕೀಲ, ಮುದ್ದೇಬಿಹಾಳ ಅವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಭೆಯಲ್ಲಿ ಶ್ರೀ ಸಿದ್ದಪ್ಪಗೌಡ ಪಾಟೀಲ ಅವರು ೧೫೦೧ ರೂ. ಗಳನ್ನು ಹೊಸ ಶಾಲಾ ಮಂದಿರದ ಕಟ್ಟಡದ ಬಗ್ಗೆ ಶ್ರೀ ಪಿ. ಎಮ್. ನಾಡಗೌಡ, ಚೇರಮನ್ ಡಿ. ಎಸ್. ಬಿ. ವಿಜಾಪೂರ ಅವರಿಗೆ ಅರ್ಪಿಸಿದರು. ಶ್ರೀ ಗೋವಪ್ಪಗೌಡ ಪಾಟೀಲ ಇವರು ಕಟ್ಟಡಕ್ಕಾಗಿ ಒಂದು ಎಕರೆ ತಮ್ಮ ಸ್ವಂತ ಜಮೀನನ್ನು ದಾನವಾಗಿ ಕೊಟ್ಟರು.

ಲಚ್ಯಾಣ— ೨೪:— ಇಲ್ಲಿಯ ಎಸ್. ಎಸ್. ಟ್ರೇನಿಂಗ ಕಾಲೇಜದಲ್ಲಿ ಚಿತ್ರಕಲಾ ಹಾಗೂ ಮೂಲ ಶಿಕ್ಷಣ ಕೈಗಾರಿಕೆಗಳ ಪ್ರದರ್ಶನವನ್ನು ಶ್ರೀ ಡಿ. ಜಿ. ಬಡಿಗೇರ, ಮುಂಬಯಿ ರಾಜ್ಯದ ಡ್ರಾಯಿಂಗ ಇನಸ್ಪೆಕ್ಟರ ಅವರು ಉದ್ಘಾಟಿಸಿದರು.

ಇಳಕಲ್ಲ— ೨೮:— ಇಲ್ಲಿಯ ಉರ್ದು ಸಾಲೆಯಲ್ಲಿ ನಾಲ್ಕು ಕೋಣೆಗಳಿಗೆ ಫರಸಿ ಮತ್ತು ರಿಪೇರಿ ಮಾಡಿಸಿದ ಬಗ್ಗೆ ಊರವರು ರೂ. ೫೫೬-೯-೦ ಕೂಡಿಸಿ ಕೊಟ್ಟಿರುವರು.

[ಈ ಸದರಿನಲ್ಲಿಯ ಸಪ್ಟಂಬರ, ೧೯೫೫ರ ಸಂಗತಿಗಳನ್ನು ಮತ್ತು "ನಮ್ಮ ಸಮಸ್ಯೆಗಳು" ಈ ಭಾಗವನ್ನು ಸ್ಥಳಾಭಾವದ ಮೂಲಕ ಪ್ರಸಿದ್ಧಿಸಲಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ತಪ್ಪದೇ ಹಾಕಲಾಗುವದು.

—ಪ್ರ ಸಂ.]

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿಯ ಚಟುವಟಿಕೆಗಳು.



೧೯೫೫ನೆಯ ಇಸ್ವಿಯ ಆಗಸ್ಟ ೧೫ರಂದು
ಸರದಾರ ಪಾಟೀಲ ವೀರನಗೌಡರ
ಹಸ್ತದಿಂದ ಧ್ವಜಾರೋಹಣ.

ಡಾ. ಎಸ್. ಡಬ್ಲ್ಯು. ಮೆಣಸಿನಕಾಯಿ
ಪ್ರಿನ್ಸಿಪಾಲ, ಕೃಷಿ ಮಹಾವಿದ್ಯಾಲಯ ಅವರು
ಟೆಂಗಿನ ಸಸಿಗಳನ್ನು ನೆಟ್ಟದ್ದು.

ಶಿಕ್ಷಕ ವಿದ್ಯಾರ್ಥಿಗಳು ಹೊಲದಲ್ಲಿ ಕಾರ್ಯಪ್ರವೃತ್ತರಾಗಿರುವದು.

Regd. No. B.

ಸಹಜ ಸಾಹಿತ್ಯ ! ★ ಜ್ಞಾನರಸ ಸಾಹಿತ್ಯ ★ ಶಾಶ್ವತ ಸಾ

ಮೂಸಿದ ತಲೆಯನ್ನು ಮುಡಿಮಾಡುವ ಪವಿತ್ರ ಸಾಹಿತ್ಯ ! !

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧. ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ) ೧–
೨. ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು) ೧–
೩. ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು) ೧–
೪. ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು) ೦–
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧–
೬. ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ) ೨–
೭. ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು) ೦–
೮. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧–
೯. ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ) ೧–
೧೦. ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ) ೧–
೧೧. ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು) ೧–
೧೨. ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ) ೧–
೧೩. ಆರ್ಯವೀರಭಕ್ತಿ (ಧ್ಯೇಯ ಜೀವಿಗೆ ಕಸುಗುಂಬಳ) ೦–
೧೪. ಜೀವನ ದೃಷ್ಟಿ (ವಿವಿಧ ಪ್ರಬಂಧಗಳು) ೧–
೧೫. ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ) ೧–

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆ. **ರೂ.**೧೦ರ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿ

— **ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯೂ ಕಾದಿಡಬೇಕಾದ ಕೃತಿಗಳು** —

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ

ಭಾರತೀ ಸಾಹಿತ್ಯ ಭಂಡಾರ ಯರನಾಳ

ಅವರಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

'ಜನರಲ್' ಕಥೆ-ಕವನ ಸಂಕಲನಗಳು ನಾಡಿನ ನಾಲ್ಕು ದಿಕ್ಕಿನಿಂದ ೨೫೦ ಸಾಹಿತಿಗಳ ಕೃತಿಗಳು ಹಾಗೂ ಪರಿಚ

ಬೇರೆಯವರ ಕೃತಿಗಳು ಮತ್ತೆ ಬೇರಿಲ್ಲ. ಹೊಸ ಪ್ರಯೋಗ

ಅಣಿಕಲ್ಲು [ಕಥಾಸಂಕಲನ] ಭಾಗ ೧ .... ೦—೨—೦ **ಪುಟಚೆಂಡು** [ಕವಿತಾ ಸಂಕಲನ] ಭಾಗ ೧....೦—೬

೧ ರಿಂದ ೪ ವರ್ಗಗಳಿಗಾಗಿ ೫೦ ಜನರ ಕಥೆಗಳು ೧ ರಿಂದ ೪ ವರ್ಗಗಳಿಗಾಗಿ ೧೨೪ ಜನರ ಕವಿತೆ

ಅಣಿಕಲ್ಲು ಭಾಗ ೨ .... ೦—೨—೦ **ಪುಟಚೆಂಡು** ಭಾಗ ೨ .... ೦—

೫ ರಿಂದ ೭ ವರ್ಗಗಳಿಗಾಗಿ ೬೭ ಜನರ ಕಥೆಗಳು ೫ ರಿಂದ ೭ ವರ್ಗಗಳಿಗಾಗಿ ೧೦೪ ಜನರ ಕವಿತೆಗ

ವಿದ್ಯಾರ್ಥಿಗಳು, ವಿದ್ಯಾರ್ಥಿ—ವಾಚನಾಲಯ ಸಹಕಾರಿ ಸಂಘಗಳು ಹೆಚ್ಚು ಪ್ರತಿ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿ

— ವ್ಯಾಪಾರಿಗಳಿಗೆ ಭಾರಿಕವಾದ ಕಮಿಶನ್ —

ಭಾರತೀ ಸಾಹಿತ್ಯ ಭಂಡಾರ ಯ

ಅಂಚೆ :— **ಮನಗೂಳಿ— ಜಿ.** ವಿಜಾ

Printed by Sjts. S. P. [illegible] at Manohar Power Printing Press, Hubli. Edited and Pub by Sjts S. P. [illegible], B.M. [illegible], S. K. Tatti & Smti. P. A. Bhaskar at the Kannada Prat Shikshan Office, [illegible] College for Men, [illegible]

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಬಿ. ಪಾಟೀಲ

ನವಂಬರ ೧೯೫೫

೧-೦-೦

ನವಭಾರತ ತೇಜ

೧

ಭಾರತದೀ ಬಾನಿನಲಿ
ತಾರಾಗಣ ಸೃಷ್ಟಿ,
ಮಿನುಮಿನುಗಿವೆ ಚಿರನೂತನ
ಸತ್ಕೀರ್ತಿಯ ದೀಪ್ತಿ.

೨

ಸತ್ಪುರುಷರ, ಸತ್ಕವಿಗಳ
ಸಂಸ್ಮರಣೆಯ ತಾರೆ
ಮನಮಂದಿರ ಜಗಬೆಳಗಿವೆ
ದಿವ್ಯತೆಯನು ತೋರೆ,

೩

ಬರು ಬಾಳಿಗೆ ಗುರಿ ತೋರಿವೆ
ದೀವಿಗೆಗಳ ಜ್ಯೋತಿ,
ದೀಪಾವಳಿ ತೊಳಗುತಲಿದೆ
ಧನ್ಯತೆಯಿಂ ಕೀರ್ತಿ.

೪

ಮಾನವ್ಯದ ಮಂದಾರದ
ಸಂದರ್ಶನ ಸೂಕ್ತಿ
ಇತಿಹಾಸದ ಸಂಪುಟದಲಿ
ಅಪರಂಜಿಯ ಪಂಕ್ತಿ.

೫

ಎಂದೆಂದಿಗೂ ಈ ಪಂಕ್ತಿಯು
ಕುಡಿ ಚಾಚಲುಬೇಕು.
ಕಿರಿಜೀವವು ಹಿರಿದಾಗುತ
ಮುಂಬೆಳಗಲು ಬೇಕು.

೬

'ಇಂದಿನ ಮಗು ಮುಂದಾಗುವ
ಮಾನವನಿಗೆ ತಂದೆ'
ಎಂದೆಂಬುವ ಉಕ್ತಿಯೊಳಿದೆ
ಭವಿತವ್ಯದ ಗೂಢ.

೭

ಭವಿಷತ್ತಿನ ಉಜ್ವಲತೆಗೆ
ಮಗುವೆ ಸಾಧಾರ
ಶಿಕ್ಷಕನ ಕೈಯೊಳಗಿದೆ
ಈ ಸೂತ್ರದ ದಾರ,

೮

ಚೇತನದಲಿ ಚೈತನ್ಯವ
ಕುಸುರಿಸುವಾ ಶಕ್ತಿ
ಎಳೆ ಜೀವದಿ ಕಳೆ ಕುಸುರಿಪ
ಮಿಗಿಲಾಗಿಹ ಯುಕ್ತಿ,

೯

ಓ ಶಿಕ್ಷಕ! ನಿನಗಲ್ಲದೆ
ಇನ್ನಾರಿಗೆ ಶಕ್ತಿ!
ಅರ್ಪಿಸು ನೀ ಜೀವನವನೆ
ನಿನಗಿಲ್ಲದೆ ಮುಕ್ತಿ!!

೧೦

ಹೊಗರೇರಲಿ, ಕಳೆಯೇರಲಿ
ನವಭಾರತ ತೇಜ,
ಎಂದೆಂದಿಗೂ ಹೊಳೆ-ಹೊಳೆಯಲಿ
ಧೀ ಶಕ್ತಿಯ ಓಜ.

— ಗುರುಲಿಂಗ ಕಾಪಸೆ, ಲಚ್ಯಾಣ.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ; ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳಃ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧ | ನವ್ಹಂಬರ, ೧೯೫೫ | **ಸಂಚಿಕೆ ೬**

— ಪರಿವಿಡಿ —

೧	ಸಂಪಾದಕೀಯ	....		೨
೨	ಮಕ್ಕಳ ಬೆಳವಣಿಗೆ	....	ಡಾ. ಡಿ. ಎಸ್. ಕರ್ಕಿ	೫
೩	ರಾಷ್ಟ್ರೀಯ ಇತಿಹಾಸ	....	ಶ್ರೀ ಬಿ. ಎಸ್. ಹಂಚಿನಾಳ	೮
೪	ಕನ್ನಡ ಬಯಲಾಟ	....	ಡಾ. ಬಿ. ಎಸ್. ಗದ್ದಗಿಮಠ	೧೦
೫	ಜೀವನ ಶಿಕ್ಷಣ ವಾರ್ತೆಗಳು		ಅನುವಾದಕರು :—	೧೩
			(೧) ಶ್ರೀ ತಟ್ಟಿ ಶಾಮರಾಯರು	
			(೨) ಶ್ರೀಮತಿ ಪಿ. ಎ. ಭಾಸ್ಕರ	
೬	ನವಭಾರತ ತೇಜ	....	ಶ್ರೀ ಗುರುಲಿಂಗ ಕಾಪಸೆ	

ಸಂಪಾದಕೀಯ

ಸಂಯುಕ್ತ ರಾಷ್ಟ್ರ ದಿನಾಚರಣೆ

ಅಕ್ಟೋಬರ ೨೪ರಂದು ೧೦ ವರ್ಷಗಳಿಂದ ವಿಶ್ವದ ಎಲ್ಲ ಭಾಗಗಳಲ್ಲಿಯೂ ಸಂ. ರಾ. ದಿನಾಚರಣೆಯು ಆಚರಿಸಲ್ಪಡುತ್ತದೆ. ಎರಡನೆಯ ಮಹಾ ಯುದ್ಧದಿಂದ ಬಳಲಿ ಬೆಂಡಾದ ಜಗತ್ತು ವಿಶ್ವಸಂಸ್ಥೆಯನ್ನು ಸ್ಥಾಪಿಸಿ ಯುದ್ಧಗಳನ್ನು ತಡೆಯುವದನ್ನೇ ತನ್ನ ಮುಖ್ಯ ಗುರಿಯನ್ನಾಗಿಟ್ಟುಕೊಂಡು ವಿಶ್ವಶಾಂತಿ, ವಿಶ್ವಬಾಂಧವ್ಯ, ವಿಶ್ವಸಹಕಾರ, ಬಲಹೀನ ಹಾಗೂ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿ ಇವೇ ಮುಂತಾದ ತತ್ವಗಳನ್ನು ಆಚರಣೆಯಲ್ಲಿ ತರಲು ಈ ಸಂಸ್ಥೆಯು ಪ್ರಯತ್ನಿಸುತ್ತಿದೆ. ಅಂದು ಭಾರತದ ತುಂಬೆಲ್ಲ ಈ ದಿನವನ್ನು ಯಥಾ ಯೋಗ್ಯವಾಗಿ ಆಚರಿಸಿ, ಈ ಸಂಸ್ಥೆಯ ತತ್ವಗಳನ್ನೂ, ಆದರ್ಶಗಳನ್ನೂ, ಇಲ್ಲಿಯವರೆಗೆ ತಾನು ಮಾಡಿದ ಕಾರ್ಯವನ್ನೂ ಜನತೆಯು ತಿಳಿದು ಅವನ್ನೇ ಮುಂದುವರಿಸಲು ಪ್ರಯತ್ನಿಸುವ ನಿರ್ಧಾರವನ್ನು ಮಾಡಿದರೆ ಸಾಕು. ಈ ಸಂಸ್ಥೆಯ ಬಗೆಗೆ ಮಾನವನು ಇಟ್ಟುಕೊಂಡ ಆಶೆ ಆಕಾಂಕ್ಷೆಗಳು ಪೂರೈಸಲೆಂದು ಹಾರೈಸುವೆವು.

ಸಹಕಾರ ದಿನಾಚರಣೆ

ಇದೇ ತಿಂಗಳ ೫ನೆಯ ದಿನಾಂಕವು ೩೩ನೆಯ ಅಂತರ್ ರಾಷ್ಟ್ರೀಯ ಸಹಕಾರ ದಿನವಾಗಿದ್ದು ಅದನ್ನು ಭಾರತೀಯರೂ ಸಹ ಬಹು ದಿನಗಳಿಂದ ಆಚರಿಸುತ್ತ ಬಂದಿದ್ದಾರೆ. ಈ ವರ್ಷ ಅದು ಕೆಲವೆಡೆಯಲ್ಲಿ ಸಪ್ತಾಹವಾಗಿ ಆಚರಿಸಲ್ಪಟ್ಟಿತು. ಅಂದು ಧ್ವಜಾರೋಹಣ, ಮೆರವಣಿಗೆ, ಚಲಚಿತ್ರಗಳ ಪ್ರದರ್ಶನ ಹಾಗೂ ಸಭೆಗಳು ಜರುಗಿಸಲ್ಪಟ್ಟು ಜನಸಾಮಾನ್ಯರಿಗೆ ಸಹಕಾರದ ತತ್ವಗಳು ತಿಳಿಸಲ್ಪಟ್ಟವು. "ಎಲ್ಲರಿಗೂ ಪ್ರತಿಯೊಬ್ಬರು, ಪ್ರತಿಯೊಬ್ಬರಿಗೂ ಎಲ್ಲರು'' ಎಂಬ ಉದಾತ್ತ ತತ್ವವನ್ನು ಆಚರಣೆಯಲ್ಲಿ ತರಲು ಈ ಸಹಕಾರೀ ಚಳುವಳಿಗೆ ಮಾತ್ರ ಸಾಧ್ಯವಿದೆ ಎಂಬುದನ್ನು ನಾವು ಮರೆಯಬಾರದು.

ಶ್ರೀ ಜವಾಹರರ ಜಯಂತಿ

ಈ ತಿಂಗಳ ೧೪ರಂದು ನಮ್ಮ ಮುಖ್ಯ ಮಂತ್ರಿಗಳಿಗೆ ೬೬ ವರ್ಷಗಳು ತುಂಬಿ ಅವರು ೬೭ರಲ್ಲಿ ಕಾಲಿಡುವರು. ಅಂದು ಭರತಖಂಡದಲ್ಲಿ ಹಾಗೂ ಪರರಾಷ್ಟ್ರಗಳಲ್ಲಿಯೂ ಅವರ ಜಯಂತಿಯನ್ನು ಒಳ್ಳೆಯ ಹುರುಪು ಹುಮ್ಮಸಗಳಿಂದ ಆಚರಿಸುವರು. ಮಹಾತ್ಮಾಜಿಯವರನ್ನೊಬ್ಬರನ್ನು ಬಿಟ್ಟರೆ ಭಾರತೀಯ ಸೇವೆಯಲ್ಲಿ ಇವರನ್ನು ಮೀರುವವರು ಮತ್ತೊಬ್ಬರಿಲ್ಲ. ಸ್ವಾತಂತ್ರ್ಯಾನಂತರ ಭರತಖಂಡದ ನಾಯಕತ್ವವನ್ನು ವಹಿಸಿದ ಸ್ವಲ್ಪ ಕಾಲದಲ್ಲಿಯೇ ಏಶಿಯಾ ಖಂಡದ ಮುಂದಾಳುತನವು ಇವರ ಪಾಲಿಗೆ ಬಂತು. ಇತ್ತೀಚೆಗಂತೂ ವಿಶ್ವಶಾಂತಿಯನ್ನು ಸ್ಥಾಪಿಸುವ ಬಹು ಭಾಗ ಹೊಣೆಯು ಇವರಿಂದಲೇ ನಿರ್ವಹಿಸಲ್ಪಡುತ್ತಿರುವದನ್ನು ಅರಿಯದವರಿಲ್ಲ. ವಿಶ್ವದ ಎಲ್ಲಡೆಯಲ್ಲಿ ಇವರ ಮಾತಿಗೆ ಮನ್ನಣೆ. ಇಬ್ಬಣಗಳು ಇವರ ಭವ್ಯ ವ್ಯಕ್ತಿತ್ವಕ್ಕೆ ಮೆಚ್ಚಿರುವವು. ಇವರ ಯುರೋಪ ಪ್ರವಾಸದ ಫಲವಾಗಿ ಅನೇಕ ಪಾಶ್ಚಿಮಾತ್ಯ ಧುರೀಣರು ಶ್ರೀ ನೆಹರೂರವರ ಅಂತರ್‌ರಾಷ್ಟ್ರೀಯ ಹೊಣೆಗೆ ತಮ್ಮ ಹಾರ್ದಿಕ ಬೆಂಬಲವನ್ನು ಸಾರಿದ್ದಾರೆ. ಇವರ ಜಗತ್ಪ್ರಸಿದ್ಧ ಪಂಚಶೀಲಗಳಿಗೆ ಅನೇಕರು ಈಗಾಗಲೇ ಒಪ್ಪಿದ್ದಾರೆ. ಹೀಗಾಗಿ ಶ್ರೀ ನೆಹರೂರವರ ಹಿರಿಯತನ ಹಾಗೂ ಮಾರ್ಗದರ್ಶನಗಳಿಂದಲೇ ವಿಶ್ವಶಾಂತಿಯು ನೆಲೆಗೊಳ್ಳುವ ಸುದಿನವು ತೀವ್ರ ಬರಲೆಂದೂ ಭಾರತ ಮಾತೆಯ ತನ್ಮೂಲಕ ವಿಶ್ವದ ಸೇವೆಗೆ ಶ್ರೀ ಜವಾಹರರ ಜನ್ಮ ದಿನೋತ್ಸವವು ಅನಂತವಾಗಿ ಬರಲೆಂದೂ ನಮ್ಮೆಲ್ಲರ ಹಾರೈಕೆ. ಯಾವಾಗಲೂ ಮಕ್ಕಳ ಬಗೆಗೆ ವಿಶೇಷ ಆಸ್ಥೆ ವಹಿಸುವ

ವರ ಈ ವರುಷದ ಜಯಂತಿಯಲ್ಲಿ ಮಕ್ಕಳ ಕಾರ್ಯಕ್ರಮಕ್ಕೆ ಹೆಚ್ಚಿನ ಸ್ಥಾನ ದೊರೆಯದಿರದು.

ಶಿಕ್ಷಣದ ಬಗೆಗೆ ಮುಖಂಡರ ಅಭಿಪ್ರಾಯಗಳು

ನಮ್ಮ ರಾಷ್ಟ್ರದ ಉಪಾಧ್ಯಕ್ಷರಾದ ಡಾ. ಎಸ್. ರಾಧಾಕೃಷ್ಣನ್‌ರವರು ಬಡೋದೆಯ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಶಿಕ್ಷಣದ ವಿಕಾಸವು ಸರಿಯಾದ ಮಾರ್ಗದಲ್ಲಿ ನಡೆಯದಿದ್ದರೆ ಇಂದಿನ ಪೀಳಿಗೆಯು ಪೂರ್ಣವಾಗಿ ನಾಶಹೊಂದುವದೆಂದು ದೇಶಕ್ಕೆ ಎಚ್ಚರಿಕೆಯನ್ನು ಕೊಟ್ಟರು. ಅವರು ಮುಂದುವರಿಯುತ್ತ ಪುಸ್ತಕದಲ್ಲಿ ತಾನು ಓದಿದ್ದನ್ನೇ ವಿದ್ಯಾರ್ಥಿಗಳಿಗೆ ಹೇಳುವ ಶಿಕ್ಷಕನು ನಿಜವಾದ ಶಿಕ್ಷಕನಾಗಲಾರನೆಂದೂ, ನಿಜವಾದ ಶಿಕ್ಷಕನು ತನ್ನ ವಿದ್ಯಾರ್ಥಿಗಳಲ್ಲಿ ಜೀವನದ ಬಗೆಗೆ ಹೊಸ ವಿಚಾರ ಹೊಸ ಮೌಲ್ಯಗಳನ್ನೂ ಹುಟ್ಟಿಸುವನೆಂದೂ ಹೇಳಿದರು; ಮುಂಬಯಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಅದರ ಉಪಕುಲಪತಿಗಳಾದ ಡಾ. ದೇಸಾಯಿಯವರು ಮಾತಾಡುತ್ತ ವಿಶ್ವವಿದ್ಯಾಲಯಗಳು ಜ್ಞಾನದ ಪುಡಿಕೆಗಳನ್ನು ಮಾರುವ ಭಂಡಾರಗಳಾಗಿರದೆ ಅಲ್ಲಿರುವ ವಿದ್ಯಾರ್ಥಿಗಳ ವ್ಯಕ್ತಿತ್ವ ಪ್ರಭಾವದ ಮೂಲಕ ಸಂಸ್ಕೃತಿಯ ಸಜೀವ ಸಮಾಜಗಳಾಗಿರಬೇಕೆಂದು ಹೇಳಿದರು. ಡಾ. ರಾಧಾಕೃಷ್ಣನ್‌ರವರು ಬಡೋದೆಯಲ್ಲಿ ಜರುಗಿದ ಮುಖ್ಯಾಧ್ಯಾಪಕರ ವಿಚಾರ ಸಂಕೀರ್ಣದ ಮುಕ್ತಾಯ ಸಮಾರಂಭದಲ್ಲಿ ಮಾತಾಡುತ್ತ, ಎಲ್ಲ ದರ್ಜೆಯ ಶಿಕ್ಷಕರ ವೇತನದ ಪ್ರಶ್ನೆಯು ಬಗೆಹರಿಯಬೇಕು; ವೇತನದಲ್ಲಿ ಹೆಚ್ಚಳಾವಣೆಯಾದ ಮಾತ್ರಕ್ಕೆ ಎಲ್ಲವೂ ಬಗೆಹರಿದಂತಾಗದು. ಶಿಕ್ಷಕನ ವೃತ್ತಿಯು ಒಳ್ಳೇ ಪವಿತ್ರ ಕಾಯಕವೆಂದೂ ವಿದ್ಯಾರ್ಥಿಗಳು ದಿವ್ಯ ವ್ಯಕ್ತಿತ್ವವನ್ನು ಪಡೆಯುವ ಮಾನವರಾಗಿಗಳೆಂದೂ ಭಾವಿಸುವಂಥವರನ್ನೇ ಶಿಕ್ಷಕರನ್ನಾಗಿ ನೇಮಿಸಬೇಕೆಂದು ಹೇಳಿದರು. ಶಿಕ್ಷಣದ ಎಲ್ಲ ಹಂತುಗಳಲ್ಲಿ ಶಿಕ್ಷಕನು ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶಕನಾಗಬೇಕೆಂದು ಅಭಿಪ್ರಾಯಪಟ್ಟರು. ಮುಖ್ಯ ಮಂತ್ರಿಗಳಾದ ಜವಾಹರರು ತಮ್ಮ ಸೌರಾಷ್ಟ್ರದ ಪ್ರವಾಸದಲ್ಲಿ ಶಿಕ್ಷಣದ ಬಗೆಗೆ ಮಾತಾಡಿ ರಾಷ್ಟ್ರದ ಭವಿತವ್ಯವು ಶಿಕ್ಷಕರ ಕೈಯಲ್ಲಿದೆಯೆಂದೂ, ವಿದ್ಯಾರ್ಥಿಗಳ ಭವಿತವ್ಯವು ಶಿಕ್ಷಕರ ಕೈಯಲ್ಲಿದೆಯೆಂದೂ ಹೇಳಿ ರಾಷ್ಟ್ರದ ಅಭಿವೃದ್ಧಿಯ ಕಾರ್ಯದಲ್ಲಿ ಶಿಕ್ಷಕರಿಗಿರುವ ಮಹೋನ್ನತ ಸ್ಥಾನವನ್ನು ಎತ್ತಿ ತೋರಿಸಿದರು. ನಮ್ಮ ರಾಜ್ಯಪಾಲರಾದ ಡಾ. ಮಹತಾಬರು ವಿದ್ಯಾರ್ಥಿಗಳನ್ನುದ್ದೇಶಿಸಿ ಕರ್ನೂಲದಲ್ಲಿ ಮಾತನಾಡುತ್ತ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಶಿಕ್ಷಣವು ಯೋಗ್ಯ ಮುಖಂಡರನ್ನು ತಯಾರಿಸುವದತ್ಯಗತ್ಯವೆಂದೂ ಹೇಳಿದರು. ಕಳೆದ ತಿಂಗಳಾಂತ್ಯದಲ್ಲಿ ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ದ್ವಿತೀಯ ಯುವಜನೋತ್ಸವವನ್ನು ಉದ್ಘಾಟಿಸುತ್ತ ಮುಖ್ಯ ಪ್ರಧಾನರು ರಾಷ್ಟ್ರದ ೩೫ ವಿಶ್ವವಿದ್ಯಾಲಯಗಳಿಂದ ಬಂದ ಸುಮಾರು ೧೩೦೦ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ತಮ್ಮ ವಿಚಾರ ಶಕ್ತಿಯನ್ನು ಬೆಳೆಸುವದು ಅತ್ಯಾವಶ್ಯವೆಂದು ಹೇಳಿದರು. ಹಾಗೆ ಮಾಡಲು ವಿದ್ಯಾರ್ಥಿಗಳು ಉತ್ತಮವಾದ ಪುಸ್ತಕಗಳನ್ನು ಓದಬೇಕೆಂದು ಸೂಚಿಸಿದರು. ಅದೇ ಸಮಾರಂಭದಲ್ಲಿ ಅಸ್ವಸ್ಥತೆ ಮೂಲಕ ಉಪಸ್ಥಿತರಾಗಲಾರದ ಕೇಂದ್ರ ಶಿಕ್ಷಣ ಮಂತ್ರಿಗಳಾದ ಡಾ. ಅಬುಲ್‌ಕಲಮ್ ಆಜ಼ಾದರ ಭಾಷಣವು ಓದಲ್ಪಟ್ಟಿತು. ಅವರು ತಮ್ಮ ಭಾಷಣದ ಬಹು ಭಾಗದಲ್ಲಿ ವಿದ್ಯಾರ್ಥಿಗಳಲ್ಲಿ ಕಾಣುವ ಶಿಸ್ತಿನ ಅಭಾವವನ್ನು ವಿವರಿಸಿದರು. ಕಳೆದ ಕೆಲವು ತಿಂಗಳಲ್ಲಿ ನಡೆದ ವಿದ್ಯಾರ್ಥಿಗಳ ಬೇಶಿಸ್ತಿನ ಚಟುವಟಿಕೆಗಳಿಂದ ತಮಗೆ ಒಳ್ಳೆಯ ಖೇದವಾಗಿದೆಯೆಂದೂ ಹೇಳಿ ವಿದ್ಯಾರ್ಥಿಗಳು ತಮ್ಮಲ್ಲಿಯ ಶಿಸ್ತನ್ನು ಸುಧಾರಿಸಿಕೊಳ್ಳುವದು ತಮ್ಮ ಹಾಗೂ ರಾಷ್ಟ್ರದ ದೃಷ್ಟಿಯಿಂದ ಅತ್ಯವಶ್ಯವಾಗಿದೆಯೆಂದು ಸ್ಪಷ್ಟವಾಗಿ ಸೂಚಿಸಿದರು. ಮುಂದೆ ಸಾಗಿ ಅಲಹಾಬಾದ, ಪಾಟಣಾ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಸಂಭವಿಸಿದ ವಿದ್ಯಾರ್ಥಿಗಳ ಗಲಭೆಗಳು ಮುಖಂಡರ ಮನಸ್ಸಿಗೆ ನೋವನ್ನುಂಟು ಮಾಡುವವೆಂದು ಸಾರಿ ವಿದ್ಯಾರ್ಥಿಗಳ ಬೇಶಿಸ್ತನ್ನೂ ಹೊಣೆಗೇಡಿತನವನ್ನೂ ಚನ್ನಾಗಿ ಖಂಡಿಸಿದರು. ಈ ತರದ ಹೊಣೆಗೇಡಿತನದ ವರ್ತನವು ಮಾಧ್ಯಮಿಕ ಶಾಲೆಗಳಲ್ಲಿಯೂ ಪ್ರಾಥಮಿಕ ಶಾಲೆಗಳಲ್ಲಿಯೂ ಕಂಡು ಬರುತ್ತಿರುವದು ಎಲ್ಲ ದೃಷ್ಟಿಯಿಂದ ದುಃಖದ ಸಂಗತಿಯೆಂದು ಹೇಳದಿರಲಾರೆವು.

ಪೂರ್ವ-ಪಶ್ಚಿಮ ರಾಷ್ಟ್ರ ಪ್ರಭೃತಿಗಳ ಆಗಮನ

ಈ ತಿಂಗಳಲ್ಲಿ ನಮ್ಮ ದೇಶಕ್ಕೆ ಪರರಾಷ್ಟ್ರಗಳ ರಾಜರ ಹಾಗೂ ರಾಜಕಾರಣಿಗಳ ಆಗಮನವು ನಮ್ಮೆಲ್ಲ

ರಿಗೆ ಸಂತೋಷ ಹಾಗೂ ಗೌರವಗಳಿಂದ ಕೂಡಿದ, ಐತಿಹಾಸಿಕ ಘಟನೆಯೆಂದು ತೋರಿದರೆ ಆಶ್ಚರ್ಯವೇನಲ್ಲ. ಇಂಡೋನೇಶಿಯಾದ ಉಪಾಧ್ಯಕ್ಷರಾದ ಡಾ. ಮಹಮ್ಮದ ಹಟ್ಟಾರವರು ಈಗಾಗಲೇ ಭರತಖಂಡದಲ್ಲಿ ಸಂಚರಿಸುತ್ತಿರುವರು. ನೇಪಾಳದ ರಾಜ-ರಾಣಿಯರು ಸದಿಚ್ಛೆಯ ಭೆಟ್ಟಿಗಾಗಿ ಈಗಾಗಲೇ ನವದಿಲ್ಲಿಗೆ ಬಂದಿರುವರು. ರಶಿಯಾದ ಮುಖ್ಯಮಂತ್ರಿಗಳಾದ ಮಾರ್ಶಲ್ ಬುಲ್ಗಾನಿನ್‌ರು ಹಾಗೂ ಸೌದಿ ಅರೇಬಿಯಾದ ರಾಜರು ಕೆಲ ದಿನಗಳಲ್ಲಿಯೆ ಆಗಮಿಸಲಿರುವರು. ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಸ್ವಾಗತವನ್ನು ಕೋರಿ, ಅವರ ಸಂಚಾರವು ಸರ್ವ ಸುಖ ಮಂಗಲವಾಗಲೆಂದು ಹಾರೈಸುವೆವು.

ದೀಪಾವಳಿಯ ಶುಭಾಶಯಗಳು

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ |
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ ||

ಕತ್ತಲೆಯನ್ನು ಹೊಡೆದೋಡಿಸಿ ಬೆಳಕನ್ನು ತಂದು ಕೊಡುವ ದೀಪಾವಳಿಯ ಹಬ್ಬವು ಸಮಾಜದ ಅಜ್ಞಾನ, ಆಲಸ್ಯಗಳನ್ನು ಕಿತ್ತುಹಾಕಿ ಸಂಸ್ಕೃತಿ ಸಂಪತ್ತಭಿವೃದ್ಧಿಗಳನ್ನು ತರುವಂತಾಗಲಿ.

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮುಕತೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟಣೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ

ಲಿನ್. ಯು. ಟೆಂಗರ

ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

(೨೮ನೆಯ ಪುಟದಿಂದ)

ಪ್ರದರ್ಶನಕ್ಕೆ ಪೂರಕವಾಗಿ ಅಲ್ಲಿಗೆ ಕಳಿಸಲ್ಪಟ್ಟ ಅ. ಡೆ. ಎ. ಇನಸ್ಪೆಕ್ಟರರ ಸಮ್ಮೇಲನವನ್ನು ೩ ದಿನ ಸಂಘಟಿಸಲಾಯಿತು. ಸಪ್ಟಂಬರ ೨೮ನೇಯ ದಿನ ಮಧ್ಯಾಹ್ನ ೧ ಘಂಟೆಗೆ ಈ ಸಮ್ಮೇಲನವನ್ನು ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀ ಬಿ. ಎಮ್. ಮೀಮಾಂಶಿಯವರು ಉದ್ಘಾಟಿಸಿದರು. ೩೦ನೆಯ ದಿನಾಂಕ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರಾದ ಶ್ರೀ ಎಸ್. ಎಸ್. ಭಾಂಡಾರಕರ ಅವರು ಈ ಸಮ್ಮೇಲನವನ್ನುದ್ದೇಶಿಸಿ ಭಾಷಣ ಮಾಡಿದರು. ಅಕ್ಟೋಬರ ೧ ರಂದು ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭವು ನೆರವೇರಿತು. ಜೀವನ ಶಿಕ್ಷಣ, ಮೂಲೋದ್ಯೋಗದ ಸುಧಾರಣೆ, ಮೂಲೋದ್ಯೋಗ ಶಾಲೆಗಳನ್ನಾಗಿ ಪರಿವರ್ತಿಸುವದು, ಮೊದಲಾದ ಸಮಸ್ಯೆಗಳನ್ನು ಈ ಸಮ್ಮೇಲನದಲ್ಲಿ ಚರ್ಚಿಸಲಾಯಿತು.

ಈ ವರದಿಯನ್ನು ಮುಗಿಸುವ ಮೊದಲು ಪ್ರದರ್ಶನವನ್ನು ಸಂಘಟಿಸುವದರಲ್ಲಿ ಸ್ಥಳಿಕ ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳು ನೀಡಿದ ಸಹಾಯವನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸುವದು ಅಗತ್ಯವಿದೆ. ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಸ್ವಯಂ ಸೇವಕರೆಂದು ಕೆಲಸ ಮಾಡಿದರು. ಅವರು ಪ್ರದರ್ಶನದ ವಿಭಾಗಗಳಲ್ಲಿಯೂ ಮತ್ತು ಸಭಾಭವನದಲ್ಲಿಯೂ ಜನ ದಟ್ಟಣೆಯನ್ನು ನಿಯಂತ್ರಿಸಲು ಮತ್ತು ಮಾರ್ಗದರ್ಶನ ಮಾಡಲು ಇರುತ್ತಿದ್ದರು. ಸಾವಿರಾರು ಸಂದರ್ಶಕರು ಪ್ರದರ್ಶನಕ್ಕೆ ಭೆಟ್ಟಿಯನ್ನಿತ್ತರು. ಪರಸ್ಥಳದ ಜನರಾದರೂ ಅದನ್ನು ನೋಡಲು ಬಂದಿದ್ದರು. ಸ್ಥಳಿಕ ಹಾಗೂ ಸುತ್ತುಮುತ್ತಲಿನ ಹಳ್ಳಿಗಳ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡು ಪ್ರದರ್ಶನವನ್ನು ನೋಡಿ ಹೋದರು. ಮಂತ್ರಿಗಳೂ ಉಪಮಂತ್ರಿಗಳೂ ಮತ್ತು ಶಾಸನ ಸಭೆಯ ಅನೇಕ ಸದಸ್ಯರೂ ಪ್ರದರ್ಶನವನ್ನು ಸಂದರ್ಶಿಸಿ ಅಲ್ಲಿರುವ ವಸ್ತುಗಳ ಮೇಲ್ಮಟ್ಟದ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಮಾಡಿದರು.

ಶ್ರೀ ಡಿ. ವ್ಹಿ. ಚಿಕ್ಕರಮನೆ
ಡೆ. ಡಾ. ಎ. ಪೂನಾ

ಮಕ್ಕಳ ಬೆಳವಣಿಗೆ

ಲೇಖಕರು : **ಡಾ. ಡಿ. ಎಸ್. ಕರ್ಕಿ,** ಎಮ್. ಎ., ಪಿಎಚ್. ಡಿ.

ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯು ಮುಖ್ಯವಾಗಿ ಮೂರು ರಂಗಗಳಲ್ಲಿ ಸಾಗುತ್ತದೆ. ಒಂದು ಶಾರೀರಕ ರಂಗ, ಇನ್ನೊಂದು ಬೌದ್ಧಿಕ ರಂಗ, ಮೂರನೆಯದು ಭಾವಕ್ಷೇತ್ರ, ಈ ರಂಗಗಳಲ್ಲಿ ಸಾಗುವ ಬೆಳವಣಿಗೆಯನ್ನು ಶರೀರದ ಬೆಳವಣಿಗೆ, ಬುದ್ಧಿಯ ಬೆಳವಣಿಗೆ, ಭಾವದ ಬೆಳವಣಿಗೆ ಎಂದು ನಿರ್ದೇಶಿಸಬಹುದು. ಈ ಬೆಳವಣಿಗೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಾಗುವವೆಂತಲ್ಲ; ಅರಿಯಲು ಅನುಕೂಲವಾಗಲೆಂದು ಅವುಗಳನ್ನು ಪ್ರತ್ಯೇಕಿಸಿ ಹೇಳಲಾಗಿದೆ; ಅಷ್ಟೇ. ನಿಜವಾದ ಈ ಮೂರೂ ದೆಸೆಯ ಬೆಳವಣಿಗೆಗಳು ಒಂದನ್ನೊಂದು ಹೊಂದಿಕೊಂಡು ಸಾಗುವೆ; ಒಂದರ ಮೇಲೊಂದು ಪರಿಣಾಮವನ್ನುಂಟು ಮಾಡುವ ರೀತಿಯಲ್ಲಿ ಸಾಗುತ್ತವೆ; ಏಕೆಂದರೆ ಬೆಳೆಯುವ ಕೇಂದ್ರ–ವಸ್ತು ಒಂದೇ. ಅದು ಮಗು.

ಮಗುವಿನ ಶರೀರವೇ ಆಗಲಿ, ಬುದ್ಧಿಯೇ ಆಗಲಿ, ಭಾವವೇ ಆಗಲಿ ಬೆಳೆಯತಕ್ಕಂತಹ ಒಂದು ಗುಣ ಮಗುವಿನಲ್ಲಿಯೇ ಉಂಟು; ಎಂದರೆ ಮಗುವಿನ ಪ್ರಕೃತಿಯಲ್ಲಿಯೇ ಉಂಟು. ಆದರೆ ಬೆಳೆಯುವದಕ್ಕೆ ಅನುಕೂಲತೆಗಳು ಮಾತ್ರ ಹೊರಗಣಿಂದ ದೊರೆಯುತ್ತವೆ; ದೊರೆಯಬೇಕು. ಈ ಮೂರೂ ಬಗೆಯ ಬೆಳವಣಿಗೆಯು ಸರಿಯಾಗಿ ಸಾಗುವಂತೆ ಸೌಕರ್ಯಗಳನ್ನು ಒದಗಿಸುವುದು, ವಾತಾವರಣವನ್ನು ಯೋಜಿಸುವುದು, ಪ್ರೇರಣೆ, ಪ್ರಚೋದನೆಗಳನ್ನು ನೀಡುವುದು ಶಿಕ್ಷಣದ ಕೆಲಸ. ಬಾಲಕರ ವ್ಯಕ್ತಿತ್ವ ವಿಕಾಸವೇ ಸಿದ್ಧಿ; ಆ ವಿಕಾಸಕ್ಕಾಗಿ ಬಳಸುವ ಸಾಧನೆಯೇ ಶಿಕ್ಷಣ.

ಅಂಕುರಿಸುವ ಗುಣ ಬೀಜದಲ್ಲಿಯೇ ಇರುತ್ತದೆ; ಆದರೆ ಅದು ಅಂಕುರಿಸಿ ಲತೆಯಾಗಿಯೋ ಮರವಾಗಿಯೋ ಬೆಳೆಯಲು ತಕ್ಕ ಭೂಮಿ, ವಾಯುಗುಣ, ನೀರಿನ ಪೂರೈಕೆ ಆಗಬೇಕು ತಾನೇ? ಹಾಗೆಯೇ ವಿಕಾಸ ಹೊಂದುವ ಗುಣವು ಮಗುವಿನ ಪ್ರಕೃತಿಯಲ್ಲಿದ್ದರೂ ಮಗುವಿನ ಶಾರೀರಕ, ಬೌದ್ಧಿಕ, ಹಾಗೂ ಭಾವದ ವಿಕಾಸಕ್ಕೆ ತಕ್ಕ ಸೌಕರ್ಯ ಸೌಲಭ್ಯ, ಸಾಧನ ಸಾಹಿತ್ಯಗಳ ಅವಶ್ಯಕತೆಯುಂಟು. ಶರೀರದ ಬೆಳವಣಿಗೆಗೆ ಸರಿಯಾದ ಆಹಾರ, ವಿಹಾರ, ಗಾಳಿ, ನೀರು, ವಿಶ್ರಾಂತಿ ಮೊದಲಾದುವುಗಳು ಬೇಕಾಗುವಂತೆ ಮಾನಸಿಕ ವಿಕಾಸಕ್ಕೂ ಆಸ್ಪದ ಬೇಕಾಗುತ್ತದೆ; ಮಗುವು ಬೆಳೆಯುವ ಮನೆಯ ವಾತಾವರಣವು ಹಾಗು ಕಲಿಯುವ ಶಾಲೆಯ ವಾತಾವರಣವು ಅದರ ಮಾನಸಿಕ ವಿಕಾಸಕ್ಕೆ ಅವಕಾಶವನ್ನೀಯುತ್ತವೆ; ಮಗುವಿನ ಮಾನಸಿಕ ವಿಕಾಸವು, ಎಂದರೆ ಬುದ್ಧಿಯ ಹಾಗು ಭಾವದ ವಿಕಾಸವು– ಎಂದರೆ ಶಿಕ್ಷಣವು ಬಹುಮಟ್ಟಿಗೆ ಮನೆಯ ಮತ್ತು ಶಾಲೆಯ ವಾತಾವರಣವನ್ನು ಅವಲಂಬಿಸುತ್ತದೆ.

ವಿಕಾಸ ಹೊಂದುವ ಗುಣವು ಮಾನವ ಜೀವಿಯಲ್ಲಿ ಸಹಜವಾಗಿ ಇರುತ್ತದೆ. ಆದುದರಿಂದಲೇ ಶಿಕ್ಷಣವು ಮಾನವನಿಗೆ ಸಾಧ್ಯವಾಗುತ್ತದೆ; ಸಂಸ್ಕೃತಿಯೆಂಬುದು ಅಳವಡುತ್ತದೆ. ಬಾಲಕನ ಸುತ್ತಲಿನ ವಾತಾವರಣವು, ಎಂದರೆ ನಿತ್ಯವೂ ಅವನನ್ನು ಬಳಸುವ ಪರಿಸ್ಥಿತಿಯು ಅಥವಾ ಪರಿಸರವು ಬಾಲಕನ ಚೈತನ್ಯವನ್ನು ಕೆರಳಿಸುತ್ತದೆ. ಪ್ರವೃತ್ತಿಗಳನ್ನು ಪ್ರಚೋದನೆಗೊಳಿಸುವ ಪರಿಸ್ಥಿತಿಗೆ ಜೀವಿಯು ಮೇಲೆ ಮಾಡುವ ಕ್ರಿಯೆಗೆ ಜೀವಿಯು ಪ್ರತಿಕ್ರಿಯೆ ಮಾಡುತ್ತದೆ; ಹೀಗೆ ಪ್ರಕೃತಿ ಮತ್ತು ಪರಿಸ್ಥಿತಿಗಳ ಮಧ್ಯೆ ಸಜೀವ ಸಂಬಂಧವು ಏರ್ಪಡುತ್ತದೆ. ಪಶು-ಪಕ್ಷಿಗಳು ಕೂಡ ಸಹಜ ಪ್ರವೃತ್ತಿಗಳ

ರಿಗೆ ಸಂತೋಷ ಹಾಗೂ ಗೌರವಗಳಿಂದ ಕೂಡಿದ, ಐತಿಹಾಸಿಕ ಘಟನೆಯೆಂದು ತೋರಿದರೆ ಆಶ್ಚರ್ಯವೇನಲ್ಲ. ಇಂಡೋನೇಶಿಯಾದ ಉಪಾಧ್ಯಕ್ಷರಾದ ಡಾ. ಮಹಮ್ಮದ ಹಟ್ಟಾರವರು ಈಗಾಗಲೇ ಭರತಖಂಡದಲ್ಲಿ ಸಂಚರಿಸುತ್ತಿರುವರು. ನೇಪಾಳದ ರಾಜ-ರಾಣಿಯರು ಸದಿಚ್ಛೆಯ ಭೆಟ್ಟಿಗಾಗಿ ಈಗಾಗಲೇ ನವದಿಲ್ಲಿಗೆ ಬಂದಿರುವರು. ರಶಿಯಾದ ಮುಖ್ಯಮಂತ್ರಿಗಳಾದ ಮಾರ್ಶಲ್ ಬುಲ್ಗಾನಿನ್‌ರು ಹಾಗೂ ಸೌದಿ ಅರೇಬಿಯಾದ ರಾಜರು ಕೆಲ ದಿನಗಳಲ್ಲಿಯೆ ಆಗಮಿಸಲಿರುವರು. ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಸ್ವಾಗತವನ್ನು ಕೋರಿ, ಅವರ ಸಂಚಾರವು ಸರ್ವ ಸುಖ ಮಂಗಲವಾಗಲೆಂದು ಹಾರೈಸುವೆವು.

ದೀಪಾವಳಿಯ ಶುಭಾಶಯಗಳು

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ।
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ॥

ಕತ್ತಲೆಯನ್ನು ಹೊಡೆದೋಡಿಸಿ ಬೆಳಕನ್ನು ತಂದು ಕೊಡುವ ದೀಪಾವಳಿಯ ಹಬ್ಬವು ಸಮಾಜದ ಅಜ್ಞಾನ, ಆಲಸ್ಯಗಳನ್ನು ಕಿತ್ತುಹಾಕಿ ಸಂಸ್ಕೃತಿ ಸಂಪತ್ತಭಿವೃದ್ಧಿಗಳನ್ನು ತರುವಂತಾಗಲಿ.

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೬ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕತೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟಣೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ

ಲಿನ್. ಯು. ಟಿಂಗರ

ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೭ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

(೨೮ನೆಯ ಪುಟದಿಂದ)

ಪ್ರದರ್ಶನಕ್ಕೆ ಪೂರಕವಾಗಿ ಅಲ್ಲಿಗೆ ಕಳಿಸಲ್ಪಟ್ಟ ಅ. ಡೆ. ಎ. ಇನಸ್ಪೆಕ್ಟರರ ಸಮ್ಮೇಲನವನ್ನು ೩ ದಿನ ಸಂಘಟಿಸಲಾಯಿತು. ಸಪ್ಟಂಬರ ೨೮ನೇಯ ದಿನ ಮಧ್ಯಾಹ್ನ ೧ ಘಂಟೆಗೆ ಈ ಸಮ್ಮೇಲನವನ್ನು ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀ ಟಿ. ಎಮ್. ಮೀಮಾಂಶಿಯವರು ಉದ್ಘಾಟಿಸಿದರು. ೨೯ನೆಯ ದಿನಾಂಕ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರಾದ ಶ್ರೀ ಎಸ್. ಎಸ್. ಭಾಂಡಾರಕರ ಅವರು ಈ ಸಮ್ಮೇಲನವನ್ನುದ್ದೇಶಿಸಿ ಭಾಷಣ ಮಾಡಿದರು. ಅಕ್ಟೋಬರ ೧ ರಂದು ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭವು ನೆರವೇರಿತು. ಜೀವನ ಶಿಕ್ಷಣ, ಮೂಲೋದ್ಯೋಗದ ಸುಧಾರಣೆ, ಮೂಲೋದ್ಯೋಗ ಶಾಲೆಗಳನ್ನಾಗಿ ಪರಿವರ್ತಿಸುವದು, ಮೊದಲಾದ ಸಮಸ್ಯೆಗಳನ್ನು ಈ ಸಮ್ಮೇಲನದಲ್ಲಿ ಚರ್ಚಿಸಲಾಯಿತು.

ಈ ವರದಿಯನ್ನು ಮುಗಿಸುವ ಮೊದಲು ಪ್ರದರ್ಶನವನ್ನು ಸಂಘಟಿಸುವದರಲ್ಲಿ ಸ್ಥಳಿಕ ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳು ನೀಡಿದ ಸಹಾಯವನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸುವದು ಅಗತ್ಯವಿದೆ. ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಸ್ವಯಂ ಸೇವಕರೆಂದು ಕೆಲಸ ಮಾಡಿದರು. ಅವರು ಪ್ರದರ್ಶನದ ವಿಭಾಗಗಳಲ್ಲಿಯೂ ಮತ್ತು ಸಭಾಭವನದಲ್ಲಿಯೂ ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಮಾರ್ಗದರ್ಶನ ಮಾಡಲು ಇರುತ್ತಿದ್ದರು. ಸಾವಿರಾರು ಸಂದರ್ಶಕರು ಪ್ರದರ್ಶನಕ್ಕೆ ಭೆಟ್ಟಿಯನ್ನಿತ್ತರು. ಪರಸ್ಥಳದ ಜನರೂ ಅದನ್ನು ನೋಡಲು ಬಂದಿದ್ದರು. ಸ್ಥಳಿಕ ಹಾಗೂ ಸುತ್ತುಮುತ್ತಲಿನ ಹಳ್ಳಿಗಳ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡು ಪ್ರದರ್ಶನವನ್ನು ನೋಡಿ ಹೋದರು. ಮಂತ್ರಿಗಳೂ ಉಪಮಂತ್ರಿಗಳೂ ಮತ್ತು ಶಾಸನ ಸಭೆಯ ಅನೇಕ ಸದಸ್ಯರೂ ಪ್ರದರ್ಶನವನ್ನು ಸಂದರ್ಶಿಸಿ ಅಲ್ಲಿರುವ ವಸ್ತುಗಳ ಮೇಲ್ಮಟ್ಟದ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಮಾಡಿದರು.

ಶ್ರೀ ಡಿ. ವ್ಹಿ. ಚಿಕ್ಕರಮನೆ
ಡೆ. ಡಾ. ಎ. ಪೂನಾ

ಮಕ್ಕಳ ಬೆಳವಣಿಗೆ

ಲೇಖಕರು : **ಡಾ. ಡಿ. ಎಸ್. ಕರ್ಕಿ,** ಎಮ್. ಎ., ಪಿಎಚ್. ಡಿ.

ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯು ಮುಖ್ಯವಾಗಿ ..ೂರು ರಂಗಗಳಲ್ಲಿ ಸಾಗುತ್ತದೆ. ಒಂದು ಶಾರೀರಕ ರಂಗ, ..ನ್ನೊಂದು ಬೌದ್ಧಿಕ ರಂಗ, ಮೂರನೆಯದು ಭಾವಕ್ಷೇತ್ರ, ..ು ರಂಗಗಳಲ್ಲಿ ಸಾಗುವ ಬೆಳವಣಿಗೆಯನ್ನು ಶರೀರದ ..ವಣಿಗೆ, ಬುದ್ಧಿಯ ಬೆಳವಣಿಗೆ, ಭಾವದ ಬೆಳವಣಿಗೆ ..ದು ನಿರ್ದೇಶಿಸಬಹುದು. ಈ ಬೆಳವಣಿಗೆಗಳು ..ತ್ಯೇಕ ಪ್ರತ್ಯೇಕವಾಗಿ ಸಾಗುವವೆಂತಲ್ಲ; ಅರಿಯಲು ..ಕೂಲವಾಗಲೆಂದು ಅವುಗಳನ್ನು ಪ್ರತ್ಯೇಕಿಸಿ ಹೇಳ ..ಗಿದೆ; ಅಷ್ಟೇ. ನಿಜವಾದ ಈ ಮೂರೂ ದೆಸೆಯ ..ವಣಿಗೆಗಳು ಒಂದನ್ನೊಂದು ಹೊಂದಿಕೊಂಡು ಸಾಗು.. ಒಂದರ ಮೇಲೊಂದು ಪರಿಣಾಮವನ್ನುಂಟು ..ಡುವ ರೀತಿಯಲ್ಲಿ ಸಾಗುತ್ತವೆ; ಏಕೆಂದರೆ ಬೆಳೆಯುವ ..ವ್ಯ-ವಸ್ತು ಒಂದೇ. ಅದು ಮಗು.

ಮಗುವಿನ ಶರೀರವೇ ಆಗಲಿ, ಬುದ್ಧಿಯೇ ಆಗಲಿ, ..ವವೇ ಆಗಲಿ ಬೆಳೆಯತಕ್ಕಂತಹ ಒಂದು ಗುಣ ಮಗು..ಲ್ಲಿಯೇ ಉಂಟು; ಎಂದರೆ ಮಗುವಿನ ಪ್ರಕೃತಿಯ..ೇ ಉಂಟು. ಆದರೆ ಬೆಳೆಯುವದಕ್ಕೆ ಅನುಕೂಲತೆ.. ಮಾತ್ರ ಹೊರಗಣಿಂದ ದೊರೆಯುತ್ತವೆ; ದೊರೆಯ..ು. ಈ ಮೂರೂ ಬಗೆಯ ಬೆಳವಣಿಗೆಯು ಸರಿ..ಗಿ ಸಾಗುವಂತೆ ಸೌಕರ್ಯಗಳನ್ನು ಒದಗಿಸುವುದು, ..ಣವನ್ನು ಯೋಜಿಸುವುದು, ಪ್ರೇರಣೆ, ಪ್ರಚೋದನೆ ..ಗಳನ್ನು ನೀಡುವುದು ಶಿಕ್ಷಣದ ಕೆಲಸ. ಬಾಲಕರ ..ತ್ವ ವಿಕಾಸವೇ ಸಿದ್ಧಿ; ಆ ವಿಕಾಸಕ್ಕಾಗಿ ಬಳಸುವ ..ನೆಯೇ ಶಿಕ್ಷಣ.

ಅಂಕುರಿಸುವ ಗುಣ ಬೀಜದಲ್ಲಿಯೇ ಇರುತ್ತದೆ; ಅದು ಅಂಕುರಿಸಿ ಲತೆಯಾಗಿಯೋ ಮರವಾಗಿಯೋ ಬೆಳೆಯಲು ತಕ್ಕ ಭೂಮಿ, ವಾಯುಗುಣ, ನೀರಿನ ಪೂರೈಕೆ ಆಗಬೇಕು ತಾನೇ? ಹಾಗೆಯೇ ವಿಕಾಸ ಹೊಂದುವ ಗುಣವು ಮಗುವಿನ ಪ್ರಕೃತಿಯಲ್ಲಿದ್ದರೂ ಮಗುವಿನ ಶಾರೀರಕ, ಬೌದ್ಧಿಕ, ಹಾಗೂ ಭಾವದ ವಿಕಾಸಕ್ಕೆ ತಕ್ಕ ಸೌಕರ್ಯ ಸೌಲಭ್ಯ, ಸಾಧನ ಸಾಹಿತ್ಯಗಳ ಅವಶ್ಯಕತೆಯುಂಟು. ಶರೀರದ ಬೆಳವಣಿಗೆಗೆ ಸರಿಯಾದ ಆಹಾರ, ವಿಹಾರ, ಗಾಳಿ, ನೀರು, ವಿಶ್ರಾಂತಿ ಮೊದಲಾದುವುಗಳು ಬೇಕಾಗುವಂತೆ ಮಾನಸಿಕ ವಿಕಾಸಕ್ಕೂ ಆಸ್ಪದ ಬೇಕಾಗುತ್ತದೆ; ಮಗುವು ಬೆಳೆಯುವ ಮನೆಯ ವಾತಾವರಣವು ಹಾಗು ಕಲಿಯುವ ಶಾಲೆಯ ವಾತಾವರಣವು ಅದರ ಮಾನಸಿಕ ವಿಕಾಸಕ್ಕೆ ಅವಕಾಶವನ್ನೀಯುತ್ತವೆ; ಮಗುವಿನ ಮಾನಸಿಕ ವಿಕಾಸವು, ಎಂದರೆ ಬುದ್ಧಿಯ ಹಾಗು ಭಾವದ ವಿಕಾಸವು– ಎಂದರೆ ಶಿಕ್ಷಣವು ಬಹುಪಟ್ಟಿಗೆ ಮನೆಯ ಮತ್ತು ಶಾಲೆಯ ವಾತಾವರಣವನ್ನು ಅವಲಂಬಿಸುತ್ತದೆ.

ವಿಕಾಸ ಹೊಂದುವ ಗುಣವು ಮಾನವ ಜೀವಿಯಲ್ಲಿ ಸಹಜವಾಗಿ ಇರುತ್ತದೆ. ಆದುದರಿಂದಲೇ ಶಿಕ್ಷಣವು ಮಾನವನಿಗೆ ಸಾಧ್ಯವಾಗುತ್ತದೆ; ಸಂಸ್ಕೃತಿಯೆಂಬುದು ಅಳವಡುತ್ತದೆ. ಬಾಲಕನ ಸುತ್ತಲಿನ ವಾತಾವರಣವು, ಎಂದರೆ ನಿತ್ಯವೂ ಅವನನ್ನು ಬಳಸುವ ಪರಿಸ್ಥಿತಿಯು ಅಥವಾ ಪರಿಸರವು ಬಾಲಕನ ಚೈತನ್ಯವನ್ನು ಕೆರಳಿಸುತ್ತದೆ. ಪ್ರವೃತ್ತಿಗಳನ್ನು ಪ್ರಚೋದನೆಗೊಳಿಸುವ ಪರಿಸ್ಥಿತಿಗೆ ಜೀವಿಯು ಮೇಲೆ ಮಾಡುವ ಕ್ರಿಯೆಗೆ ಜೀವಿಯು ಪ್ರತಿಕ್ರಿಯೆ ಮಾಡುತ್ತದೆ; ಹೀಗೆ ಪ್ರಕೃತಿ ಮತ್ತು ಪರಿಸ್ಥಿತಿಗಳ ಮಧ್ಯೆ ಸಜೀವ ಸಂಬಂಧವು ಏರ್ಪಡುತ್ತದೆ. ಪಶು-ಪಕ್ಷಿಗಳು ಕೂಡ ಸಹಜ ಪ್ರವೃತ್ತಿಗಳ

ಮಾರ್ಗವಾಗಿ ಪರಿಸ್ಥಿತಿಗೆ ಪ್ರತಿಕ್ರಿಯೆಯನ್ನು ಮಾಡಿ ಅನುಭವವನ್ನು ಪಡೆಯುತ್ತವೆ. ಆದರೆ ಅವುಗಳು ಹೀಗೆ ಪಡೆಯುವ ಅನುಭವವು ತೀರ ಅಲ್ಪ. ಅವು ಸಹಜ ಪ್ರವೃತ್ತಿಗಳ ದಾಸಾನುದಾಸರಾಗಿ ವರ್ತಿಸುತ್ತವೆ. ಆದರೆ ಮಾನವನು ಮೊದಮೊದಲು, ಎಂದರೆ ಶೈಶವದಲ್ಲಿ, ಸಹಜ ಪ್ರವೃತ್ತಿಗಳನ್ನು ಮಾತ್ರ ಅನುಸರಿಸಿ ವರ್ತಿಸಿದರೂ ಬರ ಬರುತ್ತ ಜೀವನಾನುಭವದ ಬೆಳಕಿನಲ್ಲಿ ಅವನು ಮುಂದೆ ಸಾಗಿ ಸಹಜ ಪ್ರವೃತ್ತಿಗಳ ಬಂಧನದಿಂದ ತಪ್ಪಿಸಿಕೊಳ್ಳ ಬಲ್ಲನು; ಆದುದರಿಂದಲೇ ವಿವೇಕದಿಂದ ವರ್ತಿಸುವುದು ಅವನಿಗೆ ಸಾಧ್ಯವಾಗುತ್ತದೆ; ಸಹಜ ಪ್ರವೃತ್ತಿಗಳನ್ನು ಉದಾತ್ತಗೊಳಿಸುವ ಶಕ್ತಿ ಅವನಲ್ಲಿರುವುದರಿಂದಲೇ ಅವನ ಅಂತರಂಗದಲ್ಲಿ ವಿವೇಕದ ಉದಯವಾಗುತ್ತದೆ. ಈ ವಿವೇಕದ ಸಾಧನದಿಂದಲೇ ಮಾನವನು ಯುಗ ಯುಗಗಳಲ್ಲಿ ಸಂಸ್ಕೃತಿಯ ಪಥದಲ್ಲಿ ಮುಂದು ಮುಂದಿನ ಹೆಜ್ಜೆಗಳನ್ನಿಡುತ್ತ ಬಂದಿದ್ದಾನೆ.

ಮಗುವಿನ ಬೆಳವಣಿಗೆಯಲ್ಲಿ ಅವನ ಬುದ್ಧಿಯ ವಿಕಾಸವು ಒಂದು ಮುಖ್ಯ ಭಾಗ. ಈ ಬುದ್ಧಿಯೆನ್ನುವ ವಸ್ತು ಮಗುವಿನಲ್ಲಿ ಮೊದಲು ಬೀಜರೂಪದಲ್ಲಿರುತ್ತದೆ. ಬೀಜದಲ್ಲಿ ಅಂಕುರವು ಹುದುಗಿಕೊಂಡಿರುವಂತೆ ಶಿಶುವಿನಲ್ಲಿ ಬುದ್ಧಿ ಗುಪ್ತರೂಪದಲ್ಲಿರುತ್ತದೆ. ಶಿಶು ಬೆಳೆದಂತೆ ಅದು ಮೆಲ್ಲನೆ ಅರಳುತ್ತದೆ. ಸಹಜ ಪ್ರವೃತ್ತಿಗಳ ಪ್ರೇರಣೆಯಿಂದ ನಡೆಯುವ ಕ್ರಿಯೆಯಿಂದುಂಟಾಗುವ ಅನುಭವವು ಈ ಬುದ್ಧಿ ಶಕ್ತಿಯನ್ನು ಅರಳಿಸಲು ನೆರವಾಗುತ್ತದೆ. ಬಾಳಿನಲ್ಲಿ ಒದಗುವ ಹೊಸ ಹೊಸ ಸನ್ನಿವೇಶಗಳು ವಿವಿಧ ರೀತಿಯಲ್ಲಿ ಬುದ್ಧಿಯನ್ನು ಆಹ್ವಾನಿಸುತ್ತವೆ: ಆ ಸನ್ನಿವೇಶಗಳನ್ನು ಬುದ್ಧಿಯು ಎದುರಿಸಿದಷ್ಟೂ ಅದು ತೀಕ್ಷ್ಣವಾಗುತ್ತದೆ.

ಬುದ್ಧಿಯು ಸಾಮಾನ್ಯವಾಗಿ ವ್ಯಕ್ತಿಯ ೧೬ನೆಯ ವಯಸ್ಸಿನಲ್ಲಿ ಸಂಪೂರ್ಣವಾಗಿ ಅರಳುವುದೆಂದು ಮನಶ್ಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ. ಬುದ್ಧಿಯ ಬೆಳವಣಿಗೆಯು ಸುಸೂತ್ರವಾಗಿ ಸಾಗಬೇಕಾದರೆ ಶಿಕ್ಷಕರಾದವರು ಬಾಲಕರ ಆ ಆ ವಯಸ್ಸಿಗನುಸಾರವಾಗಿ ಆತ್ಮಪ್ರೌಢಿಮೆಯನ್ನು ಕೆರಳಿಸಿ, ಅವರ ಯಾವುದೇ ಕಾರ್ಯವು ಜಯಪ್ರದವಾಗಿ ಸಾಗಿ ವಿಜಯೋತ್ಸಾಹವುಂಟಾಗುವ ರೀತಿಯಲ್ಲಿ ಅವರನ್ನು ಪ್ರೋತ್ಸಾಹಗೊಳಿಸಬೇಕು. ಅವರು ಬಾಲಕರಿಗೆ ಒದಗಿಸುವ ಸಮಸ್ಯೆಗಳು ಅವರ ಆತ್ಮ ಪ್ರೌಢಿಮೆಯನ್ನು ಕೆರಳಿಸದಷ್ಟು ಸುಲಭವಾಗಿಯೂ ಇರಬಾರದು, ಮಗುವಿನ ರೀತಿಯಲ್ಲಿ ಮಗುವಿಗೆ ಮಾರ್ಗದರ್ಶನ ಮಾಡಬಲ್ಲವನೇ ನಿಜವಾದ ಶಿಕ್ಷಕನು. ಇಂಥ ಶಿಕ್ಷಕನಲ್ಲಿ ಇರಬೇಕಾದ ಮುಖ್ಯಗುಣವೆಂದರೆ ಸಹಾನುಭೂತಿ. ಈ ಸಹಾನುಭೂತಿಯಿಲ್ಲದ ಶಿಕ್ಷಕರು ಕೊಡುವ ಶಿಕ್ಷಣವು ಪರಿಣಾಮಕಾರಿಯಾಗದು. ಏಕೆಂದರೆ ಗುರುವನ್ನು ಶಿಷ್ಯನನ್ನು ಒಂದುಗೂಡಿಸುವ, ಅವರಿಬ್ಬರಲ್ಲಿ ಒಂದು ಸಜೀವ ಸಂಬಂಧವನ್ನು ಏರ್ಪಡಿಸುವ ಗುಣವೇ ಅವನಲ್ಲಿರುವುದಿಲ್ಲ. ಇಂಥ ರೀತಿಯಲ್ಲಿ ನಡೆಯುವ ಶಿಕ್ಷಣವು ಊರ ಆವಿಂಗೆ ಉಣ್ಣದ ಕರುವ ಬಿಟ್ಟಂತೆ ವ್ಯರ್ಥವಾಗುವುದು.

ಬುದ್ಧಿಯನ್ನು ಸಾಣೆ ಹಿಡಿಯುವುದಕ್ಕೆ ಆತ್ಮಪ್ರೌಢಿಮೆ ಹೇಗೆ ಸಹಾಯಕಾರಿಯಾಗುವುದೋ ಹಾಗೆ ಕೌತುಕವೂ ಸಹಾಯಕಾರಿಯಾಗುವುದು. ಶಿಕ್ಷಕನು ಈ ಕುತೂಹಲವನ್ನು ಕೆರಳಿಸಿ ಬಾಲಕರ ಬುದ್ಧಿ ಶಕ್ತಿಯನ್ನು ಅರಳಿಸಬೇಕು. ಈ ಪ್ರಪಂಚವು ತನ್ನ ಮುಟ್ಟಿಗೆಯಲ್ಲಿ ಅದೆಷ್ಟೋ ಗುಟ್ಟುಗಳನ್ನು ಹಿಡಿದು "ಏನಿದೆ ನನ್ನ ಮುಟ್ಟಿಗೆಯಲ್ಲಿ ?— ಹೇಳಬಲ್ಲಿರಾ ?—" ಎಂದು ಪ್ರಶ್ನಿಸುತ್ತದೆ. ಅದರ ಪ್ರಶ್ನೆಗಳು ಬುದ್ಧಿಯನ್ನು ಕೆಣಕುತ್ತವೆ; ಕೆಣಕಬೇಕು. ಹಾಗೆ ಕೆಣಕಿದಾಗಲೇ ಬುದ್ಧಿ ಎಚ್ಚರವಾಗುತ್ತದೆ; ಅದು ಎಚ್ಚರವಾದಷ್ಟೂ ತೀಕ್ಷ್ಣವಾಗುತ್ತದೆ.

ಮಗು ಉತ್ಸಾಹದ ಮೂರ್ತಿ. ಅದರ ಕುತೂಹಲಕ್ಕೆ ಮಿತಿಯಿಲ್ಲ. ಮಗುವಿನಲ್ಲಿ ಕಲಿಯುವ ಉತ್ಸಾಹ ಕುಂದುತ್ತ ಬಂದಾಗ ಈ ಕುತೂಹಲವನ್ನು ಕೆರಳಿಸಿದರೆ ಸಾಕು. ಮತ್ತೆ ಉತ್ಸಾಹದ ಚಿಲುಮೆ ಚಿಮ್ಮಲುಪಕ್ರಮಿಸುವುದು. ಆದರೆ ಯಾವ ಯಾವ ಕಾಲಕ್ಕೆ ಹೇಗೆ ಹೇಗೆ ಈ ಉತ್ಸಾಹದ ಕಾರಂಜಿಯನ್ನು ಪುಟಿಸಬೇಕೆಂಬ ಕಲೆ ಶಿಕ್ಷಕನಿಗೆ ಗೊತ್ತಿರಬೇಕು; ರಚನಾ ಪ್ರವೃತ್ತಿಯೂ ಬುದ್ಧಿಗೆ ಬೆಂಬಲವಾಗಬಹುದು; ಆದುದರಿಂದ ಮಕ್ಕಳ ಕೃತಿ ಪ್ರೇಮವನ್ನು ಕೆಲವೊಂದು ಚಟುವಟಿಕೆಗಳ ಮೂಲಕ ಪ್ರಯೋಜನಗೊಳಿಸಿಕೊಳ್ಳಬಹುದಾಗಿದೆ.

ಇನ್ನು ಮಗುವಿನ ಭಾವಜೀವನ ವಿಕಾಸವೂ ಮಾನವ ಪ್ರಾಣಿಯ ವೈಶಿಷ್ಟ್ಯವನ್ನು ನಿರ್ದೇಶಿಸುತ್ತದೆ.

ಮಾನವನ ಶೀಲವೂ ಸಂಸ್ಕೃತಿಯೂ ಅವನ ಭಾವಜೀವನದ ವಿಕಾಸವನ್ನೇ ಎತ್ತಿ ತೋರುತ್ತವೆ. ಭಾವಜೀವನವು ಹೆಚ್ಚಾಗಿ ಅನುರಾಗಗಳನ್ನು ಅವಲಂಬಿಸಿರುತ್ತದೆ. ಸಹಜ ಪ್ರವೃತ್ತಿಗಳಿಂದ ಹೊಮ್ಮಿದ ಭಾವವು ಯಾವುದೇ ಒಂದು ವಸ್ತುವಿನ ಅಥವಾ ವ್ಯಕ್ತಿಯ ಅಥವಾ ವಿಚಾರದ ಸಂಬಂಧದಲ್ಲಿ ಪುನಃ ಪುನಃ ಪ್ರವಹಿಸಿ ಆ ವಸ್ತುವಿನ, ವ್ಯಕ್ತಿಯ ಅಥವಾ ವಿಚಾರದೊಡನೆ ಬೆರೆತು ಒಂದಾದರೆ ಅದೇ ಅನುರಾಗವಾಗಿ ಪರಿಣಮಿಸುತ್ತದೆ: ಮಗು ಯಾವುದೋ ಒಂದು ಕವಿತೆಯನ್ನು ಹಾಡಿ ಆನಂದ ಭಾವವನ್ನು ತಾಳಿದೆ ಎಂದು ತಿಳಿದುಕೊಳ್ಳೋಣ. ಆ ಕವಿತೆಯನ್ನು ಹಾಡಿ ಹಾಡಿ ಮಗು ಪುನಃ ಪುನಃ ಆನಂದವನ್ನು ಹೊಂದುವುದರ ಪರಿಣಾಮವಾಗಿ ಮೊದಲು ಆ ಮಗುವಿನಲ್ಲಿ ಆ ಕವಿತೆಯ ಬಗೆಗೆ ಅನುರಾಗವುಂಟಾಗಿ ಕಾಲಾನುಕ್ರಮದಲ್ಲಿ ಮಗು ಬೆಳೆದು ದೊಡ್ಡದಾದ ಹಾಗೆ ಮತ್ತು ಇನ್ನಿತರ ಕವಿತೆಗಳನ್ನು ಓದಿ, ಓದಿ ಆನಂದಪಟ್ಟ ಹಾಗೆ ಅವನಲ್ಲಿ ಕವಿತೆಯ ಬಗೆಗೆ ಅನುರಾಗವುಂಟಾಗುವುದು. ವ್ಯಕ್ತಿಯಲ್ಲಿ ಅಭಿರುಚಿ ಮತ್ತು ಆಸಕ್ತಿಗಳು ಹುಟ್ಟಿ ನೆಲೆಗೊಳ್ಳುವುದು. ಈ ಅನುರಾಗದ ಮಾರ್ಗವಾಗಿಯೇ: ಅಭಿರುಚಿ ಮತ್ತು ಆಸಕ್ತಿಗಳು ಹೇಗೋ ಹಾಗೆ ಆತ್ಮ ವಿಕಾಸ, ಕರ್ತವ್ಯ ದಕ್ಷತೆ, ಸಹಕಾರ, ಸಹೃದಯತೆ ಇವೇ ಮೊದಲಾದ ಗುಣಗಳು ಕೂಡ ಅನುರಾಗದ ಪರಿಣಾಮವಾಗಿಯೇ ವ್ಯಕ್ತಿಯಲ್ಲಿ ನೆಲೆಗೊಳ್ಳುತ್ತವೆ. ಶಿಕ್ಷಕನು ಒಳ್ಳೆಯ ಅನುರಾಗಗಳನ್ನು ಬೆಳಸಿಕೊಂಡಿದ್ದರೆ ಬಾಲಕರು ಭಾವಾನುಕರಣದ ಮೂಲಕ ಆ ಅನುರಾಗಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳಬಹುದು. ಏಕೆಂದರೆ ಬಾಲಕರು ಅನುಕರಣ ಶೀಲರು. ಅನುರಾಗಗಳನ್ನು ಮಾತಿನಿಂದ ಮೂಡಿಸುವುದು ಸುಲಭವಲ್ಲ; ಕೃತಿಯಿಂದ ಸಹಜಸಾಧ್ಯ ಉದಾಹರಣೆಗಾಗಿ ವಾಚನಾಭಿರುಚಿಯನ್ನು ಮಕ್ಕಳಲ್ಲಿ ಮೂಡಿಸಬೇಕಾದರೆ ವಾಚನಾಭಿರುಚಿಯ ಬಗೆಗೆ ಉಪನ್ಯಾಸ ನೀಡುವುದರಿಂದ ಪ್ರಯೋಜನವಿಲ್ಲ; ಶಿಕ್ಷಕನು ತಾನು ವಾಚನಾಭಿರುಚಿಯನ್ನು ಬೆಳಸಿಕೊಂಡಿದ್ದರೆ ಅದರ ಪರಿಣಾಮವು ಬಾಲಕರ ಮೇಲೆ ತಾನಾಗಿಯೇ ಆಗುವುದು; ಅವನು ಪುಸ್ತಕಗಳಲ್ಲಿ ತೋರುವ ಗೌರವ, ಅವುಗಳನ್ನು ಕಾಣುವ ದೃಷ್ಟಿ, ಬಾಲಕರಿಗಾಗಿ ಓದುವಾಗ ವಾಚನದಲ್ಲಿ ತುಂಬುವ ಭಾವಸ್ವಾರಸ್ಯ ಇವೇ ಮೊದಲಾದವುಗಳಿಂದಾಗಿ ಶಿಕ್ಷಕನ ಒಲವು ನಿಲವುಗಳು ಸೂಕ್ಷ್ಮವಾಗಿ ತಮ್ಮ ಪರಿಣಾಮವನ್ನು ಬೀರಿಯೇ ಬೀರುತ್ತವೆ: ತಾನು ಕಲಿಸುವ ವಿಷಯಗಳಲ್ಲಿ ಶಿಕ್ಷಕನು ಬೆಳಸಿಕೊಂಡ ಅನುರಾಗವನ್ನು ಬಾಲಕರೂ ಭಾವಾನುಕರಣದಿಂದ ಬೆಳೆಸಿಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಒಂದು ಮಾತು ಹೇಳಬೇಕೆಂದರೆ ಶಿಕ್ಷಕರು ತಮ್ಮ ಕೈಯಲ್ಲಿ ಬೆಳವಣಿಗೆಯನ್ನು ಪಡೆಯಲು ಬಂದ ಮಕ್ಕಳಿಗೆ ಎಲ್ಲ ಬಗೆಯಿಂದಲೂ ಸತ್ಪ್ರೇರಣೆಯನ್ನು ನೀಡಲು ಸಮರ್ಥರಾಗಿರಬೇಕು; ಬಾಲಕರ ಶಾರೀರಕ, ಬೌದ್ಧಿಕ ಹಾಗು ನೈತಿಕ ವಿಕಾಸಕ್ಕೆ ತಕ್ಕ ಆವರಣವನ್ನು ಒದಗಿಸಿ ಪ್ರತಿಯೊಬ್ಬ ಬಾಲಕನೂ ಸಾಧ್ಯವಿದ್ದ ಮಟ್ಟಿಗೆ ತನ್ನ ಗತಿ ಮತಿಗಳಿಗನುಸಾರವಾಗಿ ಒಳ್ಳೆಯ ವ್ಯಕ್ತಿತ್ವವನ್ನು ಪಡೆಯುವುದಕ್ಕೆ ಆಸ್ಪದವನ್ನು ಕಲ್ಪಿಸಿ ಕೊಡಬೇಕು. ಶಾಲೆಯ ಆವರಣದಲ್ಲಿ ಉತ್ಸಾಹ, ಆನಂದ, ಹಿತಮಿತವಾದ ಸ್ವಾತಂತ್ರ್ಯ, ಕರ್ತವ್ಯತತ್ಪರತೆ, ಸಹಕಾರ, ಸಂಘಜೀವನ, ಓರಣ ಮೊದಲಾದವುಗಳು ತುಂಬಿ ತುಳುಕುತ್ತಿದ್ದರೆ ಉದ್ಯಾನದಲ್ಲಿ ಹೂಗಳರಳುವಂತೆ ಮಕ್ಕಳ ಸರ್ವತೋಮುಖವಾದ ವಿಕಾಸವು ತಾನಾಗಿ ಸಾಗುವುದು. ಶಿಕ್ಷಕರು ಮಕ್ಕಳ ಸಂಬಂಧದಲ್ಲಾ ಸರಿಯಾದ ದೃಷ್ಟಿಯನ್ನಿಟ್ಟುಕೊಂಡಿರಲಿ; ತಮ್ಮ ಕರ್ತವ್ಯದಲ್ಲಿ ನಿಷ್ಠೆಯನ್ನಿಟ್ಟುಕೊಂಡಿರಲಿ; ಆಜೀವ ಜ್ಞಾನೋಪಾಸನೆಯನ್ನು ಮಾಡುತ್ತಲಿರಲಿ. ಅಂದರೆ ಬಾಲಕರ ಬೆಳವಣಿಗೆಗೆ ಪ್ರೇರಕವಾಗುವ ಪ್ರಭಾವಗಳು ಅವರಿಂದ ಬಾಲಕರಿಗೆ ತಾನಾಗಿಯೇ ಇಳಿದು ಬರುತ್ತವೆ.

ಶಾರೀರಕ ಬೆಳವಣಿಗೆ ಹೇಗೋ ಹಾಗೆ ಮಾನಸಿಕ ಬೆಳವಣಿಗೆಯು ಕೂಡ ಸಾಮಾನ್ಯವಾಗಿ ಒಂದು ಕ್ರಮದಲ್ಲಿ ಸಾಗುತ್ತದೆ; ಮಾನಸಿಕ ವಿಕಾಸವನ್ನು ಕಂಡುಹಿಡಿದ ಮನಶ್ಶಾಸ್ತ್ರಜ್ಞರು ಈ ವಿಕಾಸದಲ್ಲಿ ಕೆಲವೊಂದು ನಿರ್ದಿಷ್ಟವಾದ ಸ್ಥಲಗಳನ್ನು ನಿರೂಪಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ಬಾಲಕರ ಮಾನಸಿಕ ವಿಕಾಸವು ಈ ಸ್ಥಲಗಳಲ್ಲಿ ನಡೆಯುತ್ತದೆ. ತಾವು ಕೊಡಬಯಸುವ ಶಿಕ್ಷಣವನ್ನು ಶಿಕ್ಷಕರಾದವರು ಈ ವಿವಿಧ ಸ್ಥಲಗಳ ಲಕ್ಷಣಗಳನ್ನು ಅರಿತುಕೊಂಡು ಕೊಟ್ಟರೆ ಪರಿಣಾಮವು ತೃಪ್ತಿಕರವಾಗುವುದರಲ್ಲಿ ಸಂದೇಹವೇ ಇಲ್ಲ. ಬರಿ ಮನಶ್ಶಾಸ್ತ್ರವನ್ನು ಪುಸ್ತಕಗಳಿಂದ ಅಭ್ಯಾಸಮಾಡಿದರೆ ಸಾಲದು. ತಮ್ಮ ಕೈಯಲ್ಲಿ ಕಲಿಯುತ್ತಲಿರುವ ಬಾಲಕರ ಅರಳುವ ಪ್ರವೃತ್ತಿ

ಗಳನ್ನು ಹೊರಹೊಮ್ಮುತ್ತಿರುವ ಶಕ್ತಿಗಳನ್ನು, ಅವರ ವಿಶಿಷ್ಟ ಗತಿ ಮತಿಗಳನ್ನು ಶಿಕ್ಷಕರು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳಿಗೆ ತಮ್ಮ ಶಿಕ್ಷಣ ಕಲೆಯನ್ನು ಅಳವಡಿಸಬೇಕು. ಶಿಕ್ಷಕರಾದವರು ತಮ್ಮ ವೃತ್ತಿಯಲ್ಲಿ ನಿಷ್ಠೆಯನ್ನು ಬೆಳೆಯುತ್ತಿರುವ ಬಾಲಕರಲ್ಲಿ ಅನುರಾಗವನ್ನು ತಳೆದರೆ ಮಾತ್ರ ಇದು ಸಾಧ್ಯ.

ರಾಷ್ಟ್ರೀಯ ಇತಿಹಾಸ

ಲೇಖಕರು : ಬಿ. ಎಸ್. ಹಂಚಿನಾಳ, ಬಿ. ಎ., ಬಿ. ಟಿ.

ಇತಿಹಾಸವೆಂದರೆ ಕಂಠಪಾಠ ವಿಷಯ ಎಂಬುದು ವೆಂಬುದು ಈಗ ಮರೆಯಾಗುತ್ತಿರುವದು ಶುಭ ಚಿಹ್ನವಾಗಿದೆ. ಹಿಂದೆ ಇತಿಹಾಸದಲ್ಲಿಯ ಇಸವಿಗಳನ್ನು, ಹೆಸರುಗಳನ್ನು, ಯುದ್ಧಗಳನ್ನಷ್ಟೇ ಗಮನಿಸಿ ಮಕ್ಕಳಲ್ಲಿ ಇತಿಹಾಸ ವಿಷಯವನ್ನು ತುಂಬುತ್ತಿದ್ದ ಪರಿಪಾಠವು ದೂರಾಗುತ್ತಿರುವುದು ಮಹತ್ವದ್ದಾಗಿದೆ.

ಭಾರತೀಯರಲ್ಲಿ ರಾಷ್ಟ್ರೀಯತೆಯು ಬೆಳೆದು ಬಂದಂತೆ ಮಕ್ಕಳಿಗೆ ಕಲಿಸುತ್ತಿರುವ ರಾಷ್ಟ್ರದ ಇತಿಹಾಸದಲ್ಲಿಯೂ ರಾಷ್ಟ್ರೀಯತೆಯು ಮಹತ್ವದ ಸ್ಥಾನವನ್ನು ಪಡೆಯುತ್ತ ಬಂತೊಡಗಿದೆ. ಆದರೂ ಇತಿಹಾಸ ಕಲಿಸುವ ಕ್ರಮದಲ್ಲಿ ಕೆಲವೊಂದು ವಿಶಿಷ್ಟ ಗುರಿಗಳನ್ನು ಇಟ್ಟುಕೊಂಡು ಸಾಗಬೇಕಾದುದು ಅಗತ್ಯವಾಗಿದೆ.

ಇತಿಹಾಸವು ಕುಲ, ರಾಷ್ಟ್ರ ಇವುಗಳಿಗೆ ಸಂಬಂಧಿಸಿದುದು. ಭಾರತದಲ್ಲಿ ಭಿನ್ನ ಭಿನ್ನ ಮತಗಳು ವ್ಯಾಪ್ತಿಗೊಂಡಿರುವಾಗ ಮಕ್ಕಳಿಗೆ ಇತಿಹಾಸವನ್ನು ಕಲಿಸುವಾಗ ಮತದೃಷ್ಟಿಯನ್ನು ಬಿಡಲಿಕ್ಕೆ ಬರುವಂತಿಲ್ಲ. ಆದರೆ ಶಿಕ್ಷಕನು ಮಾತ್ರ ಮತದ ಸಂಕುಚಿತ ದೃಷ್ಟಿಯನ್ನು ಮುಂದುಮಾಡದೆ ವಿಶಾಲ ದೃಷ್ಟಿಯನ್ನು ಎತ್ತಿ ಹಿಡಿದು ಮಕ್ಕಳಿಗೆ ಇತಿಹಾಸ ಹೇಳಬೇಕು. ಒಂದು ಮತದ ಅವಹೇಳನೆ ಮಾಡುವ ಪ್ರಸಂಗವನ್ನು ತಂದುಕೊಳ್ಳಕೂಡದು. ಭಾರತದಲ್ಲಿ ಜನಾಂಗಗಳ ಅಸ್ತಿತ್ವಕ್ಕೆ ಅಪರೂಪ ಅವಕಾಶವಿದೆ ಈಗ ಕೈಗೆ ಲಭ್ಯವಾಗಿರುವ ಭಾರತದ ಇತಿಹಾಸದಲ್ಲಿ ಭಿನ್ನ ಭಿನ್ನ ಕುಲಗಳ ಜನಾಂಗಗಳ ತಾಕಲಾಟವು ಅತಿ ವಿರಳವಾಗಿರುವುದರಿಂದ ಪ್ರಾಚೀನ ಇತಿಹಾಸ ಕಲಿಸುವಾಗ ಅಷ್ಟೊಂದು ತೊಂದರೆ ಕಾಣಲಿಕ್ಕಿಲ್ಲ. ಆದರೆ ಮುಸ್ಲಿಮರು, ಕ್ರಿಶ್ಚನ್ನರು ಭಾರತದಲ್ಲಿ ಬಂದು ನೆಲೆ ನಿಂತ ಮೇಲೆ ಜನಾಂಗಗಳ ತಿಕ್ಕಾಟವು ತಲೆದೋರಿತಾದರೂ ಅಲ್ಲಿ ಜನಾಂಗಕ್ಕೆ ಮಹತ್ವ ಕೊಡದೆ ಅಂದಿನಿಂದಾಗಿರುವುದೆಲ್ಲವನ್ನೂ ವಿವಿಧ ಮತಗಳ ಉದಾತ್ತ ತತ್ವಗಳ ದೃಷ್ಟಿಯಿಂದ ಇತಿಹಾಸದಲ್ಲಿ ತಂದಿರಿಸಿ ಕಲಿಸಬೇಕು.

ಒಂದುವೇಳೆ ಮತ, ಕುಲಗಳೆರಡಕ್ಕೂ ಮಹತ್ವ ಕೊಡುವುದು ಸಂಭವನಿಸಲಿಕ್ಕಿಲ್ಲ. ಆಗ ಇತಿಹಾಸ ಕಲಿಸುವಾಗ ನವೀನವಾದ ರಾಷ್ಟ್ರೀಯ ದೃಷ್ಟಿಯೊಂದನ್ನೇ ಇಟ್ಟುಕೊಂಡು ಮಕ್ಕಳಿಗೆ ಇತಿಹಾಸವನ್ನು ಬೋಧಿಸುವದು ರಾಷ್ಟ್ರದ ದೃಷ್ಟಿಯಿಂದ ನಿಜವಾಗಿಯೂ ಹಿತಕಾರಿಯೆನಿಸುವದು. ಮತ-ಕುಲಗಳ ವಿಚಾರಗಳು ರಾಷ್ಟ್ರೀಯ ವಿಚಾರಗಳ ನೆಳಲಲ್ಲಿ ನಿಲ್ಲುವಂತೆ ಮಾಡಿದರೆ ಮಕ್ಕಳಿಗೆ ದೊರೆಯುವ ಇತಿಹಾಸವು ರಾಷ್ಟ್ರೀಯ ಇತಿಹಾಸವಾಗುವದು.

ಇಂತಹ ರಾಷ್ಟ್ರೀಯ ಇತಿಹಾಸವು ಶಾಲೆಯ ಮಕ್ಕಳಿಗೆ ದೊರೆಯಬೇಕೆಂದು ಬಗೆದರೆ ಕಲಿಸುವ ಪದ್ಧತಿಯೂ ರಾಷ್ಟ್ರೀಯದೇ ಆಗಬೇಕಾಗುವದು. ಅಂತೆಯೇ ಶಾಲೆಯ ಚೌಕಟ್ಟಿನಲ್ಲಿಯೇ ಮಕ್ಕಳಿಗೆ ಇತಿಹಾಸವನ್ನು ಬೋಧಿಸುವುದನ್ನು ಶಕ್ಯವಿದ್ದಷ್ಟು ಕಡಿಮೆ ಮಾಡಲೇಬೇಕು. ಅದಕ್ಕಾಗಿ ಇತಿಹಾಸ ಕಲಿಸುವ ಶಿಕ್ಷಕನು ಮಾತ್ರ ತುಂಬ ಸಮರ್ಥನಿರಬೇಕಾಗುವದು. ಇತಿಹಾಸವು ಅವನ ಕರಗತವಾಗಬೇಕು. ಯಾವ ಕಾಲದ ಇತಿಹಾಸವನ್ನು ಕಲಿಸುವನೋ ಆ ಕಾಲದಲ್ಲಿ ತಾನು ಇದ್ದೇನೆಂಬ ಭಾವನೆಯನ್ನು ತಂದುಕೊಳ್ಳುವ ಶಕ್ತಿಯು ಆತನಲ್ಲಿ ಇರಬೇಕಾಗುವದು. ಆ ಕಾಲದಲ್ಲಿಯದನ್ನು ಈ ಕಾಲದಲ್ಲಿಯದಕ್ಕೆ ಹೊಂದಿಸಿ ನಿರೂಪಿಸುವ ಸಾಮರ್ಥ್ಯವು ಆತನಲ್ಲಿ ಮನೆಮಾಡಿಕೊಂಡಿರಬೇಕಾಗುವದು.

ಈ ಶಕ್ತಿಯ ಶಿಕ್ಷಕನಿದ್ದರೆ ಇತಿಹಾಸದ ಘಟನೆಗಳನ್ನು ಆಯ್ದುಕೊಂಡು ಸಂಭಾಷಣೆಯ ಮೂಲಕ, ನಾಟಕೀಯವನ್ನಾಗಿ ಮಾಡಿ ಮಕ್ಕಳಿಗೆ ಗತಕಾಲದ ಇತಿಹಾಸವನ್ನು ಆಟವನ್ನಾಗಿ ಮಾಡಬಲ್ಲನು. ಐತಿಹಾಸಿಕ ಸ್ಥಳಗಳಿಗೆ ಮಕ್ಕಳನ್ನು ಕರೆದೊಯ್ದು ಇತಿಹಾಸವನ್ನು ಮಕ್ಕಳ ಕಣ್ಮುಂದೆ ಇರಿಸಬಲ್ಲನು. ರಾಷ್ಟ್ರದ ನೆರವಿನಲ್ಲಿ ಚಲನ ಚಿತ್ರಗಳ ಮೂಲಕ ಮಕ್ಕಳಿಗೆ ಇತಿಹಾಸದ ಬಗ್ಗೆ ಅಭಿರುಚಿಯನ್ನು ಹುಟ್ಟಿಸುವನು. ಇವೆಲ್ಲವುಗಳು ಅವಶ್ಯಕವೆಂದು ಕಂಡುಬಂದಲ್ಲಿ ಐತಿಹಾಸಿಕ ಪಟಗಳನ್ನೂ, ಚಿತ್ರಗಳನ್ನೂ ತಯಾರಿಸಿ ಅಲ್ಪದರಲ್ಲಿಯೇ ಮಹತ್ಸಾಧನೆಯನ್ನು ಮಾಡಬಲ್ಲನು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಐತಿಹಾಸಿಕ ದಿನಗಳನ್ನೂ, ಜಯಂತಿಗಳನ್ನೂ, ಪುಣ್ಯ ತಿಥಿಗಳನ್ನೂ ಸಮಯೋಚಿತವಾಗಿ ಆಚರಿಸಿ ಮಕ್ಕಳಿಗೆ ಇತಿಹಾಸದ ಪ್ರತ್ಯಕ್ಷ ಜ್ಞಾನವನ್ನು ಮನನಮಾಡಿಕೊಡಬಲ್ಲನು. ಇಷ್ಟೆಲ್ಲಂದು ಮಾಡುವ ಶಿಕ್ಷಕನು ಪ್ರಾಚೀನ ವಸ್ತು ಸಂಗ್ರಹಾಲಯಗಳಿಗೆ ಮಕ್ಕಳ ಭೆಟ್ಟಿ ಕೊಡಿಸುವದನ್ನೆಂದೂ ಮರೆಯಲಾರನು.

ಹೀಗೆ ಸಮರ್ಥ ಶಿಕ್ಷಕನು ಬೋಧಿಸುವ ಪದ್ಧತಿಯೇ ರಾಷ್ಟ್ರೀಯ ಪದ್ಧತಿಯಾಗುವದು. ಯಾವದೇ ನಾಟಕ, ಯಾವದೇ ಪ್ರವಾಸ, ಯಾವದೇ ಚಲನ ಚಿತ್ರ, ಯಾವದೇ ಜಯಂತಿ; ಇಲ್ಲವೆ ಪುಣ್ಯ ತಿಥಿ ಆರಿಸಿಕೊಳ್ಳುವಾಗ ಮಕ್ಕಳಲ್ಲಿ ರಾಷ್ಟ್ರೀಯತೆಯನ್ನು ಪ್ರಜ್ವಲಿಸುವ ದೃಷ್ಟಿಯನ್ನು ಮಾತ್ರ ಅವನೆಂದೂ ಬಿಟ್ಟುಕೊಡತಕ್ಕದ್ದಲ್ಲ. ಆಗ ಮಕ್ಕಳಿಗೆ ನಿಜವಾಗಿಯೂ ರಾಷ್ಟ್ರೀಯ ಇತಿಹಾಸವು ಲಭಿಸುವದು. ಅದನ್ನು ಗಳಿಸಿದ ಮಕ್ಕಳು ರಾಷ್ಟ್ರಾಭಿಮಾನದ ರಾಷ್ಟ್ರೀಯರಾಗುವರು.

ಇನ್ನು ಇತಿಹಾಸವನ್ನು ರಾಷ್ಟ್ರೀಯವನ್ನಾಗಿ ಮಾಡಿ ಶಿಕ್ಷಕರ ಕೆಲಸವನ್ನು ಹಗುರುಗೊಳಿಸುವ ಇತಿಹಾಸ ಗ್ರಂಥಗಳು ಕನ್ನಡ ಭಾಷೆಯಲ್ಲಿ ಬೆಳಕಿಗೆ ಬಂದಿರುವುದು ಅತಿ ವಿರಳವೆಂದರೆ ತಪ್ಪಾಗಲಿಕ್ಕಿಲ್ಲ. ರಾಷ್ಟ್ರೀಯ ಇತಿಹಾಸ ದೃಷ್ಟಿಯನ್ನಿಟ್ಟುಕೊಂಡು ಇತಿಹಾಸ ಲೇಖಕರು ಮುಂದೆ ಬರಬೇಕಾಗಿದೆ. ಇಲ್ಲವಾದರೆ ಸರಕಾರವು ಅಂತಹ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಕೊಳ್ಳುವ ಯೋಜನೆಗಳನ್ನಾದರೂ ಕೃತಿಗಿಳಿಸಲೇಬೇಕು. ಅಂದರೆ ರಾಷ್ಟ್ರದ ಇತಿಹಾಸವು ರಾಷ್ಟ್ರೀಯವಾಗುವದು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು

ಶ್ರೀ ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಕನ್ನಡ ಬಯಲಾಟ

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ,** ಎಮ್.ಎ., ಪಿಎಚ್.ಡಿ.

ಕನ್ನಡ ಜಾನಪದ ಸಾಹಿತ್ಯದಲ್ಲಿ ಕನ್ನಡ ಜಾನಪದ ಭೂಮಿ (Kannada Folk Theater)ಗೂ ಒಂದು ಮಹಾಸ್ಥಾನವಿದೆ. ಕನ್ನಡ ಜಾನಪದ ರಂಗ ಭೂಮಿಯೇ ಕನ್ನಡ ಬಯಲಾಟ. ಉತ್ತರ ಕರ್ನಾಟಕ ದಲ್ಲಿ ಜಾನಪದ ಸಾಹಿತ್ಯವನ್ನು ಸಂಕಲಿಸುವಾಗ ನನಗೆ ತೋಚಿದ ಕನ್ನಡ ಬಯಲಾಟಗಳ ಬಾಹ್ಯರೇಷೆಯನ್ನು ಮಾತ್ರ ಕನ್ನಡಿಗರ ಮುಂದಿಡಲು ಪ್ರಯತ್ನ ಮಾಡಿದ್ದೇನೆ. ಕನ್ನಡ ಸಾಹಿತ್ಯದಲ್ಲಿ ನಾಟಕ ಸಾಹಿತ್ಯವೇ ಇಲ್ಲ. ಅದು ನಮಗೆ ಸಂಸ್ಕೃತ ಪ್ರಭಾವದಿಂದ ಕನ್ನಡಕ್ಕೆ ಕೇವಲ ಅನುವಾದವಾಗಿ ಬಂತು; ಎಂದು ಅನೇಕ ವಿಮರ್ಶಕರು ಆಕ್ಷೇವನ್ನೆತ್ತಿದ್ದಾರೆ. ಅಂದರೆ ಕನ್ನಡಿಗರು ರಸಿಕರಿದ್ದಿಲ್ಲವೇ? ಆಟನೋಟಗಳು ಅವರಿಗೆ ಬೇಕಾಗಿದ್ದಲ್ಲವೇ? ಎಂಬ ಅನುಮಾನಗಳು ಸಂಶೋಧಕರಿಗೆ ಬಾರದಿರವು.

ಕನ್ನಡಿಗರಿಗೆ ಬಯಲಾಟವು ಹೊಸದಲ್ಲ. ಮೊಟ್ಟ ಮೊದಲು ಅದು ಜನತೆಗೆ ಭಾಜನೆಗಬ್ಬವಾಗಿತ್ತು. ಸಂಗೀತ ಪ್ರಾಧಾನ್ಯತೆಯನ್ನೊಡಗೂಡಿದ ಈ ಭಾಜನೆಗಬ್ಬದಲ್ಲಿ ಗಾನ (ಹಾಡ)ವು ಭಾಜನೆಯಿಲ್ಲದೆ ನಡೆಯುತ್ತಿದ್ದಿಲ್ಲ. ಭಾಜನೆಯು ಲೋಹವಾದ್ಯ– (ಜಾಂಗುಟಿ, ತಾಳ, ಜೆಳ್ಳಂಕ)ಗಳಿಂದಾಗಲಿ, ತಂತಿಯವಾದ್ಯ– (ವೀಣೆ, ತಂಬೂರಿ, ತುಣತುಣಿ)ಗಳಿಂದಾಗಲಿ, ಚರ್ಮವಾದ್ಯ (ದಿಮ್ಮ, ಮದಲಿ, ದಪ್ಪು)ಗಳಿಂದಾಗಲಿ, ಒಮ್ಮೊಮ್ಮೆ ಇವೆಲ್ಲವುಗಳ ಸಂಗಜೋಡಣೆ– (Orchestra)ಯಿಂದಾಗಲಿ ನಡೆಯುತ್ತಿತ್ತು. ಕರ್ನಾಟಕ ಕಲ್ಮನೆ– (Caves) ಗಳಲ್ಲಿಯೂ ಪ್ರಾಚೀನ ದೇಗುಲಗಳಲ್ಲಿಯೂ ಕಲ್ಪಡಿಗಳಲ್ಲಿ ಕೆತ್ತಿದ ಭಾಜನೆಗಬ್ಬಗಳ ಮೇಳಗಳ ಚಿತ್ರಗಳನ್ನು ನಾವು ಕಾಣಬಹುದು. ಬದಾಮಿಯ ಕಲ್ಮನೆ (Caves)ಗಳಲ್ಲಿ ಶಿವನ ಲೀಲೆಗಳೂ ದಶಾವತಾರಗಳೂ ಭಾಜನೆಯ ಮೇ ಗಳೊಡನೆ ಚಿತ್ರಿತವಾಗಿವೆ. ಪುಲಿಗೆರೆಯ ಸೋಮನ ಥನ ಗುಡಿಯ ಶಿವನ ನಂದೀ ಅವತಾರ ಚಿತ್ರದಲ್ಲಿ ಡ ಮರು, ಮೃದಂಗ, ತಾಳ, ಬಾರಿಸುವ ಮೇಳವಿ ಲಕ್ಷ್ಮಿಲಿಂಗನ ಗುಡಿಯಲ್ಲಿ ಶಿವಲೀಲೆ, ದಶಾವತಾರಗ ಲ್ಲದೆ ಭಾಜನ ಮೇಳದೊಡನೆ ಗಣಪತಿಯೂ ನಾಟ್ಯಭಂ ಯೊಡನೆ ಕುಣಿಯುತ್ತಿದ್ದಾನೆ. ಪ್ರಾಕೃತ ಕವಿ 'ಕುತ ಹಲ'ನ 'ಲೀಲಾವತೀ' ಗ್ರಂಥವೊಂದನ್ನು ಬಿಟ್ಟರೆ ಯಾ ಕವಿಯೂ ತಮ್ಮ ಕಾವ್ಯಗಳಲ್ಲಿ ಗಣಪತಿ ಕುಣಿದದ್ದನ ವರ್ಣಿಸಿರುವುದಿಲ್ಲ. ಲೀಲಾವತಿ ಗ್ರಂಥವನ್ನು ಬೆಳಕಿ ತಂದ ಡಾ. ಎ. ಎನ್. ಉಪಾಧ್ಯ ಅವರು ಕವಿ ಕುತ ಹಲನು ತಂಜಾವರ ಭಾಗದವನೆಂದು ಹೇಳಿದ್ದಾರೆ. ಯ ಗಾನ ತಜ್ಞರು ಯಕ್ಷಗಾನದ ಬೆನ್ನುರಿ. ಕವಿ ಕುತೂ ಲನು ತಂಜಾವರ ಭಾಗದವನಾಗಿದ್ದುದರಿಂದ ಯಕ್ಷಗಾ ವನ್ನು ನೋಡಿರಬೇಕು. ಅದರಲ್ಲಿಯ ಕುಣಿತದ ಪ್ರಭಾ ಅವನ ಮೇಲೆ ಬಿದ್ದು ತನ್ನ ಕಾವ್ಯದಲ್ಲಿ ಡೊಳ್ಳಹೊಟ್ಟೆಂ ಗಣಪನನ್ನು ಕುಣಿಸಿರಬಹುದೇ? ಈ ಕವಿಯ ಕಾಲವನ ಗ್ರಂಥಕರ್ತರು ಕ್ರಿ. ಶ. ೧೪ ರಿಂದ ೧೫ನೆಯ ಶತಮಾನ ವರೆಗೆ ಎಳೆದಿದ್ದಾರೆ. ಕಲ್ಲಲ್ಲಿ ಚಿತ್ರಕಲೆಯಾಗಿ ಬಂದ ಭಾಜನೆ ಮೇಳಗಳ ಕೇವಲ ಭಾಜನೆಯಿರದೆ, ಗಾ ದೊಡನೆ ಸಂಗೀತ ತುಂಬಿರಬೇಕೆಂದು ಪ್ರೇಕ್ಷಕರ ಹೇಳದಿರವು. ಭಾಜನೆಗಬ್ಬಗಳು ಕಲ್ಲಲ್ಲಿ ಚಿತ್ರ ಕ ಯಾಗಿ ಮೂಡಿರಬೇಕಾದರೆ ಅವು ಜನಪದವಲ್ಲಿ ಖ್ಯಾ ವೆತ್ತವುಗಳಾಗಿದ್ದುವಲ್ಲದೆ ಕನ್ನಡಿಗರು ತಮ್ಮ ಪ್ರಫುಲ್ಲ ಕಲೆಯನ್ನು ಕಲ್ಲಲ್ಲಿ ಕೆತ್ತಿ ಉಳಿಸಲು ಪ್ರಯತ್ನ ಮಾಡಿ ವರೆಂದು ಹೇಳದಿರವು- ಕ್ರಿ. ಶ. ೫ ಮತ್ತು ೫ ನೆಯ ಶತಮಾನಗಳ ಹಿಂದೆಯೇ ಕನ್ನಡ ಜನಪದದಲ್ಲಿ ಭಾಜ

ಗಬ್ಬಗಳು ಜನರ ಮೆಚ್ಚುಗೆಯನ್ನು ಪಡೆದಿದ್ದುವೆಂದು ಹೇಳಬಹುದು.

೯ ನೆಯ ಶತಮಾನದ ಕನ್ನಡ ಮೊದಲು ಕವಿ ನೃಪತುಂಗನು ಹೇಳುವ ಭಾಜನೆಗಬ್ಬಗಳು ಕೇವಲ ಹಳ್ಳಿಗರ ಸೊತ್ತೇ ಎಂದು ಹೇಳಬಹುದು. ಆದುದರಿಂದ ಅವುಗಳನ್ನು ಬಲು ಹುಮ್ಮಸದಿಂದ ಹಳ್ಳಿಗರು ತಮಗೆ ಬೇಕಾದಾಗ ಜನತೆಗೆ ಹಾಡಿ, ಆಡಿ ತೋರಿಸಿ ತಣಿಯುತ್ತಿದ್ದರು; ತಣಿಯುತ್ತ ಬಂದರು. ಗಾವಿಲರ ಕಾವ್ಯಗಳನ್ನು ಆವ ಪಂಡಿತನೂ ಮೆಚ್ಚಿದಂತೆ ಕಾಣುವುದಿಲ್ಲ. ಅಲ್ಲದೆ ಅವುಗಳನ್ನು ಅನೇಕ ಕವಿಗಳು ತಮ್ಮ ಕಾವ್ಯಗಳಲ್ಲಿ ಹೀಯಾಳಿಸಿ ಅಲ್ಲಗಳೆದಿದ್ದಾರೆ.

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕಕೃತಿಯಂ ಕ್ಷಿತಿಯೊಳ್ |
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯೋ ಬೀದಿವರೆಯ ಬೀರನ ಕತೆಯೊ ?||

ಎಂದು ಮಧುರ ಕವಿಯು 'ಗೊರವರ ಡುಂಡುಚಿ'ಗೆ ಹಾಗೂ 'ಬೀದಿವರೆಯ ಬೀರನಕತೆ'ಗೆ ಹಾಸ್ಯಮಾಡಿದ್ದಾನೆ. ಈ 'ಬೀದಿವರೆಯ ಬೀರನ ಕತೆಯೇ' ನಮ್ಮ ಹಳ್ಳಿಗರು ಮೆಚ್ಚಿ, ಜನತೆಗೆ ಹಾಡಿ, ತೋರಿಸಿದ ಒಂದು ಭಾಜನೆಗಬ್ಬ. ಅದೇ ಮುಂದೆ ಬರಬರುತ್ತ ರೂಪಾಂತರಿಸಿ ಇಂದಿನಮಗೆ ಬಯಲಾಟವಾಗಿ ಉಳಿದು ಬಂದಿದೆ.

ಹನ್ನೆರಡನೆಯ ಶತಮಾನವು ಕನ್ನಡ ಜನಜೀವನದಲ್ಲಿಯೇ ಮಹಾಕ್ರಾಂತಿಯ ಕಾಲ. ಧರ್ಮ ಸಾಹಿತ್ಯ ಜನಜೀವನದ ವಿವಿಧ ಕ್ಷೇತ್ರಗಳಲ್ಲಿಯೂ ಕ್ರಾಂತಿಯಾಗಿ ಏಲಾವಣೆಗಳು ತಲೆಯೆತ್ತಿದುವು. ಧರ್ಮಕ್ಕಾಗಿ ಶಿವಶರಣರೂ ವೈಷ್ಣವರೂ ಹಾಡಿ ಆಡಿ ಕುಣಿದರು. ಶಿವಶರಣರಲ್ಲಿ ಜಾತಿಗ (ಬಹುರೂಪಿ)ರ ಚೌಡಯ್ಯನು ಶಿವಲೀಲೆಗಳರೂಪ ಹಾಕಿ, ಹಾಡಿ ಆಡಿ ಕುಣಿಯುತ್ತಿದ್ದನೆಂದು ಶಿವಶರಣರ ಚರಿತೆಗಳಿಂದ ವಿಶದವಾಗುವುದು. ಚೌಡಯ್ಯನ ಖ್ಯಾತಿಯನ್ನು ಕೇಳಿದ ದೇವದಾಸ (ವೈಷ್ಣವ)ರ ಅಚ್ಯುತನೆಂಬವನನು ಬಯಲಲ್ಲಿ ಹಾಡಿ; ಆಡಿ ಕುಣಿಯಲು ಚೌಡಯ್ಯನೊಡನೆ ಪಣಕಟ್ಟಿದ್ದು ಚೌಡಯ್ಯನ ಚರಿತೆಯಲ್ಲಿ ಬರುವುದು. ಇಬ್ಬರೂ ಪಣಕಟ್ಟಿ ಕುಣಿದದ್ದನ್ನು ಚೌಡಯ್ಯನ ಹಂತಿಯ ಹಾಡಿನಲ್ಲಿ ಕಾಣಬಹುದು.

ಭರತವಿದ್ದೆಯ ಕಲಿತು, ಸರಿತು ಬಲ ನಿಪುಣಾದ
ಹರನೆಂದು ಹಾಡಿ ವೈಮರೆತು, ಚೌಡಯ್ಯ
ಅರಿತು ಕುಣಿಯುವನು ಶಿವಲೀಲೆ ||

ಛಪ್ಪನ್ನ ದೇಶದಲಿ, ಒಪ್ಪಿದರು ಜಾತಿಗರು
ತಪ್ಪದಲೆಕಲಿತು ಕುಣಿಯುವದಕೆ | ಶಿವರೂಪ
ಬೆಪ್ಪಾಯ್ತು ಜಗವು ಶರಣರಿಗೆ ||

ಕುಣಿಯುವದೆ ಕಾಯಕವು, ತಣಿಯುವದೆ
ದಾಸೋಹ
ತಣಿದ ಜಂಗಮರ ಶಿವಕೂಟ, ಚೌಡನಿಗೆ
ಗಣಶಿವನು ಕುಣಿವ ಶಿವಲೋಕ ||

ಆಡಿದನು ಬಹುರೂಪ, ನೋಡಿ ಭಕ್ತರು ಮೆಚ್ಚಿ
ನೀಡಿದರು ಜನರು ಧನಮನವ | ಚೌಡಯ್ಯ
ಮಾಡುತಲಿ ನಿತ್ಯದಾಸೋಹ ||

ಹೀಗೆ ಚೌಡಯ್ಯನು ಹಾಡಿ ಕುಣಿಯುವುದು ಅವನ ಕಾಯಕವಾಗಿತ್ತು.

ಕೊಟ್ಟಗಿರಿ ಅಚ್ಯುತನು, ಅಟ್ಟವೇರಿದನಂದು
ಪಟ್ಟಣದ ರಾಯ ನೆರವಿತ್ತು | ವಾದಿಗಳ
ಬಿಟ್ಟಿಟ್ಟು ಕರೆವ ಕುಣಿಯುದಕೆ ||

ನಟ ರಾಯತಾನೆಂದು, ಕಟುಮದವು ಅಚ್ಯುತಗೆ
ನೆಟಿಮಾತು ಕೇಳಿ ಚೌಡಯ್ಯ | ಕಾಯಕವು
ದಿಟವೆಂದು ಕುಣಿದು ತೋರಿಸಲು ||

ಆಟಮೇಳಗಳೊಡನೆ, ಮೇಟಿ ಹುದ್ದರಿಯಾಗಿ
ದಾಟಿ ಗಡಿ ಹೊಕ್ಕು ಕೊಟ್ಟಗಿರಿ | ಪುರಪೋಳಗೆ
ಕೂಟಕೂಡಿಸಿದ ಕುಣಿಯುದಕೆ ||

ಆಡಿದನು ಶಿವಲೀಲೆ, ನಾಡೆಲ್ಲ ಹೂವಾಯ್ತು
ಮೂಡಿ ಶಿವಭಕ್ತಿ ಹಣ್ಣಾಯ್ತು | ಶಿವನುಡಿಯು
ಕೋಡಿರನಹರಿದು ಜನ ಕುಡಿದು ||

ಈ ಪ್ರಕಾರ ಬಸವಾದಿ ಪ್ರಮಥರ ಕಾಲದಲ್ಲಿ ಶಿವಶರಣರೂ ದೇವದಾಸ (ವೈಷ್ಣವರೂ) ಆಟದ ಮೇಳಗಳನ್ನು ಕಟ್ಟಿಕೊಂಡು ಊರಿಂದೂರಿಗೆ ತಿರಗುತ್ತಿದ್ದರೆಂದು ತಿಳಿದು ಬರುವುದು. ಚೌಡಯ್ಯನಿಗೂ ಅಚ್ಯುತನಿಗೂ ಬಿದ್ದ ಪಣವಂತೂ ಗಮನಾರ್ಹವಾಗಿದೆ. ಕೊಟ್ಟಗಿರಿಯಲ್ಲಿ ಚೌಡಯ್ಯನು ಹಾಡಿ, ಆಡಿ ಕುಣಿಯ ಹತ್ತಲು ಕೇಳಿದ ಅಚ್ಯುತನು.

ಅಚ್ಚುತನು ತಾ ಕೇಳಿ, ಕಿಚ್ಚಾಗಿ ಹಟತೊಟ್ಟ
ಕಟ್ಟಿ ಕೆಡಹುವೆನು ಕುಣಿತದೊಳು। ಚೌಡನಿಗೆ
ರೊಚ್ಚಿದ್ದು ಸಿಂಹ ಜಿಗಿದಂತೆ॥

ಅರಸನಿಗೆ ಅಚ್ಚುತನು, ಕರೆಸೆಂದ ಚೌಡನಿಗೆ
ನೆರಸೆಂದ ಸಾರಿ ಡಂಗುರವ, ಪುರದೊಳಗೆ
ಇರಸೆ ಚಿತ್ತಿಂದ ಕುಣಿಯುವಕೆ॥

ಅರಸನಂಗಳ ಮುಂದೆ, ಸರಸಿಕೂಡಿತುಕೇಳೊ
ಪರಭಕ್ತ ಚೌಡ ಅಚ್ಚುತರು। ಕುಣಿಯುವಕೆ
ತರತರದರೂಪ ತೊಟ್ಟಿದ್ದು॥

ಧಿಮ್ಮಯ್ಯ ಧಿತ್ತಯ್ಯ, ದಮ್ಮಡಿಯುಧಮ್ಮೆಂದು
ದಿಮ್ಮ ಕಣಕಣಸಿ ಕುಣಿತದೊಳು। ಜೈಯಾಕ-
ಝುಮ್ಮೆಂದು ನುಡಿಯೆ ಜನತುಂಬಿ॥

ಅಡಿದರು ಅಚ್ಚುತನು, ಚೌಡಯ್ಯರೂಪಗಳ
ನೋಡಿ ಜಗವೆಲ್ಲ ಬೆರಗಾಯ್ತು। ಅಚ್ಚುತನು
ಆಡಿತೋರಿಸಿದ ದಶರೂಪ॥

ಕುಣಿದ ರೂಪಗಳುಟ್ಟು, ದಣಿದು ಹಾಡಿದಚೌಡ
ದಣಿವೆ ಕಾಯಕವು ಶರಣರಿಗೆ। ದಿನಮಣಿಗೆ
ಪಣವ ಈ ಜಗವ ಬೆಳಗುದಕೆ॥

ಕೋಣೋಡಿ ಬಲುಡಣಿದು, ಊನಾಗಿ ಬೀಳ್ವಂತೆ
ಜಾಣತಾನೆಂಬ ಹೆಮ್ಮೆಯಲಿ। ಅಚ್ಚುತನು
ಗೋಣುಕೆಳಗಾಗಿ ನೆಲಕುರುಳಿ॥

ಸೋತ ಅಚ್ಚುತನೆದ್ದು ನೀತಿಯಲ್ಲಿ ಮಾತಾಡಿ
ಜ್ಯೋತಿ ಸೀಗುರುವು ಚೌಡಯ್ಯ। ಕೈಮುಗಿದು
ಜೀತೆಂದು ಮೇಳ ಸೇರಿದನು॥

ಹೀಗೆ ಜನ ಸಂದಣಿಯಲ್ಲಿ ಅಚ್ಚುತನು ಸೋತು ಚೌಡಯ್ಯನ ಮೇಳ ಸೇರಿದನೆಂದು ಬರುವುದು. ಅರಸನಂಗಳ ಅಟ್ಟವನ್ನು ಕಟ್ಟಿ ಈ ಹಾಡು, ಕುಣಿದಾಟಗಳು ಬಯಲಲ್ಲಿಯೇ ನಡೆಯುತ್ತಿದ್ದುವೆಂದು ವಿಶದವಾಗುವುದು. ಈ ಎಲ್ಲ ಪದ್ಯಗಳು ಶಿವಶರಣರ ಕಾಲದಲ್ಲಿ ಬಯಲಾಟವು ಪರಿಪಾಠದಲ್ಲಿತ್ತೆಂದು ಹೇಳದಿರವು. ನಮಗೆ ದೊರೆಯುವ ಶಿವಪಾರಿಜಾತವು ಶಿವನಲೀಲೆಗಳನ್ನೊಳಗೊಂಡಿದ್ದು ತಾಳರಾಗಗಳ ಸಂಗೀತ ಸಂಕಲನವೇ ಆಗಿದೆ. ಅದರೊಳಗೆ ಬರುವ ಹಲಕೆಲವು ಸಂಕೇತಗಳ ಮೇಲಿಂದ ಅದು ಶಿವಶರಣ ಚೌಡಯ್ಯನ ದಿರಬಹುದೆಂದು ಶಂಕಿಸಲಾಗಿದೆ.

ಪಂಡಿತ-ಮಹಾಕವಿ ಚಾಮರಸನು ಪ್ರಭುಲಿಂಗಲೀಲೆಯಲ್ಲಿ

ನಾಟನಲಿದುದು ಚಿತ್ರವೀನಟ-
ನಾಟಕನ ಸಿಕ್ಕಿಸುವ ಬಗೆಯಲಿ
ಮಾಟ ನುಕರಿಸಿ ಕಾಣಲಾದುದು ಮತ್ತೆ
ಮಾಯೆಯಲಿ ॥೩೬॥
॥ಆ-೭-ಪದ್ಯ. ೩೬॥

ಸಾಕೆನುತ ನಟ್ಟುವಿಗತನವನು
ನೂಕುತಲಿ ಮದ್ದಳೆಯ ತಾನೊಡ
ಹಾಕಿ-ನಗುತಲಿ ಹೋದನಲ್ಲಮನಖಿಳ
ಜಗವರಿಯೆ ॥೭-೩೭॥
॥ಆ ೭. ಪ. ೩೭॥

'ನಟನಾಟಕನ' ಶಬ್ದವು ಹಾಡಿ-ಆಡಿ ಕುಣಿಯುವವನೆಂಬರ್ಥವನ್ನು ಸೂಚಿಸದಿರದು. 'ನಟ್ಟುವಿಗತನವನು' ಈ ಶಬ್ದವು ನಾಟ್ಯ ಶಿಕ್ಷಕತನ ಅಥವಾ ಹಾಡಿ-ಆಡಿ-ಕುಣಿಯಲು ಕಲಿಸುವುದೆಂಬರ್ಥವಾಗುವುದು. ಅಲ್ಲದೆ ಚಾಮರಸನು 'ಕಡೆಯಾಟ' ಮೊದಲಾದ ಶಬ್ದಗಳನ್ನು ಪ್ರಭುಲಿಂಗಲೀಲೆಯಲ್ಲಿ ಬಳಸಿಕೊಂಡಿದ್ದಾನೆ.

ವಿಜಯ ನಗರದ ಅರಸರ ಕಾಲದಲ್ಲಿ ಬಯಲಾಟಗಳಾಗುತ್ತಿದ್ದವೆಂದು ಹಲ ಕೆಲವು ಹಾಳು ನಿದರ್ಶನಗಳಿಂದ ಅರಿಯಬಹುದಾಗಿದೆ. ವಿಜಯನಗರದ ಹಾಳು ದರ್ಶನದಲ್ಲಿ ಈಗಲೂ ನಾವು 'ಬನ್ನಿಯದಿಬ್ಬ'ವನ್ನು ಕಾಣಬಹುದು. ಈ ದಿಬ್ಬದ ಮೇಲೆ ಬನ್ನಿಯ ಹಬ್ಬದಲ್ಲಿ ವಿವಿಧ ವಿನೋದಾವಳಿಗಳಾಗುತ್ತಿದ್ದುವೆಂದು ಇತಿಹಾಸದಿಂದ ತಿಳಿದುಬರುವುದು. ಕಿತ್ತೂರ ಆಸ್ಥಾನ ಕವಿಗಳು ಹಾಡುಗಬ್ಬಗಳನ್ನು, ಭಾಜನೆ ಗಬ್ಬಗಳನ್ನು ಬರೆದರು. ಇವರ ಕಾಲದಲ್ಲಿ ಕನ್ನಡ ಸಾಹಿತ್ಯವು ಜನವಾಣಿಯಾಗಿ ಸಾಮಾನ್ಯ ಜನರ ಕೈಸೇರಿತು. ಕಿತ್ತೂರರಸರು ಬಯಲಾಟಗಳನ್ನಾಡಿಸುತ್ತಿದ್ದರೆಂದು ಕಿತ್ತೂರ ಕಿಲ್ಲೆಯಲ್ಲಿಯ ಆಟದಕಟ್ಟೆಯ ಅವಶೇಷಗಳು ಹೇಳದಿರವು.

ಸಂಸ್ಕೃತ ನಾಟಕಗಳಲ್ಲಿ ನಾಟಕ; ರೂಪಕ; ಪ್ರಕರಣ, ತ್ರೋಟಕ ಮೊದಲಾದ ಪ್ರಕಾರಗಳಿದ್ದಂತೆ ಕನ್ನಡ ಬಯಲಾಟದಲ್ಲಿಯೂ ನಾವು ವಿವಿಧ ಪ್ರಕಾರಗಳನ್ನು ಕಾಣಬಹುದು. ಮೂಡಲಪಾಯ, ಯಕ್ಷಗಾನ, ಕಾದ

ಪೊಳ್ಳಿಧರತಿ, ಮತ್ತು ಹೊಸಧರತಿ (ಹೊಸಖ್ಯಾಲ) ಇವು ಇಲ್ಲಿಯ ವರೆಗೆ ದೊರೆಯುವ ಬಯಲಾಟಗಳ ಪ್ರಕಾರ ಗಳಾಗಿವೆ. ಸಂಸ್ಕೃತ ನಾಟಕದಂತೆ ಕನ್ನಡ ಬಯಲಾಟ ದಲ್ಲಿಯೂ ವಸ್ತು ನೇತಾ-ರಸಾದಿಗಳನ್ನು ನಾವು ಕಾಣ ಬಹುದು. ಹೀಗೆಂದ ಪಕ್ಷಕ್ಕೆ ಕನ್ನಡ ಬಯಲಾಟವು ಸಂಸ್ಕೃತ ನಾಟಕದ ಕೇವಲ ಅನುಕರಣವೆಂದಲ್ಲ. ಕಥೆಗೆ 'ವಸ್ತು' ಬೇಕಾಗುವಂತೆ ಕಥೆಯನ್ನೊಳಗೊಂಡು ಕನ್ನಡ ಬಯಲಾಟಕ್ಕೂ 'ವಸ್ತು' ಬೇಕಾಯಿತು. ಬೀಜ-ಬಿಂದು-ಕಾರ್ಯಭರಿತವಾದ ಕಥಾವಸ್ತು ಸೋಗು ಕಥಾ ಸರಣಿಯೊಂದಿಗೆ ಕನ್ನಡ-ತನದಲ್ಲಿಯೇ ಮೂಡಿ ಕನ್ನಡ ಬಯಲಾಟವಾಯಿತು. ಮುಂದೆ ಅದರ ಮೇಲೆ ಸಂಸ್ಕೃತ ನಾಟಕದ ಪ್ರಭಾವವು ಬಿದ್ದರೂ ಬಿದ್ದಿರಬಹುದು. ಮೊದಲು ಮಾತ್ರ ಅದರಲ್ಲಿ ಕನ್ನಡತನವಿದ್ದಿರಬಹುದೆಂದೇ ಹೇಳಬಹುದು.

ಕನ್ನಡ ಬಯಲಾಟದಲ್ಲಿ ಮುಖ್ಯವಾಗಿ ಎರಡು ವಾದ್ಯಗಳು ಬಳಸಲ್ಪಡುತ್ತವೆ. ಒಂದು ಲೋಹವಾದ್ಯ, ಇನ್ನೊಂದು ಚರ್ಮವಾದ್ಯ-ಜಾಂಗುಟೆ, ತಾಳ, ಜಿಳ್ಳಂಕ, ಮೊದಲಾದುವುಗಳೇ ಲೋಹವಾದ್ಯಗಳು. ಮದ್ದಲೆ, ಮೃದಂಗ, ಡೋಲು ದಪ್ಪು ಮೊದಲಾದವುಗಳೇ ಚರ್ಮ ವಾದ್ಯಗಳು. ಲೋಹವಾದ್ಯದೊಡನೆ ಚರ್ಮವಾದ್ಯದ ಸಮ್ಮೇಳವು ಯಾವಾಗಲೂ ಇರುವುದು. ಹೆಚ್ಚಾಗಿ ಯಕ್ಷಗಾನದಲ್ಲಿ ಕುಣಿತಗಳಿಗೆ ಪ್ರಾಧಾನ್ಯತೆ ಹೆಚ್ಚು. ಅಲ್ಲಿ ತಾಳ, ಗತಿ, ಮದ್ದಲೆಯ ಏರಿಳಿತಗಳೊಡನೆ ಕುಣಿತಗಳ ಥಕ-ಥೈ ನಡೆಯುವುದು. ಮೂಡಲಪಾಯದಲ್ಲಿ ಸಂಗೀತಕ್ಕೆ ಪ್ರಾಧಾನ್ಯತೆ ಹೆಚ್ಚು. ಕುಣಿತವು ಜನರ ಬೇಸರ ನೀಗಲು ಬರುವುದು. ಕಥಕ್ಕಲಿಯ ಹಾವ ಭಾವಗಳು ನಾನಾ ಭಂಗಿಗಳೊಡನೆ ಒಡಮೂಡಿ ರಂಗ ಭೂಮಿಯು ಬಲು ಮನರಂಜಕವಾಗಿ ಕಾಣುವುದು. ಈ ಎರಡರಲ್ಲಿಯೂ ಕೋಚಿನೊಡನೆ ಕನ್ನಡ ಸಂಗೀತವನ್ನು ನಾವು ಕೇಳಬಹುದು. ಮೂಡಲಪಾಯದಲ್ಲಿ 'ಕೋಜೀ' ರಂಗಭೂಮಿಗೆ ಕಳೆತರುವುದು. ನಟ್ಟುವಿಗ (ಕಥೆಗಾರ)ನು ರಾಗ ರಾಗಿಣಿಗಳನ್ನು ಸಪ್ತತಾಳ, ಪಂಚ-ಜಾತಿಗಳಲ್ಲಿ ಹಾಡುವನಲ್ಲದೆ ಕನ್ನಡ ಕಂದ, ತ್ರಿಪದಿ, ಸಾಂಗತ್ಯ, ಶೀಸಪದ್ಯ, ಚಾಟಪದ್ಯ ಮೊದಲಾದುವುಗಳನ್ನು ಆಲಾಪ ದೊಡನೆ ಹಾಡಿ ಜನರನ್ನು ಬೆರಗುಮಾಡುವನು. ನಾ-ಕಂಡ ಕನ್ನಡ ಬಯಲಾಟಗಳ ವಿವಿಧರೂಪಗಳನ್ನು ಸವಿಸ್ತಾರವಾಗಿ ಕೆಳಗೆ ತೋರಿಸಲಾಗಿದೆ.

(ಮುಂದುವರೆಯುವದು)

ಜೀವನ ಶಿಕ್ಷಣ ವಾರ್ತೆಗಳು

ಟ್ರೇನಿಂಗ ಕಾಲೇಜಗಳಲ್ಲಿಯ ಸಮವಾಯ ಶಿಕ್ಷಣಕ್ಕೊಂದು ಹೊಸದೃಷ್ಟಿ

ಅನುವಾದಕರು : ಶ್ರೀ ತಟ್ಟಿ ಶ್ಯಾಮರಾಯರು, ಧಾರವಾಡ.

ಭಾಗ ೧

ಟ್ರೇನಿಂಗ ಕಾಲೇಜಗಳ ಅಭ್ಯಾಸ ಪತ್ರಿಕೆಯಲ್ಲಿ ವಿದ್ಯಾರ್ಥಿ ಶಿಕ್ಷಕರು ಕೆಲವು ಸಮವಾಯ ಪಾಠಗಳನ್ನೂ ಕೆಲವು ಸಾದಾ ಪಾಠಗಳನ್ನೂ ಕೊಡಬೇಕೆಂದು ಹೇಳಿದೆ. ಈ ಒಂದನೆಯ ಪ್ರಕಾರದ ಪಾಠಗಳಲ್ಲಿ ಯಾಗಲಿ ಎರಡನೆಯ ಪ್ರಕಾರದ ಪಾಠಗಳಲ್ಲಿಯಾಗಲಿ ಯಾವವೂ ಸ್ವಾಭಾವಿಕವಾಗಿ ಮುಂದುವರಿದ ಒಂದು ಅನುಕ್ರಮವನ್ನು ಹಿಡಿದಿರುವದಿಲ್ಲ. ಎರಡೂ ಪ್ರಕಾರದ ಪಾಠಗಳು ಜೀವನ ಶಿಕ್ಷಣ ಶಾಲೆಯಲ್ಲಿ ಅಲ್ಲೊಂದು ಇಲ್ಲೊಂದು

ವಿಷಯವನ್ನು ಆರಿಸಿಕೊಂಡು ಕೊಟ್ಟ ಪಾಠಗಳೇ. ಜೀವನ ಶಿಕ್ಷಣ ಶಾಲೆಯಲ್ಲಿಯ ಈ ಎರಡೂ ಪ್ರಕಾರದ ಪಾಠಗಳನ್ನು ಸಮನ್ವಿತವೆಂದೂ ಅಸಮನ್ವಿತವೆಂದೂ ಕಲ್ಪಿಸುವದೇ ಕಷ್ಟ. ಮನುಷ್ಯನ ಜೀವನಕ್ಕೂ ಶಾಲೆಗಳಲ್ಲಿಯ ಶಿಕ್ಷಣಕ್ಕೂ ಸಮನ್ವಯವನ್ನು ಉಂಟುಮಾಡುವದೇ ಜೀವನ ಶಿಕ್ಷಣದ ಮೂಲಭೂತವಾದ ತತ್ವವಾಗಿದೆ. ಈ ಜೀವನದಲ್ಲಿ ನೆನೆಹೋಪೆಯಲ್ಲಿ ಕೈಕೊಳ್ಳಲಾದ ಮುಲೋದ್ಯೋಗವು ಒಂದಂಗವಾಗಿದೆ. ಇದು ನಿಜವಾದರೆ ಜೀವನ ಶಿಕ್ಷಣ ಶಾಲೆಯಲ್ಲಿ ಅಸಂಬಂಧೀಕೃತ ಶಿಕ್ಷಣವಿರುವದೆಂದು ಹೇಳುವದು ಹೇಗೆ? ಈ ಸಮನ್ವಿತ ಹಾಗೂ ಸಾದಾ ಪಾಠಗಳ ವಿಚಾರವು ಸಮವಾಯ ಪಾಠದ ತಂತ್ರವೆಂದು ಹೇಳಲಾಗುವ ಕಟ್ಟುನಿಟ್ಟಿನ ತಂತ್ರದ ಮೇಲೆಯೇ ನಿಂತಿರುತ್ತದೆ. ಸಮವಾಯ ಪಾಠದ ಕೇಂದ್ರ ಸ್ಥಾನದಲ್ಲಿ ಒಂದು ಚಟುವಟಿಕೆ, ಒಂದು ಕೃತಿ ಇರಲೇಬೇಕೆಂದು ಇದರಿಂದ ಹೇಳಲಾಗುತ್ತಿದೆ— ಕೃತಿ ರಹಿತವಾದ ಪಾಠವು ಸಮವಾಯ ಪಾಠವೇ ಅಲ್ಲವೆಂದು. ಇದು ಸಂಪೂರ್ಣ ಸತ್ಯವಲ್ಲ. ಪ್ರತಿಯೊಂದು ಪಾಠದಲ್ಲಿ ಕೃತಿಯು ಇರಲಾರದು; ಇದು ಅಸಾಧ್ಯವು. ಕೃತಿಯುಳ್ಳ ಕೆಲವು ಪಾಠಗಳು ಇರುವವು; ಆದರೆ ಬಹುಸಂಖ್ಯಾಕವಾದ ಪಾಠಗಳು ಈ ಕೃತಿಗೆ ಸಿದ್ಧತೆಯನ್ನು ಮಾಡುವಂಥವಿರುವವು; ಈ ಕೃತಿಯಿಂದ ಪಡೆದ ಜ್ಞಾನವನ್ನು ಗಟ್ಟಿಮಾಡುವಂಥವಿರುವವು. ಈ ಎಲ್ಲ ಪಾಠಗಳನ್ನು, ವರ್ಗದ ಕೋಣೆಯಲ್ಲಿ ವರ್ಗ ಶಿಕ್ಷಣದ ಪಾಠ ಕ್ರಮದಿಂದ ಕಲಿಸಿದರೂ, ಸಮವಾಯ ಪಾಠಗಳೆಂದೇ ವರ್ಗೀಕರಿಸಬಹುದು. ಒಂದು ಕೃತಿ ಮೂಲ ಪಾಠವು ಅದಕ್ಕೆ ಸಂಬಂಧಿಸಿದ ಅನೇಕ ಸಾಮಾನ್ಯ ಪದ್ಧತಿಯ ಪಾಠಗಳಿಗೆ ಹಾದಿಮಾಡುವದು; ಇವೆಲ್ಲವೂ ಸಮವಾಯ ಪಾಠಗಳ ಗುಂಪಿಗೆ ಸೇರುವವು. ಅಂತೂ ಸಮವಾಯ ಶಿಕ್ಷಣವು ಸಾಮಾನ್ಯಪದ್ಧತಿಯ ಪಾಠಗಳನ್ನೂ ಒಳಕೊಳ್ಳುವದು— ಕೃತಿಯು ಹಿನ್ನೆಲೆಯಲ್ಲಿ ಇಷ್ಟೇ ಇರುವದು.

ಮೇಲಿನ ವಿಧಾನವನ್ನು ಸ್ಪಷ್ಟಪಡಿಸುವದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಹುಡುಗರು ಕಾಯಿಪಲ್ಯದ ತೋಟದಲ್ಲಿ ಮಡಿಗಳನ್ನು ತಯಾರಿಸುತ್ತಾರೆಂದು ತಿಳಿಯೋಣ. ಮಡಿಮಾಡಲಿಕ್ಕೆ ಸಿಕ್ಕುವ ಕ್ಷೇತ್ರವನ್ನು ಅವರು ಅಳತೆಮಾಡಬೇಕಾಗುವದು, ಕ್ಷೇತ್ರಫಲವನ್ನು ತೆಗೆಯಬೇಕಾಗುವದು, ಮಡಿಗಳನ್ನು ಬೇರೆ ಬೇರೆ ವಿಂಗಡಿಸುವದು, ಇತ್ಯಾದಿ. ಪ್ರತ್ಯಕ್ಷ ತೋಟದಲ್ಲಿ ಕೆಲಸವನ್ನು ಕೈಕೊಳ್ಳುವ ಪೂರ್ವದಲ್ಲಿ ಹುಡುಗರಿಗೆ ಅಳತೆಮಾಡುವದರ ಕಲ್ಪನೆ, ಕ್ಷೇತ್ರಫಲದ ಕಲ್ಪನೆಯನ್ನು ಮಾಡಿಕೊಡುವದಕ್ಕಾಗಿ ಕೆಲವು ಪಾಠಗಳು ಅಪೇಕ್ಷಿತವಾಗಿವೆ. ಇವನ್ನು ವರ್ಗದ ಕೋಣೆಯಲ್ಲಿಯೇ ತಕ್ಕೊಳ್ಳಲಾಗುವದು; ಏಕೆಂದರೆ ಮುಂದೆ ಬರುವ ಕೆಲಸಕ್ಕಾಗಿ ಅವು ಬೇಕಾಗುವವು. ಈ ಎಲ್ಲ ಪಾಠಗಳನ್ನು ಕೃತಿಯು ಹಿನ್ನೆಲೆಯಲ್ಲಿದ್ದ ಸಮವಾಯ ಪಾಠಗಳೆಂದೇ ಎಣಿಸಲಾಗುವದು. ವ್ಯಾಕರಣ ಕಲಿಸುವ ಉದಾಹರಣೆಯನ್ನು ತಕ್ಕೊಳ್ಳಿರಿ. ವಿದ್ಯಾರ್ಥಿಗಳು ರಾಷ್ಟ್ರೀಯ ದಿನವನ್ನಾಚರಿಸಿ ಅದರದೊಂದು ವರದಿಯನ್ನು ವೃತ್ತಪತ್ರಗಳಿಗೆ ಕಳಿಸಲಿಕ್ಕೆಂದು ಸಿದ್ಧಮಾಡುತ್ತಾರೆ. ಅವರ ನಿಬಂಧದಲ್ಲಿ ವ್ಯಾಕರಣದ ಕೆಲವು ತಪ್ಪುಗಳು ಸೇರಿಕೊಂಡಿರುತ್ತವೆ. ಶಿಕ್ಷಕನು ಅವನ್ನು ತಿದ್ದಿ ಸರಿಯಾದ ಮಾತಿನ ರೀತಿಯನ್ನು ತಿಳಿಸಿಹೇಳುವನು. ಕಾರ್ಯಕ್ರಮವನ್ನು ಯಥಾಸ್ಥಿತವಾಗಿ ಪತ್ರಿಕೆಗಳಿಗೆ ನಿವೇದಿಸುವದಕ್ಕೆ ಈ ಪಾಠಗಳು ಅಗತ್ಯವಾಗಿವೆ. ಈ ದೃಷ್ಟಿಯಿಂದ ಅವು ಹಿನ್ನೆಲೆಯಲ್ಲಿದ್ದ ದಿನಾಚರಣೆಯೊಂದಿಗೆ ಸಮವೇತವಾಗಿರುವವು. ಓದುಗರಿಗೆ ಈಗ ನಮ್ಮ ಮನಸ್ಸಿನಲ್ಲಿದ್ದ ಸಮವಾಯ ಪಾಠದ ಸಾಕಷ್ಟು ನಿಚ್ಚಳವಾದ ಕಲ್ಪನೆಯು ಬಂದಿರಬಹುದು— ಕೃತಿಯೊಡನೆ ಪ್ರತ್ಯಕ್ಷ ಸಂಬಂಧವಿದ್ದ ಪ್ರಕಾರ, ಒಂದು ಕೃತಿ, ಚಟುವಟಿಕೆ ಹಿನ್ನೆಲೆಯಲ್ಲಿದ್ದುದರೊಡನೆ ಅಪ್ರತ್ಯಕ್ಷ ಸಂಬಂಧವಿದ್ದ ಪ್ರಕಾರ ಇನ್ನೊಂದು.

ಟ್ರೇನಿಂಗ ಕಾಲೇಜುಗಳಲ್ಲಿ ಪಾಠಗಳನ್ನು ಕೊಡುವ ಹೊಸಉಪಕ್ರಮದಲ್ಲಿ ಸಮವಾಯ ಮತ್ತು ಅಸಮವಾಯ ಪಾಠಗಳಲ್ಲಿರುವ ಈ ಭೇದವನ್ನು ತೆಗೆದು ಹಾಕಲಾಗಿದೆ. ಎಲ್ಲ ಸಂಬಂಧೀಕರಣದ ಪಾಠಗಳೂ ಎರಡರಲ್ಲಿ ಒಂದು ಬಗೆಯವೇ— ಕೃತಿಯು ಪ್ರತ್ಯಕ್ಷವಾಗಿ ಇದ್ದವೂ ಹೌದು, ಅದೂ ಹಿನ್ನೆಲೆಯಾಗಿ ಇದ್ದವೂ ಹೌದು. ಎರಡೂ ವರ್ಷಗಳಲ್ಲಿಯ ಶಿಕ್ಷಕ ವಿದ್ಯಾರ್ಥಿಗಳು ಈಗ ವರ್ಷದಲ್ಲಿ ಇಪ್ಪತ್ತು ಸಮವಾಯ ಪಾಠಗಳನ್ನು ಕೊಡಬೇಕಾಗಿರುತ್ತದೆ. ಇವುಗಳಲ್ಲಿ ಕನಿಷ್ಠ ನಾಲ್ಕು ಪಾಠಗಳಲ್ಲಿ ಕೃತಿಯು ಪ್ರತ್ಯಕ್ಷವಾಗಿ ಸೇರಿರಬೇಕು. ಉಳಿದ ಪಾಠಗಳು ಚಟುವಟಿಕೆಗಳನ್ನು ಆಶ್ರಯಿಸಿಕೊಂಡಿರಬೇಕು— ಸಾಕ್ಷಾತ್ತಾಗಿ

ಚಟುವಟಿಕೆಯು ಅವುಗಳಲ್ಲಿ ಇರಬೇಕಾಗಿಲ್ಲ. ಅವು ಸಾದಾ ಗೆಯವಿರಬಹುದು, ಆದರೆ ಅವು ಮಕ್ಕಳ ಮೂರು ವಿಧದ ಸನ್ನಿವೇಶಗಳಿಂದ— ಔದ್ಯೋಗಿಕ, ಪ್ರಾಕೃತಿಕ ಮತ್ತು ಸಾಮಾಜಿಕ ಸನ್ನಿವೇಶಗಳಿಂದ- ಆಯ್ದುಕೊಂಡ ಚಟುವಟಿಕೆಗಳಿಗೆ ಸಂಬಂಧಿಸಿರಬೇಕು. ಸಾಲೆಗಳಲ್ಲಿಯ ಮಕ್ಕಳ ಕೆಲಸವನ್ನು . ಚಟುವಟಿಕೆಗಳ ಸರಪಣಿಯಂತೆ ಯೋಜಿಸಿ ಸಂಘಟಿಸಬೇಕು— ಒಂದೊಂದು ಚಟುವಟಿಕೆಯ ಸುತ್ತಲೂ ಕಟ್ಟಿದ ಹಲವಾರು ಪಾಠಗಳಿರಬೇಕೆಂದ್ಯು ಸೂಚಿಸುವೆವು. ಶಿಕ್ಷಕ ವಿದ್ಯಾರ್ಥಿಯು ನಾಲ್ಕು ಚಟುವಟಿಕೆಗಳನ್ನು ಆರಿಸಿಕೊಂಡು ಒಂದೊಂದಕ್ಕೂ ನಾಲ್ಕು ನಾಲ್ಕು ಪಾಠಗಳನ್ನು ಹೆಣೆಯಬಹುದು; ಒಮ್ಮೊಮ್ಮೆ ಹೆಚ್ಚು ಪಾಠಗಳನ್ನೂ ಸಂಬಂಧಿಸಬಹುದು— ಇದೂ ಚಟುವಟಿಕೆಯ ಸ್ವರೂಪಕ್ಕೆ ಹೊಂದಿಕೊಂಡಿರುವದು.

ಶಿಕ್ಷಕ ವಿದ್ಯಾರ್ಥಿಗಳು ಕೈಕೊಳ್ಳುವ ಒಂದು ವಾರದ ಸಮಗ್ರ ಕಲಿಸುವಿಕೆಯೂ ಈ ದೃಷ್ಟಿಯಿಂದ ಸಮವಾಯ ಶಿಕ್ಷಣವನ್ನು ಅಭ್ಯಾಸಿಸಲಿಕ್ಕೆ ಒಳ್ಳೇ ಸಂದರ್ಭಗಳನ್ನು ಒದಗಿಸುವದು. ಅವರು ಮೂರು ಸನ್ನಿವೇಶಗಳಿಗೆ ಸಂಬಂಧಿಸಿ ಚಟುವಟಿಕೆಗಳ ಸರಪಣಿಯನ್ನು ಯೋಜಿಸಿ ಒಂದೊಂದು ಚಟುವಟಿಕೆಯ ಸುತ್ತಲೂ ಸಾಮಾನ್ಯ ಪಾಠಗಳನ್ನೂ ಇಟ್ಟುಕೊಳ್ಳಬಹುದು. ಹೀಗೆ ಸಾಲೆಯಲ್ಲಿಯ ಬೋಧನೆಯು ಜೀವನಕ್ಕೂ ಜೀವನದಲ್ಲಿಯ ಔದ್ಯೋಗಿಕ ಮೊದಲಾದ ಸನ್ನಿವೇಶಗಳಿಗೂ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಸಂಬಂಧಿಸುವದರಿಂದ ಈ ಸಂಬಂಧೀಕರಣದಿಂದ ವಿದ್ಯಾರ್ಥಿಗಳಲ್ಲಿ ಸಾಲೆಯ ಶಿಕ್ಷಣದ ವಿಷಯಕ್ಕೆ ಸಕ್ರಿಯ ಪ್ರೇಮವು ಬೆಳೆದು ಬರುವದು.

(೨) ಜೀವನ ಶಿಕ್ಷಣ ಸಾಲೆಗಳಲ್ಲಿ ನಿರ್ಮಿತವಾದ ವಸ್ತುಗಳ ವಿನಿಯೋಗದ ಸಮಸ್ಯೆಗಳು ಜೀವನ ಶಿಕ್ಷಣ ಸಾಲೆಗಳಲ್ಲಿ ಶಿಕ್ಷಕರ ತಲೆತಿನ್ನುತ್ತಿರುವ ಸಮಸ್ಯೆಯೆಂದರೆ ಅಲ್ಲಿ ತಯಾರಾದ ವಸ್ತುಗಳ ವಿನಿಯೋಗ— ವಿಶೇಷತಃ ಅರಿವೆ. ತಮ್ಮಲ್ಲಿ ತಯಾರಾದ ಸಾಮಾನುಗಳಿಗೆ ಗಿರಾಕಿಗಳು ಬಹಳವಾಗಿ ದೊರೆಯದಿರುವದು. ಹೀಗಾಗಿ ಅನೇಕ ಸಾಲೆಗಳಲ್ಲಿ ಮಾರಾಟವಾಗದೆ ಇದ್ದ ವಸ್ತು ಸಂಗ್ರಹವು ಹೆಚ್ಚಾಗಿದೆ. ಆದ್ದರಿಂದ ಈ ಸಮಸ್ಯೆಯನ್ನು ನಾವು ವಿಶೇಷ ಪರಿಶ್ರಮದಿಂದ ಯೋಚಿಸಬೇಕು. ಕೇವಲನೆಯದಾಗಿ ಮಕ್ಕಳು ಸಾಮಾನುಗಳನ್ನು ಮಾಡುವದು ಬೇರೊಂದು ಪೇಟೆಗಾಗಿ ಎಂದು ಹೇಳುವದು ತಪ್ಪು. ಸೇಯ್ನ್ಗಿಯ ಜೀವನ ಶಿಕ್ಷಣ ಸಾಲೆಗಳಲ್ಲಿ ವಿದ್ಯಾರ್ಥಿಗಳು ಬಟ್ಟೆಯನ್ನು ತಯಾರಿಸುವರು. ಈ ಬಟ್ಟೆಯು ಉತ್ಪಾದಕರ ಬೇಡಿಕೆಗೆ ಸಾಕಾಗುವಷ್ಟು ಮಾತ್ರ ಇರುವದು. ಪ್ರಾರಂಭದಿಂದಲೇ ಮಗುವು ಸ್ವಯಂಪರಿಪೂರ್ಣತೆಯ ಕಲ್ಪನೆಗೆ ಅನುಕೂಲ ಪ್ರವೃತ್ತಿಯನ್ನು ಅಳವಡಿಸಿಕೊಳ್ಳಬೇಕು— “ನನಗೆ ಬೇಕಾದ ಬಟ್ಟೆಯನ್ನು ನಾನೇ ಉತ್ಪಾದಿಸುವೆ.” ಇದು ಅವನ ಮಂತ್ರವಾಗಬೇಕು. ಉದ್ಯೋಗಕ್ಕೆ ಸಂಬಂಧಿಸಿದ ಅತನ ಎಲ್ಲ ಚಟುವಟಿಕೆಗಳು ಈ ಗುರಿಯನ್ನಿಟ್ಟುಕೊಂಡಿರಬೇಕು. ತನ್ನ ಹೊರತು ಇನ್ನೊಬ್ಬನು ತೊಟ್ಟುಕೊಳ್ಳುವದಕ್ಕೆ ತಾನು ಅರಿವೆಯನ್ನು ನಿರ್ಮಿಸುತ್ತಿರುವದಿಲ್ಲ. ಈ ಒಂದು ತನ್ನ ಅಗತ್ಯದ ಬೇಡಿಕೆಗೆ ಸ್ವಯಂಪೂರ್ಣನಾಗಬೇಕೆಂಬುದೇ ಆತನ ಬಯಕೆ. ಅರಿವೆಯು ಸಿದ್ಧವಾದಾಗ :ಅದನ್ನು ತನಗಾಗಿ ಉಪಯೋಗಿಸುವನು. ಈ ಭಾವನೆಯಲ್ಲಿ ಒಂದು ಸ್ವಾಭಿಮಾನದ ಜಾಗ್ರತಿಯಿದೆ. ನಮ್ಮ ಶಿಕ್ಷಕರು ವಿದ್ಯಾರ್ಥಿಗಳನ್ನು ಈ ರೀತಿಯಾಗಿ ಪ್ರಚೋದಿಸಲಾರರೇ ? ಹಾಗೆ ಮಾಡಿದ್ದಾದರೆ ಉತ್ಪಾದಿಸಿದ ಅರಿವೆಗೆ ವಿದ್ಯಾಭ್ಯಾಸದಲ್ಲಿ ಒಂದು ನಿರ್ದಿಷ್ಟವಾದ ಪ್ರಚೋಜನವಿದ್ದಂತಾಗುವದು. ತಾನೇ ಅದನ್ನು ತೊಟ್ಟುಕೊಳ್ಳಬೇಕೆಂದು ಮಾಡಿರುವದರಿಂದ ವಿದ್ಯಾರ್ಥಿಯು ಅದನ್ನು ತೆಗೆದುಕೊಳ್ಳುವದರಿಂದ ವಿನಿಯೋಗದ-ಮಾರಾಟದ-ಪ್ರಶ್ನೆಯು ಬಗೆಹರಿದಂತಾಯಿತು. ಬಿಳಿಯ ಖಾದಿಯ ಗಿಡ್ಡ ಚೊಣ್ಣ ಹಾಗೂ ಅಂಗಿ ಇವು ಯಾವ ಸಾಲೆಗಾದರೂ ಸಮವಸ್ತ್ರಕ್ಕೊಂದು ಭೂಷಣವಾಗುವವು. ಈಗ ನಮ್ಮ ಶಾಲೆಗಳು ವಿಪುಲವಾಗಿ ಖಾದಿಯನ್ನು ಉತ್ಪಾದಿಸುತ್ತಿರುವವು; ಆದರೆ ಅದನ್ನು ಹಾಕಿಕೊಂಡ ಮಕ್ಕಳನ್ನು ಕಾಣುವದು ಅಪರೂಪವಾಗಿದೆ. ಮತ್ತು ಉತ್ಪಾದಿಸಿದವನು ಬೇರೆ ವಸ್ತ್ರವನ್ನು ಧರಿಸುವದು— ತಾನು ತಯಾರಿಸಿದ್ದಲ್ಲ— ಹೀಗಾಗಿಬಿಟ್ಟಿದೆ. ಇದು ವಿಚಿತ್ರವೇ ಸರಿ. ವಸ್ತ್ರದ ವಿಷಯದಲ್ಲಿ ಸ್ವಯಂ ಪರಿಪೂರ್ಣತೆಯ ಆದರ್ಶವನ್ನು ನಮ್ಮ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಮುಂದೆ ಇಡಲಾರರೇ ? ಇಟ್ಟರೆ ತಾವು ಮಾಡಿದ ಬಟ್ಟೆಯನ್ನು . ಧರಿಸುವದೊಂದು ವಿಶೇಷ ಮರ್ಯಾದೆಯೆಂದೇ ಅವರು ಭಾವಿಸಲಾರರೇ ?

ಭಾಗ ೨

ಹಿಂದಿನ ನಾಸಿಕ ವಿಭಾಗದಲ್ಲಿಯ ಜೀವನ ಶಿಕ್ಷಣ ಮತ್ತು ಮೂಲೋದ್ಯೋಗ ಶಾಲೆಗಳ ಆಡಳಿತೆಯ ಮತ್ತು ತಪಾಸಣೆಯ ಅಧಿಕಾರಿಗಳ ಸಮ್ಮೇಳನವು ೧೯೫೫ ಜುಲೈ ೧೭ನೇ ಮತ್ತು ೧೮ನೇ ದಿನಾಂಕ ಧುಳಿಯಾದಲ್ಲಿ ಜರುಗಿತು. ಅಲ್ಲಿ ಚರ್ಚಿಸಿದ ಸಂಗತಿಗಳ ವಿವರ:-

ನಾಶಿಕ, ಅಹಮ್ಮದನಗರ, ಠಾಣಾ, ಪೂರ್ವ ಖಾನದೇಶ, ಪಶ್ಚಿಮ ಖಾನದೇಶ ಈ ಐದು ಜಿಲ್ಲೆಗಳಲ್ಲಿಯ ಜೀವನ ಶಿಕ್ಷಣ ಮತ್ತು ಮೂಲೋದ್ಯೋಗ ಶಾಲೆಗಳ ನೇತೃತ್ವ ಹೊಂದಿದ ಜಿಲ್ಲಾ ಸ್ಕೂಲ್ ಬೋರ್ಡ ಹಾಗು ಮುನಸಿಪಲ್ ಸ್ಕೂಲ್ ಬೋರ್ಡುಗಳ ಅಡ್ಮಿನಿಸ್ಟ್ರೇಟಿವ್ ಆಫೀಸರ, ಡೆಪ್ಯುಟಿ ಮತ್ತು ಅಸಿಸ್ಟಂಟ್ ಡೆಪ್ಯುಟಿ ಇನ್ಸ್ಪೆಕ್ಟರರ ಸಮ್ಮೇಳನವು ಧುಳಿಯಾದ ಗರುಡ ವ್ಯಾಯಾಮ ಶಾಲೆಯಲ್ಲಿ ೧೯೫೫ ಜುಲೈ ೧೭ನೇ ಮತ್ತು ೧೮ನೇಯ ದಿನಾಂಕಗಳಲ್ಲಿ ನಡೆಯಿತು. ಪಶ್ಚಿಮ ಖಾನದೇಶದ ಎಜ್ಯುಕೇಶನಲ್ ಇನ್ಸ್ಪೆಕ್ಟರರು ಮತ್ತು ಧುಳಿಯಾದ ಪದವೀಧರರ ಜೀವನ ಶಿಕ್ಷಣಾಲಯದ ಪ್ರಿನ್ಸಿಪಾಲರೂ ಸಮ್ಮೇಳನದಲ್ಲಿ ಹಾಜರಿದ್ದರು; ವಿದ್ಯಾ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲರು ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಮ್ಮೇಳನದ ಒಂದು ವಿಶೇಷವೆಂದರೆ ಅದು ನಾಲ್ಕು ಅಧಿವೇಶನಗಳಲ್ಲಿ ನಡೆದು ಸಾಮಾನ್ಯವಾಗಿ ಮೂಲ ಶಿಕ್ಷಣದ ಎಲ್ಲ ಅಂಗಗಳನ್ನೂ ಸಮಸ್ಯೆಗಳನ್ನೂ ಮತ್ತು ವಿಶೇಷವಾಗಿ ಈ ಐದು ಜಿಲ್ಹೆಗಳಲ್ಲಿಯ ಸ್ಥಿತಿಯನ್ನು ಅಧಿಕಾರಿಗಳಿಗೆ ಕೂಲಂಕಷವಾಗಿ ಚರ್ಚಿಸಲಿಕ್ಕೆ ಅನುಕೂಲವಾದದ್ದೆಂದು ಹೇಳಬಹುದು. ಸಮ್ಮೇಳನದ ಕಾರ್ಯಕ್ರಮವು ೫ ಭಾಗಗಳಾಗಿ ವಿಂಗಡಿಸಲ್ಪಟ್ಟಿತ್ತು. (೧) ಸಾಹಿತ್ಯ ಸಲಕರಣೆಗಳು. (೨) ಉತ್ಪಾದನೆ. (೩) ವಿನಿಯೋಗ. (೪) ಚಟುವಟಿಕೆಗಳು ಮತ್ತು (೫) ಕಲಿಸುವ ಪದ್ಧತಿಗಳು ಎಂದು. ಈ ಹೊಸ ವ್ಯವಸ್ಥೆಯು ವಿಚಾರ ವಿನಿಮಯಕ್ಕೆ, ನಾನಾ ಬಗೆಯ ಸೂಚನೆಗಳನ್ನು, ಅವುಗಳಲ್ಲಿ ಅಡಕವಾದ ಅಂಶಗಳನ್ನು ವಿವರವಾಗಿ ಚರ್ಚಿಸಲಿಕ್ಕೆ, ಹಾಗು ವ್ಯಾವಹಾರಿಕ ಸಮಸ್ಯೆಗಳನ್ನು ಎದುರಿಸುವ ಮಾರ್ಗದರ್ಶನ ಮಾಡುವದಕ್ಕೆ ಒಳ್ಳೇ ಸಂದರ್ಭವನ್ನು ಒದಗಿಸಿಕೊಟ್ಟಿತು. ಇದರಿಂ ಸಮ್ಮೇಳನದಲ್ಲಿ ನಡೆದ ಕಾರ್ಯವು ವಿಧಾಯಕ ಸ್ವರೂಪದ್ದಾಗಿ ವಿಶೇಷ ಪ್ರಯೋಜನ ಕಾರಿಯಾಯಿತೆಂದು ಹೇ ಬಹುದು. ಮೊದಲನೆಯ ಅಧಿವೇಶನವು ೧೭-೭-೫ ದಿನಾಂಕ ಪ್ರಾತಃಕಾಲ ೯ ಗಂಟೆಗೆ ಪದವೀಧರರ ಜೀವ ಶಿಕ್ಷಣಾಲಯದ ವಿದ್ಯಾರ್ಥಿಗಳ ಪ್ರಾರ್ಥನೆಯಿಂದ ಆರಂ ವಾಯಿತು. ಮೊದಲಿಗೆ ಪಶ್ಚಿಮ ಖಾನದೇಶದ ಎಜ ಕೇಶನಲ್ ಇನ್ಸ್ಪೆಕ್ಟರರು ಉಪಮಂತ್ರಿಗಳಾದ ಶ್ರೀಮ ಇಂದುಮತಿ ಚಿಮಣಲಾಲರನ್ನೂ ಶಿಕ್ಷಣ ಖಾತೆ (ಬೇಸಿಕ್) ಡೆಪ್ಯುಟಿ ಡಾಯರೆಕ್ಟರರಾದ ಶ್ರೀ ಡಿ. ಚಿಕ್ಕರಮನೆಯವರನ್ನೂ ಧುಳಿಯಾಕ್ಕೆ ಬಂದು ಸಮ್ಮೇ ಲನದಲ್ಲಿ ಉಪಸ್ಥಿತರಾದದ್ದಕ್ಕೆ ಸ್ವಾಗತಿಸಿದರು. ಅದರ ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಭಾಗವಹಿ ಲಿಕ್ಕೆಂದು ಬೇರೆ ಬೇರೆ ಜಿಲ್ಹೆಗಳಿಂದ ಬಂದ ಅಡ್ಮಿ ಸ್ಟ್ರೇಟಿವ್ಹ ಆಫೀಸರರನ್ನೂ, ಡೆಪುಟಿ ಮತ್ತು ಅ. ಡೆ. ಇನ್ಸ್ಪೆಕ್ಟರರನ್ನೂ ಸ್ವಾಗತಿಸಿದರು; ಮತ್ತು ತಮ್ಮ ಜಿಲ್ಹೆಗಳಲ್ಲಿಯ ಉದ್ಯೋಗದ (ಕ್ರಾಫ್ಟ್) ಸಾಲೆಗಳ ಕೆಲಸ ಬಗ್ಗೆ ಸಂತೋಷವನ್ನೂ ವ್ಯಕ್ತಪಡಿಸಿ ಅವು ಇನ್ನುಮುಂ ಅವುಗಳ ಮೇಲೆ ಖರ್ಚಾಗುತ್ತಿರುವ ಹಣದ ಭಾರವನ್ನು ಕಡಿಮೆ ಮಾಡಬಹುದೆಂಬ ಆಶೆಯನ್ನೂ ವ್ಯಕ್ತ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಈ ರಾಜ್ಯದ ವಿದ್ಯಾ ಮಂತ್ರಿಗಳ ಶೈಕ್ಷಣಿಕ ಧೋರಣವನ್ನು ಕುರಿತು ಸಮ್ಮೇಳನದ ಪ್ರತಿನಿಧಿಗಳಿಗೆ ಸ್ಪಷ್ಟಪಡಿಸಿದರು. ಅದು ೧೯೪ ನೆಯ ಇಸ್ವಿಯಿಂದ ಸಾರ್ವತ್ರಿಕ, ಉಚಿತವಾದ ಕಡ್ಡಾಯದ ಮೂಲ ಶಿಕ್ಷಣದ ಯೋಜನೆಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟಿದನ್ನು ವಿಶದೀಕರಿಸಿ ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ ನಮ್ಮ ಲೋಕ ಪ್ರಿಯ ಮುಖ್ಯ ಪ್ರಧಾನರಾದ ಭಾರತ ರತ್ನ ಶ್ರೀ ಪಂಡಿತ ಜವಾಹರಲಾಲರವರು ಹೇಳಿದ ಮಾತುಗಳ ಕಡೆಗೆ ಅದಷ್ಟು ಅಲ್ಪಾವಧಿಯಲ್ಲಿ ೧೦ ವರ್ಷಗಳಒಳಗಾಗಿ, ಎಲ್ಲ ಶಿಕ್ಷಣವು ಬೇಸಿಕ್ ಅಥವಾ ಸ್ವಾಭಾವಿಕ ಜೀವನ ಮೂಲ ಶಿಕ್ಷಣವಾಗಬೇಕೆಂಬ ಮಾತುಗಳ ಕಡೆಗೆ ಪ್ರತಿನಿಧಿಗಳ ಲಕ್ಷ್ಯವನ್ನು ಎಳೆದರು. ೧೯೪೭ರಿಂದ ನಮ್ಮ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲರು ಮೂಲ ಶಿಕ್ಷಣವನ್ನು

ಪ್ರಚಾರದಲ್ಲಿ ತರುವ ಕೆಲಸದಲ್ಲಿ ತೀವ್ರತರವಾದ ಆಸಕ್ತಿಯನ್ನು ತಳೆದಿದ್ದಾರೆ; ಅವರ ಪ್ರಭಾವಿಯಾದ ಪ್ರಚೋದಕವಾದ ನೇತೃತ್ವದಲ್ಲಿ ಇದುವರೆಗೆ ತೃಪ್ತಿಕರವಾಗಿ ಸಾಗಿದ ಯೋಜನೆಯು ಯಶಸ್ವಿಯಾಗುವದರಲ್ಲಿ ಸಂದೇಹವಿಲ್ಲ. ರಾಜ್ಯದಲ್ಲಿಯ ಮೂಲ ಶಿಕ್ಷಣವು ಈಗ ಪ್ರಾಯೋಗಿಕ ಪಟ್ಟವನ್ನು ದಾಟಿದೆ ಮತ್ತು ಅದರ ಶ್ರೇಷ್ಠ ತಳಹದಿಯ ಮೂಲಕ ಅದು ಖಂಡಿತವಾಗಿ ಇನ್ನೂ ಮುಂದುವರಿಯುವದೆಂದು ಅವರು ತಮ್ಮ ಸ್ವಾಗತ ಭಾಷಣದಲ್ಲಿ ನುಡಿದು ಉಪಮಂತ್ರಿಗಳನ್ನು ಈ ಜಿಲ್ಲೆಗಳೊಳಗಿನ ಮೂಲೋದ್ಯೋಗ ಸಾಲೆಗಳಲ್ಲಿಯ ಕೆಲಸದ ಪ್ರದರ್ಶನವನ್ನು ಉದ್ಘಾಟಿಸಬೇಕೆಂದು ಬೇಡಿಕೊಂಡರು. ಆ ಮೇಲೆ ಡೆಪ್ಯೂಟಿ ಡೈರೆಕ್ಟರರು ಸೂಚಿಸಿದ ಮೇರೆಗೆ ಪ್ರತಿನಿಧಿಗಳೆಲ್ಲರೂ ತಮ್ಮ ತಮ್ಮ ಪರಿಚಯವನ್ನು ಅಧ್ಯಕ್ಷರಿಗೆ ಮಾಡಿಕೊಟ್ಟರು.

ಉಪಮಂತ್ರಿಗಳು ಪ್ರದರ್ಶನದ ಉದ್ಘಾಟನೆಯನ್ನು ಸಾರಿ ಹೋದವರ್ಷಕ್ಕಿಂತ ಈ ವರ್ಷದ ಪ್ರದರ್ಶನದಲ್ಲಿಯ ಕೆಲಸದ ವಸ್ತುಗಳಲ್ಲಿ ಹೆಚ್ಚು ಸುಧಾರಣೆಯು ತೋರಿಬರುವದೆಂದು ಸಂತೋಷವನ್ನು ವ್ಯಕ್ತಪಡಿಸಿದರು. ಇಂಥ ಸಮ್ಮೇಳನಗಳು ಪ್ರತಿವರ್ಷ ಪ್ರತಿಯೊಂದು ವಿಭಾಗದಲ್ಲಿ ಕೂಡುವವು. ಎಲ್ಲ ಜಿಲ್ಲೆಗಳಲ್ಲಿನ ಕೆಲಸವನ್ನು ನೋಡಲಿಕ್ಕೆ, ಬೇರೆ ಬೇರೆ ಜಿಲ್ಹೆಗಳ ಕೆಲಸವನ್ನು ಸರಿಹೆಚ್ಚಿ ನೋಡಲಿಕ್ಕೆ ಹಾಗೂ ಕೆಲಸದಲ್ಲಿ ಬರುವ ತೊಂದರೆಗಳ ಪರಿಹಾರವನ್ನು ಪಡೆಯಲಿಕ್ಕೆ ಅವು ಕೂಡುತ್ತವೆ. ಮುಂಬಯಿ ರಾಜ್ಯವು ಈಗ ಮೂಲ ಶಿಕ್ಷಣವನ್ನು ಅಂಗೀಕರಿಸಿದೆ. ಕೇಂದ್ರ ಸರಕಾರವು ಕೂಡ ಈ ಶಿಕ್ಷಣ ಕ್ರಮವು ಅತ್ಯಂತ ನೈಸರ್ಗಿಕವಾದದ್ದೂ ದೇಶದ ಜನರ ಜೀವನದಲ್ಲಿ, ಅವರ ಸಾಂಸ್ಕೃತಿಕಭಾಗ್ಯದಲ್ಲಿ ದೃಢಮೂಲವಾದುದೆಂದು ಅದನ್ನು ಸ್ವೀಕರಿಸಿದೆ. ಮಗುವಿನ ಪರಿಪೂರ್ಣ ವಿಕಾಸವನ್ನು ಸಾಧಿಸುವದೇ ವಿದ್ಯೆಯ ಗುರಿ; ನಮ್ಮ ಮೂಲಶಿಕ್ಷಣ ಮತ್ತು ಮೂಲೋದ್ಯೋಗ ಸಾಲೆಗಳಲ್ಲಿ ಔದ್ಯೋಗಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಶಿಕ್ಷಣದಿಂದ ಮಗುವಿನ ವ್ಯಕ್ತಿತ್ವದ ವಿಕಾಸವು ಸಾಧ್ಯವಿದ್ದಷ್ಟು ಸುಂದರವಾಗಿ ಆಗುವದು. ಉದ್ಯೋಗಕ್ಕೇ ನಮ್ಮ ಸಾಲೆಗಳಲ್ಲಿ ಹೆಚ್ಚು ಮಹತ್ವವನ್ನು ಕೊಡಲಾಗಿದೆ ಎಂದು ಎಷ್ಟೋ ಜನರು ತಿಳಿದುಕೊಂಡರೂ ಅದು ನಿಜವಲ್ಲ. ಗತಕಾಲದ ಅನುಭವವು ನಮಗೆ ಕೇವಲ ಪುಸ್ತಕೀಯ ವಿದ್ಯೆಯಿಂದ ಒಳಿತಾಗದು ಎಂದು ತೋರಿಸಿಕೊಟ್ಟಿದೆ. ಪುಸ್ತಕೀಯ ವಿದ್ಯೆಯಲ್ಲಿ, ಸಾಹಿತ್ಯಾಲಂಕಾರದಲ್ಲಿ ಶಿಕ್ಷಣ ಪಡೆದು ಬೆಳೆದುಬಂದ ನಾವೆಲ್ಲರೂ ಉದ್ಯೋಗಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟರೆ ಸಮತೂಕವನ್ನು ಕಾಯ್ದಂತಾಗುವದು. ಅಲ್ಲದೆ ಉದ್ಯೋಗ ವೃತ್ತಿಗೆ ನ್ಯಾಯವನ್ನು ಸಲ್ಲಿಸಿದಂತಾಗುವದು. ವಿಧಾಯಕ ಕಾರ್ಯದಿಂದ ಕಲಿಯುವದು ಅಥವಾ ಉತ್ಪಾದಕ ಕೃತಿ ಮೂಲಕವಾಗಿ ಕಲಿಯುವದು- ಇದೇ ಸ್ವಾಭಾವಿಕವಾದ ಶಿಕ್ಷಣ ಕ್ರಮವು; ಈ ಕಾರಣದಿಂದ ಉದ್ಯೋಗದ ಚಟುವಟಿಕೆಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟರೂ ಕೂಡ ಸಾಮಾಜಿಕ ಹಾಗು ಸಾಂಸ್ಕೃತಿಕ ಚಟುವಟಿಕೆಗಳಿಗೆ ಕಡಿಮೆ ಪ್ರಾಧಾನ್ಯ ಕೊಡಕೂಡದ..

ಪ್ರಾರಂಭಕ್ಕೆ ಈ "ನಯಿ ತಾಲಿಮು" (ಹೊಸ) ಶಿಕ್ಷಣವು ಒಂದಿಷ್ಟು ಹೆಚ್ಚು ಖರ್ಚಿನದಾಗುವದು; ಸರಕಾರೀ ಹಣದ ಸಹಾಯವು ಪರಿಮಿತವಾದುದಿರುವದರಿಂದ ಸಾಲೆಗಳು ಸ್ಥಳಾಭಾವ, ಉಪಕರಣಗಳ ಅಭಾವ ಮುಂತಾದ ಅನೇಕ ಕೊರತೆಗಳನ್ನಿಟ್ಟುಕೊಂಡೇ ಕೆಲಸ ಮಾಡಬೇಕಾಗುವದು. ಈ ಅಡ್ಡಿ ಆತಂಕಗಳನ್ನು ಎದುರಿಸಿಯೂ ಸಾಲೆಗಳು ತಕ್ಕಷ್ಟು ಪ್ರಗತಿಯನ್ನು ತೋರಿಸಿವೆ ಎಂಬುದು ಸಂತೋಷದ ಸಂಗತಿ; ಮೂಲೋದ್ಯೋಗ ಸಾಲೆಗಳು ಖರ್ಚಿನ ಕೆಲವೊಂದು ಭಾಗವನ್ನು ಹೆಚ್ಚು ಹೆಚ್ಚಾಗಿ ಪೂರೈಸುವವೆಂದು ಸ್ವಾಗತ ಭಾಷಣಕಾರರು ವ್ಯಕ್ತ ಮಾಡಿದ ಆಶಾ ಕಿರಣವು ಸಂತೋಷಪ್ರದವಾಗಿದೆ.

ದೇಶದ ಎಲ್ಲಕ್ಕೂ ಪ್ರಪ್ರಥಮವಾದ ಅಗತ್ಯವೆಂದರೆ ಉಚಿತವಾದ ಸಾರ್ವತ್ರಿಕ ಕಡ್ಡಾಯದ ಪ್ರಾಥಮಿಕ ಶಿಕ್ಷಣ. ಸದ್ಯಕ್ಕೆ ರಾಜ್ಯದ ೩೨೦೦೦ ಪ್ರಾಥಮಿಕ ಸಾಲೆಗಳಲ್ಲಿ ೩೭ ಲಕ್ಷ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಎಲ್ಲ ಮಕ್ಕಳಿಗೂ ಒಂದು ಕಸಬನ್ನು ಕಲಿಯಲಿಕ್ಕೆ ಅನುಕೂಲವನ್ನು ಒದಗಿಸಬೇಕೆಂದರೆ ಸರಕಾರದ ಹತ್ತರ ಸದ್ಯಕ್ಕೆ ಸಾಕಷ್ಟು ಹಣವಿಲ್ಲ. ಮೂಲೋದ್ಯೋಗ ಸಾಲೆಯು ಸಾದಾ ಸಾಲೆಗಿಂತ ಒಂದಿಷ್ಟು ಹೆಚ್ಚು ಖರ್ಚಿನದಾಗಿದೆ. ನಮ್ಮನ್ನೆದುರಿಸಿರುವ ಒಟ್ಟು ಸಮಸ್ಯೆ ಇದು- ಪ್ರತಿಯೊಬ್ಬ ಮಗುವಿಗೂ ಒಂದು ಸಾಲೆಯನ್ನು ಪೂರೈಸಬೇಕೋ ಅಥವಾ ಸಾಧ್ಯವಿದ್ದಷ್ಟು ಮಕ್ಕಳಿಗೆ ಅತ್ಯುತ್ತಮ ಸಾಲೆಗಳನ್ನು ಮೂಲೋದ್ಯೋಗ ಜೀವನ ಶಿಕ್ಷಣ ಪೂರೈಸ

ಬೇಕೋ? ಮುಂಬಯಿ ಸರಕಾರವು ಎಲ್ಲ ಸಾಲೆಗಳಲ್ಲಿ ಮೂಲ ಶಿಕ್ಷಣವನ್ನು ಆದಷ್ಟು ಬೇಗನೆ ಪ್ರಾರಂಭಿಸಬೇಕೆಂದು ನಿರ್ಧರಿಸಿರುವದಲ್ಲದೆ ಸಾಲೆಗಳೇ ಇಲ್ಲದ ಕ್ಷೇತ್ರದಲ್ಲಿ ಸಾಲೆಗಳನ್ನು ತೆಗೆಯಲಿಕ್ಕೂ ಗೊತ್ತುಮಾಡಿದೆ. ಆದ್ದರಿಂದ ಜೀವನ ಶಿಕ್ಷಣ ಸಾಲೆಯಲ್ಲಿ ಮಗುವಿಗೆ ಶಿಕ್ಷಣ ಒದಗಿಸುವ, ತಲೆಗೆ ಇಂತಿಷ್ಟೆಂದು ಬರುವ ಖರ್ಚಿನ ಪ್ರಮಾಣವನ್ನು ಆದಷ್ಟು ಕಡಿಮೆ ಮಾಡುವ ವಿಧಾನವನ್ನು ಕಂಡುಹಿಡಿಯುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇದು ಸಾಧ್ಯವಾಗಬೇಕಾದರೆ ಸಾಲೆಗಳಲ್ಲಿಯ ಕಾಯಕದ ಉತ್ಪಾದನೆಯ ಪ್ರಮಾಣ ಹಾಗೂ ಆಕರ್ಷಕತೆ ಎರಡೂ ಹೆಚ್ಚಬೇಕು. ಹೀಗಾದರೆ ಸಾಲೆಗಳು ಸಾಧ್ಯವಿದ್ದಷ್ಟು ಸ್ವಾವಲಂಬಿಗಳಾಗುವವು.

ಸಾಕ್ಷರತೆಯ ಶಿಕ್ಷಣಕ್ಕೂ ಸಮರ್ಪಕವಾದ ಶಿಕ್ಷಣಕ್ಕೂ ಭೇದವಿದ್ದೇ ಇರುವದು. ವ್ಯವಹಾರೋಪಯುಕ್ತವಾದ ಕೆಲಸ ಮತ್ತು ಅನುಭವಗಳ ಮುಖಾಂತರ ಪಡೆಯುವ ಸರ್ವಾಂಗೀಣ ಶಿಕ್ಷಣವು ಸಾಧು ಶಿಕ್ಷಣವು, ಸಮರ್ಪಕ ಶಿಕ್ಷಣವು. ಮುಂದುವರಿದ ಎಲ್ಲ ದೇಶಗಳಲ್ಲಿಯೂ ಕೊಡಲ್ಪಡುವ ನವ ಶಿಕ್ಷಣದಲ್ಲಿ ಈ ಸಮರ್ಪಕ ಶಿಕ್ಷಣದ ಅಂಗವಿದ್ದೇ ಇದೆ. ಏಕೆಂದರೆ ಉದ್ಯೋಗದ ಮೂಲಕ ನಡೆಯುವ ಈ ವ್ಯಾವಹಾರಿಕ ಶಿಕ್ಷಣಕ್ಕೆ ಅತ್ಯುಚ್ಚ ಮಟ್ಟದ ಶೈಕ್ಷಣಿಕ ಮೌಲ್ಯವಿದೆ, ಈ ಪದ್ಧತಿಯಲ್ಲಿ ಕಲಿಯುತ್ತಿರುವ ಮಗುವು ತಾಳ್ಮೆ, ಸಾಧನ ಸಲಕರಣೆಗಳನ್ನು ಜಾಗ್ರತೆಯಿಂದ ಉಪಯೋಗಿಸುವದು, ಕೆಲಸದ ಯೋಜನೆಯನ್ನು ಆಲೋಚಿಸುವದು. ಯೋಜನೆಯಂತೆ ಮಾಡಿ ಮುಗಿಸುವದು.— ಈ ಮುಖ್ಯವಾದ ಗುಣಗಳನ್ನೂ ಕಲಿಯುತ್ತಾನೆ. ಇದಲ್ಲದೆ ಈ ಸಾಲೆಗಳ ಒಟ್ಟು ಕಾರ್ಯಕ್ರಮದಲ್ಲಿ ಅಡಕವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಮಗುವಿನ ಪರಿಪೂರ್ಣ ವಿಕಾಸಕ್ಕೆ ಬಹಳವಾಗಿ ಸಾಧಕವಾಗುತ್ತವೆ. ಹೀಗಿದ್ದ ಕಾರಣ ನಮ್ಮ ಮೂಲ ಶಿಕ್ಷಣವು ಸರ್ವಾಂಗೀಣ ಶಿಕ್ಷಣ—ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿದೆಯಲ್ಲದೆ ಬರಿಯ ಬೌದ್ಧಿಕ ಶಿಕ್ಷಣವಲ್ಲ. ನನ್ನ ಈ ವಿಚಾರಕ್ಕೆ ಸಂಶೋಧಕ ಕ್ಷೇತ್ರದಲ್ಲಿ ತೊಡಗಿದ ವಿದ್ವಾಂಸರಿಂದಲೂ ಬೆಂಬಲವಿರುವದನ್ನು ಕಂಡು ನಾನು ಸಂತೋಷಪಡುತ್ತೇನೆ. ಇನ್ನು ಬೇರೆ ಬೇರೆ ಜಿಲ್ಹೆಗಳಲ್ಲಿ ಈ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಯಾವ ರೀತಿಯಲ್ಲಿ ಯೋಜಿಸುತ್ತಾರೆ ಮತ್ತು ಕಾರ್ಯರೂಪಕ್ಕೆ ಇಳಿಸುತ್ತಾರೆ. ಎಂಬುದನ್ನು ನಾನು ತಿಳಿದುಕೊಳ್ಳಲಪೇಕ್ಷಿಸುತ್ತೇನೆ. ಅದರ ಜೊತೆಗೆ ಅವುಗಳ ಪರಿಣಾಮವು ಮಕ್ಕಳ ಮೇಲೆ ಮತ್ತು ಪಾಲಕರ ಹೇಗೆ ಆಗುತ್ತದೆ. ಎಂಬದನ್ನು ತಿಳಿಯಲು ಬಯಸುತ್ತೇನೆ. ಧುಳಿಯಾದ ಶೈಕ್ಷಣಿಕ ವಿಕಾಸ ಕ್ಷೇತ್ರದಲ್ಲಿ ಇತ್ತೀಚೆಗೆ ತೆಗೆದಿದ್ದ ಸಮಾಜ ವಿಕಾಸ ಕೇಂದ್ರಗಳನ್ನುಲ್ಲೇಖಿಸಿಯೂ ಅವರು ಮಾತನಾಡಿದರು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ಅವರು,— ನಮ್ಮ ಶೈಕ್ಷಣಿಕ ಘಟನೆಯಲ್ಲಿಯ ಪ್ರತಿಯೊಂದು ಘಟಕವು ಗಟ್ಟಿಮುಟ್ಟಾಗಿದೆ ಎಂಬದನ್ನು ನಾವು ನೋಡಿಕೊಳ್ಳಬೇಕು. ತಂದೆತಾಯಿಗಳು ಪಾಲಕರು ನಮ್ಮ ಪ್ರಯತ್ನಗಳನ್ನೂ ಸಹಾನುಭೂತಿಯಿಂದ ನೋಡುವರೋ ಇಲ್ಲವೋ ಮತ್ತು ಕಾರ್ಯವು ಸರಿಯಾಗಿ ಸಂಘಟಿತವಾಗಿದ್ದರೆ ಮಾತ್ರ ಅದನ್ನು ವಿಸ್ತರಿಸಬಹುದು ಎಂಬ ಮಾತುಗಳನ್ನು ತಿಳಿದುಕೊಳ್ಳಬೇಕು— ಎಂದು ಹೇಳಿದರು.

ಮೂಲ ಶಿಕ್ಷಣದ ಪಾಯದಲ್ಲಿ ಇದ್ದ ಅಮೌಲ್ಯವಾದ ತತ್ವಗಳ ತಿಳುವಳಿಕೆಯನ್ನು ಪಾಲಕರಿಗೆ ಪ್ರತಿನಿಧಿಗಳು ತಿಳಿಸಿ ಹೇಳುವ ಪ್ರಯತ್ನ ಮಾಡಬೇಕೆಂದು ಹೇಳಿ ಉಪಮಂತ್ರಿಗಳು ತಮ್ಮ ಭಾಷಣವನ್ನು ಮುಗಿಸಿದರು.

ಆಮೇಲೆ ಡೆಪ್ಯೂಟಿ ಡೈರೆಕ್ಟರರ ಸೂಚನೆಯ ಮೇರೆಗೆ ಪ್ರತಿಯೊಬ್ಬ ಡಿ. ಇ. ಆಯ್. ಅವರು ತಮ್ಮ ಜಿಲ್ಹೆಯ ಮೂಲೋದ್ಯೋಗ ಶಿಕ್ಷಣದಲ್ಲಿ ಆದ ಪ್ರಗತಿಯ ವರದಿಯನ್ನು ಓದಿದರು. ಈ ವರದಿಗಳಿಂದ, ಸಾಕಷ್ಟು ಸ್ಥಳಾನುಕೂಲ ಸಾಧನಸಲಕರಣೆಗಳ ಸಂಬಂಧದಲ್ಲಿ ತೊಂದರೆಗಳಿದ್ದರೂ ೧೯೫೫-೫೬ನೆಯ ಇಸವಿಯಲ್ಲಿ ಮೂಲೋದ್ಯೋಗ ಸಾಲೆಗಳ ಪ್ರಗತಿಯು ಸಮಾಧಾನಕರವಿತ್ತೆಂದು ಕಂಡು ಬಂದಿತು.

ಡೆಪ್ಯೂಟಿ ಡೈರೆಕ್ಟರರು ಮಾತಾಡುತ್ತ ಈ ತೊಂದರೆಗಳಿದ್ದರೂ ನಮ್ಮ ಸಾಲೆಗಳು ಪ್ರಗತಿಪರವಾಗಿದುದಕ್ಕೆ ಸಂತೋಷವನ್ನು ವ್ಯಕ್ತ ಮಾಡಿದರು. ಪ್ರದರ್ಶನದಲ್ಲಿಯ ಕೃತಿವಸ್ತುಗಳು ಕಾರ್ಯದ ಉಚ್ಚ ಶ್ರೇಣಿಯನ್ನು ಎತ್ತಿ ಹಿಡಿಯುವಂತಿದ್ದವು. ಮೂಲೋದ್ಯೋಗ ಶಿಕ್ಷಣವನ್ನು ನಮ್ಮ ಶಿಕ್ಷಣ ಪದ್ಧತಿಯ ಒಂದು ಸಾಧನವೆಂದು ಬಗೆಯ

ಬೇಕೇ ಹೊರತು ಅದೇ ಸಿದ್ಧಿಯಲ್ಲ; ನಮ್ಮ ಅಂತಿಮ ಗುರಿಯು ಮೂಲ ಶಿಕ್ಷಣ ಅಥವಾ "ನಯಿ ತಾಲಿಮ" ಈ ಗುರಿಯನ್ನು ಸಾಧಿಸುವದಕ್ಕೆ ಸರಕಾರವು ಹೆಚ್ಚು ಸಾಹಿತ್ಯಸಲಕರಣೆಗಳನ್ನು ಪಡೆಯುವ ವ್ಯವಸ್ಥೆಮಾಡ ಬೇಕಾಗುವದು; ಇದ್ದ ಹಳೆಯ ಸಲಕರಣೆಗಳಿಗೆ ದುರುಸ್ತಿಯ ವ್ಯವಸ್ಥೆಯಾಗಬೇಕು; ಮುಖ್ಯ ಉದ್ಯೋಗದ ಅಂಗಭೂತವಾದ ಸಣ್ಣ ವ್ಯವಸಾಯಗಳಿಗೂ ಪೂರೈಕೆಯಾಗಬೇಕು. ಮೂಲಶಿಕ್ಷಣ ಸಾಲೆಗೂ ಸಾದಾ ಸಾಲೆಗೂ ಇರುವ ಅಂತರದ ಕಲ್ಪನೆಯನ್ನು ಅವರು ವಿವರಿಸಿದರು. ಮೊದಲಿನದು ಉತ್ಪಾದನೆಯ ಸಾಂಸ್ಕೃತಿಯ ದೈನಂದಿನದ ಚಟುವಟಿಕೆಗಳಿಗೆ ತನ್ನ ಪ್ರಥಮ ಪ್ರಾಶಸ್ತ್ಯವನ್ನು ಕೊಡುವದು; ಈ ಚಟುವಟಿಕೆಗಳು ಸಮರ್ಪಕವಾದ ಒಳ್ಳೇ ಶಿಕ್ಷಣದ ಮಾಧ್ಯಮವಾಗಿವೆ. ಬೋಧನೆಯ ಪದ್ಧತಿಯಲ್ಲಿಯೂ ಈ ಸಾಲೆಗಳಿಗೂ ಉಳಿದ ಸಾಲೆಗಳಿಗೂ ಅಂತರವು ಕಂಡುಬರುತ್ತದೆ. ಜೀವನ ಶಿಕ್ಷಣ ಸಾಲೆಗಳಲ್ಲಿ ವಿಷಯಗಳನ್ನು ಪುಸ್ತಕಗಳ ಮುಖಾಂತರ ಕಲಿಸುವದಿಲ್ಲ. ಆದರೆ ಚಟುವಟಿಕೆ, ಪ್ರತ್ಯಕ್ಷ ಕೃತಿಯ ಮುಖಾಂತರ ಕಲಿಸುವರು— ಅಲ್ಲಿ ಪಠ್ಯಪುಸ್ತಕ ಮಾಧ್ಯಮದ ಮಹತ್ವವು ಕಡಿಮೆಯೇ ಇರುವದು— ಯಾಕಂದರೆ ಅಲ್ಲಿ ಮಗುವಿನ ನಿತ್ಯ ಜೀವನ, ಪ್ರತ್ಯಕ್ಷ ಜೀವನದ ಮೇಲೆಯೇ ಮುಖ್ಯ ಭಾರವಿರುವದು. ಚಟುವಟಿಕೆಗಳನ್ನು ಎಷ್ಟರ ಮಟ್ಟಿಗೆ ಪ್ರತ್ಯಕ್ಷ ಜೀವನದೊಂದಿಗೆ ಸಮೀಕರಿಸಲಾಗುತ್ತಿದೆ ಎಂಬದನ್ನೇ ನಮ್ಮ ಮೂಲಶಿಕ್ಷಣ ಸಾಲೆಗಳ ಯಶಾಪಯಶಗಳು ಹೊಂದಿಕೊಂಡಿರುತ್ತವೆ. ಸಮವಾಯ ಶಿಕ್ಷಣದ ಬಗೆಗೆ ನಮ್ಮಲ್ಲಿ ಅನೇಕರಿಗೆ ಇರುವ ತಪ್ಪು ತಿಳುವಳಿಕೆಯನ್ನು ಅವರು ಎತ್ತಿ ನುಡಿದರು.

ಈಗ ನಾವು ನೋಡುವದೇನೆಂದರೆ ಯಾವ ಪಾಠದಲ್ಲಿ ಮೂಲೋದ್ಯೋಗ ಕೆಲಸ ಅಥವಾ ಒಂದು ಪ್ರತ್ಯಕ್ಷ ಚಟುವಟಿಕೆ ಇರುವದೋ ಅದೇ ಸಮವಾಯ ಪದ್ಧತಿಯ ಪಾಠ ಎಂದು ಪರಿಗಣಿಸಲ್ಪಡುತ್ತಿದೆ. ಆದರೆ ಯಾವ ಪಾಠವು ಪ್ರತ್ಯಕ್ಷ ಕೃತಿವಿರಹಿತವಾಗಿದ್ದರೂ ಪ್ರಾಪಂಚಿಕ ಅನುಭವವನ್ನು ಸ್ಪಷ್ಟವಾಗಿ ಮುಂದಿರಿಸುವದೋ ಅದನ್ನು ಸಮನ್ವಿತ ಪಾಠವೆಂಬೇ ಕರೆಯಬಹುದು. ಉಂದಿರ ಪೇಡೆಯ ಒಂದು ಬೇಸಿಕ್ ಸಾಲೆಯ ಒಬ್ಬ ಶಿಕ್ಷಕರು— ಪೂರ್ವಖಾನದೇಶದ ಪರೋಳಾ ಹೊಂದಿಕೆಯ ಕ್ಷೇತ್ರದಲ್ಲಿಯ ಶಿಕ್ಷಕರೊಬ್ಬರು— ಭಾರತ ಸರಕಾರದ ಮೂಲಶಿಕ್ಷಣ ಶಿಕ್ಷಣ ಸಮಿತಿಯ ಸಭಾಸದರು ಮೊನ್ನೆ ಮೊನ್ನೆ ಆ ಸಾಲೆಗೆ ಭೆಟ್ಟಿಕೊಟ್ಟಾಗ ತಮ್ಮ ವರ್ಗಕ್ಕೆ ಒಂದು ಸಮವಾಯ ಪಾಠವನ್ನು ಕಲಿಸಿದರು;. ಆಗ ಅವರು ವಿದ್ಯಾರ್ಥಿಗಳ ಅವಧಾನವನ್ನು ಸಮಿತಿಯ ಸದಸ್ಯರತ್ತ ಎಳೆದು, ಈ ಸದಸ್ಯರು ಈ ದೇಶದ ಮೂರು ನಾಲ್ಕು ಬೇರೆ ಬೇರೆ ರಾಜ್ಯಗಳಿಂದ ಮದ್ರಾಸ, ಬಂಗಾಲ, ಬಿಹಾರ, ದಿಲ್ಲಿಯಿಂದ ಬಂದವರು ಎಂದೂ ಉಲ್ಲೇಖಿಸಿ ಈ ಪ್ರಸಂಗವನ್ನು ಅವರು ಈ ಬೇರೆ ಬೇರೆ ರಾಜ್ಯಗಳಲ್ಲಿ ಜನಜೀವನವು ಯಾವ ಬಗೆಯದಾಗಿರುತ್ತದೆ ಎಂಬದನ್ನು ಕಲಿಸುವದಕ್ಕೆ ಉಪಯೋಗಿಸಿಕೊಂಡರು. ಈ ಪಾಠದಲ್ಲಿ ಕಸಬು ಅಥವಾ ಚಟುವಟಿಕೆ ಯಾವದು ಇಲ್ಲದಿದ್ದರೂ ಇದು ಉತ್ತಮ ಸಮವಾಯ ಪಾಠವೆಂದು ತಿಳಿಸಿದರು; ಇದರಿಂದ ಮಕ್ಕಳು ಈ ಭಿನ್ನ ಭಿನ್ನ ಪ್ರಾಂತಗಳ ಜನಜೀವನಕ್ಕೆ ಸಮಕ್ಷಮ ತರಲ್ಪಟ್ಟರು. ಸಮವಾಯ ಪದ್ಧತಿಯ ಕಲ್ಪನೆಯ ಬಗೆಗೆ ಇದ್ದ ದೃಷ್ಟಿಯನ್ನು ಸ್ವಲ್ಪ ಬದಲಿಸಿದರೆ ನಾವು ಎಲ್ಲ ಪಾಠಗಳನ್ನು ಸಂಬಂಧೀಕರಣ ಮುಖಾಂತರವೇ ಕಲಿಸಬಹುದು ಎಂಬ ಮಾತನ್ನು ಒಂದು ಸಣ್ಣ ಉದಾಹರಣೆಯಿಂದ ನಾವು ಕಲಿಯಬಹುದಾಗಿದೆ. ಶಿಕ್ಷಕನಿಗೆ ಇದಕ್ಕೆ ಒಂದು ಅಂತದೃಷ್ಟಿಯುಬೇಕು, ಇಷ್ಟೇ. ಟಂಡ್ರಾದ ಭೂಗೋಲವನ್ನು ಕಲಿಸುತ್ತಿರುವ ಶಿಕ್ಷಕನು ತನ್ನ ಮುಂದಿರುವ ಮಕ್ಕಳ ಜೀವನವನ್ನು ಟಂಡ್ರಾ ಪ್ರದೇಶದಲ್ಲಿರುವ ಮಕ್ಕಳ ಜೀವನದೊಂದಿಗೆ ಹೋಲಿಸಬೇಕು. ಈ ದೃಷ್ಟಿಕೋನದ ಬದಲಾವಣೆಗೆ ಹಣವು ಬೇಕಿಲ್ಲ ಎಂದು ಹೇಳಿ ಪ್ರತಿನಿಧಿಗಳು ಹಣದ ಹಾದಿ ನೋಡುತ್ತ ಕೂಡ್ರದೆ ಅಥವಾ ಇದ್ದ ಪರಿಸ್ಥಿತಿಯಲ್ಲಿ ಸುಧಾರಣೆಯ ಹಾದಿಯನ್ನು ಕಾಯುತ್ತ ಕೂಡ್ರದೆ ಈ ಬದಲಾವಣೆಯನ್ನು ಕೂಡಲೇ ಕಾರ್ಯಗತಮಾಡಬಹುದೆಂದು ಬಿನ್ನವಿಸಿಕೊಂಡರು.

ಕಾರ್ಯಕ್ರಮದೊಳಗಿನ ಬೇರೆ ಬೇರೆ ವಿಷಯಗಳ ಮೇಲೆ ಸಾಮಾನ್ಯ ಚರ್ಚೆಮಾಡಲಿಕ್ಕೆಂದು ಈ ಕೆಳಗಿನ ಸಮಿತಿಗಳು ರಚಿಸಲ್ಪಟ್ಟವು:—

ಸಮಿತಿಯ ಹೆಸರು	ಆಮಂತ್ರಕರು
೧. ಉತ್ಪಾದನಾ....	ಪೂರ್ವಖಾನದೇಶದ ಜಿಲ್ಹಾ ಸ್ಕೂಲ್ ಬೋರ್ಡಿನ ಏ. ಓ. ರವರು
೨. ಸಲಕರಣೆಗಳು....	ಪಶ್ಚಿಮಖಾನದೇಶದ ಜಿಲ್ಹಾ ಸ್ಕೂಲ್ ಬೋರ್ಡಿನ ಏ. ಓ ರವರು
೩. ವಿನಿಯೋಗ....	ನಾಶಿಕ್ ಜಿಲ್ಹಾ ಸ್ಕೂಲ್ ಬೋರ್ಡಿನ ಏ. ಓ. ರವರು
೪. ವೇಳಾಪಟಿಕೆ....	ಅಹಮ್ಮದನಗರದ ಜಿ. ಸ್ಕೂ. ಬೋ.ನ ಏ. ಓ. ರವರು
೫. ಪದ್ಧತಿಗಳು....	ಠಾಣಾದ ಜಿ. ಸ್ಕೂ. ಬೋ.ನ ಏ. ಓ. ರವರು

ಎರಡನೆಯ ಅಧಿವೇಶನ

೧೯೫೫ ನೆಯ ಜುಲೈ ೧೭ **ಮಧ್ಯಾಹ್ನ ೨ ರಿಂದ ೬ರ ವರೆಗೆ**

ಈ ಸಮಿತಿಗಳು ಬೇರೆ ಬೇರೆಯಾಗಿ ಕೂಡಿ ತಮ್ಮ ತಮ್ಮ ವಿಷಯಗಳನ್ನು ಚರ್ಚಿಸಿ ವರದಿಗಳನ್ನು ಸಿದ್ಧಗೊಳಿಸಿದವು.

ಮೂರನೆಯ ಅಧಿವೇಶ

೧೭ ನೆಯ ಜುಲೈ ೧೯೫೫ **ರಾತ್ರಿ ೮ ರಿಂದ ೧೦ ರ ವರೆಗೆ**

ಮೇಲೆ ನಮೂದಿಸಿದ ಸಮಿತಿಗಳ ಆಮಂತ್ರಕರು ತಮ್ಮ ತಮ್ಮ ವರದಿಗಳನ್ನು ಓದಿದ ಮೇಲೆ ಸಂಬಂಧಿಸಿದ ಸಂಗತಿಗಳ ಬಗೆಗೆ ಏನಾದರೂ ಸೂಚನೆಗಳಿದ್ದವನ್ನು ಕೇಳಿಕೊಂಡು ಸಮಿತಿಗಳಲ್ಲಿ ಚರ್ಚಿಸಲ್ಪಟ್ಟ ವಿಷಯಗಳ ಮೇಲೆ ಕೊನೆಗೆ ಡೆಪ್ಯುಟಿ ಡೈರೆಕ್ಟರರು ಒಟ್ಟು ಇತ್ಯರ್ಥದ ಹೇಳಿಕೆಗಳನ್ನು ಕೊಟ್ಟರು:—

(ಅ) **ಉತ್ಪಾದನಾ ಸಮಿತಿ:**– ೬ನೆಯ ೭ನೆಯ ಇಯತ್ತೆಗಳ ನೂಲುವ ನೇಯುವ ಅಭ್ಯಾಸ ಕ್ರಮದಲ್ಲಿದ್ದ ಗುರಿಗಳನ್ನು ೪ ಮತ್ತು ೬ ಪಾಲು ಇದ್ದದ್ದನ್ನು ಅನುಕ್ರಮವಾಗಿ ೨ ಮತ್ತು ೪ ಪಾಲಿಗೆ ಇಳಿಸಬೇಕೆಂಬ ಸೂಚನೆಗೆ ಶಿಕ್ಷಣ ಖಾತೆಯ ಡೆಪ್ಯುಟಿ ಡೈರೆಕ್ಟರರು ಅಂಕಿ ಸಂಖ್ಯೆಗಳ ಮಟ್ಟವನ್ನು ಇಳಿಸಿದ ಮಾತ್ರಕ್ಕೆ ಈ ತೊಂದರೆಯು ತಪ್ಪುವದೆಂದು ತಿಳಿಯಬಾರದು; ಈ ಇಳಿಸೋಣವು ಮಿತಿಯಿಲ್ಲದೆ ಹೋದೀತು; ಅಭ್ಯಾಸ ಪತ್ರಿಕೆಯನ್ನೂ ಮೊನ್ನೆ ಮೊನ್ನೆ ತಿದ್ದಿದ್ದರಿಂದ ಅದಕ್ಕೆ ಕೆಲವು ಕಾಲ ಪರೀಕ್ಷೆಗೆ ಅವಕಾಶವಿರುವದು ಒಳ್ಳೆಯದು. ಮುಂದಿನ ಅನುಭವದ ಮೇಲೆ ನೋಡಿ ತಿದ್ದಬಹುದು.

ಕ್ರಾಫ್ಟ್ ಎ. ಡಿ. ಇ. ಐ. ರಿಗಾಗಿ ಮುದ್ರಣಕಲೆಯಲ್ಲಿ ತರಬೇತಿಯನ್ನು ಒದಗಿಸಬೇಕು. ಮತ್ತು ಪ್ರತಿಯೊಂದು ಜಿಲ್ಹೆಯಲ್ಲಿ ಅನುಕೂಲವಿದ್ದ ಸ್ಥಳಗಳಲ್ಲಿ ಬಣ್ಣ ಕೊಡುವ ಕೇಂದ್ರಗಳನ್ನು ತೆರೆಯಲೇಬೇಕೆಂಬ ಸೂಚನೆಗಳಿಗೆ ಡಿ. ಡಿ. ಇ. ಅವರು ಮೂರು ಜಿಲ್ಹೆಗಳಲ್ಲಿ ಪ್ರಯೋಗಾರ್ಥವಾಗಿ ಇತ್ತೀಚೆಗೆ ಈಗಾಗಲೆ ಕೆಲವು ಬಣ್ಣ ಕೊಡುವ ಕೇಂದ್ರಗಳನ್ನು ತೆರೆಯಲಾಗಿದೆ, ಅದನ್ನು ಉಳಿದ ಜಿಲ್ಹೆಗಳಿಗೆ ವಿಸ್ತರಿಸುವ ವಿಚಾರವನ್ನು ಸರಕಾರವು ಆಲೋಚಿಸುತ್ತಿದೆ.

ಮೂಲೋದ್ಯೋಗ ಸಾಲೆಗಳ ಸ್ಥಳಭಾವದ ಅಡಚಣೆಯು ನಿಜವಾದದ್ದಿದೆ. ಆದರೆ ಬರಿಯ ವರ್ಗದ ಕೋಣೆಗಳು ಸಹ, ಅದೂ ಬಾಡಿಗೆಗೆ, ಕೆಲವು ಸ್ಥಳಗಳಲ್ಲಿ ಸಿಕ್ಕುವದಿಲ್ಲ. ಆದ್ದರಿಂದ ಶಿಕ್ಷಣ ಖಾತೆಯ ಡೆ. ಡೈರೆಕ್ಟರ ಅವರು ಪ್ರತಿಯೊಂದು ಕ್ರಾಫ್ಟ ಸಾಲೆಗೆ ಮೂರು ಹೆಚ್ಚು ಕೋಣೆಗಳನ್ನು ಪೂರೈಸಬೇಕೆಂಬ ಸಮಿತಿಯ ಸೂಚನೆಯು ಎಷ್ಟರ ಮಟ್ಟಿಗೆ ಅಮಲಿನಲ್ಲಿ ಬರಬಹುದು ಎಂಬದರ ಬಗೆಗೆ ಸಂಶಯವನ್ನು ವ್ಯಕ್ತಪಡಿಸಿದರು. ಪ್ರತಿಯೊಂದು ಸಾಲೆಗೆ ಕ್ರಾಫ್ಟ ಕೋಣೆಗೆಂದು ಬಾಡಿಗೆಯ ಹಣವನ್ನು ಸರಕಾರವು ಈಗಾಗಲೆ ತಿಂಗಳಿಗೆ ೨೦ ರೂ. ಯಂತೆ ಮಂಜೂರ ಮಾಡಿದೆ; ಆದ್ದರಿಂದ ಇಂಥ ಕೋಣೆಗಳು ಯಾವದಾದರೂ ಸಾಲೆಗೆ ಸಿಕ್ಕುವಂತಿದ್ದರೆ ಆ ಬಗ್ಗೆ

ಬೇಡಿಕೆಯ ಗೊತ್ತುವಳಿಗಳನ್ನು ತಮ್ಮ ಕಚೇರಿಗೆ ಕಳಿಸಿ ನಂತರ ಅವುಗಳನ್ನು ವಿಚಾರಿಸಲಾಗುವದೆಂದು ಡೆಪ್ಯುಟಿ ಡೈರೆಕ್ಟರರು ತಿಳಿಸಿದರು.

ಕ್ರಾಫ್ಟ್ ಕೆಲಸದ ನಿಯಮಿತ ಕಾಲಾವಧಿಯ ವರದಿಗಳನ್ನು ನಿಲ್ಲಿಸಬೇಕೆಂಬ ಮಾತು ಇಷ್ಟವಲ್ಲ; ಏಕೆಂದರೆ ಅವುಗಳಿಂದ ಆದ ಕೆಲಸದ ಅತ್ಯವಶ್ಯವಿದ್ದ ಕಲ್ಪನೆಯು ಬಂದು, ಮುಂದು ಮುಂದಿನ ಅವಧಿಗಳಲ್ಲಿಯ ಪ್ರಗತಿಯು ಗೊತ್ತಾಗುವದು. ಸಮಿತಿಯು ಸೂಚನೆಯನ್ನು ಸ್ವೀಕರಿಸಿಯೂ ಈ ಪ್ರಯೋಜನವು ಸಿದ್ಧಿಸುತ್ತಿದ್ದರೆ ಅದನ್ನು ತಾವು ವಿಚಾರಿಸುವದಾಗಿ ತಿಳಿಸಿದರು.

(ಬ) ಸಲಕರಣೆಗಳ ಸಮಿತಿ:– ಜೀವನ ಶಿಕ್ಷಣ ಮತ್ತು ಮೂಲೋದ್ಯೋಗ ಸಾಲೆಗಳಿಗೆ ಅವಶ್ಯವಿದ್ದ ಉಪಕರಣಗಳನ್ನು ಪೂರಯಿಸುವ ಅಗತ್ಯವನ್ನು ಈ ಸಮಿತಿ ಒಪ್ಪಿತು. ಸರಕಾರಕ್ಕೆ ಬೇಡಿಕೆಗಳನ್ನು ಕಳಿಸಿಕೊಟ್ಟರೆ ಹಣವನ್ನು ಒದಗಿಸಲಿಕ್ಕೆ ಅದು ಆದಷ್ಟು ಮುಂದೆ ಬರುವದು.

ಸ್ಥಳಾಭಾವದ ಸಮಸ್ಯೆಯನ್ನು ಆಯಾ ಸ್ಥಳೀಯ ವಿದ್ಯಮಾನಗಳನುಸಾರವಾಗಿ ಬಿಡಿಸಬಹುದು.

ಮೂಲೋದ್ಯೋಗ ಸಲಕರಣೆಗಳ ಆಯುಷ್ಯವನ್ನು ಗೊತ್ತುಮಾಡಿದ್ದು ಆಯಾ ಅವಧಿಯ ಕೊನೆಗೆ ಅವನ್ನು ರಜಿಸ್ಟರದಿಂದ ತೆಗೆದು ಹಾಕಬೇಕೆಂದಲ್ಲ; ಆದರೆ ಅವುಗಳ ಬೆಲೆ ಉತ್ತರೋತ್ತರ ಕಡಿಮೆಯಾಗುವದನ್ನು ಪರೀಕ್ಷಿಸಲಿಕ್ಕೆ ಒಂದೇನಾದರೂ ಸಲಕರಣೆಯು ಮುರಿದಿದ್ದರೆ ಅವನ್ನು ಸಂಬಂಧಿಸಿದ ಮೇಲಧಿಕಾರಿಗಳ ಆಜ್ಞೆಯಿಂದ ತೆಗೆದು ಹಾಕಬಹುದು.

ಟ್ರೇನಿಂಗ್ ಕಾಲೇಜಗಳಲ್ಲಿಯ ಶಿಕ್ಷಕ-ವಿದ್ಯಾರ್ಥಿಗಳು, ಶಿಕ್ಷಕರು ಸಣ್ಣ ಸಣ್ಣ ದುರುಸ್ತಿಯ ಕೆಲಸವನ್ನು ಹೇಗೆ ಮಾಡಬೇಕೆಂಬದನ್ನು ಕಲಿಯಬೇಕು. ಅದನ್ನು ಅವರಿಗೆ ಕಲಿಸಿದರೆ ತಾತ್ಪೂರ್ತಿಕ ದುರುಸ್ತಿಯನ್ನು ಅವರು ಮಾಡಲಿಕ್ಕೆ ಸಮರ್ಥರಾಗುವರು ಎಂಬ ಸೂಚನೆಯು ಸಮಿತಿಗೆ ಒಪ್ಪಿಗೆಯಾಯಿತು. ಈ ಶಿಕ್ಷಣವನ್ನು ಟ್ರೇನಿಂಗ್ ಕಾಲೇಜದ ಅಭ್ಯಾಸ ಪತ್ರಿಕೆಯಲ್ಲಿ ಸಹಕಾರಿ ಉದ್ಯೋಗವೆಂದು ಸೇರಿಸಬಹುದೇ ಹೇಗೆಂಬುದನ್ನು ಸರಕಾರವು ವಿಚಾರಿಸುತ್ತಿದೆ.

ಸರಕಾರಕ್ಕೆ ಹಣದ ಅನುಕೂಲವಾದರೆ ಅದು ಕುಶಲ ಕೆಲಸಗಾರನಾದ ಒಬ್ಬ ಮಿಸ್ತ್ರಿಯನ್ನು ಸಲಕರಣೆಗಳ ರಿಪೇರಿಗಾಗಿ ನೇಮಿಸಿಕೊಳ್ಳಲಿಕ್ಕೆ ಸ್ಥಾನಿಕ ಅಧಿಕಾರಿಗಳಿಗೆ ಅನುಮತಿಯನ್ನು ಕೊಡುವ ವಿಚಾರ ಮಾಡಬಹುದು. ಸದ್ಯಕ್ಕೆ ಸೂಚಿಸಿದ ವ್ಯವಸ್ಥೆಯೆಂದರೆ ಕಟ್ಟಿಗೆಯ ಕೆಲಸದಲ್ಲಿ ತರಬೇತಿ ಹೊಂದಿದ ಶಿಕ್ಷಕರಿಗೆ ಕೆಲವೊಂದು ಭತ್ತೆಯನ್ನು ಕೊಟ್ಟು ಅವರಿಂದ ಶಕ್ಯವಾದರೆ ಈ ಕೆಲಸವನ್ನು ಮಾಡಿಸಿಕೊಳ್ಳಬೇಕು.

ಏ. ಓ. ಅಧಿಕಾರಿಗಳಿಗೆ ಸಲಕರಣೆಗಳ ಗ್ರಾಂಟೆಂದು ಕೊಟ್ಟ ಹಣದಲ್ಲಿ ಕೆಲವನ್ನು ತಾಲೂಕಾ ಶಿಕ್ಷಕರಿಗೆ ಮುಂಗಡಬೆತ ಕೊಟ್ಟು ಅದರಿಂದ ಅವರು ಸ್ಪೇರ್‌ಪಾರ್ಟ್ಸ (ಬಿಡಿಭಾಗ) ಖರೀದಿಮಾಡಿ ಸಂಗ್ರಹಿಸಿ ತಮ್ಮ ತಾಲೂಕಿನಲ್ಲಿಯ ಮೂಲೋದ್ಯೋಗ ಸಾಲೆಗಳಲ್ಲಿ ಅಗತ್ಯಬಿದ್ದಂತೆ ಪೂರಯಿಸುವಂತೆ ಮಾಡುವದಕ್ಕೆ ಅಡ್ಡಿಯಿಲ್ಲ. ಈ ವ್ಯವಸ್ಥೆಯು ಮಿತವ್ಯಯದ್ದಾಗಿ ಸಾಲೆಗಳಿಗೆ ಹೆಚ್ಚು ಅನುಕೂಲವೂ ಆಗುವದು. ತಪಾಸಣೆಯ ಅಧಿಕಾರಿಗಳು ಇದರ ಮೇಲ್ವಿಚಾರಣೆಯನ್ನು ಮಾಡುವರು. ಈ ಪ್ರಶ್ನೆಯನ್ನು ಡೆಪ್ಯುಟಿ ಡೈರೆಕ್ಟರರು ವಿಚಾರಿಸುವರು.

ಆರಂಭದ ವರ್ಷಗಳಲ್ಲಿ ಸಾಲೆಗಳಿಗೆ ಒದಗಿಸಿದ ಎಷ್ಟೋ ಉಪಕರಣಗಳು ಈಗ ನಾದುರಸ್ತಿ ಆಗಿವೆ ಎಂಬ ಮಾತು ಸರಕಾರದ ಗಮನಕ್ಕೆ ಬಂದಿದೆ. ಅದಕ್ಕಾಗಿ ಬೇಡಿಕೆಗಳನ್ನು ಮಂಡಿಸಬೇಕೆಂದು ಈಗಾಗಲೆ ಕೇಳಲಾಗಿದೆ.

ಸ್ಥಳೀಯ ಕೆಲಸಗಾರರಿಂದ ದುರುಸ್ತಿಗಾಗಿ ೫೦ ರೂಪಾಯಿಗಳ ವರೆಗೆ ರಿಪೇರಿ ಗ್ರಾಂಟ್ ಮಂಜೂರ ಮಾಡಲಿಕ್ಕೆ ಏ. ಓ. ರವರಿಗೆ ಅಧಿಕಾರ ಕೊಡಬೇಕೆಂಬ ಸಮಿತಿಯ ಸೂಚನೆಯು ಸಹ ಸರಕಾರದಿಂದ ವಿಚಾರಿಸಲಾಗುವದು.

ಕ್ರಾಫ್ಟ್ ಕೆಲಸಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಿಗೆ ಸಕಾಲಕ್ಕೆ ಹಣದ ಪೂರಯಿಕೆ ಆಗಬೇಕೆಂದು ಸರಕಾರವು ವಿಶೇಷ ಆಸ್ಥೆವಹಿಸುತ್ತದೆ. ಹತ್ತಿಯ ಖರೀದಿಗಾಗಿ ಹಣದ ಪೂರೈಕೆ ಯಾವ ಕಾಲಕ್ಕೆ ಆಗಬೇಕೆಂಬದನ್ನು ಸರಕಾರಕ್ಕೆ ತಿಳಿಸಿದರೆ ಸರಕಾರವು ಅದನ್ನು ಖಂಡಿತವಾಗಿ ವಿಚಾರಿಸುವದು.

ಸಾಲೆಗಳಲ್ಲಿದ್ದ ಕಸಬುಗಳಲ್ಲಿ ಬದಲಾವಣೆಯ ಸೂಚನೆಯನ್ನು ಮಾಡಬೇಕಾದರೆ ಅದಕ್ಕೆ ಕಾರಣಗಳು ಸಮಂಜಸವೂ ಸತ್ಯವಾದವೂ ಇರಬೇಕೆಂಬುದನ್ನು ಪರೀಕ್ಷಿಸಬೇಕು. ಸಾಕಷ್ಟು ಭೂಮಿಯು ಸಿಕ್ಕು ವಂತಿದ್ದು ಇತರ ಕರಾರುಗಳು ಪೂರ್ತಿಯಾಗುತ್ತಿದ್ದರೆ ಕಟ್ಟಿಗೆಯ ಕೆಲಸ ಇಲ್ಲವೆ ನೂಲುವ ನೆಯ್ಯುವ ಉದ್ಯೋಗ ಬಿಟ್ಟು ಒಕ್ಕಲುತನ ಉದ್ಯೋಗವನ್ನು ಇಟ್ಟುಕೊಳ್ಳಲಿಕ್ಕೆ ಪರವಾನಿಗೆ ಕೊಡಲಿಕ್ಕೆ ಸರಕಾರವು ನಿರಾಕರಿಸುವದಿಲ್ಲ.

(ಕ) ವಿನಿಯೋಗ ಸಮಿತಿ:– ರಟ್ಟಿನ ಕೆಲಸದ ಸಾಮಾನುಗಳು ಮಾರಾಟ ಇಲ್ಲದೆ ರಾಶಿರಾಶಿಯಾಗಿ ಕೂಡಿಬಿದ್ದಿರುವವರಿಂದ ಅವನ್ನು ರಜಿಸ್ಟರಿನಿಂದ ಕಿತ್ತು ಹಾಕಲಿಕ್ಕೆ ಅರ್ಜಿಮಾಡಿಕೊಳ್ಳಬೇಕು. ಕಟ್ಟಿಗೆಯ ಸಾಮಾನುಗಳನ್ನು ಮಾತ್ರ ಒಂದು ನೂರಕ್ಕೆ ೩೦ ರಷ್ಟು ಕಡಿಮೆ ತಕ್ಕೊಂಡು ಮಾರಾಟ ಮಾಡಲಿಕ್ಕೆ ಅನುಮತಿ ಕೊಡುವದು ಯೋಗ್ಯವೆನಿಸುವದಿಲ್ಲ. ಅವನ್ನು ಎಷ್ಟು ಕಿಮ್ಮತ್ತಿಗೆ ಬಂದೀತೋ ಅಷ್ಟಕ್ಕೆ ಮಾರಿಬಿಡುವ ಪ್ರಯತ್ನ ನಡೆಯಬೇಕು. ಕಸಿನ್ನು, ಹಾಕಿದ ಕಟ್ಟಿಗೆ, ಇತರ ಕಚ್ಚಾ ಮಾಲು ಇವುಗಳ ಬೆಲೆಯಾದರೂ ಬರುವಂತೆ ನೋಡಿಕೊಳ್ಳಬೇಕು.

ತಯಾರಾದ ವಸ್ತುಗಳ ವಿನಿಯೋಗಕ್ಕಾಗಿ ಸಮಿತಿಯು ಮಾಡಿದ ಸೂಚನೆಗಳನ್ನು ವಿಚಾರಿಸುವದರ ಬದಲು ವಿದ್ಯಾರ್ಥಿಗಳೇ ಗ್ರಾಹಕ (ಗಿರಾಕಿ)ರಾಗುವ ವ್ಯವಸ್ಥೆಯು ಅತ್ಯುತ್ತಮವಾದದ್ದು ಕಾಣುವದು. ಬೇಡಿಕೆ ಇದ್ದ ಮತ್ತು ವಿದ್ಯಾರ್ಥಿಗಳ ನಿತ್ಯ ಜೀವನದಲ್ಲಿ ಬೇಕಾಗುವ ಸಾಮಾನುಗಳನ್ನೇ ನಮ್ಮ ಸಾಲೆಗಳು ಹುಟ್ಟಿಸಬೇಕು. ಇದು ಸಾಧಿಸಿದರೆ ವಿನಿಯೋಗದ ಸಮಸ್ಯೆಯು ಇಲ್ಲದಂತಾಗುವದು.

ಮೂರೂ ಉದ್ಯೋಗಗಳಲ್ಲಿ ತಯಾರಾದ ವಸ್ತ್ರಗಳ ಬೆಲೆಗಳನ್ನು ನಿರ್ಧರಿಸುವದಕ್ಕೆ ಸರಕಾರವು ಕೆಲವು ಶಾಸ್ತ್ರೋಕ್ತ ಸೂತ್ರಗಳನ್ನು ಮಾಡಿಕೊಡುವ ವಿಚಾರದಲ್ಲಿದೆಂದು ಡೆಪ್ಯುಟಿ ಡೈರೆಕ್ಟರರು ಪ್ರತಿನಿಧಿಗಳಿಗೆ ಹೇಳಿದರು. ನೆಯ್ಗೆಯ ಕಾರ್ಯಕ್ರಮವನ್ನು ಚೆನ್ನಾಗಿ ಗೊತ್ತುಮಾಡಿ ಸರಿಯಾಗಿ ಕಾರ್ಯಗತಮಾಡಿದರೆ, ಬಳಸದೆ ಉಳಿದ ನೂಲಿನ ಸಮಸ್ಯೆಯು ಉಂಟಾಗುವದಿಲ್ಲ. ಈ ಹಿಂದಿನ ವರ್ಷಗಳಲ್ಲಿ ಉಳಿದು ಕೂಡಿಬಿದ್ದ ನೂಲನ್ನು ನೇಕಾರಿಕೆ ಮಾಡುವ ನೇಕಾರರಿಂದಲೆ ನೆಯ್ಸಿಕೊಳ್ಳಲಿಕ್ಕೆ ಪರವಾನಿಗೆಯನ್ನು ಕೊಡುವ ವಿಚಾರವು ಸರಕಾರದ ಮುಂದಿದೆ. ಇದಕ್ಕಾಗಿಯೇ ಪ್ರತಿಯೊಂದು ಜಿಲ್ಹೆಯಲ್ಲಿ ನೆಯ್ಗೆಯ ಕೇಂದ್ರಪ್ರೊಂದನ್ನು ತೆಗೆಯುವಷ್ಟು ಸರಕಾರವು ಹಣಕಾಸಿನ ಅನುಕೂಲತೆಯನ್ನು ಪಡೆದಿಲ್ಲ.

ಉತ್ತಮ ಮೂಲೋದ್ಯೋಗವೆಂದರೆ ಉತ್ತಮ ಶಿಕ್ಷಣ. ಶ್ರೇಷ್ಠ ಶಿಕ್ಷಣವನ್ನು ಕೊಡುವದಾದರೆ ಮೂಲೋದ್ಯೋಗದ ಯೋಗ್ಯತೆಯನ್ನು ಸುಧಾರಿಸಬೇಕು. ಇದು ಸಾಧಿಸಿದರೆ ಖಾದಿಯ ಬೆಲೆಯನ್ನಾಗಲಿ ಇನ್ನಿತರ ಸಿದ್ಧ ವಸ್ತುಗಳ ಬೆಲೆಯನ್ನಾಗಲಿ ಇಳಿಸುವ ಕಾರಣ ಬೀಳುವದಿಲ್ಲ; ಅವುಗಳ ವಿನಿಮಯದಲ್ಲಿಯೂ ಯಾವ ಕಷ್ಟವೂ ಆಗುವದಿಲ್ಲ. ಹೆಣ್ಣುಮಕ್ಕಳ ಸಾಲೆಗಳಲ್ಲಿ ಹೊಲಿಗೆಯ ಕೆಲಸಕ್ಕೆ ಮೂಲೋದ್ಯೋಗದ ಸ್ಥಾನವನ್ನು ಕೊಡಬೇಕೆಂಬ ಸಮಿತಿಯ ಸೂಚನೆಯು ಈಗಾಗಲೆ ಸರಕಾರದ ವಿಚಾರದಲ್ಲಿದೆ.

(ಡ) ಕೃತಿಕಲಾಪಗಳ ಸಮಿತಿ:– (೧) ಸಾಲೆಗಳಲ್ಲಿ ಕಾರ್ಯಕಲಾಪಗಳ ಯೋಜನೆಯನ್ನು ಸಿದ್ಧಗೊಳಿಸುವದು (೨) ಬೌದ್ಧಿಕ ವಿಷಯಗಳನ್ನೂ ಚಟುವಟಿಕೆಗಳನ್ನೂ ಸಂಬಂಧೀಕರಿಸುವದು.

(೩) ಈ ಕಾರ್ಯಕ್ರಮಗಳಿಗಾಗಿ ಹಣವನ್ನು ಪೂರೈಸುವ ಬೇರೆ ಬೇರೆ ಆಶ್ರಯಗಳನ್ನು ಹುಡುಕಿಕೊಳ್ಳುವದು (೪) ಈ ರೀತಿಯಾಗಿ ಸಾಲೆಯು ಆ ಗ್ರಾಮದಲ್ಲಿ ಸಮಾಜ ವಿಕಾಸ ಕೇಂದ್ರದಂತೆ ಕೆಲಸ ಮಾಡುವದು– ಸಮಿತಿಯ ಈ ಎಲ್ಲ ಸೂಚನೆಗಳು ಗ್ರಾಹ್ಯವಾಗಿವೆ. ಪ್ರಾಕೃತಿಕ ಮತ್ತು ಸಾಮಾಜಿಕ ಸನ್ನಿವೇಶಗಳಿಂದ ಹುಟ್ಟುವ ಎಲ್ಲ ಕಾರ್ಯಗಳು ಬೋಧನೆಯ ಮಾಧ್ಯಮವೆಂದು ಯಾವಾಗಲೂ ಉಪಯೋಗವಾಗಬೇಕು; ಪ್ರತಿಯೊಂದು ಕಾರ್ಯಕ್ರಮಕ್ಕೂ ಶೈಕ್ಷಣಿಕ ಮೂಲ್ಯವಿರಬೇಕು ಎಂದು ಡೆಪ್ಯುಟಿ ಡೈರೆಕ್ಟರರು ನಿವೇದಿಸಿದರು. ಸಮಿತಿಯ ಸೂಚನೆಯಂತೆ ಸರಕಾರವು ಈಗ ಸಮಾಜ ವಿಕಾಸ ಕೇಂದ್ರಗಳಿಗೆ (ಕಮ್ಯೂನಿಟಿ ಸೆಂಟರ್ಸ್) ಹಣವನ್ನು ಪೂರೈಸುವಂತೆ ಮೂಲ ಶಿಕ್ಷಣ ಸಾಲೆಗಳಿಗೆ ಕೆಲವು ಗ್ರಾಂಟುಗಳನ್ನು ಕೊಡುವ ವಿಚಾರವನ್ನು ಸರಕಾರವು ಮಾಡಬಹುದು.

ನಾಲ್ಕನೆಯ ಅಧಿವೇಶನ

೧೮ನೆಯ ಜುಲೈ ೧೯೫೫ **ಪ್ರಾತಃಕಾಲ ೮ ರಿಂದ ೧೦**

ಐದನೆಯ ಸಮಿತಿಯು ಕಲಿಸುವ ಪದ್ಧತಿಗಳ ವರದಿಯನ್ನು ಹಿಂದಿನ ದಿನದಲ್ಲಿ ಓದಲಾಗದ್ದರಿಂದ ಈ ಅಧಿವೇಶನದ ಆರಂಭದಲ್ಲಿ ಅದನ್ನು ಓದಿ ಚರ್ಚಿಸಲಾಯಿತು.

ಸಮ್ಮೇಳನದಲ್ಲಿ ನಡೆದ ಚರ್ಚೆಯ ಬಗೆಗೆ ಡೆಪ್ಯುಟಿ ಡೈರೆಕ್ಟರರು ಈ ರೀತಿ ತಮ್ಮ ಅಭಿಪ್ರಾಯವನ್ನು ಹೇಳಿದರು.

೧. ಸಾಲೆಗಳಿಗೆ ಬೇಕಾಗುವ ಶಿಕ್ಷಕರ ತರಬೇತಿಯ ಬೇಡಿಕೆಯಂತೆ ಟ್ರೇನಿಂಗ ಕಾಲೇಜಗಳಲ್ಲಿ ಮೂಲೋದ್ಯೋಗದ ಆಯ್ಕೆಯು ನಿರ್ಣಯಿಸಲ್ಪಡುವದು. ಇದುವರೆಗೆ ಕಟ್ಟಿಗೆಯ ಕೆಲಸವನ್ನು ಮುಖ್ಯವೆಂದು ಟ್ರೇನಿಂಗ ಸಂಸ್ಥೆಗಳಲ್ಲಿ ಇಡುವ ಅಗತ್ಯವೆನಿಸಿಲ್ಲ. ಯಾಕೆಂದರೆ ರಾಜ್ಯದಲ್ಲಿ ಕಟ್ಟಿಗೆಯ ಕೆಲಸದ ಸಾಲೆಗಳು ಕೆಲವು ಮಾತ್ರ ಇದ್ದವು. ಈಗ ಇಂಥ ಸಾಲೆಗಳು ತೃಪ್ತಿಕರವಾದ ಪ್ರಗತಿಯನ್ನು ತೋರಿಸಿರುವದರಿಂದ ಅವುಗಳ ವಿಸ್ತರಣದ ವಿಚಾರವನ್ನು ಸರಕಾರವು ಮಾಡಬೇಕಾಗುವದು. ಹಾಗಾದರೆ ಕೆಲವು ಟ್ರೇನಿಂಗ ಕಾಲೇಜಗಳಲ್ಲಿ ಕಟ್ಟಿಗೆಯ ಕೆಲಸವು ಮುಖ್ಯ ಉದ್ಯೋಗವಾಗಿ ಆರಂಭಿಸಲ್ಪಡುವದು. ಆದರೂ ಇಂಥದೊಂದು ಮೂಲೋದ್ಯೋಗದಲ್ಲಿ ತರಬೇತಿ ಪಡೆದ ಶಿಕ್ಷಕರ ಬೇಡಿಕೆ ಮತ್ತು ಪೂರೈಕೆಯಲ್ಲಿ ಬಹಳ ಅಂತರವು ಅನುಭವದಿಂದ ಇರುವದು ಕಂಡುಬಂದರೆ ಸರಕಾರಕ್ಕೆ ಅದು ತೋರಿಸಲ್ಪಟ್ಟರೆ ಅವಶ್ಯವಿದ್ದ ಹೆಚ್ಚು ಕಡಿಮೆಗಳನ್ನು ಮಾಡಲಾಗುವದು.

ಮೂರು ಮೂರು ತಿಂಗಳ ನೆಯ್ಗೆಯ ರಿಫ್ರೆಶರ್ ವರ್ಗಗಳಿಂದ ಏನೂ ಪ್ರಯೋಜನವಾಗಿಲ್ಲವೆಂದು ಅನುಭವದಿಂದ ಕಂಡುಬಂದಿದೆ. ನೆಯ್ಗೆಯಲ್ಲಿ ಅಭ್ಯಾಸ ಅಥವಾ ರೂಢಿಗೆ ಬಹಳ ಮಹತ್ವವಿದೆ. ಸಮಿತಿಯು ಸೂಚಿಸಿದಂತೆ ನೆಯ್ಗೆಯ ಶಿಕ್ಷಕನು ತನ್ನದೇ ಒಂದು ಮಗ್ಗವನ್ನು ಇಟ್ಟುಕೊಂಡಿರಬೇಕು. ಮತ್ತು ತನ್ನ ಕುಶಲತೆಯನ್ನು ಕಾಯ್ದುಕೊಳ್ಳಲಿಕ್ಕೆ ನೆಯ್ಯುವದನ್ನು ಮಾಡುತ್ತಿರಬೇಕು. ಇದರಿಂದ ಕೇವಲ ಉದ್ಯೋಗದ ತರಬೇತಿಯ ಮೇಲೇ ಭಾರ ಹಾಕಿದ ರಿಫ್ರೆಶರ್ ವರ್ಗಗಳಿಗಿಂತ ಮುಖ್ಯಾಧ್ಯಾಪಕರ ಮತ್ತು ಸಹಾಧ್ಯಾಪಕರ ನೆಯ್ಗೆಯ ಕೆಲಸದ ಸಮಯವನ್ನು ನೋಡುವ ದೃಷ್ಟಿಕೋನವನ್ನು ಸುಧಾರಿಸಲಿಕ್ಕೆ ಒಂದು ಸಪ್ತಾಹದ ತರಬೇತಿಯ ವರ್ಗಗಳು ಸಾಕೆಂದೆನಿಸುವದು. ಸಾಲೆಗೆ ಸಂದರ್ಶನವಿತ್ತಾಗ ತಪಾಸಣೆಯ ಅಧಿಕಾರಿಗಳು ಶಿಕ್ಷಕರು ನೂಲುವ ನೆಯ್ಯುವ ರೂಢಿಯನ್ನು ಮುಂದುವರಿಸಿದ್ದಾರೋ ಇಲ್ಲವೋ ಎಂಬದನ್ನು ನೋಡಬೇಕು. ಅಭ್ಯಾಸ ಪತ್ರಿಕೆಯಲ್ಲಿ ಹೇಳಿದ ಹಾಗೆ ಟ್ರೇನಿಂಗ ಕಾಲೇಜಗಳಲ್ಲಿ ಸಾಕಷ್ಟು ತರಬೇತಿಯನ್ನು ಕೊಡುವದಕ್ಕೆ ಲಕ್ಷ ಪೂರೈಸದಿದ್ದರೆ– ಆದರೂ ಶಿಕ್ಷಕರಿಗೆ ತರಬೇತಿಯ ಪ್ರಮಾಣಪತ್ರಗಳನ್ನು ಕೊಟ್ಟರೆ– ಟ್ರೇನಿಂಗ ಕಾಲೇಜುಗಳು ಮತ್ತು ಪಿ. ಟಿ. ಸಿ. ಪರೀಕ್ಷಕರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿಲ್ಲ ಎಂದು ಅನ್ನಬೇಕಾಗುವದು. ಪ್ರತಿನಿಧಿಗಳಲ್ಲಿ ಒಬ್ಬರು ಸಾಲೆಗಳಲ್ಲಿ ಮೂಲೋದ್ಯೋಗದ ಆರ್ಥಿಕ ವಿಚಾರಕ್ಕಿಂತ ಜೀವನದ ಕರ್ತವ್ಯಗಳಿಗೆ ಅದರ ಸಂಬಂಧೀಕರಣಕ್ಕೆ ಹೆಚ್ಚು ಪ್ರಾಶಸ್ತ್ಯವಿರಬೇಕು ಎಂದು ಹೇಳಿದ ಅಭಿಪ್ರಾಯವನ್ನು ಡೆಪ್ಯುಟಿ ಡೈರೆಕ್ಟರರು ವಿರೋಧಿಸಿದರು. ಒಳ್ಳೇ ಜ್ಞಾನವೆಂದರೆ ಒಳ್ಳೆಯ ಕಾರ್ಯಾಚರಣೆ ಎಂದರ್ಥವಾಗಬೇಕು; ಒಳ್ಳೆಯ ಕಾರ್ಯಾಚರಣೆಯ ಪರೀಕ್ಷೆಯು ಅರ್ಥೋತ್ಪಾದನೆಯಿಂದಲೇ ಸಿದ್ಧವಾಗಬೇಕು. ಸಮವಾಯ ಶಿಕ್ಷಣವೂ ಉದ್ಯೋಗದ ಆರ್ಥಿಕ ಮುಖವೂ ಒಂದಕ್ಕೊಂದು ವಿರುದ್ಧವಲ್ಲ, ಅವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂದು ಪೂರಕವಾಗಿರಬೇಕು ಎಂದು ಡೆಪ್ಯುಟಿ ಡೈರೆಕ್ಟರರು ತಿಳಿಸಿದರು.

೨. ಸಮವಾಯ ಶಿಕ್ಷಣದ ತತ್ವವನ್ನೂ ಅದರ ತಂತ್ರವನ್ನೂ ಕಲಿಸಲಿಕ್ಕೆಂದು ಸರಕಾರದವರು ಈಗಾಗಲೇ ತರಬೇತಿಯ ವರ್ಗಗಳನ್ನು ನಡೆಸುವ ಯೋಜನೆಯನ್ನು ಸಿದ್ಧಮಾಡಿದ್ದಾರೆ. ಶಿಕ್ಷಕರ ಉಪಯೋಗಕ್ಕಾಗಿ ಈ ಬಗೆಗೆ ಅವಶ್ಯವಿದ್ದ ಸಾಹಿತ್ಯವೂ ಸಿದ್ಧವಾಗುತ್ತಿದೆ. ಈ ವರ್ಷ ನಮ್ಮ ಮುಂದೆ ಎರಡು ಸಮಸ್ಯೆಗಳಿವೆ–ಒಂದು ಹೊಸ ಅಭ್ಯಾಸ ಪತ್ರಿಕೆ. ಇನ್ನೊಂದು ಸಮವಾಯ ಶಿಕ್ಷಣ.

ಎಂದು ಕೆಲವು ಸದಸ್ಯರು ವ್ಯಕ್ತಮಾಡಿದ ಅಧೈರ್ಯಕ್ಕೆ—ಮತ್ತು ಶಿಕ್ಷಕರು ಈ ಎರಡೂ ಜವಾಬದಾರಿಗಳನ್ನು ಹೊರುವದು ಕಷ್ಟವೆಂದು ಆಡಿದ ಅವಿಶ್ವಾಸದ ಮಾತಿಗೆ ಡೆಪ್ಯುಟಿ ಡೈರೆಕ್ಟರರು ಇದು ನಿರಾಧಾರವಾದದ್ದೆಂದು ಹೇಳಿದರು. ಮುಂದುವರಿದು ಅವರು ಅಭ್ಯಾಸ ಪತ್ರಿಕೆಯು ಹೊಸದೇನೂ ಅಲ್ಲ. ಅದನ್ನು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಸಲಾಗಿದೆ ಮಾತ್ರವೆಂದೂ, ಸಮವಾಯ ಶಿಕ್ಷಣಕ್ಕೆ ಮುಖ್ಯವಾಗಿ ಶಿಕ್ಷಕನಲ್ಲಿ ಬೇಕಾದುದು ವಿಷಯವನ್ನು ಸಮಗ್ರವಾಗಿ ನೋಡುವ ಒಂದು ಅಂತರ್ದೃಷ್ಟಿ, ಅದರ ಬಗೆಗೆ ಒಂದು ಸರಿಯಾದ ನಿಲುವು - ಇವೇ ಎಂದು ಹೇಳಿದರು.

೪. ಮೂಲೋದ್ಯೋಗದಲ್ಲಿ ಟ್ರೇನಿಂಗ ಆಗದೆ ಇದ್ದ ಹೆಡ್‌ಮಾಸ್ತರರ ಸಲುವಾಗಿ ನಡೆಯುವ ಅಲ್ಪಾವಧಿ ತರಬೇತಿಯ ವರ್ಗಗಳನ್ನು ತೆಗೆಯುವದರ ಬದಲಾಗಿ ಈ ಕಾಯಕಗಳನ್ನು ಅವರು ತಾವೇ ಅಭ್ಯಾಸ ಮಾಡಿ ಪೂರ್ತಿಮಾಡಿಕೊಳ್ಳಲಿಕ್ಕೆ ಅವರನ್ನು ನಾವು ಪ್ರೋತ್ಸಾಹಿಸಬೇಕು.

೫. ಈಗಾಗಲೇ ಪದವೀಧರರ ಜೀವನ ಶಿಕ್ಷಣಾಲಯಗಳೂ ಟ್ರೇನಿಂಗ ಕಾಲೇಜುಗಳೂ ಮೂಲ ಶಿಕ್ಷಣದ ಸಾಮಾಜಿಕ, ಪ್ರಾಕೃತಿಕ, ಔದ್ಯೋಗಿಕ— ಎಂಬ ಮೂರು ಕೇಂದ್ರಗಳಿಗನುಸಾರವಾಗಿ ತಿದ್ದಿ ಸುಧಾರಿಸಿದ ಅಭ್ಯಾಸ ಪತ್ರಿಕೆಯನ್ನು ಎಲ್ಲರಿಗೂ ಬಿತ್ತರಿಸುವ ಕಾರ್ಯವನ್ನು ಭರದಿಂದ ಮಾಡುತ್ತವೆ. ಅದನ್ನು ನೋಡಿದರೆ ಅಭ್ಯಾಸ ಪತ್ರಿಕೆಯೊಳಗಿನ ಎಲ್ಲ ಸಂಗತಿಗಳನ್ನು ಈ ಹೊಸ ಪದ್ಧತಿಯಿಂದ ಕಲಿಸಲು ಸಾಧ್ಯವಿದೆ ಎಂಬುದು ಸ್ಪಷ್ಟವಾಗುವದು.

ಶಾಲೆಗಳಲ್ಲಿಯ ವೇಳಾ ಪತ್ರಿಕೆಯು ಹೇಗಿರಬೇಕೆಂಬ ವಿಷಯದಲ್ಲಿ ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡದ್ದಕ್ಕೆ ಡೆಪ್ಯುಟಿ ಡೈರೆಕ್ಟರರು— ಈ ಸಂಬಂಧದಲ್ಲಿ ವಿದ್ಯಾಖಾತೆಯವರಿಂದ ಒಂದು ಪರಿಪತ್ರವು ಬೇಗ ಕಳಿಸಲ್ಪಡಲಿದೆ ಎಂದು ಹೇಳಿ, ಮೂಲ ಶಿಕ್ಷಣ ಶಾಲೆಗಳಲ್ಲಿಯ ಚಟುವಟಿಕೆಗಳು ಸಾಮಾನ್ಯವಾಗಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಲ್ಪಡುತ್ತವೆ. ಇವನ್ನು ಕೆಳಗೆ ಹೇಳಿದಂತೆ ಕಲಿಸಬಹುದು.

(ಅ) ನಿತ್ಯದ ಪ್ರಾರಂಭದ ವಿಧ್ಯುಕ್ತ ಚಟುವಟಿಕೆಗಳು (ಬ) ಆ ಮೇಲೆ ಸಮವಾಯ ಶಿಕ್ಷಣವು ಶಾಲೆಯ ವೇಳೆ (ಕ) ಉತ್ತರಾರ್ಧದಲ್ಲಿ ಮೂಲೋದ್ಯೋಗ ಹಾಗೂ ಸಾದಾ ಪಾಠಗಳು (ಡ) ಕೊನೆಗೆ ಮೂಲೋದ್ಯೋಗ ಕೆಲಸದ ದಾಖಲೆಗಳನ್ನು ತುಂಬುವದು.

ಮುಕ್ತಾಯದ ಮೊದಲು ಡೆ. ಡೈರೆಕ್ಟರರು ಸಮಿತಿಗಳು ತಮ್ಮ ಕೆಲಸವನ್ನು ಬಹಳ ತೃಪ್ತಿಕರವಾಗಿ ಮಾಡಿದವೆಂದು ಹೇಳಿ ಅವಕ್ಕೆ ತಮ್ಮ ಧನ್ಯವಾದವನ್ನು ಅರ್ಪಿಸಿದರು. ಪ್ರತಿನಿಧಿಗಳಾಗಿ ಬಂದ ಅಧಿಕಾರಿಗಳ ಹೊಣೆಯು ಅವರು ಪ್ರತ್ಯಕ್ಷ ಕಾರ್ಯಕ್ಷೇತ್ರದಲ್ಲಿ ದುಡಿಯುವವರಾದ್ದರಿಂದ ದೊಡ್ಡದೆಂದು ಹೇಳಿ ಕೊನೆಯ ಗುರಿಯನ್ನು ಯಾವಾಗಲೂ ಲಕ್ಷ್ಯದಲ್ಲಿಟ್ಟು ಇದ್ದ ಪರಿಸ್ಥಿತಿಯಲ್ಲಿಯೇ ತಮ್ಮ ಕರ್ತವ್ಯಗಳನ್ನು ಹಾಗೂ ಹೊಣೆಗಾರಿಕೆಗಳನ್ನು ನಿರ್ವಹಿಸಲಿಕ್ಕೆ ಸಾಧ್ಯವಿದ್ದಷ್ಟು ಯತ್ನಿಸಬೇಕೆಂದು ತಿಳಿಸಿದರು.

ವಿದ್ಯಾಖಾತೆಯ ಉಪಮಂತ್ರಿಗಳು ತಮ್ಮ ಉಪಸಂಹಾರದ ಭಾಷಣದಲ್ಲಿ ಸಮ್ಮೇಳನದ ಎರಡು ದಿನ ನಡೆದ ಚರ್ಚೆಯ ಬಗೆಗೆ ತಮ್ಮ ಸಮಾಧಾನವನ್ನು ವ್ಯಕ್ತಮಾಡಿ ಐದು ಸಮಿತಿಗಳೂ ತಮ್ಮ ಕಾರ್ಯವನ್ನು ಉತ್ತಮ ರೀತಿಯಿಂದ ಮಾಡಿದ್ದಕ್ಕಾಗಿ ಅವಕ್ಕೆ ತಮ್ಮ ಧನ್ಯವಾದವನ್ನು ನೀಡಿದರು. ಮೂಲೋದ್ಯೋಗವನ್ನು ಬದಲು ಮಾಡುವ ಬಗೆಗೆ ಅರ್ಜಿ ಕಳಿಸುವ ಮುನ್ನ ಅದಕ್ಕಿರುವ ಕಾರಣಗಳನ್ನು ಅದರ ಹಿನ್ನೆಲೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳು ಶಿಫಾರಸು ಮಾಡಬೇಕು. ಮೂಲೋದ್ಯೋಗದಲ್ಲಿ ಪದೇ ಪದೇ ಬದಲಾವಣೆಯಾಗುವದೆಂದರೆ ಸರಕಾರಕ್ಕೆ ಅನವಶ್ಯಕ ಖರ್ಚು— ಇದನ್ನು ತಪ್ಪಿಸಬೇಕು. ಈ ಬದಲಾವಣೆಯ ಸೂಚನೆ ಮಾಡುವಾಗ ವಿದ್ಯಾರ್ಥಿಗಳ ಹಾಗೂ ಸಮಾಜದ ಹಿತವನ್ನು ಮುಖ್ಯವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಹೇಳಿದರು.

ಆ ಮೇಲೆ ಅವರು ಟ್ರೇನಿಂಗ ಕಾಲೇಜುಗಳಲ್ಲಿನ ಕೆಲಸದ ಬಗೆಗೆ ಉಲ್ಲೇಖಿಸಿದರು. ಇದು ಸಮರ್ಪಕವಿಲ್ಲದೆ ಹೋದರೆ ಅದರ ದೂಷಣವು ಸರಕಾರಕ್ಕೆ ಬರದೆ ಅದು ಕೆಲಮಟ್ಟಿಗೆ ಟ್ರೇನಿಂಗ ಕಾಲೇಜುಗಳನ್ನು ಸಂಘಟಿಸಿ ನಡೆಸಿಕೊಂಡು ಹೋಗುವವರಿಗೆ ಮತ್ತು ಕೆಲಮಟ್ಟಿಗೆ ಅವುಗಳ ಕೆಲಸದ ಮೇಲ್ವಿಚಾರಕರಿಗೆ ಹೆಚ್ಚಾಗಿ

ಬರುವದು. ಮೇಲ್ವಿಚಾರಣೆಯ ಅಧಿಕಾರಿಗಳು ಶಸ್ತ್ರಕ್ರಿಯೆ ಕೈಕೊಳ್ಳುವ ವೈದ್ಯರಂತೆ ಅನಾಸಕ್ತರಾಗಿದ್ದು ಅನವಶ್ಯಕವಾದ ಕರುಣೆಯನ್ನು ತೋರಬಾರದು. ಇಂಥ ಕರುಣೆಯಿಂದ ಸಂಸ್ಥೆಗಳ ಶಿಕ್ಷಣಮಟ್ಟವು ಕೆಳಕ್ಕಿಳಿಯುವದು. ಗುರಿಯ ಸಾಧನೆಯೂ ದೂರವಾಗುವದು. ಮೂಲೋದ್ಯೋಗದ ಜ್ಞಾನವಿಲ್ಲದವರು ಮೂಲೋದ್ಯೋಗ ಸಾಲೆಗಳ ಮುಖ್ಯಾಧ್ಯಾಪಕರಾಗಿದ್ದರೆ ಅವರು ಮೂಲೋದ್ಯೋಗದ ಬಗೆಗೆ ಪ್ರಾಮಾಣಿಕವಾಗಿ ತಮ್ಮ ಸರಿಯಾದ ವೃತ್ತಿಯನ್ನು ಇಟ್ಟುಕೊಂಡದ್ದು ಕಂಡುಬರದಿದ್ದರೆ ಅವರನ್ನು ಅಂಥ ಶಾಲೆಗಳಲ್ಲಿ ಕೆಲಸಮಾಡಗೊಡಬಾರದು. ಅಧಿಕಾರಿಗಳು ಅವರ ವೃತ್ತಿಯ ಬಗೆಗೆ ಸರಿಯಾಗಿದೆ ಎಂದು ಪ್ರಮಾಣ ಮಾಡುವ ಮುನ್ನ ಸಾಲೆಯ ಮಕ್ಕಳ ಮತ್ತು ಹೊರಗಿನ ವಿಸ್ತೃತ ಸಮಾಜದ ಹಿತವನ್ನು ಮುಖ್ಯವಾಗಿ ಮರೆಯಬಾರದು. ಈಗಿದ್ದ ಎಲ್ಲ ಮೂಲೋದ್ಯೋಗ ಸಾಲೆಗಳು ಕೂಡಲೆ ಜೀವನಶಿಕ್ಷಣ ಸಾಲೆಗಳಾಗಬೇಕೆಂದು ಅವರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು.

ಸ್ಥಳದ ಕೊರತೆಯ ಪ್ರಶ್ನೆಯನ್ನು ಉಲ್ಲೇಖಿಸಿ ಸರಕಾರವು ಹೊಸ ಶಾಲಾಕಟ್ಟಡಗಳನ್ನು ಕಟ್ಟಿಸುವದಕ್ಕೆ ಹಣವನ್ನು ಪೂರೈಸುವ ವಿಷಯದಲ್ಲಿ ಹೆಚ್ಚು ಆಸ್ಥೆಯನ್ನು ತಳೆದಿದೆ. ಇನ್‌ಸ್ಪೆಕ್ಟಿಂಗ್ ಆಫೀಸರರು ಈ ಸಂಬಂಧದಲ್ಲಿ ಜನರಿಂದ ಬರಬೇಕಾದ ಹಣದ ಪಾಲನ್ನು ಕೂಡಿಸುವದಕ್ಕೆ ಟೊಂಕಕಟ್ಟಿ ಕೆಲಸ ಮಾಡಬೇಕು.

ನೆಯ್ಗೆಯಲ್ಲಿ ಕಡಿಮೆ ಪ್ರಮಾಣವನ್ನು ಕುರಿತು ಈ ವ್ಯತ್ಯಾಸವು ತಿಳಿಯಲಾರದುದಾಗಿದೆ. ಒಂದು ಸಾಲೆಯು ಸಾಧಿಸಿದ ಮಟ್ಟವನ್ನು ಅಂಥದೇ ಪರಿಸ್ಥಿತಿಯಲ್ಲಿದ್ದ ಇನ್ನೊಂದು ಸಾಲೆಯು ಸಾಧಿಸಲೇಬೇಕು. ಆದ್ದರಿಂದ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಕೊಟ್ಟ ತಯಾರಿಕೆಯ ಪ್ರಮಾಣವನ್ನು ಪೂರ್ತಿಗೊಳಿಸಲೇಬೇಕು. ವಸ್ತ್ರ ಸ್ವಾವಲಂಬನ ಸಂಘಗಳು ಸಾಲೆಗಳಿಗೆ ಅವಶ್ಯವಿವೆ, ಮತ್ತು ಅದರಲ್ಲಿ ಸದಸ್ಯರಾದವರೆಲ್ಲರೂ ನಿಯಮಿಸಿದ ತಯಾರಿಕೆಯ ಪ್ರಮಾಣವನ್ನು ಮುಗಿಸುವರೆಂಬದನ್ನು ಮೇಲ್ವಿಚಾರಕರು ನೋಡಿಕೊಳ್ಳಬೇಕು. ನೋಡಿಕೊಂಡರೆಯೆ ಸಂಘಗಳು ಪ್ರಯೋಜನಕಾರಿಯಾಗುವವು. ಮೂಲೋದ್ಯೋಗದ ಯೋಗ್ಯತೆಯನ್ನು ಹೆಚ್ಚಿಸದಿದ್ದರೆ, ವೇಗವು ಹೆಚ್ಚಾಗುವದಿಲ್ಲ. ಮತ್ತು ಗೊತ್ತುಮಾಡಿದ ಪ್ರಮಾಣವನ್ನು ಮುಗಿಸಲಾಗುವದಿಲ್ಲ. ಆದುದರಿಂದ ಸಮರ್ಪಕವಾದ ಶಿಕ್ಷಣಕ್ಕೆ ಮೂಲೋದ್ಯೋಗದ ಯೋಗ್ಯತೆಯಲ್ಲಿ ಸುಧಾರಣೆಯಾಗಲೇಬೇಕು; ಇದರಿಂದ ವೇಗವೂ ತಾನೇ ಹೆಚ್ಚಾಗುವದು ಮತ್ತು ವಿದ್ಯಾರ್ಥಿಗಳು ತಮ್ಮ ತಯಾರಿಕೆಯ ಪ್ರಮಾಣವನ್ನು ಮುಗಿಸುವರು.

ಭೂದಾನ ಚಳುವಳಿಯನ್ನು ಉಲ್ಲೇಖಿಸಿ ಉಪಮಂತ್ರಿಗಳು ಅದು ಹಿತಕಾರಿಯಾಗಿದೆ ಎಂದು ಹೇಳಿ ಶಿಕ್ಷಕರು ಮಾತ್ರ ಅದರಲ್ಲಿ ಮುಂದಾಗಿ ಭಾಗವಹಿಸಬಾರದೆಂದೂ ಪ್ರಚಾರ ಕಾರ್ಯವನ್ನು ಮಾಡಕೂಡದೆಂದೂ ಹೇಳಿದರು. ಅವರ ಕಾಯಕದ ಕ್ಷೇತ್ರವು ಶಿಕ್ಷಣ, ಅದಕ್ಕೆ ತಮ್ಮ ಸರ್ವಸ್ವವನ್ನು ಅರ್ಪಿಸುವದು ಸಾಧುವಾದದ್ದು, ಅದೇ ಅವರ ಪವಿತ್ರ ಕರ್ತವ್ಯದ ನಿರ್ವಹಣೆ.

ಪುಣೆಯಲ್ಲಿ ಇಷ್ಟರಲ್ಲಿಯೇ ರಾಜ್ಯ ಸರಕಾರವು ಏರ್ಪಡಿಸಲಿರುವ ನಯೀ ತಾಲೀಮು ಪ್ರದರ್ಶನವನ್ನು ಉಲ್ಲೇಖಿಸಿ, ಅದನ್ನು ಅಸೆಂಬ್ಲಿ ಸದಸ್ಯರಿಗೆ ತೋರಿಸುವ ವ್ಯವಸ್ಥೆ ಯಾಗಬೇಕು. ಅದಕ್ಕಾಗಿ ಪ್ರತಿಯೊಂದು ಜಿಲ್ಲೆಯು ಕಲೆಯ ಹಾಗೂ ಶಿಕ್ಷಣ ದೃಷ್ಟಿಯಿಂದ ಒಳ್ಳೆ ವಸ್ತುಗಳನ್ನು ಕಳಿಸಿಕೊಡಬೇಕು.

ಖಾಸಗಿ ಟ್ರೇನಿಂಗ ಸಂಸ್ಥೆಗಳ ವಿಷಯದಲ್ಲಿ ತಾವು ಮಾತನಾಡಿದಾಗ ಆ ಸಂಸ್ಥೆಯ ಸಂಚಾಲಕರು ಮಾಡುತ್ತಿರುವ ಸೇವೆಯ ಬಗೆಗೆ ತಮಗೆ ಆದರವಿದೆಯೆಂದೂ ಅವರು ಯಾವ ಕಷ್ಟಗಳನ್ನು ಎದುರಿಸಿ ಪ್ರಯತ್ನಿಸುತ್ತಿರುವರೆಂದು ತಮಗೆ ತಿಳಿದಿರುವದಾಗಿಯೂ ಅವರು ಸ್ಪಷ್ಟಪಡಿಸಿದರು.

ಬೇರೆ ಬೇರೆ ಸಮಿತಿಯ ಸದಸ್ಯರು ತಾವು ವಹಿಸಿಕೊಂಡ ಕೆಲಸದಲ್ಲಿ ತಮ್ಮ ಪೂರ್ಣ ಜವಾಬದಾರಿಯನ್ನು ತಿಳಿದು ಉತ್ಸಾಹದಿಂದಲೂ ಆಸಕ್ತಿಯಿಂದಲೂ ದುಡಿದರೆಂದು ತಮ್ಮ ಸಂತೋಷವ್ಯಕ್ತಮಾಡಿ ಇನ್ನು ಮುಂದೆಯೂ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಇದೇ ಸ್ಫೂರ್ತಿ, ಆಸಕ್ತಿ ಜವಾಬದಾರಿಯನ್ನು ತೋರಿಸುವರೆಂದು ಆಶಿಸಿ, ತಮಗೆ ದೊರೆತ ಸಾಮಗ್ರಿಯು ಸಾಮಾನ್ಯವಾಗಿದ್ದರೂ ಅದರಿಂದ ಸಾಧ್ಯವಿದ್ದಷ್ಟು ಉತ್ತಮ ಶಿಕ್ಷಣವನ್ನು ಒದಗಿಸುವ ಪ್ರಯತ್ನವನ್ನು ಮಾಡಬೇಕು; ಶಿಕ್ಷಕರ

ಕನಿಷ್ಠ ತರಗತಿಯ ಬಗೆಗೆ ದೂರಿ ಪ್ರಯೋಜನವಿಲ್ಲ, ಅದನ್ನು ಸುಧಾರಿಸುವ ಹಾದಿಯನ್ನು ಹುಡುಕಬೇಕು. ನಿಮ್ಮ ಅಪೇಕ್ಷೆಯಂತೆ ಅವರಿಗೆ ಕೆಲಸ ಮಾಡಲು ಬಾರದಿದ್ದರೆ, ಅವರಿಗೆ ಸರಿಯಾದ ಮಾರ್ಗದರ್ಶನ ಮಾಡಿರಿ; ಚರ್ಚೆಗಳನ್ನು ಮಾದರಿಯ ಪಾಠಗಳನ್ನು, ಸಭೆಗಳನ್ನು ಇನ್ನೇ ನೊದಲಾದುವನ್ನು ಏರ್ಪಡಿಸಿರಿ; ಮತ್ತು ಅವರ ತೊಂದರೆಗಳನ್ನು ನಿವಾರಿಸಿರಿ. ಒಳ್ಳೆಯ ದಿನಗಳಿಗಾಗಿ ಮತ್ತು ಒಳ್ಳೆಯ ಸನ್ನಿವೇಶಗಳಿಗಾಗಿ ದಾರಿ ಕಾಯಬೇಡಿರಿ; ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಇದಾದ ಮೇಲೆ ಧುಳಿಯಾದ ಶಿಕ್ಷಣ ವಿದ್ಯಾಲಯದ ಪ್ರಿನ್ಸಿಪಾಲರು ಮುಖ್ಯ ಅತಿಥಿಗಳಿಗೂ ಮತ್ತು ವಿದ್ಯಾಖಾತೆಯ ಡೆಪ್ಯುಟಿ ಡೈರೆಕ್ಟರರಿಗೂ ಕೃತಜ್ಞತೆಯನ್ನು ಸಮರ್ಪಿಸಿದರು. ಸಮ್ಮೇಳನವು ವಂದೇಮಾತರಂದೊಂದಿಗೆ ಮುಕ್ತಾಯವಾಯಿತು.

ಸಮ್ಮೇಳನದ ಸದಸ್ಯರು ಅಪರಾಹ್ಣದಲ್ಲಿ ಜೀವನ ಶಿಕ್ಷಣ ವಿದ್ಯಾಲಯವನ್ನು ಸಂದರ್ಶಿಸಿದರು. ಅಲ್ಲಿಯ ವಿದ್ಯಾರ್ಥಿಗಳಿಂದ ಧುಳಿಯ ಹಾಗೂ ಸರಕಾರಿ ಟ್ರೇ. ಕಾ. ದ ವಿದ್ಯಾರ್ಥಿಗಳಿಂದ ಅಂದೇ ರಾತ್ರಿ ಮನರಂಜನೆಯ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು.

ಭಾಗ ೩

ಪ್ರದರ್ಶನದ ವರ್ಣನೆ

ಅನುವಾದಕರು : **ಶ್ರೀಮತಿ ಪಿ. ಎ. ಭಾಸ್ಕರ, ಲೇ. ಸು. ಹೆ. ಸ. ಟ್ರೇ. ಕಾ. ಧಾರವಾಡ.**

ಮುಖ್ಯವಾಗಿ ಎರಡು ಉದ್ದೇಶಗಳನ್ನು ಈಡೇರಿಸಲು ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ಅವು ಯಾವವೆಂದರೆ (೧) ಸಾರ್ವಜನಿಕರಲ್ಲಿ ಮೂಲ ಶಿಕ್ಷಣದ ತತ್ವಗಳನ್ನು ಪ್ರಸಾರ ಮಾಡುವದಕ್ಕಾಗಿ (೨) ಬೇರೆ ಬೇರೆ ಜಿಲ್ಲೆಗಳಲ್ಲಿಯ ಕಾರ್ಯಕರ್ತರನ್ನು ಒಂದೆಡೆಗೆ ತರುವದು ಮತ್ತು ರಾಜ್ಯದ ಇತರ ಜಿಲ್ಲೆಗಳಲ್ಲಿ ಮಾಡಲ್ಪಟ್ಟ ಕಾರ್ಯದ ಪರಿಚಯವನ್ನು ಅವರಿಗೆ ಮಾಡಿಕೊಡುವದು. ಈ ಉದ್ದೇಶಕ್ಕಾಗಿ ೧೯೫೫ ಸಪ್ಟಂಬರ ಮೊದಲನೆಯ ವಾರದಲ್ಲಿ ಜಿಲ್ಲಾ ಮಟ್ಟದ ಪ್ರದರ್ಶನಗಳನ್ನು ಮೊದಲು ಏರ್ಪಡಿಸಲಾಗಿದ್ದಿತು. ಈ ಪ್ರದರ್ಶನಗಳಲ್ಲಿ ಉತ್ತಮವಾದ ವಸ್ತುಗಳನ್ನು ಆರಿಸಲಾಯಿತು. ಪ್ರತಿಯೊಂದು ಜಿಲ್ಲೆಯಿಂದ ಈ ವಸ್ತುಗಳನ್ನು ಆ ಆ ಜಿಲ್ಲೆಯ ಒಬ್ಬೊಬ್ಬ ಅ. ಡೆ ಎ. ಇನಸ್ಪೆಕ್ಟರರು ರಾಜ್ಯದ ಪ್ರದರ್ಶನಕ್ಕಾಗಿ ಪುಣೆಗೆ ತೆಗೆದುಕೊಂಡು ಬಂದಿದ್ದರು. ೧೯೫೫ ಸಪ್ಟಂಬರ ೨೭ರಿಂದ ಅಕ್ಟೋಬರ ೨ರ ವರೆಗೆ ಈ ರಾಜ್ಯ ಪ್ರದರ್ಶನವನ್ನು ಪುಣೆಯ ಗಂಡುಮಕ್ಕಳ ಮರಾಠಿ ಟ್ರೇನಿಂಗ ಕಾಲೇಜದ ಆವಾರದಲ್ಲಿ ನೆರವೇರಿಸಲಾಯಿತು.

ಟ್ರೇನಿಂಗ ಕಾಲೇಜದ ಇಮಾರತಿಗಳನ್ನು ಹಾಗು ಪ್ರಾಯೋಗಿಕ ಶಾಲೆಗಳ ವರ್ಗಗಳನ್ನು, ವಸ್ತುಗಳನ್ನು ಪ್ರದರ್ಶಿಸುವದಕ್ಕಾಗಿ ಉಪಯೋಗಿಸಲಾಯಿತು. ಮಹಾರಾಷ್ಟ್ರದಲ್ಲಿಯ ಜಿಲ್ಲೆಗಳ ಸಲುವಾಗಿ ೯, ಗುಜರಾತದಲ್ಲಿಯ ಜಿಲ್ಲೆಗಳ ಸಲುವಾಗಿ ೫ ಕರ್ನಾಟಕದಲ್ಲಿಯ ಜಿಲ್ಲೆಗಳ ಸಲುವಾಗಿ ೪, ಹೀಗೆ ಒಟ್ಟು ೧೮ ಕೋಣೆಗಳನ್ನು ಉಪಯೋಗಿಸಲಾಯಿತು: ಹೆಚ್ಚು ವಸ್ತುಗಳುಳ್ಳ ಜಿಲ್ಲೆಗಳಿಗಾಗಿ ಬೇರೆ ಕೋಣೆಗಳನ್ನು ಒದಗಿಸಲಾಗಿತ್ತು. ಪ್ರದರ್ಶನದ ವಸ್ತುಗಳನ್ನು ಅ. ಡೆ. ಎ. ಇನಸ್ಪೆಕ್ಟರರು ಟ್ರೇನಿಂಗ ಕಾಲೇಜವಲ್ಲಿಯ ಸ್ವಯಂಸೇವಕರ ಸಹಾಯದಿಂದ ಎಲ್ಲ ಕೋಣೆಗಳಲ್ಲಿ ಅಂದವಾಗಿ ರಚಿಸಿದ್ದರು. ಟ್ರೇನಿಂಗ ಕಾಲೇಜದ ಸಮಗ್ರ ಇಮಾರತಿಯನ್ನು ಮತ್ತು ಮಧ್ಯವರ್ತಿ ಚತುಃಶಾಲೆಯನ್ನು ರಾಷ್ಟ್ರಧ್ವಜ, ಹೂವುಗಳು ಮತ್ತು ಬಣ್ಣ ಬಣ್ಣದ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು. ಟ್ರೇನಿಂಗ ಕಾಲೇಜದ ಮಧ್ಯವರ್ತಿ ಚತುಃಶಾಲೆಯ ಎದುರಿಗೆ ಒಂದು ದೊಡ್ಡ ಮಂಟಪವನ್ನು ರಚಿಸಲಾಗಿದ್ದಿತು. ಈ ಮಂಟಪದ ಇಕ್ಕೆಲಗಳಲ್ಲಿ ಎರಡು ಸಣ್ಣ ವರ್ತುಲಾಕಾರದ ಮಂಟಪಗಳನ್ನು ರಚಿಸಲಾಗಿದ್ದಿತು. ದೊಡ್ಡ ಮಂಟಪದ ಮಧ್ಯದಲ್ಲಿ ಗಾಂಧೀಜಿಯವರ ಕಂಚಿನ ಪ್ರತಿಮೆಯನ್ನು ಒಡೆದು ಕಾಣುವಂತೆ ಒಂದು ಗದ್ದುಗೆಯ ಮೇಲೆ ಇರಿಸಲಾಗಿತ್ತು. ಈ

ಮೂರ್ತಿಯು ಕಲಾತ್ಮಕವಾಗಿ ರಚಿಸಲ್ಪಟ್ಟ ಮಂಟಪದಲ್ಲಿ ಸುತ್ತುಮುತ್ತಲೂ ಹೂಗಳೊಂದಿಗೆ ಶೋಭಾಯಮಾನವಾಗಿ ಕಂಗೊಳಿಸುತ್ತಿತ್ತು. ಪ್ರದರ್ಶನದ ಮುಖ್ಯ ಕಾರ್ಯಕ್ರಮಗಳು ಟ್ರೇನಿಂಗ ಕಾಲೇಜಿನ ಸಭಾಭವನದಲ್ಲಿ ಜರುಗುತ್ತಿದ್ದವು. ಮೂಲ ಶಿಕ್ಷಣದ ತತ್ವಕ್ಕೆ ಅನುಗುಣವಾಗುವಂತೆ ಎಲ್ಲ ವ್ಯವಸ್ಥೆಯನ್ನು ಮಾಡಲಾಗಿತ್ತು. ಸಭಾಭವನದಲ್ಲಿ ಒಂದು ವಿಶಾಲವಾದ ವ್ಯಾಸಪೀಠವನ್ನು ರಚಿಸಲಾಗಿದ್ದು ಅದನ್ನು ಭಾಷಣ ಹಾಗು ಇತರ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲಾಗುತ್ತಿತ್ತು. ಈ ಉದ್ದೇಶಕ್ಕಾಗಿಯೇ ಖಾದಿ ಅರಿವೆಯ ಪಡದೆಗಳನ್ನು ಸಿದ್ಧಗೊಳಿಸಲಾಗಿತ್ತು. ಕೂಡ್ರುವ ಸಲುವಾಗಿ ಜಮಖಾನೆಗಳನ್ನು ಹಾಸಲಾಗಿತ್ತು. ಸಭಾ ಭವನದ ಗೋಡೆಗಳ ಮೇಲೆ ರಾಷ್ಟ್ರೀಯ ಮುಂದಾಳುಗಳ ಅನೇಕ ಭಾವಚಿತ್ರಗಳನ್ನು ತೂಗುಹಾಕಲಾಗಿದ್ದಿತು. ಇಡಿಯ ಅಧಿವೇಶನವು ಬೇರೆ ಬೇರೆ ಧರ್ಮಗಳನ್ನು ಪ್ರತಿನಿಧೀಕರಿಸುವ ಪ್ರಾರ್ಥನಾ ಗೀತೆಗಳಿಂದ ಪ್ರಾರಂಭವಾಯಿತು. ಇವುಗಳನ್ನು ವೇದ, ಭಗವದ್ಗೀತೆ, ಬೈಬಲ್, ಕುರಾನ್ ಇತ್ಯಾದಿ ಗ್ರಂಥಗಳಿಂದ ಆರಿಸಲಾಗಿತ್ತು. ೧೯೫೫ ಸಪ್ಟಂಬರ ತಾರೀಖು ೨೭ ಮಂಗಳವಾರ ಮುಂಜಾನೆ ೯-೩೦ ಘಂಟೆಗೆ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಮೊರಾರಜಿ ದೇಸಾಯಿಯವರು ಪ್ರದರ್ಶನವನ್ನು ಉದ್ಘಾಟಿಸಿದರು. ಈ ಪ್ರಸಂಗದಲ್ಲಿ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರು ರಾಜ್ಯದಲ್ಲಿಯ ಮೂಲ ಶಿಕ್ಷಣದ ಪ್ರಗತಿಯ ಸಂಕ್ಷಿಪ್ತ ವರದಿಯನ್ನು ಓದಿದರು. ಪ್ರದಶನವನ್ನು ಉದ್ಘಾಟಿಸುತ್ತ ಮುಖ್ಯಮಂತ್ರಿಗಳು ಈ ಹೊಸ ಶಿಕ್ಷಣದಲ್ಲಿ ವಿಶ್ವಾಸದ ಅವಶ್ಯಕತೆಯ ಬಗೆಗೆ ಒತ್ತಿ ಹೇಳಿದರು ಮತ್ತು ಅದು ಈ ದೇಶದ ಸಲುವಾಗಿ ಅತ್ಯುತ್ತಮ ಶಿಕ್ಷಣ ಪದ್ಧತಿಯಾದ್ದರಿಂದ ಅದನ್ನು ಕಾರ್ಯರೂಪದಲ್ಲಿ ತರಬೇಕೆಂದು ಪ್ರತಿಪಾದಿಸಿದರು. ಪಾರಿತೋಷಕ ವಿತರಣ ಸಮಾರಂಭವು ಮುಂಬೈ ರಾಜ್ಯಪಾಲರಾದ ಡಾ|| ಹರೆಕೃಷ್ಣ ಮೆಹತಾಬ ಇವರ ಅಧ್ಯಕ್ಷತೆಯಲ್ಲಿ ೧೯೫೫ ಸಪ್ಟಂಬರ ೩೦ ಶುಕ್ರವಾರ ೧೧-೩೦ ಘಂಟೆಗೆ ಜರುಗಿತು. ಉತ್ತಮ ತರಗತಿಯ ವಸ್ತುಗಳಿಗಾಗಿ ಒಟ್ಟು ಇನ್ನೂರು ಬಹುಮಾನಗಳನ್ನು ಹಂಚಲಾಯಿತು. ಬಹುಮಾನಗಳನ್ನು ಹಂಚುವದರಲ್ಲಿ ಅರಿವೆಯ ವಿವಿಧ ಪ್ರಕಾರಗಳು, ಕಟ್ಟಿಗೆಯ ಸಾಮಾನುಗಳು, ನಕ್ಷೆಗಳು, ಆಟಿಗೆಯ ಸಾಮಾನುಗಳು ಇವುಗಳನ್ನು ಶಾಲೆಗಳ ಸಲುವಾಗಿ ಬೇರೆ ಬೇರೆಯಾಗಿ ಗಣನೆಯಲ್ಲಿ ತೆಗೆದುಕೊಳ್ಳಲಾಗಿದ್ದಿತು. ಪ್ರದರ್ಶನದ ಮುಕ್ತಾಯ ಸಮಾರಂಭವು ಗಾಂಧೀ ಜಯಂತಿಯ ದಿನವಾದ ಅಕ್ಟೋಬರ ೨ರಂದು ಜರುಗಿತು. ಆಗ ಮುಂಬಯಿ ರಾಜ್ಯದ ಗ್ರಾಮೋದ್ಯೋಗ ಸಮಿತಿಯ ಹಾಗೂ ಮುಂಬಯಿ ಲೆಜಿಸ್ಲೇಟಿವ್ಹ ಕೌನ್ಸಿಲದ ಚೇರಮನ್ನರಾದ ಶ್ರೀ ಆರ್. ಎಸ್. ಹುಕ್ಕೇರಿಕರರು ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಸಾರ್ವಜನಿಕರ ದೊಡ್ಡ ಸಮೂಹವನ್ನುದ್ದೇಶಿಸಿ ಮಾತನಾಡಿದರು. ಅವರು ಗಾಂಧೀಜಿಯವರಿಂದ ಪ್ರಾರಂಭಿಸಲ್ಪಟ್ಟ ರಚನಾತ್ಮಕ ಕಾರ್ಯಕ್ರಮಗಳ ಬಗೆಗೆ ಮಾತನಾಡಿ ಗಾಂಧೀಜಿಯವರ ಜೀವನದಿಂದ ಕೆಲವು ಸನ್ನಿವೇಶಗಳನ್ನು ವಿವರಿಸಿದರು. ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲ ಅವರು ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಲು ಸಹಾಯ ಮಾಡಿದ ಎಲ್ಲರ ಆಭಾರವನ್ನು ಮನ್ನಿಸಿದ ನಂತರ ಪರಿಷತ್ತು ಕೊನೆಗೊಂಡಿತು.

ಈ ಪ್ರದರ್ಶನದಲ್ಲಿ ಬೇರೆ ಬೇರೆ ತರದ ಜೀವನ ಶಿಕ್ಷಣ ಶಾಲೆಗಳಲ್ಲಿ ಉತ್ಪಾದಿತವಾದ ಎಲ್ಲ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ಬಣ್ಣ ಬಣ್ಣಗಳ ಹಾಗೂ ವಿವಿಧ ತರದ ನಕ್ಷೆಗಳುಳ್ಳ ಖಾದಿ ಅರಿವೆಗಳ ಎಸ್ಟೋ ನಮೂನೆಗಳನ್ನು ಇಡಲಾಗಿತ್ತು. ಈ ಅರಿವೆಗಳಲ್ಲದೆ ಉರುಟು ನೂಲಿನಿಂದ ತಯಾರಾದ ಆಸನಗಳನ್ನೂ ಜಮಖಾನೆಗಳನ್ನೂ ಪ್ರದರ್ಶಿಸಲಾಗಿತ್ತು. ಕೆಲವು ಆಸನಗಳಲ್ಲಿ ಬಣ್ಣ ಬಣ್ಣದ ನಕ್ಷೆಗಳನ್ನು ನೇಯಲಾಗಿತ್ತು. ಹಾಳಿನಿಂದ ತಯಾರಾದ ಆಟಿಗೆಯ ಸಾಮಾನುಗಳನ್ನು ಮತ್ತು ಗಾಲೀಚುಗಳನ್ನು ಪ್ರದರ್ಶನಲ್ಲಿ ಇಡಲಾಗಿತ್ತು. ಕಟ್ಟಿಗೆಯ ಕೆಲಸದ ವಿಭಾಗದಲ್ಲಿ ಮೇಜು, ಖುರ್ಚಿ, ಮೊದಲಾದುವು, ಆಟಿಗೆಯ ಸಾಮಾನುಗಳು ಮತ್ತು ಮನೆ ಬಳಕೆಯ ಸಾಮಾನುಗಳು ಇದ್ದವು. ಖುರ್ಚಿ ಮೊದಲಾದವುಗಳಲ್ಲಿ ಕೆಲವು ಸಾಮಾನುಗಳು ಉದಾ:- ಮಡಿಚುವ ಮೇಜು ಇತ್ಯಾದಿ ತೀರ ಹೊಸ ಮಾದರಿಯವು ಇದ್ದವು. ಪ್ರದರ್ಶನದಲ್ಲಿ ರಟ್ಟಿನ ಕೆಲಸವಾದರೂ ಒಡೆದು ಕಾಣುತ್ತಿತ್ತು. ಪೋರ್ಟಫೋಲಿಯೋಗಳೂ, ಪ್ಯಾಡಗಳೂ, ಮತ್ತು ಕಚೇರಿಯ ಕೆಲಸಕ್ಕಾಗಿ ಉಪಯೋಗವಿರುವ ಟ್ರೇ, ಬುಟ್ಟಿ. ಒತ್ತಕರದಿನ ಹಿಡಿಕೆ ಮೊದಲಾದ ಸಾಮಾನುಗಳೂ ಎಲ್ಲ ಕೋಣೆ

ಗಳಲ್ಲಿ ಕಂಡುಬರುತ್ತಿದ್ದವು. ಖಂಡಾಳಾ ಪ್ರಾಯೋಗಿಕ ಕ್ಷೇತ್ರದವರು ತಮ್ಮಲ್ಲಿ ತಯಾರಾದ ಕಂಬಳಿ, ರಗ್ಗು, ಮತ್ತು ಶಾಲುಗಳ ಒಂದು ವಿಭಾಗವನ್ನೇ ತೆರೆದಿದ್ದರು. ಬಿದಿರಿನಿಂದ ತಯಾರಿಸಿದ ಚಾಪೆ, ಆಟಿಗೆಯ ಸಾಮಾನು ಹಾಗೂ ಬಿದಿರಿನ ರಾಟೆ ಮೊದಲಾದವುಗಳನ್ನು ಪ್ರದರ್ಶಿಸುತ್ತಿದ್ದ, ಡ್ಯಾಂಗ್ಸ ಜಿಲ್ಲೆಯವರು ತೆರೆದ ವಿಭಾಗವನ್ನು ಇಲ್ಲಿ ವಿಶೇಷವಾಗಿ ಹೇಳಬಹುದು. ಪ್ರದರ್ಶನಕ್ಕೆ ಬಂದ ಸಾಮಾನುಗಳೆಲ್ಲ ಕಸಬುಗಾರಿಕೆಯ ಉಚ್ಚ ಮಟ್ಟವನ್ನು ವ್ಯಕ್ತಗೊಳಿಸುತ್ತಿದ್ದು ಎಲ್ಲ ಸಂದರ್ಶಕರ ಮೆಚ್ಚುಗೆಯನ್ನು ಪಡೆದವು.

ಈ ವಸ್ತುಗಳಲ್ಲದೆ, ಪ್ರದರ್ಶನದಲ್ಲಿ ಕಲಿಸುವ ಪದ್ಧತಿಗಳನ್ನು ತೋರಿಸುವ ಅನೇಕ ಆಲೇಖ ಮತ್ತು ಪಟಗಳನ್ನು ಇಡಲಾಗಿತ್ತು. ಕೆಲವು ಪಟಗಳು ರಾಜ್ಯದಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಜೀವನ ಶಿಕ್ಷಣದಲ್ಲಿ ಆದ ಪ್ರಗತಿಯನ್ನು ತೋರಿಸುತ್ತಿದ್ದವು. ಕಳೆದ ಅನೇಕ ವರ್ಷಗಳಿಂದ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಜೀವನ ಶಿಕ್ಷಣ ಶಾಲೆಗಳು ಹಾಗೂ ಇತರ ಶಾಲೆಗಳು ಇವುಗಳ ನಡುವಿನ ತುಲನಾತ್ಮಕ ಪರಿಣಾಮವನ್ನು ತೋರಿಸುವಂತಹ ಕೆಲವು ಪಟಗಳಿಂದ ಜೀವನ ಶಾಲೆಯ ಉಮೇದವಾರರು ಪ್ರತಿಶತ ಹೆಚ್ಚು ಗುಣಗಳನ್ನು ನಿಯಮಿತವಾಗಿ ದೊರಕಿಸಿದುದು ಕಂಡುಬಂದಿತು. ಅನೇಕ ಪಟಗಳು ಸಮವಾಯ ಪದ್ಧತಿಯನ್ನು ಚಿತ್ರೀಕರಿಸುತ್ತಿದ್ದು ಶಾಲೆಯ ಸ್ವಾಭಾವಿಕ, ಸಾಮಾಜಿಕ ಸನ್ನಿವೇಶಗಳಿಂದಲೂ ಮತ್ತು ಸೂಲೋದ್ಯೋಗಗಳಿಂದಲೂ ಆಯ್ದುಕೊಳ್ಳಲಾದ ಚಟುವಟಿಕೆಗಳ ಮುಖಾಂತರ ವಿವಿಧ ವಿಷಯಗಳನ್ನು ಹೇಗೆ ಕಲಿಸಬಹುದು. ಎಂಬುದನ್ನು ತೋರಿಸುತ್ತಿದ್ದವು. ಪ್ರದರ್ಶನದ ಉಪಯುಕ್ತತೆಯನ್ನು ಹೆಚ್ಚಿಸಲು ಬೇರೆ ಕೆಲವು ಚಟುವಟಿಕೆಗಳನ್ನು ಸಂಘಟಿಸಲಾಗಿತ್ತು. ಜೀವನ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳು ಕಚ್ಚಾ ಮಾಲಿನಿಂದ ಪಕ್ಕಾ ಮಾಲು ತಯಾರಾಗುವವರೆಗೆ ಎಲ್ಲ ವಿವಿಧ ಕ್ರಿಯೆಗಳನ್ನು ಪ್ರತ್ಯಕ್ಷ ಮಾಡಿ ತೋರಿಸಿದ್ದುದನ್ನು ಇಲ್ಲಿ ಹೇಳಬಹುದು. ಸಪ್ಟಂಬರ ೨೮ನೆಯ ದಿನಾಂಕ ೫ ತಾಸುಗಳ ವರೆಗೆ ಹತ್ತಿಯಿಂದ ನೂಲುವ ಹಾಗೂ ನೇಯುವವರೆಗಿನ ಕ್ರಿಯೆಗಳನ್ನು ತೋರಿಸಲಾಯಿತು. ಸ್ಥಳೀಕ ಶಾಲೆಗಳ ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ಸಪ್ಟಂಬರ ೨೯ನೆಯ ದಿನಾಂಕ ರಟ್ಟಿನ ಕೆಲಸ ಹಾಗೂ ಬಡಿಗತನದ ವಸ್ತುಗಳನ್ನು ತಯಾರಿಸುವ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಆಗ ಸ್ಥಳೀಕ ಶಾಲೆಗಳಿಂದಲೂ ಹಾಗೂ ಪುಣೆಯ ಜಿಲ್ಲೆಯ ಧೋಂಡ ಪ್ರಾಥಮಿಕ ಶಾಲೆಯಿಂದಲೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬಡಿಗತನವಲ್ಲದೆ ಆವೃತ ಶಿಲಾ ಕಾಗದವನ್ನು ತಯಾರಿಸುವ, ಪುಸ್ತಕಗಳನ್ನು ಕಟ್ಟುವ ಕೈಗಾರಿಕೆಯು ಪ್ರದರ್ಶನ ಏರ್ಪಡಿಸಲಾಗಿತ್ತು. ಅಕ್ಟೋಬರ ಮೊದಲನೆಯ ತಾರೀಖಿನ ದಿನ ಖಂಡಾಳಾ ಪ್ರಾಯೋಗಿಕ ಕ್ಷೇತ್ರದ ವಿದ್ಯಾರ್ಥಿಗಳು ೬ ತಾಸುಗಳ ವರೆಗೆ ಉಣ್ಣೆಯಿಂದ ನೂಲುವ ಹಾಗೂ ನೇಯುವದನ್ನು ಮಾಡಿ ತೋರಿಸಿದರು. ಇದು ಒಂದು ಹೊಸ ಬಗೆಯ ವೈಶಿಷ್ಟ್ಯವಾಗಿದ್ದಿತು. ವಿದ್ಯಾರ್ಥಿಗಳು ಕಚ್ಚಾ ಉಣ್ಣೆಯಿಂದ ಮೊದಲು ಮಾಡಿ ರಗ್ಗು ತಯ್ಯಾರಾಗುವವರೆಗೆ ವಿವಿಧ ಕ್ರಿಯೆಗಳನ್ನು ಮಾಡಿ ತೋರಿಸಿದರು. ಇದರ ಫಲವಾಗಿ ಆ ದಿನ ೫೨ ಇಂಚು ಅಗಲ ಹಾಗೂ ೭ ಫೂಟು ಉದ್ದವಾದ ಒಂದು ಸಂಪೂರ್ಣ ರಗ್ಗು ತಯಾರಾಯಿತು. ಗಾಂಧೀ ಜಯಂತಿಯ ದಿನ ಸ್ಥಳೀಕ ಟ್ರೇನಿಂಗ ಕಾಲೇಜುಗಳ ಹಾಗೂ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಮುಂಜಾನೆ ೮ರಿಂದ ಸಂಜೆ ೬ರ ವರೆಗೆ ಮೌನವಾಗಿ ನೂಲುವದನ್ನು ನೆರವೇರಿಸಿದರು.

ಪ್ರಾತ್ಯಕ್ಷಿಕೆಗಳಲ್ಲದೆ, ರಾತ್ರಿಗಳಲ್ಲಿ ಮನರಂಜನೆಯ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿತ್ತು. ದೃಕ್-ಶಿಕ್ಷಣ ಖಾತೆಯವರು, ಸರಕಾರದವರು ಕೈಕೊಂಡ ಜೀವನ ಶಿಕ್ಷಣ, ಸಮಾಜ ಶಿಕ್ಷಣ, ಹಾಗೂ ಇತರ ರಚನಾತ್ಮಕ ಕಾರ್ಯಕ್ರಮಗಳ ಬಗೆಗೆ ಮೂರು ದಿನ ಚಲಚಿತ್ರಗಳನ್ನು ಪ್ರದರ್ಶಿಸಿದರು. ಸ್ಥಳೀಕ ನಗರ ಸಭಾ ಪ್ರಾಥಮಿಕ ಶಾಲೆಗಳ ಹಾಗೂ ಪ್ರಾಯೋಗಿಕ ಶಾಲೆಗಳ ವಿದ್ಯಾರ್ಥಿಗಳು ಎರಡು ದಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಲೋಣಿಯ ಪ್ರಾಥಮಿಕ ಶಾಲೆ ಹಾಗೂ ಖಂಡಾಳಾದ ಪ್ರಾಯೋಗಿಕ ಕ್ಷೇತ್ರದ ಶಾಲೆಗಳವರು ಇದರಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮಗಳು ಗ್ರಾಮ ಸುಧಾರಣೆ, ಸಮಾಜ ಶಿಕ್ಷಣ, ಅಧಿಕ ಆಹಾರವನ್ನು ಬೆಳೆಯುವದು. ಮೊದಲಾದ ವಿಷಯಗಳನ್ನೊಳಗೊಂಡಿದ್ದವು.

—೪ನೇ ಪುಟಕ್ಕೆ

ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ನಡೆದ ಹಿಂದೀ ಅಲ್ಪಾವಧಿ ಟ್ರೇನಿಂಗ ಕೋರ್ಸ (೨)ದ ಚಟುವಟಿಕೆಗಳು

೧

ಧಾರವಾಡದ ಕೃಷಿ ಮಹಾ ವಿದ್ಯಾಲಯದ ದಾರಿಯಲ್ಲಿ ಹಿಂದೀ ಶಿಕ್ಷಕ-ಶಿಕ್ಷಕಿಯರು.

೨

೧೯೫೫ ಗಾಂಧೀ ಸಪ್ತಾಹ ದಲ್ಲಿ ಸ್ವಚ್ಛತೆ ಕಾರ್ಯದ ದೃಶ್ಯ.

೧೯೫೫ ಗಾಂಧೀ ಸಪ್ತಾಹ ದಲ್ಲಿ ಶ್ರಮದಾನದ ಇನ್ನೊಂದು ನೋಟ.

[ಗಂ. ಟ್ರೇ. ಕಾ. ದಲ್ಲಿ]

Regd. No. B. 5375

ಸಹಜ ಸಾಹಿತ್ಯ! ★ ಜ್ಞಾನರಸ ಸಾಹಿತ್ಯ ★ ಶಾಶ್ವತ ಸಾಹಿತ್ಯ!

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ!!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧. ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ) ೧– ೨–
೨. ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು) ೧– ೪–
೩. ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು) ೧– ೪–
೪. ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು) ೦– ೬–
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧– ೮–
೬. ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ) ೧– ೮–
೭. ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು) ೦–೧೨–
೮. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧– ೦–
೯. ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ) ೧– ೪–
೧೦. ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ) ೧– ೮–
೧೧. ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು) ೧– ೪–
೧೨. ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ) ೧– ೪–
೧೩. ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಕಸುಗಂಬಳಿ) ೦– ೩–
೧೪. ಜೀವನ ದೃಷ್ಟಿ (ವಿವಿಧ ಪ್ರಬಂಧಗಳು) ೧– ೨–
೧೫. ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ) ೧– ೮–

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತ
ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— ಚಡಚಣ ಜಿ. ವಿಜಾ

— ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ, ಕನ್ನಡ ಕಂದನು ಕಾದಿಡುವ ಅಮೌಲ್ಯ ಕೃತಿಗಳು

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ ಸಮಿತಿಯಿಂ
ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು - ಕವಿತಾ ಸಂಕಲನ   **ಆಣೆಕಲ್ಲು** - ಕಥಾ ಸಂಕಲನ

ಭಾಗ–೧. ೧೨೪, ಭಾಗ–೨. ೧೦೪ ಜನರ ಕವಿತೆಗಳು   ಭಾಗ–೧. ೪೦, ಭಾಗ ೨. ೩೬ ಜನರ ಕಥೆಗಳು

ಭಾಗ ೧ – ೧ ರಿಂದ ೪, ೨ – ೫ ರಿಂದ ೭ ವರ್ಗಕ್ಕೆ ಬೆಲೆ ೧೨ ಆಣೆಯಂತೆ ಉತ್ತರದ ಶ್ರೀ ಬೇಂದ್ರೆಯವರಿಂದ ದಕ್ಷಿ
ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ ಪಶ್ಚಿಮದ ಗೋವಿಂದ ಪೈ ಅವರ ವರೆಗಿನ ೩೦೦ ಜನ ಲೇಖಕರ ವಿ
ಕೃತಿ, ವ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆ
ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

— ಶಿಕ್ಷಕರೆಲ್ಲ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ಬಿನ್ನಹ. —

ಭಾರತೀ ಸಾಹಿತ್ಯ ಭಂಡಾರ ಯರನಾ
ಅಂಚೆ :— ಮನಗೋಳಿ— ಜಿ. ವಿಜಾಪುರ

Printed by Shri S. F. Kattimani at Manohar Power Printing Press, Hubli. Edited an Published by Sjts S. P. Patil, B. M. Shintri, S. R. Tatti & Smti. P. A. Bhaskar at the Kanna Prathamik Shikshan Office, Govt. Training College for Men, Dharwar.

ಕನ್ನಡ
ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ

ಬಿಡಿ ಪತ್ರಿಕೆ
೦—೬—೦

ಡಿಸೆಂಬರ ೧೯೫೦

ವಾ. ಚಂದಾ
೪—೦—೦

ಧಾರವಾಡ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಚಟುವಟಿಕೆಗಳು

ಕ್ರಿಕೆಟ್ ಬಯಲಿನಲ್ಲಿ ನಡೆದ ಶ್ರಮದಾನದಲ್ಲಿ ಕಾಲೇಜದ ಶಿಕ್ಷಕರೂ, ಶಿಕ್ಷಕ–ವಿದ್ಯಾರ್ಥಿಗಳೂ ಪೂರ ಪ್ರಮುಖರೊಡನೆ ಭಾಗ ವಹಿಸುತ್ತಿರುವದು.

೨

ಶಿಕ್ಷಕ–ವಿದ್ಯಾರ್ಥಿಗಳು ಕಾಲೇಜದ ಹೊಲದಲ್ಲಿ ಬದನೆಯ ಕಾಯಿಗಳನ್ನು ಹರಿಯುತ್ತಿರುವದು.



೩

ಶಿಕ್ಷಕ-ವಿದ್ಯಾರ್ಥಿಗಳು ಕಾಲೇಜದ ನವಣೆಯ ಬೆಳೆಯಲ್ಲಿ ಕಳೆ ತೆಗೆಯುತ್ತಿರುವದು.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಕೆ. ಬಿ. ತೇರಗಾಂವಕರ, ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ; ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧ | ಡಿಸೆಂಬರ, ೧೯೫೫ | ಸಂಚಿಕೆ ೭

— ಪರಿವಿಡಿ —

೧ ಸಂಪಾದಕೀಯ ೨
೨ ಮೂಲ ಶಿಕ್ಷಣದ ಅರಿವು .... ಶ್ರೀ ಶಿಂತ್ರಿ ಬಸಪ್ಪನವರು ೪
೩ ಕನ್ನಡ ಬಯಲಾಟ .... ಡಾ. ಬಿ. ಎಸ್. ಗದ್ದಗಿಮಠ ೬
೪ ಮಕ್ಕಳಿಗೆ ಓದು ಕಲಿಸುವ ಬಗೆ .... ಡಾ. ವಿ. ಕೊ. ಜವಳಿ ೧೪
೫ ಮಾತೆಯ ಶೈಕ್ಷಣಿಕ ಪ್ರಭಾವ .... ಶ್ರೀ ತಟ್ಟಿ ಶಾಮರಾಯರು ೧೯
೬ ಗ್ರಂಥ ವಿಮರ್ಶೆ ೨೨
೭ ಪ್ರಕಟನೆ ೨೩
೮ ಸಾಹಿತಿಗಳಲ್ಲಿ ವಿಜ್ಞಾಪನೆ ೨೪
೯ ನಯಿ–ತಾಲೀಮ .... ಶ್ರೀ ಶಿಂತ್ರಿ ಬಸಪ್ಪನವರು ೨೫

— ಕವ್ಹರ —

ಗಂ. ಸ. ಟ್ರೇ. ಕಾಲೇಜದ ಚಟುವಟಿಕೆಗಳ ಚಿತ್ರಗಳು ೨
ನಮ್ಮ ಸಮಸ್ಯೆಗಳು ೩

—ಸಂಪಾದಕೀಯ—

ಸಮಾಜ ಶಿಕ್ಷಣ ದಿನಾಚರಣೆ

ಪ್ರತಿ ಸಲದಂತೆ ಈ ವರ್ಷವಾದರೂ ಡಿಸೆಂಬರ ೧ ರಂದು ಸಮಾಜ ಶಿಕ್ಷಣ ದಿನಾಚರಣೆಯು ರಾಜ್ಯದ ಎಲ್ಲೆಡೆಯಲ್ಲಿ ವಿವಿಧ ಕಾರ್ಯಕ್ರಮದೊಂದಿಗೆ ಸಾಂಗವಾಗಿರಲಿಕ್ಕೆ ಸಾಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ದೇಶದಲ್ಲಿ ನಿಬಿಡವಾಗಿ ಬೆಳೆದು ನಿಂತ ನಿರಕ್ಷರತೆಯನ್ನು ಕಳೆಯಲೋಸುಗ ಅನೇಕ ಮುಖದಿಂದ ಯತ್ನಿಸುತ್ತಿರುವದೂ, ಇದಕ್ಕಾಗಿ ಹೇರಳ ಹಣವನ್ನು ವ್ಯಯ ಮಾಡುತ್ತಿರುವದೂ ಸ್ತುತ್ಯ, ಭಾರತದ ಪೂರ್ಣ ವಿಕಾಸವಾಗಿ ಅದು ಭದ್ರ ತಳಹದಿಯ ಮೇಲೆ ನಿಲ್ಲಬೇಕಾದರೆ ದೇಶದ ಎಲ್ಲ ಆಬಾಲವೃದ್ಧರು ಸಾಕ್ಷರರಾಗಬೇಕು. ಸರಕಾರದವರ ಈ ಪ್ರಯತ್ನದಲ್ಲಿ ಭಾರತದ ಪ್ರಜೆಗಳಾದ ನಾವೆಲ್ಲರೂ ತ್ರಿಕರಣ ಪೂರ್ವಕವಾಗಿ ಸಹಕರಿಸುವದು ಯಥಾಯೋಗ್ಯವಾಗಿದೆ.

ರಾಷ್ಟ್ರಾಧ್ಯಕ್ಷರ ೭೨ನೆಯ ಜಯಂತಿ

ಇದೇ ತಿಂಗಳ ದಿನಾಂಕ ೩ರಂದು ನಮ್ಮ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರಿಗೆ ೭೧ ವರುಷಗಳು ತುಂಬಿದವು. ಅಂದು ಅವರು ೭೨ನೆಯ ವಯಸ್ಸಿನಲ್ಲಿ ಹೆಜ್ಜೆಯಿಟ್ಟರು. ಅಂದಿನ ಶುಭ ದಿನದಲ್ಲಿ ಅವರಿಗೆ ಅಸಂಖ್ಯ ಶುಭ ಸಂದೇಶಗಳು ಬಂದಿರಲು ಸಾಕು. ರಾಜೇಂದ್ರ ಬಾಬುಗಳು ಸಾಧು ಜೀವಿಗಳು; ಸಾದಾ ಜೀವಿಗಳು; ಉಚ್ಚ ವಿಚಾರವಂತರು. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಪಟ್ಟ ಕಷ್ಟ, ತೋರಿದ ತ್ಯಾಗ, ಗೈದ ಕಾರ್ಯ, ಮಾಡಿದ ಸೇವೆ ಅಮೋಘವಾದುದು. ಅವರ ಅಗಾಧ ಪಾಂಡಿತ್ಯ, ದಿವ್ಯ ವ್ಯಕ್ತಿತ್ವಗಳನ್ನು ಭಾರತೀಯರು ಅರಿತಿರಲು ಸಾಕು; ಅರಿಯುವದು ಅವಶ್ಯ. ಸ್ವತಂತ್ರ ಭಾರತದ ಇಂದಿನ ಯುಗದಲ್ಲಿ ಅವರು ಇನ್ನೂ ಬಹುಕಾಲ ಬಾಳಲೆಂದೂ ಅವರ ಈ ಶುಭ ದಿನಗಳು ಅನಂತವಾಗಿ ಬರಲೆಂದೂ ಹಾರೈಸುವೆವು.

ಧ್ವಜ ದಿನ

ಡಿಸೆಂಬರ ೭ ನಿವೃತ್ತ ಸೈನಿಕರ ದಿನ; ಧ್ವಜ ದಿನವೆಂದೂ ಅದು ನಾಮಕರಣವೆತ್ತಿದೆ. ಭಾರತದ ಉಳಿದ ಭಾಗಗಳೊಂದಿಗೆ ಮುಂಬಯಿ ರಾಜ್ಯವು ಕೂಡ ಈ ದಿನವನ್ನು ಆಚರಿಸಿತು. ಭಾರತದ ರಕ್ಷಣಾಪಡೆಯಲ್ಲಿ ಇದ್ದು ನಿವೃತ್ತರಾದ ಸೈನಿಕರ, ಅವರ ಕುಟುಂಬದವರ ಸಹಾಯಾರ್ಥವಾಗಿ ನಿಧಿಯನ್ನು ಕೂಡಿಸುವದು ಈ ದಿನದ ಮುಖ್ಯ ಕಾರ್ಯಗಳಲ್ಲಿ ಒಂದು. ರಾಷ್ಟ್ರದ ಭದ್ರತೆಗೆ ಸೈನಿಕರು ಕಷ್ಟಪಡಬೇಕಾಗುವದು. ಹೀಗೆ ಕಷ್ಟಪಟ್ಟು ನಿವೃತ್ತರಾದ ಸೈನಿಕರಿಗೆ ಹಾಗೂ ಅವರ ಕುಟುಂಬದವರಿಗೆ ಸಹಾಯ ನೀಡುವದು ಯೋಗ್ಯವಾಗಿದೆ. ಈ ದಿನದಲ್ಲಿ ಸರಕಾರದವರೊಂದಿಗೆ ಸಾರ್ವಜನಿಕರು ಸಹಕರಿಸುವದೂ, ಧನ ಸಹಾಯ ನೀಡುವದೂ ಸ್ತುತ್ಯವೆಂದು ಬೇರೆ ಹೇಳಬೇಕಿಲ್ಲ.

ಮಾನವನ ಹಕ್ಕುಬಾಧ್ಯತೆಗಳ ದಿನ

ಡಿಸೆಂಬರ ೧೦ ಮಾನವನ ಹಕ್ಕುಬಾಧ್ಯತೆಗಳನ್ನು ತಿಳಿದುಕೊಳ್ಳುವ ಮತ್ತು ತಿಳಿಸುವ ದಿನ. ದ್ವಿತೀಯ ಮಹಾಯುದ್ಧದ ನಂತರ ಪ್ರಮುಖ ರಾಷ್ಟ್ರಗಳು ಒತ್ತಟ್ಟಿಗೆ ಯುದ್ಧವನ್ನು ಜಗತ್ತಿನಿಂದ ತೊಲಗಿಸಬೇಕು ಶಾಂತಿ ಸ್ಥಾಪನೆಯು ಎಲ್ಲೆಡೆಯಲ್ಲಿ ಸ್ಥಾಪಿತವಾಗಬೇಕೆಂಬ ಉದ್ದೇಶದಿಂದ ಸಂಯುಕ್ತ ರಾಷ್ಟ್ರ ಸಂಘವನ್ನು ನಿರ್ಮಿಸಿಕೊಂಡವು. ವಿಶ್ವದಲ್ಲಿಯ ವಿವಿಧ ರಾಷ್ಟ್ರಗಳಲ್ಲಿ ಇರುವಂಥ ಜನರಿಗೆ ಕೆಲವೊಂದು ಮೂಲಭೂತ ಹಕ್ಕುಗಳು ಇರುವವೆಂಬುದು ನಿಜ. ಮಾನವನ ಈ ಮೂಲಭೂತ ಹಕ್ಕುಗಳನ್ನು ಮನ್ನಿಸುವದು ಎಲ್ಲರ ಕರ್ತವ್ಯವಾಗಿದೆ.

ಸರದಾರರ ಸ್ಮರಣೆ

ಭಾರತ ರಾಷ್ಟ್ರದ ನಿರ್ಮಾಪಕರಾದ ಸರದಾರ ವಲ್ಲಭಭಾಯಿಯವರು ದಿನಾಂಕ ೧೫–೧೨–೧೯೫೦ ರಂದು ಪರಲೋಕ ವಾಸಿಗಳಾದರು. ಭಾರತ ಮಾತೆಯು ತನ್ನ ವೀರ ಪುತ್ರರಲ್ಲಿ ಓರ್ವರಾದ ಸರದಾರ ಪಟೇಲರನ್ನು ಕಳೆದುಕೊಂಡು ಇಂದಿಗೆ ೫ ವರ್ಷಗಳಾದವು. "ಉಕ್ಕಿನ ಮನುಷ್ಯ," "ಗುಜರಾಥದ ಹುಲಿ" ಯೆಂದೆನಿಸಿಕೊಂಡ ಸರದಾರರು ನವಭಾರತದ ಐಕ್ಯಕ್ಕೆ ಯತ್ನಿಸಿ ಯಶಸ್ವಿಗಳಾದರು. ಅವರ ಮುತ್ಸದ್ದಿತನ, ಕರ್ತೃತ್ವಶಕ್ತಿ

ಗಂಭೀರ ವೃತ್ತಿಗಳು ಮರೆಯಲಾರದವು. ಇಂಥ ವೀರ, ಧೀರ ಪುರಷನ ಸ್ಮರಣೆ ಎಲ್ಲರಿಗೂ ಶಕ್ತಿ, ತ್ಯಾಗ, ಸೇವಾ ಬುದ್ಧಿಗಳ ಸೆಲೆಯೆಂದು ಹೇಳದಿರೆವು.

ವಿದೇಶ ಧುರೀಣರ ಸಂಚಾರ

ದಿನಾಂಕ ೧೮-೧೧-೧೯೫೫ರಂದು ಭಾರತದ ಐತಿಹಾಸಿಕ ರಾಜಧಾನಿಯಾದ ದಿಲ್ಲಿಯಲ್ಲಿ ರಶಿಯದ ಪ್ರಧಾನ ಮಂತ್ರಿ ನಿಕೋಲಾಯ್ ಬುಲ್ಗಾನಿನ್ ಹಾಗೂ ಪ್ರಧಾನ ಕಾರ್ಯದರ್ಶಿ ನಿಕೀಟಾ ಕ್ರುಶ್ಚೇವರು ಬಂದಿಳಿದರು. ಈ ಮಹಾ ಅತಿಥಿಗಳನ್ನು ತನ್ನ ಈ ಸನ್ಮಿತ್ರರನ್ನು ಭಾರತ ರತ್ನ ಪಂಡಿತ ಜವಾಹರಲಾಲರ ಮುಂದಾಳ್ತನದಲ್ಲಿ ಪಾಲಂ ವಿಮಾನದಲ್ಲಿ ಇಡಿಯ ಭಾರತವೇ ಕಣ್ಣಾಗಿ ಉತ್ಸಾಹಭರಿತವಾಗಿ ಸ್ವಾಗತಿಸಿತು. ರಶಿಯನ್ ಧುರೀಣರು ಭಾರತದಲ್ಲಿಯ ಐತಿಹಾಸಿಕ ಸ್ಥಳಗಳಿಗೆ ಔದ್ಯೋಗಿಕ ಕೇಂದ್ರಗಳಿಗೆ, ಮಹಾನಗರಗಳಿಗೆ ಭೆಟ್ಟಿಯಿತ್ತರು. ತಾಜಮಹಲ, ಭಾಕ್ರಾನಾಂಗಲ್ ಅಣೆಕಟ್ಟುಗಳಲ್ಲದೆ ಮುಂಬಯಿ, ಪುಣೆ, ಬೆಂಗಳೂರ, ಕೊಯಿಮತ್ತೂರ, ಮದ್ರಾಸ, ಕಲಕತ್ತಾ ಮೊದಲಾದ ನಗರಗಳಿಗೆ ಸಂದರ್ಶನವಿತ್ತರು. ಅವರು ಹೋದಲ್ಲೆಲ್ಲ ಜನರು, ಅಧಿಕಾರಸ್ಥರು ತಂಡೋಪತಂಡವಾಗಿ ಸ್ವಾಗತವಿತ್ತರು; ಅಲ್ಲಲ್ಲಿ ಮಾನಪತ್ರಗಳನ್ನು ಅರ್ಪಿಸಲಾಯಿತು. ರಶಿಯನ್ ಧುರೀಣರು ಸಮಯೋಚಿತವಾಗಿ ಭಾಷಣಗಳನ್ನು ಮಾಡಿ ರಶಿಯ-ಭಾರತಗಳ ಸ್ನೇಹದ ಚಿರಸ್ಥಾಯಿಯನ್ನೂ, ಸಂವರ್ಧನೆಯನ್ನೂ ಹಾರೈಸಿದರು. ಅವರ ಈ ಸಂಚಾರವು ಉಭಯ ರಾಷ್ಟ್ರಗಳ ಇತಿಹಾಸದಲ್ಲಿ ಮರೆಯಲಾಗದ ಮೈಲುಗಲ್ಲೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ದಿನಾಂಕ ೨೬-೧೧-೫೫ ರಂದು ಅರೇಬಿಯಾದ ಅರಸರಾದ ಸೌದ ಐಬ್ನೀದ ಅಬ್ದುಲ್ ಅಜೀಜರು ವಿಮಾನದಲ್ಲಿ ಮುಂಬಯಿಗೆ ಬಂದಿಳಿದು ತಮ್ಮ ೧೭ ದಿನಗಳ ಭಾರತ ಸಂಚಾರವನ್ನು ಪ್ರಾರಂಭಿಸಿದರು. ಮುಂಬಯಿಯಲ್ಲಿ ಹಾಗೂ ಅವರು ಹೋದ ಕಡೆಗಳಲ್ಲೆಲ್ಲ ಅವರಿಗೆ ಹೃತ್ಪೂರ್ವಕ ಸ್ವಾಗತವನ್ನು ನೀಡಲಾಯಿತು. ಅರಸು ಸೌದರು ದೇಶದ ಹಲವು ಐತಿಹಾಸಿಕ ಸ್ಥಳಗಳಿಗೆ ಹಾಗೂ ನಗರಗಳಿಗೆ ಭೆಟ್ಟಿಯಿತ್ತರು; ಮತ್ತು ಭಾರತ-ಸೌದಿ ಅರೇಬಿಯಾಗಳ ಸ್ನೇಹವು ಅಭಿವೃದ್ಧಿ ಹೊಂದುವದೆಂದು ಹಾರೈಸಿದರು.

ಮೇಲ್ಕಾಣಿಸಿದ ಅತಿಥಿಗಳಲ್ಲದೆ ನೇಪಾಳದ ರಾಜ-ರಾಣಿಯರು ಮತ್ತು ಸಿಂಗಾಪುರದ ಮಾರ್ಶಲ್ ಡೇವ್ಹಿಡ್ ಅವರು ಭಾರತದ ಮಹಾ ಅತಿಥಿಗಳಾಗಿ ದೇಶದಲ್ಲಿ ಭೆಟ್ಟಿಯಿತ್ತುದು ಸಂತಸದ ಹಾಗೂ ಭಾರತೀಯರೆಲ್ಲರಿಗೆ ಹೆಮ್ಮೆಯ ಮಾತಾಗಿದೆ.

ಜೀವನ ಶಿಕ್ಷಣ ಪರಿಷತ್ತು

ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳ ಜೀವನ ಶಿಕ್ಷಣ ಶಾಲೆಗಳ ಬಿ. ಡಿ. ಎ. ಇ. ರವರ ಡಿ. ಎ. ಇ. ಹಾಗೂ ಎ. ಓ. ರವರ ಪರಿಷತ್ತು ದಿನಾಂಕ ೩, ೪ ಡಿಸೆಂಬರ ೧೯೫೫ ರಂದು ಧಾರವಾಡ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ನಡೆಯಿತು. ಮುಂಬೈ ರಾಜ್ಯದ ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಚಿಮಣಲಾಲರು ಅಧ್ಯಕ್ಷರಾಗಿದ್ದರು; ಅವರು ಈ ಪ್ರಸಂಗದಲ್ಲಿ ಏರ್ಪಡಿಸಿದ ಪ್ರದರ್ಶನವನ್ನು ಉದ್ಘಾಟಿಸಿದರು. ರಾಜ್ಯದ ಶಿಕ್ಷಣ ಖಾತೆಯ ಡಿ. ಡೈರೆಕ್ಟರರಾದ ಡಾ. ಚಿಕ್ಕರಮಣಿಯವರೂ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಉಪಯುಕ್ತ ಸೂಚನೆಗಳನ್ನು ಕೊಟ್ಟರು. ಪರಸ್ಪರ ವಿಚಾರ ವಿನಿಮಯಕ್ಕೆ, ಅಡೆತಡೆಗಳನ್ನು ನಿವಾರಿಸುವ ಬಗೆಗಳನ್ನು ಕಂಡು ಹಿಡಿಯಲಿಕ್ಕೆ, ಪರಸ್ಪರ ಪ್ರಗತಿಯನ್ನು ತಿಳಿದುಕೊಳ್ಳಲಿಕ್ಕೆ ಇಂಥ ಪರಿಷತ್ತುಗಳು ಅವಶ್ಯವೆಂದೂ ಇದರಿಂದ ಶಿಕ್ಷಣದ ಪ್ರಗತಿಗೆ ಪ್ರೋತ್ಸಾಹಕವಾಗುವವೆಂದೂ ಹೇಳಬಯಸುವೆವು.

ನವಚೇತನ ಶಿಬಿರಗಳು

ರಾಜ್ಯದಲ್ಲಿಯ ಎಲ್ಲ ಮೂಲೋದ್ಯೋಗ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳೆಂದು ಪರಿವರ್ತಿಸಿದ್ದರಿಂದ ಈ ಶಾಲೆಗಳಲ್ಲಿಯ ಶಿಕ್ಷಕರಿಗೆ ಜೀವನ ಶಿಕ್ಷಣದ ಮೂಲಭೂತ ಸಿದ್ಧಾಂತವನ್ನು ತಿಳಿಸಿಕೊಡುವದು ಅವಶ್ಯ. ಈ ಉದ್ದೇಶದಿಂದ ಕಳೆದ ದೀಪಾವಳಿ ಬಿಡುವಿನಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ೩೭ ತರಬೇತಿ ಶಿಬಿರಗಳನ್ನು ಸಂಘಟಿಸಲಾಯಿತು. ಮೂಲೋದ್ಯೋಗವನ್ನು ಕಲಿಸುವ ಪ್ರತ್ಯಕ್ಷ ಕೆಲಸ, ಶ್ರಮದಾನ, ಸಾಂಘಿಕ ಜೀವನ ಮುಂತಾದವುಗಳು ಈ ಶಿಬಿರಗಳ ವೈಶಿಷ್ಟ್ಯವಾಗಿದ್ದವು. ಜೀವನ ಶಿಕ್ಷಣದ ತತ್ವಗಳನ್ನು ಪ್ರಚಾರಗೊಳಿಸುವದರಲ್ಲಿ ಈ ಶಿಬಿರಗಳಿಂದ ಹೆಚ್ಚು ಪ್ರಚೋದನೆ ದೊರೆತಿದೆ.

ಮೂಲ ಶಿಕ್ಷಣದ ಅರಿವು

ಅನುವಾದಕರು: **ಶ್ರೀ ಶಿಂತ್ರಿ ಬಸಪ್ಪನವರು**

[ಜನತೆಯಲ್ಲಿ ಮೂಲ ಶಿಕ್ಷಣದ ಬಗೆಗೆ ಸರ್ವತೋಮುಖವಾದ ಅರಿವನ್ನುಂಟುಮಾಡಲು ಕೇಂದ್ರ ಶಿಕ್ಷಣ ಶಾಖೆಯವರು "Understandidg Basic Education" (ಮೂಲ ಶಿಕ್ಷಣದ ಅರಿವು) ಎಂಬ ಹೆಸರಿನ ಕೈಪಿಡಿಯೊಂದನ್ನು ಹೋದ ವರುಷ ಪ್ರಕಟಗೊಳಿಸಿದ್ದಾರೆ. ಮೂಲ ಶಿಕ್ಷಣದ ಐತಿಹಾಸಿಕ ಹಿನ್ನೆಲೆ, ಅದರ ಬಗೆಗೆ ಜನತೆಯಲ್ಲಿ ಹರಡಿಕೊಂಡಿದ್ದ ತಪ್ಪುಕಲ್ಪನೆಗಳು, ಅದರಲ್ಲಿ ಅಡಕವಾಗಿದ್ದ ಮನಃಶಾಸ್ತ್ರದ ಹಿನ್ನೆಲೆ ಹಾಗೂ ತಾತ್ತ್ವಿಕ ವಿಚಾರಗಳು, ಅದರ ವಿಧಾನಗಳು, ಸ್ವಾವಲಂಬನ ಸಮಸ್ಯೆ, ಮೊದಲಾದ ಅತ್ಯುಪಯುಕ್ತ ವಿಷಯಗಳೆಲ್ಲ ಆ ಕೈಪಿಡಿಯಲ್ಲಿ ಕೂಲಂಕಷವಾಗಿ ವಿವೇಚಿಸಲ್ಪಟ್ಟಿವೆ. ಆದುದರಿಂದ, ಮೂಲ ಶಿಕ್ಷಣದ ಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರಿಗೆಲ್ಲ ಮಾರ್ಗದರ್ಶನ ಮಾಡಲು ಅದು ನಿಃಸಂದೇಹವಾಗಿ ಕೈದೀವಟಿಗೆಯಾಗಿದೆ. ಪ್ರಸ್ತುತ ಲೇಖಾಂಕವೂ ಹಾಗೂ ಇನ್ನು ಮುಂದೆ ಕೊಡಲಾಗುವ ಲೇಖಾಂಕಗಳೂ ಅದರ ಅನುವಾದಗಳು.]

ಪ್ರಸ್ತಾವನೆ.

"ನಾನು ನಾಶಗೊಳಿಸಲು ಬಂದವನಲ್ಲ, ಕಟ್ಟಲು ಬಂದವನು" ಎಂದು ಗ್ರೇಟ ಮೆಸ್ಸಿಯಾ (Great Messiah) ಎಂಬ ಹೆಸರಿನ ದೇವದೂತನು ಅಂದನು. ನಮ್ಮ ಈ ವಿಸ್ತಾರವಾದ ದೇಶದ ಭವಿತವ್ಯವನ್ನು ಕಟ್ಟಲು ಹೆಣಗಾಡುವ ಈ ಸಮಯದಲ್ಲಿ ಆ ಮೆಸ್ಸಿಯಾನ ಸ್ಫೂರ್ತಿಯು ನಮ್ಮಲ್ಲಿಯೂ ಸಂಚರಿಸಬೇಕು. ನಮಗೆ ಈಗ ಬೇಕಾದುದು ರಚನಾತ್ಮಕ ಸಲಹೆ, ವಿನಾಶಾತ್ಮಕ ಟೀಕೆಯಲ್ಲ; ಸಲಹೆಯಿಂದಷ್ಟೇ ನಮ್ಮ ಕೆಲಸವಾಗದು. ಆ ರಚನಾತ್ಮಕ ಸಲಹೆಗಳನ್ನು ಕಾರ್ಯರಂಗಕ್ಕಿಳಿಸಲು ನಾವು ಯೋಗ್ಯತೆಯನ್ನೂ ನಿಷ್ಠೆಯನ್ನೂ ಜಿಗಟುತನವನ್ನೂ ಪಡೆಯಲು ಹೆಣಗಬೇಕು. ಈ ಸಂಗತಿಯು ನಮ್ಮ ಜೀವನದ ಎಲ್ಲ ರಂಗಗಳಿಗೂ ಅನ್ವಯಿಸುತ್ತಿದೆ. ಮುನ್ನೋಟದ ಹಂಚಿಕೆಯನ್ನಿಟ್ಟುಕೊಂಡು ನಾವು ನಮ್ಮ ಶಿಕ್ಷಣವನ್ನು ರೂಪಿಸಿಕೊಳ್ಳುತ್ತಿರುವಾಗ ಈ ಮಾತು ನಮಗೆ ಹೆಚ್ಚಿನ ಪ್ರಮಾಣದಲ್ಲಿ ಅನ್ವಯಿಸುತ್ತಿದೆ.

ಮಹಾತ್ಮಾ ಗಾಂಧಿಯವರು ಶಿಕ್ಷಣದ ಸಮಸ್ಯೆಗಳನ್ನು ಕುರಿತು ಸುದೀರ್ಘವಾಗಿ ಆಲೋಚಿಸಿದರು. ನಮ್ಮ ಜನರ ಸರ್ವತೋಮುಖವಾದ ಏಳ್ಗೆಯ ಸಲುವಾಗಿ ಸುಮಾರು ೫೦ ವರ್ಷಗಳ ವರೆಗೆ ಬಿಟ್ಟೂ ಬಿಡದೆ ಕೆಲಸ ಮಾಡಿದರು. ಕೇವಲ ರಾಜ್ಯಕೀಯ ಚಳವಳಿಗಳಿಂದ ನಮ್ಮ ಭವಿತವ್ಯದ ತಳಹದಿಯು ಸಾಧ್ಯವಾಗಲಾರದೆಂಬುದನ್ನು ಕಂಡು ಹಿಡಿದರು. ದಿನಕ್ಕೆ ಒಂದು ಊಟವೂ ಸಹ ಸಿಗದ ಲಕ್ಷೋಪಲಕ್ಷ ದೇಶಬಾಂಧವರಿಗೆ ಆಹಾರವನ್ನು ದೊರಕಿಸಿಕೊಡುವ ಸಾಮಾಜಿಕ ಕ್ರಾಂತಿಯೊಂದು ಅವರಿಗೆ ಬೇಕಾಗಿತ್ತು. ಅದನ್ನು ಸಾಧಿಸಲೋಸುಗ ಅವರು ಖಾದಿ, ಹರಿಜನ, ಮತ್ತು ಹಳ್ಳಿಗಾಡದ ಕಸಬುಗಳ ಆಂದೋಲನಗಳನ್ನು ಹೂಡಿದರು. ಆದರೆ, ಆ ಚಳವಳಿಗಳಿಂದ ಅಷ್ಟೊಂದು ಪ್ರಗತಿಯಾದದು ಕಂಡು ಬರಲಿಲ್ಲ. ಮೇಲೆ ಹೇಳಿದ ಸಮಸ್ಯೆಗಳನ್ನೆಲ್ಲ ನಮ್ಮ ರಾಷ್ಟ್ರದ ಹಿತದ ದೃಷ್ಟಿಯಿಂದ ಬಿಡಿಸುವದೆಂದರೆ, ನಮ್ಮ ಶಾಲೆ ಕಾಲೇಜುಗಳಲ್ಲಿಯ ಶಿಕ್ಷಣ ಕ್ರಮವನ್ನು ನಮ್ಮ ರಾಷ್ಟ್ರಕ್ಕೆ ಒಗ್ಗುವ ರೀತಿಯಲ್ಲಿ ಮಾರ್ಪಡಿಸಬೇಕೆಂಬ ನಿರ್ಣಯಕ್ಕೆ ಕೊನೆಗೆ ಬಂದು ಮುಟ್ಟಿದರು. ಜೀವನದಲ್ಲಿಯ ಉದಾತ್ತ ಧ್ಯೇಯಗಳಿಗೋಸ್ಕರ ಚಿಕ್ಕ ಮಕ್ಕಳಿಗೂ ಜನರಿಗೂ ತರಬೇತಿಯನ್ನು ಕೊಡುವದು ಅವರಿಗೆ ಬೇಕಾಗಿತ್ತು. ಆ ಉದ್ದೇ

ಶವನ್ನು ಈಡೇರಿಸಿಕೊಳ್ಳುವದಕ್ಕಾಗಿ ಒಬ್ಬರು ಮತ್ತೊಬ್ಬರ
ಶ್ರಮದ ಸುಲಿಗೆಯನ್ನು ಮಾಡದಂತಹ ಹಾಗೂ ಎಲ್ಲರೂ
ತಮತಮಗೆ ಒಪ್ಪಿಸಿಕೊಟ್ಟ ಕೆಲಸವನ್ನು ಸ್ವಯಂ ಶಿಸ್ತಿ
ನಿಂದಲೂ ಪ್ರೇಮದಿಂದಲೂ ಸೇವಾಭಾವನೆಯಿಂದಲೂ
ಮಾಡುವಂತಹ ಜನರ ಸಮಾಜವೊಂದನ್ನು ನಿರ್ಮಿಸಲು
ಬಯಸಿದರು. ಈಪ್ರಕಾರ ರಚಿಸಲ್ಪಟ್ಟ ಸಮಾಜದಲ್ಲಿ
ಕಾಯಕದ ಗೌರವವನ್ನು ಕಾಪಾಡಿಕೊಂಡು ಅದನ್ನು
ಹೆಚ್ಚಿಸಬೇಕು. ತನ್ನನ್ನು ತಾನು ಪ್ರೀತಿಸುವಂತೆ ತನ್ನ
ಹಳ್ಳಿಯನ್ನೂ ತನ್ನ ದೇಶವನ್ನೂ ವಿಶ್ವದ ಎಲ್ಲ ಮಾನವ
ರನ್ನೂ ಪ್ರೀತಿಸಲು ಕಲಿಸಬೇಕು; ಮಾತ್ರವಲ್ಲದೆ, ಮಕ್ಕಳು
ಹುಮ್ಮಸದಿಂದ ಕೆಲಸ ಮಾಡುತ್ತ ಕಲಿಯುವಂತಹ
ನೊಂದು ಶಿಕ್ಷಣ ಕ್ರಮವು ಅವರಿಗೆ ಬೇಕಾಗಿತ್ತು. ನಮ್ಮ
ದೇಶದ ಬಗೆಗೆ ಮಹಾತ್ಮರ ಪ್ರೇಮವು ಅಗಾಧವಾಗಿ
ದ್ದಿತು; ಚಿಕ್ಕ ಮಕ್ಕಳ ಬಗೆಗೂ ಅವರ ಪ್ರೇಮವು ಹೇಳ
ತೀರದಷ್ಟಿತ್ತು. ಮಕ್ಕಳ ಹಾಗೂ ದೇಶದ ಮೇಲೆ ಇದ್ದ
ಅವರ ಗಾಢ ಭಕ್ತಿ–ಪ್ರೇಮಗಳಿಂದಲೇ ಮೂಲ ಶಿಕ್ಷಣವು
ಜನ್ಮ ತಾಳಿತು.

ಮೂಲ ಶಿಕ್ಷಣದ ತತ್ತ್ವಗಳು ವಿಶ್ವದ ತುಂಬೆಲ್ಲ
ಮಾನ್ಯತೆಯನ್ನು ಪಡೆದಿವೆ. ಅವುದಾದರೊಂದು ಕೈಗಾ
ರಿಕೆ ಇಲ್ಲವೆ ಚಟುವಟಿಕೆಯ ಮುಖಾಂತರ ಶಿಕ್ಷಣ, ಎಂಬ
ತತ್ತ್ವಕ್ಕೆ ಈಗ ಭಿನ್ನಾಭಿಪ್ರಾಯಗಳೇ ಇಲ್ಲ. ಅಮೇರಿಕೆ
ಇಂಗ್ಲಂಡ ಮೊದಲಾದ ಮುಂದರಿದ ರಾಷ್ಟ್ರಗಳಲ್ಲಿ ಈ
ತತ್ತ್ವವು ಸ್ವೀಕರಿಸಲ್ಪಟ್ಟಿದೆ. ವರ್ಗದ ಕೋಣೆಯಲ್ಲಿ ಕುಳಿ
ತಲ್ಲಿಯೇ ಕುಳಿತು ಕಲಿಸುವ ಪದ್ಧತಿಯು ಈಗ ಪಾಶ್ಚಿ
ಮಾತ್ಯ ದೇಶಗಳಲ್ಲಿ ಮಾಯವಾಗಿ, ಚಟುವಟಿಕೆಗಳ
ಮುಖಾಂತರ ಕಲಿಸುವ ಪದ್ಧತಿಯು ಭರದಿಂದ ಬಳಿಕೆ
ಯಲ್ಲಿ ಬರತೊಡಗಿದ್ದು, ಹೊಲದ ಕೆಲಸ ಹಾಗೂ ಕೈಗಾ
ರಿಕೆಗಳು ಅಭ್ಯಾಸ ಪತ್ರಿಕೆಯ ಅಂಗಗಳಾಗಿವೆ. ಜನ
ಸಾಮಾನ್ಯರಿಗೆಲ್ಲ ಉಪಯೋಗ ಬೀಳುವ ಉದ್ಯೋಗಗ
ಳನ್ನೇ ಆಯ್ದುಕೊಳ್ಳುವದು ಮಹಾತ್ಮರಿಗೆ ಬೇಕಾಗಿತ್ತು.
ಶಿಕ್ಷಣದ ಲಾಭಗಳನ್ನು ಹೆಚ್ಚಾಗಿ ಒದಗಿಸಿ ಕೊಡುವ
ಸಾಮರ್ಥ್ಯವುಳ್ಳ ಉದ್ಯೋಗಗಳನ್ನು ಆರಿಸುವಲ್ಲಿ ತುಂಬಾ
ಎಚ್ಚರಿಕೆಯನ್ನು ವಹಿಸಿದ್ದರು. ಆ ಉದ್ಯೋಗಗಳು
ಮಾನವನ ಮುಖ್ಯ ಚಟುವಟಿಕೆಗಳಿಗೆಲ್ಲ ಸ್ವಾಭಾವಿಕ
ವಾಗಿ ಸಂಬಂಧೀಕರಣವನ್ನುಂಟು ಮಾಡುವಂತಹವಿರ
ಬೇಕು. ಜೀವನಕ್ಕೆ ಅಗತ್ಯವಾಗಿ ಬೇಕಾಗುವ ಜ್ಞಾನದ
ಸಮವಾಯವನ್ನುಂಟು ಮಾಡುವ ಚಟುವಟಿಕೆಗಳನ್ನೆಲ್ಲ
ಅವು ಅಳವಡಿಸಿಕೊಂಡಿರಬೇಕು. ಎರಡನೆಯದಾಗಿ,
ಅವುಗಳ ಹುಟ್ಟುವಳಿಯು ಮಾನವನಿಗೆ ಅಗತ್ಯವಾಗಿ
ಬೇಕಾಗುವಂತಹದಿದ್ದು ಲಾಭದಾಯಕವಿರಬೇಕು. ಅನ್ನ
ಮತ್ತು ಅರಿವೆ, ಇವೆರಡು ಮಾನವನ ಅತಿ ಮುಖ್ಯವಾದ
ಬೇಡಿಕೆಗಳು. ಸುದೈವದಿಂದ, ಒಕ್ಕಲತನ, ನೂಲುವದು
ಮತ್ತು ನೇಯುವದು, ಇವೆರಡು ಉದ್ಯೋಗಗಳು
ಶೈಕ್ಷಣಿಕ ಲಾಭಗಳನ್ನು ಹೆಚ್ಚಾಗಿ ಒದಗಿಸಿ ಕೊಡುತ್ತಿವೆ.
ಆ ಕಾರಣಗಳಿಂದ, ಇವೆರಡು ಉದ್ಯೋಗಗಳು ಮೂಲ
ಶಿಕ್ಷಣದಲ್ಲಿ ಮೂಲೋದ್ಯೋಗಗಳಾಗಿ ಆಯ್ದುಕೊಳ್ಳ
ಲ್ಪಟ್ಟಿವೆ.

ಶಿಕ್ಷಕರು, ಪಾಲಕರು ಮತ್ತು ಶಿಕ್ಷಣದಲ್ಲಿ ಆಸ್ಥೆ
ಯುಳ್ಳವರು ನಮ್ಮ ರಾಷ್ಟ್ರಪಿತನಿಂದ ಹೊರಹೊಮ್ಮಿದ
ಈ ಶಿಕ್ಷಣದ ಯೋಜನೆಯನ್ನು ಚನ್ನಾಗಿ ಅಭ್ಯಸಿಸಲು
ನಮ್ರಪೂರ್ವಕವಾಗಿ ಕೇಳಿಕೊಳ್ಳಲಾಗಿದೆ. ಕೇವಲ
ಬೌದ್ಧಿಕ ಅಭ್ಯಾಸದಿಂದ ನಿಜವಾದ ಉಪಯುಕ್ತ ಜ್ಞಾನವು
ಲಭಿಸಲಾರದು. ಈ ಉದ್ಯೋಗಗಳನ್ನು ಹಾಗೂ ಉಳಿದ
ಚಟುವಟಿಕೆಗಳನ್ನು ನಾವು ಕಲಿತು ಅವುಗಳಲ್ಲಿ ನಿಷ್ಣಾತ
ರಾಗಬೇಕು. ಯಾಕಂದರೆ, ಅವುಗಳಲ್ಲಿ ನಾವು ನೈಪುಣ್ಯ
ವನ್ನು ಪಡೆಯುವದೇ ಮೂಲ ಶಿಕ್ಷಣದ ತಳಹದಿಯು.
ಉತ್ಪಾದಕ ಶಕ್ತಿಯುಳ್ಳ ಚಟುವಟಿಕೆಗಳ ಚಟವು ನಮ್ಮ
ಮಕ್ಕಳಲ್ಲಿ ಬೆಳೆದು ಬಂದು ನಮ್ಮ ರಾಷ್ಟ್ರದ ಕೆಲಸ
ಮಾಡುವ ಶಕ್ತಿಯನ್ನು ಹಿಗ್ಗಿಸಬಲ್ಲದು, ಮಹತ್ಕಾರ್ಯಗಳ
ನ್ನೆಸಗಬಲ್ಲದು. ದೇವರ ದಯವಿದ್ದರೆ, ನಮ್ಮ ಶಿಕ್ಷಣದ
ಈ ಯೋಜನೆಯು ನಮ್ಮ ರಾಷ್ಟ್ರದ ಉತ್ಕರ್ಷದ ಹೊಸ
ಯುಗವನ್ನು ಪ್ರಾರಂಭಿಸುವದು.

(ಮುಂದುವರಿಯುವದು)

- ದೊಡ್ಡಾಟಗಳು (ಸಾರಥಿಯಾಟಗಳು)
  - ಜಾಂಗುಟೆಯಾಟಗಳು
    - ಶಿವಶಕ್ತಿ ಕಥೆಗಳು
      - ೧. ಮಹಿಷಾಸುರನ ವಧೆ
      - ೨. ಶುಂಭನಿಶುಂಭರ ವಧೆ
      - ೩. ಚಂಡಮುಂಡಾಸುರ ವಧೆ
      - ೪. ಮಹಾಶಕ್ತಿಯ ಅವತಾರ
      - ೫. ಭೈರವೇಶ್ವರ ಅವತಾರ
  - ತಾಳದ ಆಟಗಳು
    - ಮೂಡಲ ಪಾಯ
      - ಶಿವಕಥೆಗಳು
        - ೧. ಬಾಣಾಸುರ ವಧೆ
        - ೨. ಭಸ್ಮಾಸುರವಧೆ
        - ೩. ದಕ್ಷಬ್ರಹ್ಮನ ಪಾರುಪತ್ಯ
        - ೪. ತಾರಕಾಸುರವಧೆ
        - ೫. ತ್ರಿಪುರ ಸಂಹಾರ
        - ೬. ಕಿರಾತಾರ್ಜುನರ ಕಾಳಗ
        - ೭. ಜಲಂಧರನವಧೆ
        - ೮. ಬಸವ ವಿಜಯ
        - ೯. ಮಾರ್ಕಂಡೇಯ
        - ೧೦. ಮಾರುತಿ ಲಿಂಗಧಾರಣ
        - ಇತ್ಯಾದಿ
      - ಐತಿಹಾಸಿಕ ಕಥೆಗಳು
        - ೧. ಸತ್ಯೇಂದ್ರ ಚೋಳರಾಜ
        - ೨. ಕರಿಕಾಲ ಚೋಳ
        - ೩. ಕಲ್ಯಾಣ ಬಸವೇಶ
        - ೪. ಕುಮಾರ ರಾಮ
        - ಇತ್ಯಾದಿ
    - ಯಕ್ಷಗಾನ
      - ರಾಮಯಣ
        - ೧. ಸೀತಾಸ್ವಯಂವರ
        - ೨. ರಾವಣ ಸಂಹಾರ
        - ೩. ಇಂದ್ರಜಿತುವಿನ ಸಂಹಾರ
        - ೪. ಕುಂಭಕರ್ಣನ ಸಂಹಾರ
        - ೫. ಲಂಕಾದಹನ
        - ೬. ವಿಭೀಷಣನ ಪಟ್ಟಾಭಿಷೇಕ
        - ೭. ರಾಮಪಟ್ಟಾಭಿಷೇಕ
        - ೮. ಲವಕುಶರ ಕಾಳಗ
        - ಇತ್ಯಾದಿ
      - ಮಹಾಭಾರತ
        - ೧. ದ್ರೌಪದಿ ಸ್ವಯಂವರ
        - ೨. ದ್ರೌಪದಿ ವಸ್ತ್ರಾಹರಣ
        - ೩. ಚಿತ್ರಾಂಗದಾ
        - ೪. ಕೀಚಕವಧೆ
        - ೫. ಕೌರವ ಪಾಂಡವ ಕಾಳಗ
        - ೬. ವೀರಅಭಿಮನ್ಯು
        - ೭. ಘಟೋದ್ಗಜನ ಕಾಳಗ
        - ೮. ಕರ್ಣಾರ್ಜುನರ ಕಾಳಗ
        - ಇತ್ಯಾದಿ

ಯಲಾಟ (ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಲಾಟಗಳು



ಜಾಂಗುಟೆ ಆಟ

ಮೇಲೆ ಕೊಟ್ಟ ಕನ್ನಡ ಬಯಲಾಟದ ಪ್ರಕಾರಗಳಲ್ಲಿ ಅನೇಕರು 'ಜಾಂಗುಟೆ' ಯಾಟದ ಹೆಸರನ್ನು ಸಹ ಕೇಳಿರಲಿಕ್ಕಿಲ್ಲ. ಅವರಿಗೆ ಅದು ಹೊಸದೆಂದೇ ಕಾಣಬಹುದು. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ತಾಳದ ಆಟಗಳು ಕನ್ನಡಿಗರಲ್ಲಿ ಬರುವ ಮುನ್ನ ಜಾಂಗುಟೆ ಆಟಗಳೇ ಪುರಾತನವಲ್ಲಿದ್ದುವು. ನಟ್ಟುವಿಗ (ಕಥೆಗಾರ) ನು ಜಾಂಗುಟೆಯನ್ನು ನುಡಿಸಿ ತಾನ ಹಿಡಿದು ಹಾಡಿ ಮದ್ದಳೆಯವನಿಗೆ ತಾಳಲಯದ ಕಲ್ಪನೆಯನ್ನು ಕೊಡಲು ಮದ್ದಳೆಯವನು ಗತ್ತು ಹಿಡಿದು, ಅಟ್ಟದಮೇಲೆ ಬಂದ ಸೋಗುಗಳನ್ನು ಕುಣಿಸಿ ತಾಳ ಮುರಿದು ಮುಕ್ತಾಯ ಮಾಡುವನು. ಜಾಂಗುಟೆ ಆಟಗಳು ವಿಶೇಷವಾಗಿ ಆದಿಶಕ್ತಿಯ ಕಥೆಗಳು. ಈ ಕಥೆಗಳಲ್ಲಿ ಅರ್ಭಾಟ ಹಾರಾಟಗಳು ವಿಶೇಷವಿರುವುವು. ಸೋಗುಗಳು ರಾವುತುಂಬಿ ಘೋರವಾಗಿ ಹಾರಾಡುವುದನ್ನೂ ಜಿಗಿದಾಡುವುದನ್ನೂ ನೋಡಿದರೆ ಭೀತಿ ಬಾರದಿರದು. ಸೋಗುಗಳಿಗೆ ಮೈತುಂಬಲು ನೋಡುವವರು ಟೆಂಗಿನಕಾಯಿಗಳನ್ನು ಇಳೆಗೊಗೆಯುವದಲ್ಲದೆ ಕುಂಬಳಕಾಯಿಗಳನ್ನೂ ಒಡೆಯುವರು. ಒಮ್ಮೊಮ್ಮೆ ವಿಪರೀತವಾಗಿ ಅನಾಹುತವಾದ ಉದಾಹರಣೆಗಳು ಇವೆ. ಆದುದರಿಂದ ಈ ಆಟಗಳು ಬರಬರುತ್ತ ಮುಗ್ಗಿಹೋದುವು. ಈಗಂತೂ ಈ ಆಟಗಳನ್ನು ಯಾರೂ ಆಡುವದಿಲ್ಲ. ವಿಶೇಷವಾಗಿ ಈ ಆಟಗಳನ್ನು ಆಡುವ ಜನರು ಅಕ್ಕಸಾಲಿಗರು, ಬಡಿಗರು, ಕಂಬಾರ ಮೊದಲಾದ ಶಕ್ತಿಯೋಪಾಸಕರು. ಈ ಆಟಗಳನ್ನು ನೋಡಿದ ಹಲಕೆಲವು ಹಿರಿಯರು ಹಳ್ಳಿಗಳಲ್ಲಿ ಈಗಲೂ ಜೀವಂತವಿದ್ದಾರೆ. ಜಾಂಗುಟೆಯಾಟದ ಕಥೆಯ ಪುಸ್ತಕಗಳು ಹಲಕೆಲವು ಹಳ್ಳಿಗಳಲ್ಲಿ ಈಗಲೂ ಓದಲಿಕ್ಕೆ ದೊರೆಯುವುವು.

ಮೂಡಲಪಾಯ

ಉತ್ತರಕರ್ನಾಟಕದ ಎಲ್ಲ ಹಳ್ಳಿಗರ ಮೆಚ್ಚುಗೆಯನ್ನು ಪಡೆದ ಬಯಲಾಟವೆಂದರೆ ಮೂಡಲಪಾಯ. ಮೂಡಲಪಾಯದ ಬಯಲಾಟವನ್ನು ಆಡದ ಹಳ್ಳಿಗಳೇ ಇಲ್ಲವೆನ್ನಬಹುದು. ಹಬ್ಬ-ಹುಣ್ಣಿವೆ, ಜಾತ್ರೆ-ಮಹೋತ್ಸವಗಳಲ್ಲಿ ಹಳ್ಳಿಗರು ಬಹು ಹುಮ್ಮಸದಿಂದ ಮೂಡಲಪಾಯದ ಬಯಲಾಟಗಳನ್ನು ಆಡಿಯೇ ತೀರುವರು. 'ಮೂಡಲಪಾಯ' ಸಮಾಸಪದದಲ್ಲಿ ಎರಡು ಶಬ್ದಗಳಿವೆ. — ಮೂಡಲ + ಪಾಯ. 'ಮೂಡಲವು' ಪೂರ್ವದಿಕ್ಕೆಂದರ್ಥ ಸೂಚಿಸುವುದು. 'ಪಾಯ'ವು ಪದ್ಧತಿಯು. ಮೂಡಲಪಾಯವೆಂದರೆ ಪೂರ್ವದಿಕ್ಕಿನ ಬಯಲಾಟ ಪದ್ಧತಿಯು. ಬೆಟ್ಟದ ಕೆಳಗೆ ಪಶ್ಚಿಮದಿಕ್ಕಿನಲ್ಲಿ ಯಕ್ಷಗಾನವಿದ್ದಂತೆ ಬೆಟ್ಟದ ಮೇಲೆ ಪೂರ್ವದಿಕ್ಕಿನ ಕರ್ನಾಟಕದಲ್ಲಿ ಚಿರಪಂಚಯವಿದ್ದ ಪದ್ಧತಿ ಮೂಡಲಪಾಯ. ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಕೋರಿಕಾಗದ ಮೇಲೆ ಬರೆದ ಬಾಣಾಸುರ, ಭಸ್ಮಾಸುರ, ದಕ್ಷಬ್ರಹ್ಮ ಮೊದಲಾದ ಮೂಡಲಪಾಯದ ಬಯಲಾಟದ ಪ್ರತಿಗಳು, ಹಲಕೆಲವು ಹಳ್ಳಿಗರಲ್ಲಿ ನಮಗೆ ನೋಡಲು ಸಿಗುತ್ತವೆ. ಈ ಕಥೆಗಳನ್ನು ಬರೆದ ಜನರು ಹಂಪಿ, ಕಂಪಿಲಿ, ಕುಡತಣಿ ಮೊದಲಾದ ಪೂರ್ವದಿಕ್ಕಿನಲ್ಲಿರುವ ಪುರವಾಸಿಗಳಾಗಿದ್ದಾರೆ. 'ಬಾಣಾಸರ' ಕಥೆಯ ನಾಂದಿಯಲ್ಲಿ.

ಮಂಗಲ :– ರಾಗ. ಶಂಕರಾಭರಣ ತಾಳ. ಬಿಲಂದಿ.

ಗೌರೀವರನೆ । ಕರುಣಾಸಾಗರನೆ ॥ ಪ ।
ಅಂಬರಕೇಶನೆ । ಶಂಭೋಸರ್ವೇಶನೆ
ಶಂಬರಾರಿಯ ಸುತನೆ । ನಂಬಿ ಭಜಿಪೆನಿನ್ನ ॥ ೧ ।
ಮಾಯಮರ್ದನಚರಣ। ತೋಯಾಗಸ್ಮರಿಸುವೆನಾ
ಲೋಯಿಗುಂಡಿಯವಾಸ। ಶ್ರೀ ವಿರುಪಾಕ್ಷ ॥ ೨ ॥

ಹೀಗೆ ಪಂಪಾಪತಿಯ ಸ್ತುತಿಯು ಬರುವುದು. ಈ ಮಂಗಲಪದ್ಯವನ್ನು ಅನೇಕ ಕಥೆಗಾರರು ಈಗಲೂ ಬಯಲಾಟಗಳಲ್ಲಿ ಎತ್ತಿಕೊಳ್ಳುವರು. ಈ 'ಲೋಯಿಗುಂಡಿ'ಯೇ ಈಗಿನ ಹಂಪೆಯೆಂದು ಅನೇಕ ಮೂಡಲಪಾಯ ಕಥೆಗಾರರ ನಂಬುಗೆ.

ಮಂಗಲ :– ರಾಗ. ನಾಂಟ ತಾಳ. ಅಟತಾಳ.

ಪೊಡವಿಯೊಳ್ ಕುಡತಣಿಯ
ಒಡೆಯ ಭೀಮೇಶನ ।
ಬಿಡದೆ ಭಜಿಸುವೆ ನಾನು
ಕೊಡು ಎನಗೆ ಮತಿಯ ॥

ಈ 'ಕುಡತಣಿ'ಯು ಬಳ್ಳಾರಿಯ ಜಿಲ್ಹೆಯಲ್ಲಿದೆಯೆಂದೂ ಮೂಡಲಪಾಯದ ಕಥೆಗಾರರು ಹೇಳುವರು. ಈಗ ನಮಗೆ ದೊರೆಯುವ ಅಚ್ಚಾದ ಪ್ರತಿಗಳಲ್ಲಿ ಈ ಕುಡು

ತಣಿಯ ಭೀಮೇಶನ ಮುದ್ರಿಕೆಯೇ ಹೆಚ್ಚಾಗಿ ಬರುವುದು. ಇನ್ನೂ ಕೆಲವು ಮೂಡಲಪಾಯದಾಟಗಳಲ್ಲಿ ರಾಮಾಪ್ರಿಯ ಗುರುಬಸವೇಶನೆಂದೂ ಬರುವುದು. ಏನೇ ಬರಲಿ ಈ ನಾಂದೀ ಪದ್ಯಗಳು ಪೂರ್ವ ದಿಕ್ಕಿನ ದೇವರಿಗೂ ನಗರಗಳಿಗೂ ಸಂಬಂಧ ವಿರುವುದರಿಂದ ಮೂಡಲಪಾಯಬಯಲಾಟವು ವಿಜಯನಗರದ ಸುತ್ತ ಮುತ್ತಲಿನ ಪ್ರದೇಶದಲ್ಲಿ ಹುಟ್ಟಿರಬೇಕೆಂದು ಸಂಶೋಧಕರಿಗೆ ಅನಿಸದಿರದು. ಈಗಿನ ಮೂಡಲಪಾಯದ ಕಥೆಗಾರರು ಈಗಲೂ ಇವೇ ನಾಂದಿಗಳನ್ನು ತಮ್ಮ ಬಯಲಾಟಗಳಲ್ಲಿ ಹಾಡುವರು.

ಮೂಡಲಪಾಯದಲ್ಲಿ ಎರಡು ಪ್ರಕಾರದ ಕಥೆಗಳು ಕಂಡು ಬರುವವು. ಒಂದು ಶಿವಕಥೆಗಳು. ಎರಡು ಐತಿಹಾಸಿಕ ಕಥೆಗಳು. ಹೆಚ್ಚಾಗಿ ಶಿವಕಥೆಗಳೇ ಮೂಡಲಪಾಯದಲ್ಲಿದ್ದು ಜನಪದದಲ್ಲಿ ಹೆಸರಾಗಿವೆ. ಮೂರು ಅಥವಾ ನಾಲ್ಕು ಐತಿಹಾಸಿಕ ಕಥೆಗಳು ಮಾತ್ರ ದೊರೆಯುವವು. ಸತ್ಯೇಂದ್ರಚೋಳ, ಕರಿಕಾಲಚೋಳ, ಕಲ್ಯಾಣ ಬಸವೇಶ, ಕುಮಾರ ರಾಮ ಇವೇ ಮೊದಲಾದ ಕಥೆಗಳು ಐತಿಹಾಸಿಕವಿದ್ದು ಪೂರ್ವ ಕರ್ನಾಟಕದ ಭಾಗಗಳಿಗೆ ಸಂಭವಿಸಿದುವುಗಳು. ಇವುಗಳನ್ನು ಬರೆದವರು ಪೂರ್ವಕರ್ನಾಟಕದ ಜಾನಪದ ಕವಿಗಳಿಂದೇ ಹೇಳಬಹುದು. ಕುಮಾರ ರಾಮುನ ಆಟವನ್ನು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಬೈಲಹೊಂಗಲದಲ್ಲಿ ನೋಡಿದ ಶ್ರೀ ದೊಡ್ಡಭಾವೆಪ್ಪ ಮೂಗಿ ಅವರು ಆ ಕಥೆಯನ್ನು ಬಲು ವಿಮರ್ಶಿಸಿ ಹೇಳುತ್ತಾರೆ. ಆ ಕಥೆಯ ಒಂದು ಪ್ರತಿಯೂ ಅವರಲ್ಲಿದೆ. ಕರಿಕಾಲಚೋಳ, ಹಾಗೂ ಸತ್ಯೇಂದ್ರಚೋಳನ ಕಥೆಯನ್ನು ಬಾಗಲಕೋಟೆಯಲ್ಲಿಯೂ ರೂರಲ್ಲಿಯೂ ಕೇವಲ ಇಪ್ಪತ್ತೈದು ವರುಷಗಳ ಹಿಂದೆ ನಾನು ಹತ್ತು ವರುಷದವನಿದ್ದಾಗ ಸ್ವತಃ ನೋಡಿದ್ದೇನೆ. ಸ್ವೀಶ್ವರದಲ್ಲಿ ಎರಡು ವರುಷಗಳ ಹಿಂದೆ ಈ ಕಥೆಗಳನ್ನು ಡಿದರೆಂದು ಪ್ರತೀತಿಯಿದೆ. ಯಕ್ಷಗಾನದ ಸಂಪರ್ಕದಿಂದಲೊ, ರಾಮಾಯಣ ಮಹಾಭಾರತಗಳ ಪ್ರಭಾವದಿಂದಲೊ ಶಿವಕಥೆಗಳನಂತರ ರಾಮಾಯಣ ಮಹಾಭಾರತ ಪ್ರಸಂಗಗಳೂ ಮೂಡಲಪಾಯದಲ್ಲಿ ಬಂದಿರುವುವು. ಅನೇಕರು ಈಗ ಮೂಡಲಪಾಯದಲ್ಲಿ ಈ ಕಥೆಗಳನ್ನು ಆಡುವುದನ್ನು ನಾವು ನೋಡ ಬಹುದು.

ಮೂಡಲಪಾಯದಲ್ಲಿ ಹಾಸುಹೊಕ್ಕಾದುದು ಕನ್ನಡ ಸಂಗೀತ. ಸಟ್ಟುಗಿಗ (ಕಥೆಗಾರ)ನು ಸಂಗೀತದಲ್ಲಿಯ ತನ್ನ ಪಾಂಡಿತ್ಯವನ್ನು ತೋರಿಸಲು ಹುಸಿಯಲ್ಲಿಯೇ ಹಾಡಿ ಮದ್ದಳೆ ಹಾಗೂ ವೀಣೆಯವರನ್ನು ಬೆರಗುಗೊಳಿಸುವನು. ಅವನು ಹಾಕುವ ತಾಳದ ಪೆಟ್ಟೇ ಬೇರೆ; ತೋರಿಸುವಗತ್ತೇ ಬೇರೆ; ಬಾಯಿಂದ ಹಾಡುವ ರಾಗವೇ ಬೇರೆ. ಹೀಗೆ ಅವನು ತನ್ನ ಗಾಯನದ ಬಂಧುರತೆಯನ್ನು ತೋರಿಸುವನು. ಇದಕ್ಕೆ ಮೂಡಲಪಾಯದಲ್ಲಿ 'ಹಾಡ ಬಂಧುರತೆ'ಯೆಂದು ಕರೆಯುವರು. ಈ ಹಾಡ ಬಂಧುರತೆಯಲ್ಲಿಯೇ ಕಥೆಗಾರನ ಸಂಗೀತ ಕಲೆಯ ಪ್ರವೀಣತೆಯನ್ನು ಪಂಡಿತರು, ಅಳೆದು ಬಿಡುವರು. ಪ್ರಾರಂಭಿಸಿದ ಹಾಡದಲ್ಲಿಯೇ ತಾಳ ಮುರಿದು ಮತ್ತೊಂದು ತಾಳವನ್ನು ಹಿಡಿದು ರಾಗ ಮಾಡುವ ಸಾಮರ್ಥ್ಯವು ಈ ಮೂಡಲಪಾಯದ ಕಥೆಗಾರರಲ್ಲಿರುವುದು. ಒಟ್ಟಿನ ಮೇಲೆ ಮೂಡಲಪಾಯದಲ್ಲಿ ಸಂಗೀತದೊಡನೆ ತಾಳ, ಲಯ, ಗತ್ತು, ರಾಗರಾಗಿಣಿಗಳ ಆಲಾಪಕ್ಕೆ ಮಹತ್ವದ ಸ್ಥಾನವಿದೆ ಈ ಎಲ್ಲ ಮೂಡಲಪಾಯದ ಬಯಲಾಟಗಳು ಸಂಗೀತ ಭರಿತವಿದ್ದು ಮನರಂಜಕವಾಗಿವೆ. ಮೂಡಲಪಾಯದ ಕಥೆಗಾರರು ಯಕ್ಷಗಾನದ ಭಾಗವತರಂತೆ ಸಂಸ್ಕೃತ ಕನ್ನಡ ಪಂಡಿತರಿರುವದಿಲ್ಲ. ಇವರು ಓದು ಬಲ್ಲವರು ಮಾತ್ರ ಇರುವರು. ಹಲಕೆಲವರು ನಿರಕ್ಷರಿಗಳಿದ್ದರೂ ಕಂಡು ಬರುವುದು. ಇಂತಹ ಜನರು ಪಂಡಿತರ ಸಹಾಯವಿಲ್ಲದೆ ಬೆಳಗು ಹರಿಯುವ ವರೆಗೆ ಆಟವಾಡುವುದು ಸೋಜಿಗವೆನಿಸದಿರದು.

ಯಕ್ಷಗಾನ

ಯಕ್ಷಗಾನವು ಮೂಡಲಪಾಯದ ಬಯಲಾಟವಲ್ಲ. ಇದು ಪಶ್ಚಿಮ ಕನ್ನಡ ಜಿಲ್ಲೆಗಳಲ್ಲಿಯ ಬಯಲಾಟವು. ಬೆಟ್ಟದ ಕೆಳಗಿನ ಜನರು ಬಲು ಹುಮ್ಮಸದಿಂದ ಆವೇಶ ಭರಿತರಾಗಿ ಯಕ್ಷಗಾನ ಕಥೆಗಳನ್ನು ಆಡುವರು. ರಾಮಾಯಣ, ಮಹಾಭಾರತ, ದಶಾವತಾರಗಳೇ ಯಕ್ಷಗಾನ ಕಥೆಗಳಿಗೆ ಮೂಲ ಆಧಾರಗಳಾಗಿವೆ. ಯಕ್ಷಗಾನದಲ್ಲಿ ಭಾಗವತನು ಮೂಡಲಪಾಯದಂತೆ ಹಾಡವನ್ನು ಎತ್ತಿದರೂ ಕೋಚನ್ನೆತ್ತದೆ ಹಿಡಿವತಾಳವನ್ನು ಮುರಿದು ಸೋಗುಗಳಿಗೆ ಕುಣಿತಕ್ಕೆ ಅನುವು ಮಾಡಿಕೊಡುವನು. ಸೋಗು

ಗಳು ಹಾಡಿ ಹಾಡಿ. ಅನೇಕ ತಾಳಗಳಲ್ಲಿ ಭಾಗವತನ ಸಂಗೀತ ತಾಳನುಸ್ವಲಿಯ ಗತ್ತಿನಲ್ಲಿ ದಣಿಯುವವರೆಗೆ ಕುಣಿಯುವುದನ್ನು ಕಣ್ಣಾರೆ ಕಾಣಬಹುದು. ಯಕ್ಷಗಾನವನ್ನು ಆಡುವವರು ಕಲಿತವರೂ ನುರಿತವರೂ ಇರುವರು. ಭಾಗವತನು ಯಾವಾಗಲೂ ಸಂಸ್ಕೃತ ಕನ್ನಡ ಪಾರಾಂಗತನಿರುವನು. 'ಯಕ್ಷಗಾನ' ಎಂಬ ಪುಸ್ತಕದಲ್ಲಿ ಶಿವರಾಮ ಕಾರಂತರು ಯಕ್ಷಗಾನದ ಸಂಬಂಧ ಸವಿಸ್ತಾರವಾಗಿ ಬರೆದಿದ್ದಾರೆ.

ಜಾಂಗುಟಿಯಾಟ, ಮೂಡಲಪಾಯ, ಹಾಗೂ ಯಕ್ಷಗಾನದ ಆಟಗಳು ಹಿರಿಯಾಟ (ದೊಡ್ಡಾಟ) ಗಳಾಗಿವೆ. ಈ ಆಟಗಳಲ್ಲಿ ಅಟ್ಟದ ಮೇಲೆ, ಕೂಡಿದ ಜನರಿಗೆ ಪಾತ್ರಪರಿಚಯ ಮಾಡಿಕೊಡುವ ವ್ಯಕ್ತಿಯೇ 'ಸಾರಥಿಯು'. ಈ ಸಾರಥಿಯು ಬಲು ನುರಿತವನಿದ್ದು ಪ್ರಸಂಗ ಬಿದ್ದರೆ ನಿಂತಲ್ಲಿಯೇ ಆಶುಕವಿಯಾಗಿ ಮಾತಾಡಬಲ್ಲ; ಕೂಡಿದ ಜನರನ್ನು ಹೊಟ್ಟೆ ಹಣ್ಣಾಗುವಂತೆ ನಗಿಸಬಲ್ಲ. ಸಂಸ್ಕೃತ ನಾಟಕಗಳಲ್ಲಿಯ ವಿದೂಷಕನನ್ನು ಈ ಸಾರಥಿಯು ಎಲ್ಲದರಲ್ಲಿಯೂ ಹೋಲುವನು. ಈ ಕಥೆಗಳು ತೀವ್ರವೇ ಪ್ರಾರಂಭವಾಗಿ ಬೆಳಗುಹರಿಯುವವರೆಗೆ ನಡೆಯುವುವು. ಅಲ್ಲದೆ ಇವುಗಳಲ್ಲಿ ದೇವ ದೇವತೆಗಳು ಹಾಗೂ ಮಾನವರ ಉದಾತ್ತ ಕಲ್ಪನೆಗಳು ತುಂಬಿರುವುದರಿಂದ ಜನರು ಇವುಗಳನ್ನು ಹಿರಿಯಾಟ ಇಲ್ಲವೇ ದೊಡ್ಡಾಟವೆಂದು ಕರೆಯುತ್ತಾರೆ.

ಕನ್ನಡ ಬಯಲಾಟದಲ್ಲಿ ಸಣ್ಣಾಟಗಳೂ ಇರುವುವು. ದೊಡ್ಡಾಟದಲ್ಲಿ ಸಾರಥಿಯು ಬಂದಂತೆ ಸಣ್ಣಾಟದಲ್ಲಿ 'ದೂತೆ' ಬರುವಳು. ಈ ದೂತೆಯು ದೊಡ್ಡಾಟದಲ್ಲಿ ಸಾರಥಿಯಂತೆ ಸಣ್ಣಾಟದಲ್ಲಿ ತನ್ನ ಪಾತ್ರ ವಹಿಸುವಳು; ಸಣ್ಣಾಟಗಳ ಪಾತ್ರಪರಿಚಯವಾಗುವುದು ಇವಳ ಮುಖಾಂತರ. ದೂತೆಯು ಕನ್ನಡ ರಂಗಭೂಮಿಯಲ್ಲಿಯ ಔಚಿತ್ಯವೆಂದೇ ಹೇಳಬಹುದು. ದೂತೆಯನ್ನೊಳಗೊಂಡ ಸಂಸ್ಕೃತ ನಾಟಕಗಳಾಗಲಿ, ಬೇರೆ ಭಾಷೆಗಳ ನಾಟಕಗಳಾಗಲಿ ಇರುವದಿಲ್ಲ. ದೊಡ್ಡಾಟದಲ್ಲಿ ಲೋಹವಾದ್ಯಗಳು ಎದ್ದು ಕಂಡರೆ ಸಣ್ಣಾಟದಲ್ಲಿ ಚರ್ಮವಾದ್ಯಗಳು ಕಂಡುಬರುವುವು. ಸಣ್ಣಾಟದ ವಿವಿಧರೂಪಗಳನ್ನು ನೋಡಿದರೆ ಸಣ್ಣಾಟವೇ ಮೊದಲು ಭಾಜನೆಹಬ್ಬಗಳಿಂದ ರೂಪಹೊಂದಿರಬಹುದೆಂದು ಸಂಶಯಬರುವುದು. ಭಾಜನೆಗಬ್ಬಗಳ ಭಾಜನೆಮೇಳಗಳೇ ರೂಪಹೊಂದಿ ಸಣ್ಣಾಟಗಳಾದುವು. ಮುಂದೆ ಸಣ್ಣಾಟವು ಬೆಳೆದು ಹಿರಿಯಾಟವಾಗಿ ಮೂಡಲಪಾಯ, ಯಕ್ಷಗಾನ ಮೊದಲಾದ ರೂಪಗಳಾಗಿ ಇಂದಿನವರೆಗೆ ಬಂದಿವೆ. ಸಣ್ಣಾಟವು ಹೀಗೆ ಬೆಳೆದು ಹಿರಿಯಾಟವಾದರೂ ಕನ್ನಡ-ಜಾನಪದ ರಂಗಭೂಮಿಯ ಮೇಲಿಂದ ಬಯಲಾಗಲಿಲ್ಲ. ಅದು ತನ್ನತನದಲ್ಲಿ ಅಲ್ಪಸ್ವಲ್ಪ ಹಿಗ್ಗಿ, ಕುಗ್ಗಿ ಈಗಿನ 'ಹೊಸಪಾಯ' ದ ದಪ್ಪಿನ ಆಟವಾಯಿತು. ಈ ದಪ್ಪಿನ ಆಟಗಳೇ ಈಗ ಹಳ್ಳಿಗರಲ್ಲಿ 'ಪುರಾತರಾಟಗಳು', 'ಚಿಮಣಾನಾಟಗಳು' ಎಂದು ಪ್ರಸಿದ್ಧಿಯಾಗಿವೆ. ಈ 'ಹೊಸಪಾಯ' ದಲ್ಲಿ 'ಕಾದರೊಳ್ಳಿ ಧರಿತಿ', 'ಹೊಸಧರತಿ' ಎಂದು ಎರಡು ಪಾಯಗಳು ರೂಪ ಧರಿಸಿದ್ದು ಕಂಡುಬರುವುದು.

ಕಾದರೊಳ್ಳಿ ಧರತಿ

ಬಯಲಾಟದ ಈಗಿನ 'ಹೊಸಧರತಿ'ಯು ಬರುವ ಮುನ್ನ ಜನಪದದಲ್ಲಿ ಪುರಾತರ ಕಥೆಗಳು ಪ್ರಸಿದ್ಧಿಯಲ್ಲಿದ್ದುವು. ಕಿತ್ತೂರ ಸಂಸ್ಥಾನದ ಕಾದರೊಳ್ಳಿಯವರು ಮೂಡಲಪಾಯವನ್ನು ಬಿಟ್ಟು ಶಿವಶರಣರ ಹಾಗೂ ಪುರಾತರ ಕಥೆಗಳನ್ನು ಭಕ್ತಿ ರೂಪವಾಗಿ ಜನರಿಗೆ ಬಿಂಬಿಸುವಂತೆ ಕಿತ್ತೂರ ಕಡೆಯರಸು ಮಲ್ಲಸರ್ಜನ ಕಾಲದಲ್ಲಿ 'ತಿರುನೀಲಕಂಠ'ನ ಆಟವನ್ನು ಮೊದಲು ರಂಗಭೂಮಿಯ ಮೇಲೆ ತಂದರೆಂದು ಕಿತ್ತೂರ ಸುತ್ತಮುತ್ತಲಿನ ಜನರು ಹೇಳುತ್ತಾರೆ. 'ದಪ್ಪು' ಚರ್ಮವಾದ್ಯವು ಈ ಆಟದ ಕೂಡ ಮೊದಲು ಸಾರೆ ರಂಗಭೂಮಿಯಲ್ಲಿ ಬಂತು. ಮುಂದೆ ಈ ಧರತಿಯು ಉತ್ತರ ಕರ್ನಾಟಕದಲ್ಲಿ ಭರದಿಂದ ಹಬ್ಬಲು 'ಕಣ್ಣಪ್ಪ' 'ನೆಂಬೆಣ್ಣ' 'ಅಕ್ಕಮಹಾದೇವಿ' ಮೊದಲಾದ ಶಿವಶರಣರ ಕಥೆಗಳು ಈ ಧರತಿಯಲ್ಲಿ ಬರೆಯಲ್ಪಟ್ಟು ಜನತೆಯಲ್ಲಿ ಪ್ರಸಿದ್ಧಿ ಹೊಂದಿದುವು. ಜನಪದದಲ್ಲಿ ಈಗಲೂ ಇದಕ್ಕೆ ಕಾದರೊಳ್ಳಿಯ ಧರತಿಯೆಂದು ಹೆಸರಿದೆ. 'ಕಲ್ಪಿಕಥೆ' ಗಳ ತುಚ್ಛಶೃಂಗಾರವಾಗಲಿ, ವಾಸ್ತವ ಕಥೆಗಳ ವಾಸ್ತವತೆಯಾಗಲಿ, ಇಲ್ಲಿ ಕಂಡುಬರುವದಿಲ್ಲ. ಇಲ್ಲಿ ಬರುವುದು, ಐತಿಹಾಸಿಕ ಶಿವಶರಣರ ಕಥೆಯಾದರೂ ಸ್ತುತ್ಯವಾದ ಸತ್ಯಮಾರ್ಗದ ಭಕ್ತಿಸಾಧನ ಮೂಡಲಪಾಯದ ಆಟಗಳಿಗೆ ಸಂಗಟ್ಟಿ ಕ್ರಿ. ಶ. ಸುಮಾರು ೧೯೩೦ರ ವರೆಗೆ ಈ ಆಟಗಳು ಹಳ್ಳಿಗರಿಗೆ ಬಹು

ಪ್ರಿಯವಾಗಿದ್ದುವು. ಈಗ ಮಾತ್ರ ಕಣ್ಮರೆಯಾಗಹತ್ತಿವೆ ಯೆಂದು ಬರೆಯಲು ಮನಸ್ಸಿಗೆ ಬಲು ವಿಷಾದ.

ಹೊಸಧರತಿ

ಈ 'ಹೊಸಧರತಿ'ಯಲ್ಲಿ 'ಕಲ್ಪಿಕಥೆ'ಗಳೂ 'ವಾಸ್ತವ ಕಥೆ'ಗಳೂ ಸಮಾವೇಶವಾಗುವುವು. ಈ 'ಕಲ್ಪಿಕಥೆ' ಗಳಲ್ಲಿ ಗಂಡು ಹೆಣ್ಣಿನ ತುಚ್ಛ ಶೃಂಗಾರದ ಸನ್ನಿವೇಶಗಳೇ ಹೆಚ್ಚು. ನಿಚ್ಚಿಪೆಯಾಗಿ ಉತ್ತರ ಹಿಂದುಸ್ತಾನದ 'ತಮಾಷಾ' ಆಟಗಳ ಛಾಯೆಯೇ ಈ 'ಕಲ್ಪಿಕಥೆ' ಗಳಲ್ಲಿ ಕಂಡುಬರುವುದು. 'ಗಲ್ಪೋಜಿ' ಆಟವಂತೂ 'ತಮಾಷಾ' ಆಟದ ಪಡಿನೆರಳೆಂದೇ ಹೇಳಬಹುದು. ಇದರಲ್ಲಿ ಬರುವ ಗಲ್ಪೋಜಿ, ಚಿಮಣಾ, ಸಖಾರಾಮ ಮೊದಲಾದ ಸೋಗು ಗಳ ಹೆಸರುಗಳು ಸಹ ಉತ್ತರ ಹಿಂದುಸ್ತಾನದುವು. ಇಂತಹ 'ತಮಾಷಾ' ಆಟಗಳನ್ನು ಉತ್ತರ ಹಿಂದುಸ್ತಾನದ ದಂಡಿನಲ್ಲಿಯೂ ಹಲಕೆಲವು ಭಾಗಗಳಲ್ಲಿ ಕೆಳತರಗತಿಯ ಜನರೂ ಆಡುತ್ತಿದ್ದರು. ಇಂತಹ ತಮಾಷಾ ಥೇಟರು ಗಳನ್ನು ಕೊಲ್ಲಾ[illegible]ಪುರದಲ್ಲಿಯೂ, ಪುಣೆಯಲ್ಲಿಯೂ ಮುಂಬಯಿಯಲ್ಲಿಯೂ ನಾನು ಸ್ವತಃ ನನ್ನ ವಿದ್ಯಾರ್ಥಿ ದೆಸೆಯಲ್ಲಿ ಕಣ್ಣುಟ್ಟು ನೋಡಿ ಅನುಭವಿಸಿದ್ದೇನೆ. ಕ್ರಿ. ಶ. ೧೯ನೆಯ ಶತಮಾನದ ಕೊನೆಯಲ್ಲಿ ದಂಡಿನಲ್ಲಿ ಸೇರಿದ ಕನ್ನಡಿಗರೇ ಈತರದ ಆಟಗಳನ್ನು ಕರ್ನಾಟಕಕ್ಕೆ ತಂದರು. 'ಗಲ್ಪೋಜಿ'ಯಾಟವೇ ಇಂತಹ ಆಟದ ಮೊದಲನೆಯ ಪ್ರದರ್ಶನ. ತದನಂತರ 'ರಾಜಾನಾಟ', 'ಶಿಪಾಯಿಆಟ' 'ನಬಿಯಾಟ' ಮೊದಲಾದವುಗಳು 'ಗಲ್ಪೋಜಿ'ಯಾಟದ ಅನುಕರಣಗಳಾಗಿ ಕನ್ನಡ ಜಾನಪದದ ರಂಗಭೂಮಿಯ ಮೇಲೆ ಬಂದವು. ತಳೆವಾಡ ನಬಿಯು ಇಂತಹ ಆಟಗಳನ್ನು ಆಡಿ ಬೆಳವಲ ಹಳ್ಳಿಗಳಲ್ಲಿಯೇ ಪ್ರಸಿದ್ಧವಾಗಿಹೋದನು. ಅವನು ಕ್ರಿ. ಶ. ೧೯೩೦ರ ವರೆಗೆ ಇಂತಹ ಆಟಗಳನ್ನು ಕನ್ನಡ ಜಾನಪದ ರಂಗಭೂಮಿಯ ಮೇಲೆ ಪ್ರದರ್ಶಿಸಿ ಹಳ್ಳಿಗರ ಮೆಚ್ಚುಗೆ ಪಡೆದು ತೀರ ಇತ್ತೀಚೆಗೆ ಕಣ್ಮರೆಯಾಗಿ ಹೋಗಿದ್ದಾನೆ.

ಇದೆ ಸುಮಾರಿಗೆ 'ಹೊಸಧರತಿ' ಯಲ್ಲಿ ವಾಸ್ತವ ಕಥೆಗಳು ಕನ್ನಡ ಜಾನಪದ ರಂಗಭೂಮಿಯಮೇಲೆ ಬಂದವು. ಜನಪದದಲ್ಲಿ ಸಂಭವಿಸಿದ ನಿಜ ಚಿತ್ರಗಳೇ ಇವುಗಳಲ್ಲಿ ಬರುವುವು. ಇಷ್ಟೇ ಅಲ್ಲ ಸೋಗುಗಳ ಹೆಸರುಗಳು ಸಹ ಸಂಭವಿಸಿದ ಪ್ರಸಂಗದಲ್ಲಿಯ ವ್ಯಕ್ತಿಗಳ ಹೆಸರುಗಳಾಗಿವೆ. ಆದುದರಿಂದ ಈ ಆಟಗಳಿಗೆ ಜನತೆಯಲ್ಲಿ ದೊಡ್ಡ ಹೆಸರು ಬಂತು. ಇಲ್ಲಿಗೆ, ಕನ್ನಡ ಜಾನಪದ ರಂಗಭೂಮಿ ಪೌರಾಣಿಕ ಕಲ್ಪನಾಮಂದಿರವನ್ನು ಬಿಟ್ಟು ಜನಜೀವನದ ವಾಸ್ತವ ಮಂದಿರಕ್ಕೆ ಬಂತು. ಸಂಗ್ಯಾಬಾಳ್ಯಾನಾಟ, ದುಂಡ್ಯಾಮೋದ್ಯಾನಾಟ, ಚೆನ್ನಿಗೌರಿಯಾಟ, ಮೊದಲಾದವುಗಳೇ 'ಹೊಸಧರತಿಯ' ವಾಸ್ತವಕಥೆಗಳು. ಶಹಪೂರ ಪತ್ತಾರನೇ ಈ 'ಹೊಸಧರತಿ'ಯ ನಿರ್ಮಾಣಕಾರ. ಇವನೇ ಸಂಗ್ಯಾಬಾಳ್ಯಾನಾಟವನ್ನು ಬರೆದು ಮೊದಲು ರಂಗಭೂಮಿಯಮೇಲೆ ಆಡಿತೋರಿಸಿದನು. ಇದು ಜನರಿಗೆ ಪ್ರೀತಿಯ ಆಟವಾಗಿ ಮೆಚ್ಚುಗೆಪಡೆದು ಕರ್ನಾಟಕದ ತುಂಬೆಲ್ಲ ಪ್ರಸಿದ್ಧಿಗೇರಾಯಿತು. ಈಗ ಈ ಆಟದ ಹೆಸರನ್ನು ಕೇಳದ ಹಳ್ಳಿಗನೇ ಇಲ್ಲ. ಈ ಕಥೆಯ ಪ್ರಸಂಗವು ಸಂಭವಿಸಿದ್ದು ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದಲ್ಲಿ. ಗಂಗಿಯ ಸಲುವಾಗಿ ಸಂಗ್ಯಾನ ಖೂನುಮಾಡಿದ ಈರೆಪ್ಪ ಶೆಟ್ಟಿ ಆರಳಿಕಟ್ಟೆ ಮನೆತನದವರಿಗೆ ಇಂಗ್ರೇಜಿ ಸರಕಾರವು ಗಲ್ಲಿನ ಶಿಕ್ಷೆ ವಿಧಿಸಲು ಕ್ರಿ. ಶ. ೧೮೬೦ರ ಸುಮಾರಿನಲ್ಲಿ ಆ ಮನೆತನದವರು ಕ್ರಿಸ್ತಧರ್ಮವನ್ನು ಸ್ವೀಕರಿಸಲೊಪ್ಪಲು ಸರಕಾರವು ಅವರನ್ನು ಕ್ಷಮಿಸಿತು. ಮುಂದೆ ಅವರ ಮನೆತನದವರು ಬೆಳಗಾಂವಿಯಲ್ಲಿ ಬಂದು ಇರಹತ್ತಿದರೆಂದೂ ಗಂಗಿಯು ತನ್ನ ತವರೂರಾದ ಬೈಲವಾಡಕ್ಕೆ ಹೋಗಿ ೧೯೩೦ರ ಸುಮಾರಿಗೆ ಸತ್ತಳೆಂದೂ ಬೈಲಹೊಂಗಲದ ಹಿರಿಯರು ಹೇಳುತ್ತಾರೆ. ಈರಪ್ಪ ಶೆಟ್ಟಿಯು ಶಹಪೂರ ಪತ್ತಾರನಿಗೆ ಕೊಟ್ಟ ಸಾಲದ ಸಂಬಂಧ ಕೋರ್ಟಿಗೆ ಫಿರ್ಯಾದೆ ಮಾಡಲು ಆ ಪತ್ತಾರನು ಸೇಡುತೀರಿಸಿಕೊಳ್ಳುವದಕ್ಕಾಗಿ ಈರಪ್ಪ ಶೆಟ್ಟಿಯ ಮನೆತನದ 'ಅಬರು' ಬಯಲಿಗೆ ತರಬೇಕೆಂದು ಈ ಸಂಗ್ಯಾನಾಟವನ್ನು ೧೮೮೯ ರಲ್ಲಿ ಬರೆದು ಮೊದಲು ಶಹಪೂರದಲ್ಲಿ ಆಡಿದನೆಂದು ತಿಳಿದು ಬರುವುದು. ಈ ಆಟದಲ್ಲಿಯ ಅನೇಕ ಪದ್ಯಗಳಲ್ಲಿ —

೧) ಶಾಪೂರ ಶಂಕರಮೂರ್ತಿ|
ಅವನ ಕಂದಮಾಡಿ ಹೇಳ್ಯಾನ ಜನಕ ಹೊಸಧರತಿ||

೨) ಶಾಪೂರ ಊರ ಕಡಕ ಇರುವದು ಸಾಜೂಕ|
ಹನುಮ ಮಾಡಿ ಆಡ್ಯಾನ ಕೌತಕ||

೩) ಈ ದೇಶದೊಳು ಶಾಪೂರ ಮೇಲ| ಶಂಕರ ಅಸಲ
ಅವನ ಕಂದ ಮಾಡಿ ಹೇಳ್ಯಾನೊ ಹೊಸಕ್ಯಾಲ||

ಎಂದು ಹೀಗೆ ನಾಮಾಂಕಿತಗಳು ಬರುವುವು. ಇದರ ಮೇಲಿಂದ 'ಹೊಸಧರತಿ' ಯನ್ನು ಹಳ್ಳಿಗರಿಗೆ ತಂದು ಕೊಟ್ಟವನೇ ಶಹಪೂರ ಪತ್ರಾರನೆಂಬ ನಿರ್ಣಯವಾಗುವುದು. ಇವೇ ಧರತಿಯ ಅನುಕರಣ ಮಾಡಿ 'ದುಂಡ್ಯಾ ಮೋದ್ಯಾ' 'ಚಿನ್ನ್ಯಾ ಗೌರಿ' ಮೊದಲಾದ ವಾಸ್ತವ ಕಥೆಗಳು ತೀರ ಇತ್ತೀಚಿಗೆ ಬೆಳಕಿಗೆ ಬಂದವು ಈಗ ಈ ಆಟಗಳೂ ಮುಗ್ಗ ಹತ್ತಿವೆ.

ಪಾರಿಜಾತ

ಪಾರಿಜಾತವೂ 'ನೂತೆ' ಯ ಒಂದು ಪ್ರಕಾರದ ಬಯಲಾಟ. ಕನ್ನಡ ಸಂಗೀತ ರಸಾಯನ ಸೂಸಿ ಹರಿಯುವುದಿಲ್ಲಿ. ಮುಮ್ಮೇಳವು ಹಾಡವನ್ನೆತ್ತಿದರೆ ಹಿಮ್ಮೇಳವು ಸಂಗೀತದ ಸರಾಗಕೋಚನ್ನೆತ್ತಿ ರಾಗರಸವನ್ನು ರಸಿಕರ ಎದೆ ತುಂಬಿಸದಿರದು. ಅಂತೆಯೇ ಎಲ್ಲ ಹಳ್ಳಿಗರು ಕೂತಲ್ಲಿಯೇ ಮನದಲ್ಲಿ ಗುನುಗುನು ನಾದಹಿಡಿದು ರಾಗ ಧ್ವನಿಯನ್ನು ಕಲಿಯುವರು. ಸಾರಥಿಯಾಟದ ಭವ್ಯ ನೃತ್ಯವನ್ನು ನಾವಿಲ್ಲಿ ಕಾಣೆವು. ಇಲ್ಲಿಯ ಕುಣಿತಗಳಿಗೆ ಆವೇಶವೇ ಇಲ್ಲ; ಶೃಂಗಾರ ರಾಸಗರ್ಭಗಳು ನಯ ನಾಜೂಕವಾಗಿ ಕನ್ನಡತನದ ಹೆಣ್ಣಿನ ಹರಿದಾಟದಲ್ಲಿ ಬರುವುವು, ಗೋಪಾಲ ಗೋಪಿಯರ ಚಿನ್ನಾಟಗಳು ಇನ್ನೂ ಬೇಕೆನ್ನುವಷ್ಟು ಜನರ ಮನವನ್ನು ಹಿಡಿಯುವುವು. ಸಂಗೀತ ನೃತ್ಯದಲ್ಲಿಯೇ ಜನರು ತೇಲಾಡುವರು.

ಪಾರಿಜಾತ ಆಟಗಳಲ್ಲಿ ಮೊದಲು ರೂಪತಾಳಿದ್ದು ಶಿವಪಾರಿಜಾತ. ಇದನ್ನು ಬಸವಾದಿ ಪ್ರಮಥರ ಕಾಲದ ಶಿವಶರಣ ಜಾತಿಗರ ಚೌಡಯ್ಯನು ಮೊಟ್ಟ ಮೊದಲು ರೂಪಿಸಿದನೆಂದು ಶಂಕಿಸಲಾಗಿದೆ. ಇದು ಕೇವಲ ಹಾಡುಗಳ ಸಂಗೀತ ಸಂಕಲನ. ಕ್ರಿ. ಶ. ೧೮೪೦ ರಲ್ಲಿ ಬಳ್ಳಾರಿಯವರು ಇದನ್ನು ಅಚ್ಚುಸಹ ಮಾಡಿಸಿರುವರೆಂದು ತಿಳಿದು ಬರುವುದು. ಈಗ ಈ ಆಟದ ಹೆಸರೂ ಸಹ ಜನರಿಗೆ ಗೊತ್ತಿರುವುದಿಲ್ಲ.

ಕೃಷ್ಣ ಪಾರಿಜಾತವು ಶಿವಪಾರಿಜಾತದ ಅನುಕರಣವೆಂದೇ ಹೇಳಬಹುದು. ಇದರಲ್ಲಿಯೂ ಸಂಗೀತದ ಸಾರವಿದೆ. ಇದನ್ನು ಮೊಟ್ಟ ಮೊದಲು ಬರೆದವರು ರಾಯಚೂರ ಅಪರಾಲ ತಮ್ಮಣ್ಣ. ಇದರ ಮೂಲ ಪ್ರತಿಯನ್ನು ತಿದ್ದಿ ಗೋಕಾವಿಯ ಸಮೀಪದಲ್ಲಿಯ ಕುಲಿಗೋಡ ಭೀಮನು ಈಗಿನ ಪಾರಿಜಾತವನ್ನು ಸುಮಾರು ಕ್ರಿ. ಶ. ೧೮೪೫ರಲ್ಲಿ ಬರೆದನು. ಈ ಪಾರಿಜಾತವು ಕನ್ನಡಿಗರ ಮೆಚ್ಚುಗೆ ಪಡೆಯಿತಲ್ಲದೆ ಸುತ್ತ ಮುತ್ತಲಿನ ಮರಾಠಿಗರ ಮನವನ್ನು ಸೆಳೆಯಿತು. ಕನ್ನಡ ಭಾಗದ ಒಂದು ಪಾರಿಜಾತ ಮೇಳವು ಸುಮಾರು ಕ್ರಿ ಶ. ೧೮೮೦ ರಲ್ಲಿ ಮಿರಜ ಸಾಂಗಲಿ ಭಾಗಗಳಲ್ಲಿ ಈ ಆಟವನ್ನು ಆಡಲು ಮರಾಠಿಗರು ಅದನ್ನು ನೋಡಿ ತಮ್ಮಲ್ಲಿ ಇಂತಹ ಸಾಹಿತ್ಯ ವಿಲ್ಲ ವಲ್ಲ! ಎಂದು ಬೆರಗಾದರು. ಇದರ ಪ್ರಭಾವವು ಅವರ ಮೇಲೆ ಮೂಡಿ ಮರಾಠಿ ರಂಗಭೂಮಿಯ ಬೀಜಾಂಕುರವಾಯಿತು. ನಿಜವಾಗಿ ಮರಾಠಿ ನಾಟಕ ಹುಟ್ಟಿದ್ದು ಕನ್ನಡ ಪಾರಿಜಾತದ ಪ್ರಭಾವದಿಂದಲೇ. ಕೈ. ಅಣ್ಣಾಸಾಹೇಬ ಕಿರ್ಲೋಸ್ಕರ ಅವರು ಪಾರಿಜಾತವನ್ನು ಮುಂದಿಟ್ಟು ಕೊಂಡೇ 'ಸೌಭದ್ರಾ' ಎಂಬ ನಾಟಕವನ್ನು ಮರಾಠಿಯಲ್ಲಿ ಮೊದಲು ಬರೆದರು. ಅದೇ ಮರಾಠಿಗರ ರಂಗಭೂಮಿಯ ಉದಯ. ಮಿರ್ಜಿ, ಸಾಂಗಲಿ ಮೊದಲಾದ ಸುತ್ತು ಮುತ್ತಲಿನ ಮರಾಠಿ ಹಳ್ಳಿಗಳಲ್ಲಿ ಕನ್ನಡ ಪಾರಿಜಾತದ ಮರಾಠಿ ಲಿಪಿಯ ಅನೇಕ ಹಸ್ತ ಪ್ರತಿಗಳು ಓದಲು ಈಗಲೂ ಸಿಗುತ್ತವೆ. ಇದು, ಮರಾಠಿಗರ ಕನ್ನಡ ಪಾರಿಜಾತದ ಮೇಲಿನ ಪ್ರೇಮಾದರವನ್ನು ಸಾರದಿರದು. ಕನ್ನಡ ಪಾರಿಜಾತದ ಮೇಳಗಳು ಪುಣೆ, ನಾಸಿಕ ಮೊದಲಾದ ಮರಾಠಿ ಮುಖ್ಯ ನಗರಗಳವರೆಗೆ ಹೋಗಿದ್ದವೆಂದು ಮರಾಠಿಗರಲ್ಲಿ ಪ್ರತೀತಿ ಯಿದೆ. ಕರ್ನಾಟಕದ ವಿಜಾಪುರ ಜಿಲ್ಹೆಯ 'ಸೌದಿ' ಪಾರಿಜಾತವೂ ಬೆಳಗಾವಿ ಜಿಲ್ಹೆಯ 'ತಿಗಡಿ' ಪಾರಿಜಾತವೂ ಕ್ರಿ. ಶ. ೧೯೩೦ರ ವರೆಗೆ ಪ್ರಖ್ಯಾತವಾಗಿದ್ದವು. ಈಗ ಪಾರಿಜಾತವು ಕನ್ನಡ ಜಾನಪದ ರಂಗಭೂಮಿಯಿಂದ ಜಾರಿ ಬೀಳಹತ್ತಿದೆ.

ದಿಮ್ಮದ ಆಟಗಳು

ಕನ್ನಡ ಬಯಲಾಟದ ಮೂಲ ಸ್ಥಿತಿಯನ್ನು ನಾವು ಈ ದಿಮ್ಮದ ಆಟಗಳಲ್ಲಿ ಕಾಣಬಹುದು. ಈ ಆಟಗಳಲ್ಲಿ ಚರ್ಮದ ವಾದ್ಯಕ್ಕೆ ಮೂಲ ಸ್ಥಾನವಿದೆ. ಈ ಆಟಗಳಲ್ಲಿ ಸೋಗು ಒಂದಿರಬಹುದು. ಇಲ್ಲವೆ ಒಂದಕ್ಕಿಂತ ಹೆಚ್ಚಿರಬಹುದು. ಸಾರಥಿಯಾಗಲಿ, ದೂತಿಯಾಗಲಿ ಇರಬೇ

ಕೆಂಬ ನೇಮ ವಿದ್ದಂತೆ ಕಾಣುವದಿಲ್ಲ. ಮೃದಂಗ, ಡೋಲು ದಮಡಿ, ಸಂಬಾಳ ಮೊದಲಾದುವುಗಳ ಮುಖಾಂತರ ಈ ಆಟಗಳು ಬೀದಿ ಬೀದಿಗಳಲ್ಲಿ ನಡೆಯುವುವು. ಈ ಆಟ ಗಳನ್ನು ಕೂಲಂಕಷವಾಗಿ ಅಭ್ಯಸಿಸಲು ಹಲಕೆಲವು ಆಟ ಗಳು 'ಏಕದೃಶ್ಯ' ದ ಆಟಗಳಾಗಿಯೂ ಬೇರೆ ಕೆಲವು ಏಕಾಂಕ' ಆಟಗಳಾಗಿಯೂ ಇನ್ನೂ ಕೆಲವು ಮಹಾಕಥೆ ಗಳಾಗಿಯೂ ಇದ್ದದ್ದು ಕಂಡುಬರುವುದು. ಈಗಿನಂತೆ ಅವುಗಳಿಗೆ 'ಏಕದೃಶ್ಯ', 'ಏಕಾಂಕ', 'ಅನೇಕಾಂಕ' ನಾಟಕಗಳೆಂದು ಪ್ರತ್ಯೇಕ ಹೆಸರುಗಳಿಲ್ಲದಿದ್ದರೂ ಅವು ಸಣ್ಣಾಟ ಹಾಗೂ ಮಹಾಕಥೆಗಳೆಂದು ಜನರಲ್ಲಿ ಹೆಸರಾಗಿ ದ್ದವು. ಸಂಬಾಳದ 'ನಂದೀಕೋಲಾಟವೇ ಏಕದೃಶ್ಯ ನಾಟಕವು. ದಮಡಿಯೊಡನೆ ದೇವದಾಸರ 'ದಶಾವತಾರ', ಡೋಲಿನೊಡದೆ 'ಕಿಳ್ಳೀಕೇತರಾಟ', ಮೃದಂಗದೊಡನೆ ಜಾತಿಗರಾಟಗಳು ಕಥಾವಸ್ತುಗಳಲ್ಲಿ ಬೇರೆ ಕಂಡರೂ ರೂಪರೇಷೆಯಲ್ಲಿ ಈಗಿನ ಏಕಾಂಕ ನಾಟಕಗಳನ್ನು ಹೋಲುವುವು. ಸಂಬಾಳದೊಡನೆ ನಡೆಯುವ ಗೊಂದ ಲಿಗರ ಮಹಾಕಥೆಗಳೇ ಈಗಿನ ಅನೇಕಾಂಕ ನಾಟಕ ಗಳನ್ನು ಹೋಲುವುವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಷ್ಟು ಹುಲುಸಾಗಿ ಬೆಳೆದು ಬಂದಿದೆ ಕನ್ನಡ ಜಾನಪದ ರಂಗಭೂಮಿ.

ಕನ್ನಡ ಬಯಲಾಟವು ಕನ್ನಡ ಸಂಸ್ಕೃತಿಯ ಒಂದು ಕಲಾರತ್ನ. ಕನ್ನಡಿಗರು ಅದನ್ನು ಎಂದಿಗೂ ಕಳೆದುಕೊಳ್ಳಕೂಡದು. ತನುಮನಧನದಿಂದ ಈ ಕಲೆಗೆ. ಮಾನ ಮನ್ನಣೆಯನ್ನಿತ್ತು ಕಲೆಗಾರರನ್ನು ಪ್ರೋತ್ಸಾಹಿಸಿ ಈ ಗಾವಿಲರ ನಾಟಕ ಕಲೆಯನ್ನು ಅಭಿವೃದ್ಧಿಗೊಳಿಸ ಬೇಕು. ಜನತೆಯು ಕಣ್ದೆರೆಯಲಿ. ಕನ್ನಡ ಸಂಶೋಧ ಕರು ಪ್ರೋತ್ಸಾಹದಿಂದ ಮುಂದೆ ಬರಲಿ. ಸರಕಾರವು ಇತ್ತ ಗಮನಿಸಿ ಇಂತಹ ಸಾಹಿತ್ಯಕರಿಗೆ ಸನ್ಮಾನವನ್ನಿತ್ತು ಸದಾ ಬೆಂಬಲವನ್ನೀಯಲಿ.

— ಜಾನಪದಕೆ ಶುಭಂ ಮಂಗಲಂ —

ಶೀಘ್ರದಲ್ಲಿ ಪ್ರಕಟವಾಗುತ್ತದೆ.
— ೪ನೆಯ ಪ್ರಕಟಣೆ —
ಅತಿದೂರದ ಜಗತ್ತಿನಲ್ಲಿ
ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕತೆ.
ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟಣೆ —
ಕುಮಾರಿ ಸುನೇತ್ರಾ
ಚೀನದ ಹೆಸರಾಂತ ಬರೆಹಗಾರರಾದ
ಲಿನ್. ಯು. ಟಿಂಗರ
ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.
ಶ್ರೀ ತಲಚೇರಕರ. ಬೆಲೆ: ೦-೧೦-೦
— ಚಂದಾದಾರರಿಗೆ ಸವಲತ್ತು —
೬ ರೂ. ಗಳಿಗೆ ೧೨ ಪುಸ್ತಕಗಳು.
ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—
ಜನಪ್ರಿಯವಾದ ಮತ್ತು ಸರಕಾರದಿಂದ.
ಮಂಜೂರಾದ ಒಂದೇ ಒಂದು ಪುಸ್ತಕ
ಆದರ್ಶ ಚಿತ್ರಕಲಾ
(Ideal Drawing)
ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.
ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ.
ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಮಕ್ಕಳಿಗೆ ಓದು ಕಲಿಸುವ ಬಗೆ

ಡಾ. ವಿ. ಕೋ. ಜವಳಿ, ಎಂ.ಈಡಿ.ಪಿ.ಎಚ್.ಡಿ. (ಬೊಂಬೆ), ಎಂ.ಎ. (ಕೋಲಂಬಿಯಾ),
ಶಿಕ್ಷಣ ಪ್ರೊಫೇಸರ, ಟೀಚರ್ಸ, ಕಾಲೇಜ ಬೆಳಗಾಂವ.

ಮನೋವಿಜ್ಞಾನದ ತಳಹದಿ

ಮಕ್ಕಳಿಗೆ ಯಾವ ವಿಷಯವನ್ನೇ ಕಲಿಸಲಿ, ಅದಕ್ಕೆ ಮನೋವಿಜ್ಞಾನದ ತಳಹದಿಯನ್ನು ಇಟ್ಟುಕೊಳ್ಳುವದು ಅವಶ್ಯ. ಈ ತಳಹದಿಯು ಇರದಿದ್ದರೆ ಕಲಿಸುವ ಪದ್ಧತಿಯು ಅಡ್ಡ ದಾರಿಯನ್ನು ಹಿಡಿಯುತ್ತದೆ. ಮಕ್ಕಳಿಗೆ ಓದು ಕಲಿಸುವದನ್ನು, ಮೊಟ್ಟಮೊದಲು ಸುರುವು ಮಾಡುವಾಗ ಯಾವ ಪದ್ಧತಿಯು ಒಳ್ಳೆಯದು ಎಂಬುದು ನಮ್ಮ ಈಗಿನ ಸಮಸ್ಯೆ. ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಒಂದನೆಯ ಇಯತ್ತೆಯ ಶಿಕ್ಷಕರು ಕೆಲವು ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಇವುಗಳನ್ನು ಅಕ್ಷರಪದ್ಧತಿ, ಶಬ್ದಪದ್ಧತಿ, ವಾಕ್ಯಪದ್ಧತಿ, ಕಥೆಯಪದ್ಧತಿ ಮುಂತಾದ ಹೆಸರುಗಳಿಂದ ಕರೆಯುವದುಂಟು. ಆದರೆ ಇವುಗಳಲ್ಲಿ ಯಾವ ಪದ್ಧತಿಯು ಮಕ್ಕಳ ಮನೋವಿಜ್ಞಾನದ ತಳಹದಿಯ ಮೇಲೆ ನಿಂತಿರುತ್ತದೆ ಎಂಬುದನ್ನು ಪರಿಶೀಲಿಸುವದು ಅವಶ್ಯ. ಆರಂಭದ ಓದು ಕಲಿಸುವ ಬೇರೆ ಬೇರೆ ಬಗೆಗಳನ್ನು ಮನೋವಿಜ್ಞಾನದ ಒರೆಗಲ್ಲಿಗೆ ತಿಕ್ಕಿ ನೋಡುವಾಗ ಕೆಳಗೆ ಕಾಣಿಸಿದ ಕೆಲವು ಮುಖ್ಯ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುತ್ತದೆ.

(೧) ಓದುವ ವಿಷಯವು ಮಕ್ಕಳ ಅನುಭವಕ್ಕೆ ನಿಲುಕುತ್ತಿದೆಯೋ?

(೨) ಓದುವ ವಿಷಯವು ಮಕ್ಕಳಿಗೆ ಅಭಿರುಚಿಯುಳ್ಳದ್ದು ಇರುತ್ತಿದೆಯೋ?

(೩) ಓದುವ ಪಾಠಗಳಲ್ಲಿ ಬಳಸಿದ ಶಬ್ದಗಳು ಮಕ್ಕಳಿಗೆ ಪರಿಚಿತವಾದವು ಇರುತ್ತಿವೆಯೋ?

(೪) ಓದುವ ಕೆಲಸದಲ್ಲಿ ತೊಡಗಿದ ಮಗುವು ಅದರಿಂದ ಆನಂದವನ್ನು ಹೊಂದುತ್ತಾನೆಯೋ?

(೫) ವಾಕ್ಯರಚನೆ, ಚಿತ್ರ, ಪುಸ್ತಕದನ್ಯೈಕಟ್ಟು ಮೊದಲಾದ ಸಂಗತಿಗಳು ಸರಿಯಾಗಿ ಇರುತ್ತಿವೆಯೋ?

(೬) ಓದಿಸುವ ವಿಧಾನವು ಮಗುವಿನ ಮನೋವ್ಯಾಪಾರಗಳಿಗೆ ಹೊಂದಿಕೆಯಾಗಿ ಇರುತ್ತಿದೆಯೋ?

ಓದಿಸುವ ವಿಷಯದ ಅಥವಾ ಓದಿಸುವ ವಿಧಾನದ ಯೋಗ್ಯತೆಯನ್ನು ಅಳೆಯಲಿಕ್ಕೆ ಮೇಲಿನ ಪ್ರಶ್ನೆಗಳು ನಮಗೆ ಸಹಾಯಕವಾಗುತ್ತವೆ. ಈಗ ರೂಢಿಯಲ್ಲಿರುವ ಪದ್ಧತಿಗಳ ಗುಣದೋಷಗಳನ್ನು ತಿಳಿದುಕೊಳ್ಳಲಿಕ್ಕೆ ನಾನು ಒಂದು ಪ್ರಯೋಗವನ್ನು ಕೈಕೊಂಡೆನು. ಆ ಆ ಪದ್ಧತಿಗಳಲ್ಲಿರುವ ಒಳ್ಳೆಯ ಅಂಶಗಳನ್ನಿಟ್ಟುಕೊಂಡು ಅವುಗಳಲ್ಲಿಯ ಕೊರತೆಗಳನ್ನು ತುಂಬಿಕೊಳ್ಳಲಿಕ್ಕೆ ಬೇರೆ ವಿಧಾನಗಳನ್ನು ಹುಡುಕಿ ತೆಗೆದು ಒಂದು ಸಂಯುಕ್ತ ಪದ್ಧತಿಯನ್ನು ಯೋಚಿಸಿರುವೆನು. ಅದಕ್ಕೆ ಸ್ವಾಭಾವಿಕ ಪದ್ಧತಿ, ಅಥವಾ 'ಲೀಲಾಪದ್ಧತಿ' ಎಂದು ಕರೆದಿದ್ದೇನೆ.

ಈ ಹೊಸ ಬಗೆಯ ಕೆಲವು ಲಕ್ಷಣಗಳನ್ನು ಇಲ್ಲಿ ಬಹಳ ಸಂಕ್ಷೇಪವಾಗಿ ಸೂಚಿಸಿದ್ದೇನೆ.

ಓದು ಕಲಿಸುವ ಸ್ವಾಭಾವಿಕ (ಲೀಲಾ) ಪದ್ಧತಿ

ನಾನು ಪ್ರತಿಪಾದಿಸುವ ಲೀಲಾಪದ್ಧತಿಯಲ್ಲಿ ಕೆಳಗೆ ಕಾಣಿಸಿದ ಮುಖ್ಯ ತತ್ವಗಳು ಅಡಕವಾಗಿರುತ್ತವೆ.

(೧) ಓದುವದು ಮಗುವಿಗೆ ಆನಂದ ಕೊಡುವ ಅನುಭವವಾಗಿರಬೇಕು.

(೨) ಓದುವ ಸಾಮರ್ಥ್ಯವು ಮಗುವಿನಲ್ಲಿ ಸ್ವಾಭಾವಿಕವಾಗಿ ಬೆಳೆಯಬೇಕು.

(೩) ಓದುವ ಸಾಮಗ್ರಿಯು ಮಗುವಿನ ಮನಸ್ಸಿನಲ್ಲಿ ಗೊಂದಲವನ್ನು ಉಂಟು ಮಾಡಬಾರದು.

(೪) ಓದು ಮಗುವಿಗೆ ಅರ್ಥವುಳ್ಳದ್ದು, ಆಗಿರಬೇಕು, ಅಂದರೆ ಅರ್ಥವಿಲ್ಲದ ಕೃತ್ರಿಮ ರಚನೆಗಳು ಪಾಠಗಳಲ್ಲಿ ಇರಕೂಡದು.

(೫) ಕನ್ನಡ ಲಿಪಿಯನ್ನು ಮೂಲಾಕ್ಷರ, ಕಾಗುಣಿತಾಕ್ಷರ ಮತ್ತೂ ಒತ್ತಕ್ಷರ ಎಂದು ಭಾಗಗಳನ್ನು ಮಾಡಿ ಪಾಠಗಳನ್ನು ರಚಿಸುವದು ಅಸ್ವಾಭಾವಿಕವಾದುದು ಮತ್ತು ಅನವಶ್ಯಕವಾದದ್ದು.

(೬) ಮೊದಲಿನ ಐದಾರು ತಿಂಗಳುಗಳ ವರೆಗೆ ಮಕ್ಕಳಿಗೆ ಬಿಡಿ ಅಕ್ಷರಗಳನ್ನು ಕಲಿಸ ಕೂಡದು;

(೭) ಮೊಟ್ಟ ಮೊದಲು ಚಿತ್ರಗಳ ಸಹಾಯದಿಂದ ಕಡಿಮೆ, ಕಡಿಮೆ ಐವತ್ತು ದೃಶ್ಯ ಶಬ್ದಗಳನ್ನು (Sight words) ಕಲಿಸಬೇಕು.

(೮) ಪಾಠಗಳಲ್ಲಿಯ ವಿಷಯಗಳು ಮಕ್ಕಳಿಗೆ ಅಭಿರುಚಿಯುಳ್ಳವಾಗಿರಬೇಕು.

(೯) ನಿಯಂತ್ರಿತ ಶಬ್ದಕೋಶವನ್ನೇ (   ) ಪಾಠಗಳಲ್ಲಿ ಬಳಸಬೇಕು.

(೧೦) ಹೊಸಬಗೆಯ ಅಭ್ಯಾಸಗಳ ಮುಖಾಂತರ ವಾಚನ ಕೌಶಲ್ಯವನ್ನು ಬೆಳೆಯಿಸಬೇಕು.

ಧ್ವನಿಸಂಕೇತ ಪದ್ಧತಿಗಳ ಕೆಲವು ಕೊರತೆಗಳು—

ಕನ್ನಡ ವರ್ಣಮಾಲೆಯ ಪ್ರತಿಯೊಂದು ಅಕ್ಷರಕ್ಕೆ ಎರಡು ರೂಪಗಳು ಇರುತ್ತವೆ.

(೧) ಕಣ್ಣಿಗೆ ಕಾಣುವ ಆಕಾರ ಅಥವಾ ಸಂಕೇತ.
(೨) ಕಿವಿಗೆ ಕೇಳುವ ಉಚ್ಚಾರ, ಅಥವಾ ಧ್ವನಿ.

ಉದಾ— ಅ, ಎಂಬ ಆಕಾರ ಮತ್ತು ಅದಕ್ಕೆ ಸರಿಯಾದ 'ಅ' ಎಂಬ ಧ್ವನಿ. ಹಿಂದುಸ್ತಾನ ಎಲ್ಲ ಭಾಷೆಗಳಲ್ಲಿ ಇರುವಂತೆ ಕನ್ನಡದಲ್ಲಿ ಕೂಡ ಒಂದು ಧ್ವನಿಯನ್ನು ಸೂಚಿಸಲಿಕ್ಕೆ ಒಂದೇ ಆಕಾರದ ಮತ್ತು ಒಂದು ಆಕಾರವನ್ನು ಸೂಚಿಸಲಿಕ್ಕೆ ಒಂದೇ ಧ್ವನಿ ಇರುತ್ತವೆ. ಈ ತತ್ವವನ್ನು ಮೂಲ ಆಧಾರವಾಗಿಟ್ಟುಕೊಂಡು ವರ್ಣ ಮಾಲೆಯನ್ನು ಕಲಿಸುವ ಅಕ್ಷರ ಪದ್ಧತಿ, ವಾಕ್ಯಪದ್ಧತಿ, ಮೊದಲಾದ ಎಲ್ಲ ಪದ್ಧತಿಗಳಿಗೆ ಧ್ವನಿ ಸಂಕೇತ ಪದ್ಧತಿಗಳೆಂದು (   ) ಕರೆಯಬಹುದು. ಧ್ವನಿ ಸಂಕೇತ ಪದ್ಧತಿಯಲ್ಲಿ ಮಗುವಿಗೆ ಯಾವ ಸ್ಥಾನವೂ ಇರುವದಿಲ್ಲ. ಆದುದರಿಂದ ಮಕ್ಕಳ ಮನೋವಿಜ್ಞಾನದ ತತ್ವಗಳನ್ನು ಮುಂದಿಟ್ಟುಕೊಂಡು ಧ್ವನಿ ಪದ್ಧತಿಯು ಯೋಚಿಸಲ್ಪಟ್ಟಲ್ಲಿ ಅಲ್ಲಿ ವರ್ಣ ಮಾಲೆಯ ಎಲ್ಲ ಅಕ್ಷರಗಳನ್ನು ಸ್ವರ, ವ್ಯಂಜನ, ಕಾಗುಣಿತ ಮತ್ತು ಒತ್ತಕ್ಷರಗಳನ್ನು ಕ್ರಮವಾಗಿ ಮಗುವಿಗೆ ಪರಿಚಯ ಮಾಡಿಕೊಡುವದೇ ಶಿಕ್ಷಕನ ಧ್ಯೇಯವಾಗಿರುತ್ತದೆ. ಮೂಲಾಕ್ಷರಕ್ಕೆ ಬೇರೆ ಬೇರೆ ಸ್ವರಗಳನ್ನು ವ್ಯಂಜನಗಳನ್ನು ಮತ್ತು ಒತ್ತುಗಳನ್ನು ಕೂಡಿಸುವದರಿಂದ ಅವು ಬೇರೆ ಬೇರೆ ರೂಪಗಳನ್ನು ತಾಳುತ್ತದೆ. ಈ ರೀತಿಯಾಗಿ ಕನ್ನಡ ವರ್ಣಮಾಲೆಯಲ್ಲಿ ೫೭೦ ಅಕ್ಷರಗಳು ಇರುತ್ತವೆ. ಆದರೆ ಇಂಗ್ಲೀಷಿನಲ್ಲಿ ಮೂಲಾಕ್ಷರಗಳು ೨೬ ಮಾತ್ರ ಇದ್ದು ಅವು ಹೀಗೆ ರೂಪಾಂತರಗಳನ್ನು ಹೊಂದುವದಿಲ್ಲ.

ಪ್ರತ್ಯೇಕ ಅಕ್ಷರಕ್ಕೆ ಪ್ರಸಂಗದಲ್ಲಿ ಯಾವ ಅರ್ಥವೂ ಇರುವದಿಲ್ಲ. ಅಕ್ಷರಗಳು ಕೂಡಿ ಒಂದು ಶಬ್ದವಾದಲ್ಲಿ ಮಾತ್ರ ಆ ಶಬ್ದಕ್ಕೆ ಅರ್ಥ ಬರುತ್ತದೆ. ಅರ್ಥವಾಗದ ಅಕ್ಷರಗಳ ಗುಂಪನ್ನು ನೆನಸಿನಲ್ಲಿಡುವದಕ್ಕಿಂತ ಅರ್ಥವಾಗುವ ಅಕ್ಷರಗಳ ಗುಂಪನ್ನು-ಶಬ್ದವನ್ನು-ನೆನಸಿನಲ್ಲಿಡಲಿಕ್ಕೆ ಮಗುವಿಗೆ ಸುಲಭವಾಗುತ್ತದೆ. ಬಗರಿ, ಎಂಬ ಶಬ್ದವನ್ನು ಓದಲಿಕ್ಕೆ ಮಗುವು ಬೇಗ ಕಲಿಯುವನಲ್ಲದೆ ಅರ್ಥ ರಹಿತವಾದ ರಿಬಗ ಅಥವಾ ರಿಗಬ ಎಂಬ ಅಕ್ಷರಗಳನ್ನು ಅಷ್ಟು ಬೇಗ ಕಲಿಯಲಾರನು. ಆದುದರಿಂದ ಅಕ್ಷರ ಪದ್ಧತಿಯು ಮಗುವಿನ ದೃಷ್ಟಿಯಿಂದ ನೀರಸವಾದುದು, ಮತ್ತು ಕಷ್ಟಮಯವಾದುದು ಆಗಿರುತ್ತದೆ. ಹೆಸರಿಗೆ ಮಾತ್ರ ವಾಕ್ಯ ಪದ್ಧತಿ, ಅಥವಾ ಕಥಾ ಪದ್ಧತಿಯನ್ನು ಅನುಸರಿಸುವೆವೆಂದು ಹೇಳುವ ಎಷ್ಟೋ ಶಿಕ್ಷಕರು ವಸ್ತುತಃ ಪಾಠವನ್ನು ಕಲಿಸುವಾಗ ಕೂಡಲೇ ಅಕ್ಷರ ಪದ್ಧತಿಯ ನೆರವಿಗೆ ಬೀಳುತ್ತಾರೆ. ಅಕ್ಷರ ಅಭ್ಯಾಸವು ಪ್ರಧಾನವಾಗಿದ್ದ ಪದ್ಧತಿಗಳಲ್ಲಿ ಪಾಠಗಳ ರಚನೆಯು ಕೃತ್ರಿಮವಾಗಿರುತ್ತದೆ. ಕೆಲವು ಅಕ್ಷರಗಳನ್ನು ಕಲಿಸುವ ಉದ್ದೇಶದಿಂದ ಮಗುವಿಗೆ ಅರ್ಥವಾಗದ ಶಬ್ದಗಳನ್ನು ಉಪಯೋಗಿಸುತ್ತಾರೆ. ವಿಷಯಗಳನ್ನು ಆರಿಸುವಲ್ಲಿ ಮತ್ತು ವಾಕ್ಯಗಳನ್ನು ರಚಿಸುವಲ್ಲಿ ಮನೋವಿಜ್ಞಾನದ ತತ್ವಗಳನ್ನು ಇಟ್ಟುಕೊಂಡಿರುವದಿಲ್ಲ. ಮಗುವಿನಲ್ಲಿ ವಾಚನ ಕಲೆಯನ್ನು ಬೆಳೆಯಿಸಲಿಕ್ಕೆ ಆವಶ್ಯವಾದ ಎಲ್ಲ ವಿಧಾನಗಳು ಧ್ವನಿ ಪದ್ಧತಿಯಲ್ಲಿ ಕಂಡು ಬರುವದಿಲ್ಲ.

ಲೀಲಾಪದ್ಧತಿಯ ವಾಚನ ಸಾಮುಗ್ರಿಗಳು—

ಓದು ಕಲಿಸುವ ಸ್ವಾಭಾವಿಕ ಪದ್ಧತಿಯನ್ನು ಕುರಿತು ಮೇಲೆ ಸೂಚಿಸಿದ ತತ್ವಗಳನ್ನು ಮುಂದಿಟ್ಟು ಕೊಂಡು ವಾಚನ ಸಾಮುಗ್ರಿಗಳನ್ನು ರಚಿಸುವದೇ ಲೀಲಾ ಪದ್ಧತಿಯ ಮುಖ್ಯ ಲಕ್ಷಣ. ಹೊಸ ಬಗೆಯ ಸಾಧನ ಸಾಮುಗ್ರಿಗಳನ್ನು ಶಿಕ್ಷಕನು ವಿಚಾರ ಪೂರ್ವಕವಾಗಿ ರಚಿಸಿಕೊಂಡು ಜಾಣತನದಿಂದ ಉಪಯೋಗಿಸಿಕೊಳ್ಳ ಬೇಕಾಗುತ್ತದೆ. ಮಾದರಿಗಾಗಿ ಕೆಲವು ಉಪಕರಣಗಳ ವಿವರಗಳನ್ನು ಕೆಳಗೆಕೊಟ್ಟಿರುತ್ತದೆ.

ಚಿತ್ರ ಶಬ್ದದ ಕಾರ್ಡುಗಳು—

ಕಾರ್ಡಿನ ಒಂದು ಮಗ್ಗಲಿಗೆ ಒಂದು ಚಿತ್ರ ಮತ್ತು ಅದರ ಹೆಸರಿನ ಶಬ್ದವನ್ನು ಬರೆಯಬೇಕು. ಮತ್ತು ಕಾರ್ಡಿನ ಮತ್ತೊಂದು ಬದಿಗೆ ಕೇವಲ ಶಬ್ದವನ್ನು ಮಾತ್ರ ಬರೆಯಬೇಕು. ಉದಾ:-

ಹುಡುಗನ ಚಿತ್ರ .... ಹುಡುಗ	ಹುಡುಗ
ಬಗರಿ ಚಿತ್ರ .... ಬಗರಿ	ಬಗರಿ

ಇಂಥ ನಾಲ್ಕಾರು ಕಾರ್ಡುಗಳನ್ನು ತಯಾರಿಸಿ ಆರಂಭ ದಲ್ಲಿ ಮಕ್ಕಳಿಗೆ ದೃಶ್ಯ ಶಬ್ದಗಳನ್ನು ಓದುವ ರೂಢಿಯನ್ನು ಮಾಡಿಸಬೇಕು. ಮಕ್ಕಳಿಗೆ ಪರಿಚಿತವಾದ ಕೆಲವು ವಸ್ತು ಗಳ ಚಿತ್ರಗಳನ್ನು (ನಾಮಪದಗಳನ್ನು) ಮತ್ತು ಕ್ರಿಯೆ ಗಳನ್ನು ಸೂಚಿಸುವ ಚಿತ್ರಗಳನ್ನು (ಕ್ರಿಯಾಪದಗಳನ್ನು) ಈ ಕಾರ್ಡುಗಳಲ್ಲಿ ಬರೆಯಬೇಕು. ಇವುಗಳ ಸಹಾಯದಿಂದ ಮುಂದೆ ವಾಕ್ಯಗಳನ್ನು ರಚಿಸಿ ಓದಿಸಬೇಕು. ಈ ಕಾರ್ಡು ಗಳ ಆಧಾರದ ಮೇಲಿಂದ ಬಗೆಬಗೆಯ ಅಭ್ಯಸನಗಳನ್ನು ರಚಿಸಬೇಕು.

ಚಿತ್ರ ಕಥೆಯ ಕಾರ್ಡುಗಳು—

ಹೊಸ ಶಬ್ದವನ್ನು ಕಲಿಸಲಿಕ್ಕೆ ಮತ್ತು ಮೊದಲು ಕಲಿತ ಶಬ್ದಗಳನ್ನು ಗಟ್ಟಿಮಾಡಲಿಕ್ಕೆ ಚಿತ್ರ ಕಥೆಯ ಕಾರ್ಡುಗಳನ್ನು ಉಪಯೋಗಿಸಬೇಕು. ಕಾರ್ಡಿನ ಒಂದು ಬದಿಗೆ ಒಂದು ಚಿತ್ರವಿರಬೇಕು. ಆ ಚಿತ್ರವನ್ನು ಸೂಚಿಸುವ ಶಬ್ದವು ಮಗುವಿಗೆ ಹೊಸ ಶಬ್ದವಾಗಿ ಬೇಕು. ಚಿತ್ರದ ಒಂದು ಬದಿಗೆ ಆ ಚಿತ್ರವನ್ನು ವರ್ಣಿ ಸುವ ಎರಡು ಅಥವಾ ಮೂರು ವಾಕ್ಯಗಳ ಒಂದು ಕಥೆ ಇರಬೇಕು. ಈ ವಾಕ್ಯಗಳಲ್ಲಿ ಹೊಸ ಶಬ್ದವನ್ನು ಬಿಟ್ಟು ಉಳಿದ ಎಲ್ಲ ಶಬ್ದಗಳು ಮಗುವಿಗೆ ಪರಿಚಿತವಾದವುಗಳೇ ಇರಬೇಕು.

ಚಿತ್ರ	ಕಥೆ
	ಇದು ಪಟ
	ಇದು ಸಂಗನ ಪಟ,
	ಸಂಗ ಪಟ ಹಾರಿಸುತ್ತಾನೆ

ಮಕ್ಕಳ ವಾಚನ ಪುಸ್ತಕಕ್ಕೆ ಸಂಬಂಧಿಸಿದ ಇಂಥ ಕೆಲವು ಕಾರ್ಡುಗಳನ್ನು ಶಿಕ್ಷಕನು ರಚಿಸಬೇಕು. ಸ್ವತಂತ್ರ ವಾಗಿಯೂ ೨೦-೨೫ ಚಿತ್ರ ಕಥೆಯ ಕಾರ್ಡುಗಳನ್ನು ತಯಾರಿಸಿಕೊಳ್ಳಬೇಕು. ಕಥೆಯಲ್ಲಿ ಬಂದ ವಾಕ್ಯ ಗಳನ್ನು ಪ್ರತ್ಯೇಕವಾಗಿ ಒಂದೊಂದು ಪಟ್ಟಿಯಲ್ಲಿ ಬರೆದ ಬಗೆಬಗೆಯ ಅಭ್ಯಸನಗಳನ್ನು ಮಕ್ಕಳ ಕಡೆಯಿಂ ಮಾಡಿಸಬೇಕು

ಸಂದರ್ಭದೊಡನೆ ಅಕ್ಷರ ಪರಿಚಯ—

ಮೊದಲಿನ ಐದಾರು ತಿಂಗಳುಗಳ ವರೆಗೆ ಅಕ್ಷ ಗಳನ್ನು ಪ್ರತ್ಯೇಕವಾಗಿ ಕಲಿಸಬಾರದು. ಆದರೆ ಕೆಲ ಶಬ್ದಗಳನ್ನು ಮತ್ತು ವಾಕ್ಯಗಳನ್ನು ಓದಲು ಕಲಿ ಮೇಲೆ ಬಿಡಿ ಅಕ್ಷರಗಳ ರೂಪ ಮತ್ತು ಉಚ್ಚಾರದ ಕ ನೆಯನ್ನು ಶಬ್ದಗಳ ಇಲ್ಲವೇ ವಾಕ್ಯಗಳ ಸಂದರ್ಭದ ಕಲಿಸಬಹುದು. ಇಂಥ ಅಕ್ಷರ ಸಂದರ್ಭದ ಅಭ್ಯಸ ಗಳನ್ನು ಅನೇಕ ರೀತಿಯಾಗಿ ಕಲ್ಪಿಸಬಹುದು.

ಕೆಲವು ಉದಾಹರಣೆಗಳನ್ನು ಕೆಳಗೆ ಸೂಚಿಸಿದೆ—

ಆಡಿಪ್ರಾಸದ ಶಬ್ದಗಳು—

ಯಾವುದಾವದೊಂದು ನಿಶ್ಚಿತ ಅಕ್ಷರವನ್ನು ಶಿ ಕನು ಹೇಳಿ.

ಉದಾ:- ಅ. ಕಾ. ಮ. ಮುಂತಾಗಿ, ಅದರಿಂ ಪ್ರಾರಂಭವಾಗುವ ಬೇರೆ ಬೇರೆ ಶಬ್ದಗಳನ್ನು ಸೂಚಿಸ ಮಕ್ಕಳನ್ನು ಕೇಳಬೇಕು.

ಉದಾ:— ಅಪ್ಪ, ಅವ್ವ, ಆಗಸ, ಅರಿವೆ ಮುಂತಾಗಿ.

ಈ ಶಬ್ದಗಳಲ್ಲಿಯ ಮೊದಲಿನ ಅಕ್ಷರಗಳ ಉಚ್ಚಾರವು ಒಂದೇ ಇರುತ್ತದೆ ಎಂಬ ಕಲ್ಪನೆಯನ್ನು ಮಗುವಿಗೆ ಮಾಡಿ ಕೊಡಬೇಕು. ಇಲ್ಲಿ ಬರೆದು ಓದಿಸುವ ಉದ್ದೇಶ ಇರುವದಿಲ್ಲ. ಅಂತ್ಯ ಪ್ರಾಸದ ಶಬ್ದಗಳು ಶಿಕ್ಷಕನು ಒಂದು ಶಬ್ದವನ್ನು ಸೂಚಿಸಿ ಅದಕ್ಕೆ ಪ್ರಾಸ ಕೂಡುವ ಬೇರೆ ಶಬ್ದಗಳನ್ನು ಹೇಳಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಉದಾ:- ನಾವು, ಹಾವು, ನೀವು, ಸೇವು.... ಮುಂತಾಗಿ, ಮತ್ತೆ-ಬುತ್ತಿ, ಹತ್ತಿ, ಕತ್ತಿ, ತತ್ತಿ........ ಮುಂತಾಗಿ ಇಲ್ಲಿಯೂ ಕಿವಿಗೆ ತರಬೇತಿ ಕೊಡುವ ಉದ್ದೇಶವಿರುತ್ತದೆ.

ಬಿಟ್ಟ ಅಕ್ಷರಗಳನ್ನು ತುಂಬುವದು—

ಇಲ್ಲಿ ಅಕ್ಷರಗಳ ಆಕಾರ ಮತ್ತು ಉಚ್ಚಾರದ ಕಲ್ಪನೆಯಿಂದ ಕಿವಿಗೂ ಮತ್ತು ಕಣ್ಣಿಗೂ ತರಬೇತಿ ಉಂಟಾಗುವದು. ಉದಾ:-

ಪುಸ್ತಕ	ಪು — ಕ	ಪು ಸ್ತ —
	ಸ್ತ ಕ —	ಪು — —
	ಗ — — ರ	ಗ ಡಿ — —
ಗಡಿಯಾರ	ಗ ಡಿ ಯಾ —	— ಡಿ — ರ

ಸಮಕ್ಷರಗಳನ್ನು ಗುರ್ತಿಸುವದು—

ರ. ಬ.	ಕೊ. ಮು.
ರೇ. ರ. ಬ. ಚ.	ಕೊ. ಕ. ಮ. ಮು.

ಮೇಲಿನ ಸಾಲಿನಲ್ಲಿ ಎರಡು ಅಕ್ಷರಗಳನ್ನು ಕೊಟ್ಟಿರುತ್ತದೆ. ಕೆಳಗಿನ ಸಾಲುಗಳಲ್ಲಿ ನಾಲ್ಕು ಅಕ್ಷರಗಳನ್ನು ಕೊಟ್ಟಿರುತ್ತದೆ. ಎರಡೂ ಸಾಲುಗಳಲ್ಲಿದ್ದ ಒಂದೇ ಬಗೆಯ ಅಕ್ಷರಗಳನ್ನು ಗೆರೆ ಎಳೆದು ಜೋಡಿಸಲಿಕ್ಕೆ ಮಗುವಿಗೆ ಹೇಳಬೇಕು.

ಸಮ ಶಬ್ದಗಳನ್ನು ಗುರ್ತಿಸುವದು—

ಆಟ. ಆನೆ.	ಕತ್ತೆ. ಕತೆ.
ಪಟ. ಆನೆ. ಆಟ. ಮನೆ.	ಕಲಿ. ಕತೆ. ಕತ್ತೆ. ಮತ್ತೆ.

ಎರಡೂ ಸಾಲುಗಳಲ್ಲಿ ಒಂದೇ ಇದ್ದ ಶಬ್ದಗಳನ್ನು ನಡುವೆ ಗೆರೆ ಎಳೆದು ಕೂಡಿಸಲಿಕ್ಕೆ ಮಗುವಿಗೆ ಹೇಳಬೇಕು.

ಶಬ್ದಾರ್ಥದ ಅಭ್ಯಸನಗಳು—

ಮಗುವಿನ ಶಬ್ದಸಂಪತ್ತನ್ನು ಬೆಳೆಯಿಸಲಿಕ್ಕೆ ಮತ್ತು ಅವನ ಶಬ್ದಸಾಮರ್ಥ್ಯವನ್ನು ಪರೀಕ್ಷಿಸಲಿಕ್ಕೆ ಅನೇಕ ಬಗೆಯ ಅಭ್ಯಸನಗಳನ್ನು ಯೋಚಿಸಬಹುದು. ಇವುಗಳಲ್ಲಿ ಶಬ್ದ ಮತ್ತು ಅದರ ಚಿತ್ರ ಜೋಡಿಸುವದು ಮುಖ್ಯವಾದುದು ಉದಾ:—

ಗಂಟೆಯ ಚಿತ್ರ	ರೆಂಟೆ, ಕಂಟಿ, ಗಂಟೆ, ದೆಂಟೆ.

ಚಿತ್ರದ ಅರ್ಥವನ್ನು ಸೂಚಿಸುವ ಶಬ್ದವನ್ನು ಕಂಡು ಹಿಡಿದು ಅದರ ಕೆಳಗೆ ಗೆರೆ ಎಳೆಯಲಿಕ್ಕೆ ಮಗುವಿಗೆ ಹೇಳಬೇಕು.

ವಾಕ್ಯಾರ್ಥದ ಅಭ್ಯಸನಗಳು—

ಮಕ್ಕಳಿಗೆ ಸುಮ್ಮನೇ ಪಾಠ ಓದಲಿಕ್ಕೆ ಹೇಳುವದರಿಂದ ಏನೂ ಪ್ರಯೋಜನವಾಗುವದಿಲ್ಲ. ವಾಕ್ಯದ ಅರ್ಥವನ್ನು ಅದರಂತೆ ಪಾಠದ ವಿಷಯವನ್ನು ತಿಳಿದು

ಕೊಂಡು ಓದುವದು ನಿಜವಾದ ಓದು. ಮಗುವಿನಲ್ಲಿ ಈ ವಾಚನ ಸಾಮರ್ಥ್ಯವು ಬೆಳೆಯಬೇಕೆಂಬ ದೃಷ್ಟಿಯಿಂದ ಅನೇಕ ಬಗೆಯ ಅಭ್ಯಸನಗಳನ್ನು ರಚಿಸಬಹುದು. ಒಂದು ಚಿತ್ರ ಕೊಟ್ಟು ಅದಕ್ಕೆ ಹೊಂದಿಕೆಯಾಗುವ ವಾಕ್ಯವನ್ನು ಗುರ್ತಿಸುವದು ಸಾಮಾನ್ಯ ಅಭ್ಯಸನವು. ಉದಾ:—

ಹುಡುಗೆ ಓಡುವ ಚಿತ್ರ	ಹುಡುಗ ಓಡುತ್ತಾನೆ. ಹುಡುಗೆ ಓಡುತ್ತಾಳೆ. ಹುಡುಗೆ ಓದುತ್ತಾಳೆ.

ವಾಕ್ಯದಲ್ಲಿ ಹೇಳಿದಂತೆ ಮಾಡುವದು ಮತ್ತೊಂದು ಬಗೆಯ ಅಭ್ಯಸನ. ವಾಕ್ಯದಲ್ಲಿ ಹೇಳಿದಂತೆ ಚಿತ್ರವನ್ನು ತೆಗೆಯುವದು, ಚಿತ್ರಕ್ಕೆ ಬಣ್ಣ ಕೊಡುವದು, ಚಿತ್ರ ಕತ್ತರಿಸುವದು ಮುಂತಾದ ಕೆಲಸ ಮಾಡಲು ವಾಕ್ಯದಲ್ಲಿ ಸೂಚಿಸಬಹುದು ಇವಲ್ಲದೆ ಹೌದು, ಅಲ್ಲ. ಪ್ರಶ್ನೆಗಳನ್ನು ಗುರ್ತಿಸುವದು, ಸರಿ, ತಪ್ಪು, ಮಾತುಗಳನ್ನು ಗುರ್ತಿಸುವದು, ಬಿಟ್ಟ ಶಬ್ದಗಳನ್ನು ತುಂಬುವದು, ಕೊಟ್ಟ ಒ, ಳ ಪದಗಳಲ್ಲಿ ಸರಿಯಾದುದನ್ನು ಆರಿಸುವದು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ಹೇಳುವದು, ಮುಂತಾದವು ಬೇರೆ ಬಗೆಯ ಅಭ್ಯಸನಗಳು—

ಮಕ್ಕಳ ಅಭಿರುಚಿಗಳು—

ಮಕ್ಕಳ ವಾಚನ ಸಾಮಗ್ರಿಗಳಲ್ಲಿ ಬರತಕ್ಕ ವಿಷಯಗಳು ಅಥವಾ ಕಥಾ ವಸ್ತುಗಳು ಅವರಿಗೆ ಸ್ವಾಭಾವಿಕವಾಗಿ ಅಭಿರುಚಿಯುಳ್ಳವೇ ಆಗಿರತಕ್ಕದ್ದು, ಈ ತತ್ವವನ್ನು ಅನುಸರಿಸಿ ಬರೆದ ಬಾಲವಾಚನಗಳು, ಕನ್ನಡದಲ್ಲಿ ಬಹಳ ವಿರಳ. ಮಕ್ಕಳ ಆಟಗಳು, ಪ್ರಾಣಿಗಳ ಕಥೆಗಳು, ಹೊಲದಲ್ಲಿಯ ಅನುಭವಗಳು, ಜಾತ್ರೆಯಲ್ಲಿಯ ಅನುಭವಗಳು, ನಾಟಕದ ಕಥೆಗಳು, ಹಾಸ್ಯದ ಸನ್ನಿವೇಶಗಳು ಮುಂತಾದವುಗಳಿಗೆ ಸಂಬಂಧಿಸಿ. ಮಕ್ಕಳ ವಾಚನ ಪಾಠಗಳನ್ನು ಯೋಜಿಸಬೇಕು. ವಾಚನ ಪುಸ್ತಕದ ಜೊತೆಗೆ ಉಪಯೋಗಿಸಲಿಕ್ಕೆ ಯೋಗ್ಯವಾದ ಒಂದು ಕೆಲಸದ ಪುಸ್ತಕವನ್ನು (   ) ರಚಿಸಬೇಕು. ವಾಚನ ಪಾಠಗಳಿಗೆ ಪೋಷಕವಾಗುವಂತೆ ಮತ್ತು ವಾಚನ ಸಾಮರ್ಥ್ಯವನ್ನು ಬೆಳೆಯುವಂತೆ ಹೊಸಬಗೆಯ ಅಭ್ಯಸನಗಳನ್ನು ಈ ಕೆಲಸದ ಪುಸ್ತಕದಲ್ಲಿ ಹೇರಳವಾಗಿ ಕೊಟ್ಟಿರಬೇಕು.

ಮಕ್ಕಳ ಶಬ್ದಕೋಶ—

ಆರೇಳು ವರ್ಷದ ಮಕ್ಕಳ ಅನುಭವಕ್ಕೆ ಸಮ್ಮಂಧಿಸಿದ ಶಬ್ದಗಳ ಸಂಗ್ರಹಕ್ಕೆ ಮಕ್ಕಳ ಶಬ್ದಕೋಶ ಅನ್ನುತ್ತಾರೆ. ಆದರೆ ಮಕ್ಕಳ ಅನುಭವವು ಹೆಚ್ಚಿದ ಹಾಗೆ ಅವರ ಶಬ್ದ ಸಂಪತ್ತು ಸಹ ಬೆಳೆಯುತ್ತ ಹೋಗುವದು. ಆರಂಭದ ಓದು ಕಲಿಸುವಾಗ ವಾಚನ ಪಾಠದಲ್ಲಿ ಮಕ್ಕಳಿಗೆ ಪರಿಚಿತವಾದ ಶಬ್ದಗಳನ್ನು ಮಾತ್ರ ಬಳಸಬೇಕು. ವರ್ಣ ಮಾಲೆಯ ಎಲ್ಲ ಅಕ್ಷರಗಳನ್ನು ಕಲಿಸುವ ಹವ್ಯಾಸಕ್ಕೆ ಬಿದ್ದು ಮಕ್ಕಳಿಗೆ ಅರ್ಥವಾಗದ ಅಪರಿಚಿತ ಶಬ್ದಗಳನ್ನು ಪಾಠಗಳಲ್ಲಿ ಉಪಯೋಗಿಸುವದು ತಪ್ಪು. ಮಕ್ಕಳಿಗಾಗಿ ಬರೆದ ಅನೇಕ ಕನ್ನಡ ಪುಸ್ತಕಗಳನ್ನು ಪರಿಶೀಲಿಸಿ ೨೦೦೦ ಶಬ್ದಗಳ ಒಂದು ಪಟ್ಟಿಯನ್ನು ನಾನು ತಯಾರಿಸಿದ್ದೇನೆ. ಪರಿಶುದ್ಧಗೊಳಿಸಿದ ಇಂಥ ಶಬ್ದಪಟ್ಟಿಗಳನ್ನು ತಯಾರಿಸಲಿಕ್ಕೆ ಇನ್ನೂ ಅವಕಾಶವಿರುತ್ತದೆ. ಮಕ್ಕಳ ವಾಚನ ಪಾಠಗಳಲ್ಲಿ ಉಪಯೋಗಿಸಬೇಕಾದ ಶಬ್ದಗಳನ್ನು ಇಂಥ ಶಬ್ದ ಪಟ್ಟಿಗಳಿಂದ ಆಯ್ದುಕೊಳ್ಳಬೇಕು. ಈಗಿರುವ ವಾಚನ ಪುಸ್ತಕಗಳಲ್ಲಿ ಶಬ್ದ ಭಾರದ ಕಲ್ಪನೆಯೇ ಇದ್ದಂತೆ ತೋರುವದಿಲ್ಲ. ಶಬ್ದಗಳ ಮಿತಿ ಮತ್ತು ಬಳಕೆ ರೀತಿಯು ಹಾಳತವಾಗಿರದಿದ್ದರೆ ಓದುವಾಗ ಅಡೆತಡೆಗಳುಂಟಾಗಿ ಮಗುವಿನ ವಾಚನ ಪ್ರಗತಿಯು ಕುಂಠಿತವಾಗುತ್ತದೆ. ಕಾರಣ ಪಾಠಗಳಲ್ಲಿ ನಿಯಂತ್ರಿತ ಶಬ್ದಕೋಶವನ್ನು ಉಪಯೋಗಿಸುವದಲ್ಲದೆ ಅವುಗಳನ್ನು ಹದವರಿತು ಮತ್ತೆ ಮತ್ತೆ ಉಪಯೋಗಿಸಬೇಕು. ಪ್ರತಿಯೊಂದು, ಶಬ್ದದ ರೂಪ ಮತ್ತು ಉಚ್ಚಾರವು ಮನದಟ್ಟಾಗಬೇಕಾದರೆ ಅದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಸುಮಾರು ೩೫ ಬಾರೆಯಾದರೂ ಉಪಯೋಗಿಸಬೇಕಾಗುವದು.

ಮೊದಲನೆಯ ಇಯತ್ತೆಯ ಮಕ್ಕಳು ಒಂದು ವರ್ಷದ ಕೊನೆಗೆ ಮಕ್ಕಳ ಶಬ್ದಕೋಶದಲ್ಲಿಯ ೧೫೦ರಿಂದ ೨೦೦ ಶಬ್ದಗಳನ್ನು ಓದಲಿಕ್ಕೆ, ಬರೆಯಲಿಕ್ಕೆ ಕಲಿತರೆ ಸಾಕು. ಮೇಲೆ ವಿವರಿಸಿದ ಓದು ಕಲಿಸುವ ಹೊಸ

ಪದ್ಧತಿಯನ್ನು ಬೇರೆ ಬೇರೆ ರೀತಿಯಿಂದ ೨ನೆಯ, ೩ನೆಯ ಇಯತ್ತೆಗಳಲ್ಲಿಯೂ ಮುಂದುವರಿಸಬೇಕಾಗುವದು.

ವಿ. ಸೂ:– (ಇದೇ ಬರೆಹಗಾರರಿಂದ ಬರೆಯಲ್ಪಟ್ಟ 'ಮಕ್ಕಳಿಗೆ ಓದು ಕಲಿಸುವದು' ಎಂಬ ಪುಸ್ತಕದಲ್ಲಿ ಓದು ಕಲಿಸುವ ಬೇರೆ ಬೇರೆ ಪದ್ಧತಿಗಳ ಗುಣದೋಷಗಳನ್ನು ಮತ್ತು ಹೊಸ ಪದ್ಧತಿಯ ಮುಖ್ಯ ಲಕ್ಷಣಗಳನ್ನು ಉದಾಹರಣೆ ಸಹಿತ ಹೆಚ್ಚು ವಿಶದವಾಗಿ ವಿವರಿಸಲಾಗಿದೆ)

ಮಾತೆಯ ಶೈಕ್ಷಣಿಕ ಪ್ರಭಾವ

(ಸ್ಯಾಮುಎಲ್ ಸ್ಮಾಯಿಲ್ಸ್ ಎಂಬ ಆಂಗ್ಲ ಗ್ರಂಥಕಾರನ ಪ್ರಬಂಧದ ಅನುವಾದ)

ಅನುವಾದಕರು: ಲೇಖನಕಲಾನಿಧಿ ತಟ್ಟಿರಾಮರಾಯರು, ಧಾರವಾಡ.

ಕಂಡದ್ದನ್ನು ಅನುಕರಣ ಮಾಡುವದು ಕೂಸಿನ ಸ್ವಭಾವ. ಮಾತು, ರೀತಿ, ಹಾವಭಾವ, ರೂಢಿ. ಸ್ವಭಾವ– ದೃಷ್ಟಿಗೆ ಬಿದ್ದುದೆಲ್ಲವೂ ಅದಕ್ಕೆ ಒಂದು ಆದರ್ಶ. ಮಗುವಿಗೆ ಬಾಲ್ಯ ಜೀವನವೇ ಜೀವನದ ಬಹು ಮಹತ್ವವುಳ್ಳ ಕಾಲಾವಧಿಯು. ಇತರರ ಸ್ನೇಹ ಸಹವಾಸದಿಂದ ಆಗ ಅದು ತನ್ನನ್ನು ರೂಪಿಸಿಕೊಳ್ಳಲಾರಂಭಿಸುವದು. ಮಗುವಿಗೆ ಮುಂದು ಮುಂದು ದೊರೆತ ಪ್ರತಿಯೊಬ್ಬ ಶಿಕ್ಷಕನೂ ಅವನ ಹಿಂದಿನವರಿಗಿಂತ ಒಟ್ಟಿನಲ್ಲಿ ಸಾಧಿಸುವದು ಕಡಿಮೆಯೇ. ಅಂತೂ ಕೊನೆಗೆ, ಸಮಗ್ರ ಜೀವನವನ್ನು ಒಂದು ಶೈಕ್ಷಣಿಕ ಸಂಸ್ಥೆಯೆಂದೇ ಭಾವಿಸಿದರೆ, ಭೂಮಂಡಲವನ್ನು ಸುತ್ತಿ ಬಂದ ಒಬ್ಬ ವ್ಯಕ್ತಿಯ ಮನಸ್ಸಿನ ಮೇಲೆ ಅವನು ನೋಡಿ ಬಂದ ಎಲ್ಲ ರಾಷ್ಟ್ರಗಳಿಂದ ಉಂಟಾದ ಪರಿಣಾಮವು ಕೂಡ ಅವನನ್ನು ಎತ್ತಿಕೊಂಡು ಆಡಿಸಿದ ಹೆತ್ತತಾಯಿಯ ಅಥವಾ ಜೋಕೆ ಮಾಡಿದ ಸಾಕುತಾಯಿಯ ಪ್ರಭಾವಕ್ಕಿಂತಲೂ ಕಡಿಮೆಯೇ. ಆದ್ದರಿಂದ ಕೂಸಿನ ಸ್ವಭಾವವನ್ನು ನಿರೂಪಿಸುವಲ್ಲಿ ಅದರ ಮುಂದಿರುವ ಆದರ್ಶಗಳಿಗೆ ವಿಶೇಷವಾದ ಮಹತ್ವವಿದೆ; ನಮಗೆ ಚೆಲುವಾದ ಸ್ವಭಾವ ಶೀಲಗಳು ಅಪೇಕ್ಷಿತವಾಗಿದ್ದರೆ ಮಕ್ಕಳ ಮುಂದೆ ಚೆಲುವಾದ ಆದರ್ಶಗಳು ಕಂಗೊಳಿಸುವಂತಾಗಬೇಕು. ಪ್ರತಿಯೊಂದು ಮಗುವಿನ ದೃಷ್ಟಿಯ ಮುಂದೆ ಸದಾಸರ್ವದಾ ಇರುವ ಆದರ್ಶವು ತಾಯಿಯೇ.

ಒಬ್ಬ ಒಳ್ಳೇ ತಾಯಿಯ ಯೋಗ್ಯತೆಯು ನೂರು ಮಂದಿ ಶಾಲಾ ಶಿಕ್ಷಕರಿಗೂ ಬರಲಾರದು. ಮನೆಯಲ್ಲಿ ಆಕೆ ಎಲ್ಲ ಅಂತಃಕರಣಗಳನ್ನು ಆಕರ್ಷಿಸುವ ಚುಂಬಕ; ಎಲ್ಲ ಕಣ್ಣುಗಳನ್ನು ತನ್ನೆಡೆ ಎಳೆದುಕೊಳ್ಳುವ ತಾರೆ. ಆಕೆಯ ಅನುಕರಣವು ಅವಿರತವಾಗಿ ನಡೆಯುತ್ತಿದೆ; ಈ ಅನುಕರಣವು ಬೋಧಾಮೃತದ ಕಲಶವಿದ್ದಂತೆ; ಆದರೆ ಆಚರಣೆಯು ಉಪದೇಶಕ್ಕಿಂತ ಶ್ರೇಷ್ಠವಾದದ್ದು; ಅದು ಕಾರ್ಯರೂಪದಿಂದ ಪರಿಣಮಿಸುವ ಬೋಧೆ— ಮಾತಿಲ್ಲದ ಬೋಧೆ, ನಾಲಿಗೆಯು ಕಲಿಸಲಾರದ್ದನ್ನು ಉದಾಹರಿಸುವ ಬೋಧೆ. ಅನಿಷ್ಟ ಉದಾಹರಣೆಗಳು ಕಣ್ಣೆದುರಿಗಿರುವಾಗ ಮುತ್ತಿನಂತಹ ಉಪದೇಶದ ಪ್ರಯೋಜನವೂ ಶೂನ್ಯವೇ; ನೋಡಿದ್ದನ್ನೇ ಅನುಸರಿಸುವರು— ತತ್ವೋಪದೇಶವನ್ನಲ್ಲ. ಆಚರಣೆಗೆ ಸಂಗತಿಯಿಲ್ಲದ ಉಪದೇಶದಿಂದ ಪ್ರಯೋಜನವಂತೂ ಇಲ್ಲವೇ ಇಲ್ಲ. ಹೋಗಲಿ, ಅನಿಷ್ಟವೂ ಉಂಟಾಗುವದು; ವ್ಯಸನಗಳಲ್ಲಿ ಅತ್ಯಂತ ಹೇಡಿತನವೆನಿಸುವ ಡಂಭಾಚಾರ ಬೂಟಾಟಿಕೆಗಳನ್ನು ಕಲಿಯಲಿಕ್ಕೆ ಅದು ಕಾರಣವಾಗುವದು. ನಡೆಯು

ನುಡಿಗೆ ಸುಸಂಗತವಾಗಿರುವವನ್ನು ಬಿಡುವದನ್ನು ಸಣ್ಣ ಮಕ್ಕಳು ಸಹ ತಿಳಿದುಕೊಳ್ಳಬಲ್ಲರು; ಹೇಳುವದೊಂದು ಮಾಡುವದು ಬೇರೊಂದು ಹೀಗಿರುವ ಹೆತ್ತವರ ಮಾತಿನ ಅರ್ಥವನ್ನು ಅವರು ಕೂಡಲೆ ಮಾಡಿಕೊಳ್ಳುವರು. ಕೃತಿಗಳ ಅನುಕರಣದಿಂದ ಶೀಲ ಸ್ವಭಾವಗಳು ಒಂದು ಮಾದರಿಯಂತೆ ನಿಧಾನವಾಗಿಯೂ ಸೂಕ್ಷ್ಮವಾಗಿಯೂ ರೂಪುಗೊಳ್ಳುತ್ತ ಕೊನೆಗೆ ಒಂದು ನಿಶ್ಚಿತವಾದ ಸ್ವರೂಪವನ್ನು ತಾಳುವವು. ಒಂದರ ಮೇಲೊಂದು ಹೀಗೆ ಅನೇಕಾವರ್ತಿ ಮಾಡಿದ ಕೆಲಸಗಳಿಂದ ಚಟ ಅಥವಾ ಅಭ್ಯಾಸ ಉಂಟಾಗುವವು, ಈ ಚಟಗಳೇ ಮಾನವನ ಹಿತಾಹಿತ ಸಾಧಕವಾದ ಕಾರ್ಯವನ್ನು ಗೊತ್ತು ಮಾಡಿ ಅವನ ಶೀಲವನ್ನು ವ್ಯಕ್ತೀಕರಿಸುವವು.

ತಂದೆಯ ಉದಾಹರಣೆಗಿಂತ ಎಷ್ಟೋ ಹೆಚ್ಚಾಗಿ ತಾಯಿಯ ಉದಾಹರಣೆಯೇ ಮಗುವಿನ ಆಚರಣೆ ನಡತೆಗಳಿಗೆ ಪ್ರೇರಕವಾಗುವದರಿಂದ ಆಕೆಯ ಒಳ್ಳೇ ಉದಾಹರಣೆಯು ಮನೆಯಲ್ಲಿ ಇಷ್ಟೊಂದು ಮಹತ್ವವುಳ್ಳದ್ದಾಗಿದೆ. ಹೀಗಿರುವದಕ್ಕೆ ಕಾರಣವನ್ನು ನಾವು ಸುಲಭವಾಗಿ ತಿಳಿದುಕೊಳ್ಳಬಹುದು. ಮನೆಯು ಹೆಂಗಸಿನ ಕ್ಷೇತ್ರ, ಅದು ಅವಳ ರಾಜ್ಯ, ಅಲ್ಲಿ ಅವಳು ತನ್ನ ಸಂಪೂರ್ಣ ಅಧಿಕಾರ ನಡೆಸುವಳು. ಅಲ್ಲಿರುವ ತನ್ನ ಸಣ್ಣ ಪ್ರಜೆಗಳನ್ನು ಆಳುವ ವಿಷಯದಲ್ಲಿ ಅವಳು ಸರ್ವತಂತ್ರ ಸ್ವತಂತ್ರಳು. ಅವರು ಎಲ್ಲಕ್ಕೂ ಅವಳ ಮುಖವನ್ನೇ ನೋಡುವರು. ಅವಳು ಸರ್ವದಾ ಅವರ ಕಣ್ಣೆದುರಿನಲ್ಲಿರುವ ದೃಷ್ಟಾಂತವೂ ಆದರ್ಶವೂ ಆಗಿರುವದರಿಂದ ಅವರು ಅವಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವರು, ಅನುಕರಿಸುವರು.

ಸಣ್ಣವರ ಮನಸ್ಸಿನ ಮೇಲಾಗುವ ಸನ್ನಿವೇಶದ ಪ್ರಭಾವವನ್ನು ಮತ್ತು ಅವರ ಮನಸ್ಸಿನಲ್ಲಿ ನಟ್ಟ ಕಲ್ಪನೆಗಳ ಪ್ರಭಾವವನ್ನು ಒಂದು ಸಣ್ಣ ಗಿಡದ ತೊಗಟೆಯಲ್ಲಿ ಕೆತ್ತಿದ ಅಕ್ಷರಗಳಿಗೆ ಹೋಲಿಸಬಹುದು; ದಿನದಿನಕ್ಕೆ ಅವು ಬೆಳೆದು ಅಗಲವಾಗುತ್ತ ಹೋಗುವವು. ಕೂಸಿನ ಮನಸ್ಸಿನಲ್ಲಿ ಅಚ್ಚೊತ್ತಿದ ಕಲ್ಪನೆಗಳು ಭೂಮಿಯಲ್ಲಿ ಬಿದ್ದ ಬೀಜಗಳಂತಿರುವವು. ಅವು ಅಲ್ಲಿಯೇ ಕೆಲ ಕಾಲವಿದ್ದು ಮೊಳಕೆಯೊಡೆದು ಬೆಳೆದು ಮುಂದೆ ಕೃತಿಗಳು, ಆಲೋಚನೆಗಳು, ರೂಢಿಗಳು ಇತ್ಯಾದಿ ಹೂ ಕಾಯಿ ಹಣ್ಣುಗಳನ್ನು ಕೊಡುವವು. ಹೀಗೆ ತಾಯಿಯು ತನ್ನ ಮಕ್ಕಳಲ್ಲಿ ಪುನಃ ಜನ್ಮವೆತ್ತುವಳು. ಅವರು ಬುದ್ಧಿ ಪೂರ್ವಕವಾಗಿ ಕಲಿಯಬೇಕೆಂದು ಪರಿಶ್ರಮಿಸದೇ ಅವಳ ಪದ್ಧತಿ, ಮಾತು, ನಡತೆ, ಬಾಳಿನ ರೀತಿಗಳನ್ನು ಕಲಿತುಕೊಳ್ಳುವರು. ಅವಳ ಅಭ್ಯಾಸಗಳೇ ಅವರ ಅಭ್ಯಾಸಗಳಾಗುವವು. ಅವಳ ಶೀಲ ವೃತ್ತಗಳು ಅವರಲ್ಲಿ ಪುನಃ ಆವಿರ್ಭವಿಸುವವು.

ತಾಯಿಯ ಈ ಅಂತಃಕರಣವು ನಮ್ಮ ಕುಲದ ಸೂಕ್ಷ್ಮ ಮುನ್ನೋಟ. ಅದರ ಪ್ರಭಾವವು ಸಾರ್ವತ್ರಿಕವೂ ಶಾಶ್ವತವೂ ಆಗಿದೆ. ಜೀವನದಲ್ಲಿ ಕಾಲಿಟ್ಟಾಗಲೇ ಮಾನವ ವ್ಯಕ್ತಿಯ ಶಿಕ್ಷಣದಿಂದ ಅದು ಪ್ರಾರಂಭವಾಗಿ ಮುಂದೆ ಅವರ ಇಡಿಯ ಜೀವಮಾನದಲ್ಲಿ ಶ್ರೇಷ್ಠಗುಣದ ತಾಯಿಯು ತನ್ನ ಪ್ರಭಾವಿಯಾದ ವರ್ಚಸ್ಸನ್ನು ತನ್ನ ಮಕ್ಕಳ ಮೇಲೆ ಕೆಡಹುವದರಿಂದ ಅದು ಮುಂದುವರಿಯುವದು. ಪ್ರತಿಯೊಬ್ಬರೂ ಪ್ರಪಂಚದ ಪ್ರವಾಹದಲ್ಲಿ ಬಿದ್ದು ಅದರ ಕಷ್ಟ ಕಾರ್ಪಣ್ಯಗಳನ್ನೂ, ಸತ್ವಪರೀಕ್ಷೆಯನ್ನೂ ಎದುರಿಸಿದಾಗ ಅವಳ ಉಪದೇಶ ಯಾಚನೆಗಲ್ಲದಿದ್ದರೂ ತಮಗೆ ಬಂದ ದುಃಖ ದುಗುಡಗಳ ಪರಿಹಾರಕ್ಕೆ ತಮ್ಮ ತಾಯಿಯ ಸಮೀಪಕ್ಕೆ ಬರುವರು. ಸಣ್ಣವರಿರುವಾಗ ಅವರ ಮನಸ್ಸಿನಲ್ಲಿ ಆಕೆಯು ಬಿತ್ತಿದ ಸಾತ್ತ್ವಿಕ ಸುವಿಚಾರಗಳು ಅವಳು ಮೃತಳಾಗಿ ಎಷ್ಟೋ ವರ್ಷಗಳಾದ ಮೇಲೆ ಸಹ ಬೆಳೆದು ಸತ್ಕೃತಿಗಳ ರೂಪದಲ್ಲಿ ಫಲಕೊಡುವವು; ಮತ್ತು ಆಕೆಯ ಸ್ಮೃತಿ ರೂಪವಾದ ಅವಶೇಷವೊಂದೇ ಉಳಿದಾಗ ಆಕೆಯ ಮಕ್ಕಳು ಉನ್ನತ ಮಟ್ಟಕ್ಕೆ ಬಂದು ಆಕೆಯನ್ನು ಭಾಗ್ಯದೇವತೆಯೆಂದೇ ಪೂಜಿಸುವರು.

ಪ್ರಪಂಚದ ಸುಸ್ಥಿತಿ ದುಃಸ್ಥಿತಿಗಳು, ಸುಜ್ಞಾನ ಅಜ್ಞಾನಗಳು, ಸುಸಂಸ್ಕೃತಿಗಳು ಅಸಂಸ್ಕೃತಿಗಳು ಸ್ತ್ರೀಯಳ ಸ್ವಕೀಯವಾದ ಗೃಹರಾಜ್ಯದಲ್ಲಿ ಆಕೆಯ ಅಧಿಕಾರದ ಉಪಯೋಗವನ್ನು ಅತ್ಯಧಿಕಾಂಶದಿಂದ ಅವಲಂಬಿಸಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗದು. ಎಮರ್ಸನ್ ಎಂಬ ಅಮೆರಿಕನ್ ಅಧ್ಯಾತ್ಮವಾದಿಯು "ಗುಣವತಿಯರಾದ ಪ್ರಮದೆಯರ ಪ್ರಭಾವವೇ ಸಂಸ್ಕೃತಿಯ ಸಮಂಜಸವಾದ ಮಾನದಂಡ" ಎಂದು ಹೇಳಿದ್ದಾನೆ. ತಾಯಿಯ ತೊಡೆಯ ಮೇಲಿರುವ ಶಿಶುವಿನ ರೂಪದಲ್ಲಿ ಬರುವ ಪೀಳಿಗೆಯೇ ನಮ್ಮ ಕಣ್ಣೆದುರಿನಲ್ಲಿರುವದೆಂದು ಹೇಳಬಹುದು. ಆ

ಶಿಶುವಿನಲ್ಲಿ ಮುಂದೆ ಆವಿಷ್ಕಾರವಾಗತಕ್ಕ ಯೋಗ್ಯತೆಯು ಅದಕ್ಕೆ ಅದರ ಆದ್ಯ ಮತ್ತು ಅತ್ಯಂತ ಪ್ರಭಾವಿಯಾದ ಗುರುವಿನಿಂದ ಸಿಕ್ಕ ಶಿಕ್ಷಣ ಮತ್ತು ಮಾದರಿಗಳನ್ನು ಮುಖ್ಯವಾಗಿ ಅವಲಂಬಿಸಿರುವದು.

ಉಳಿದೆಲ್ಲ ಉಪಾಧ್ಯಾಯರಿಗಿಂತ ಸ್ತ್ರೀಯು ಮಾನವರ ಮಾನವತೆಗೆ ಒಪ್ಪುವಂತೆ ಕಲಿಸುವಳು. ಪುರುಷನು ಮಾನವತೆಯ ಶಿರಸ್ಸು. ಸ್ತ್ರೀಯು ಅದರ ಹೃದಯ. ಅವನು ಅದರ ಸದಸದ್ವಿವೇಕ. ಅವಳು ಅದರ ಅಂತಃಕರಣ; ಅವನು ಅದರ ಸಾಮರ್ಥ್ಯ. ಅವಳು ಅದರ ಭೂಷಣ, ಸುಖಶಾಂತಿ. ಉತ್ತಮೋತ್ತಮಳಾದ ಹೆಂಗುಸಿನ ಬುದ್ಧಿಯು ಸಹ ಅವಳ ಹಾರ್ದಿಕ ಭಾವನೆಗಳ ಮೂಲಕವೇ ತನ್ನ ಕಾರ್ಯವನ್ನು ಮಾಡುವಂತೆ ತೋರುವುದು. ಒಟ್ಟಿನಲ್ಲಿ ಪುರುಷನು ಬುದ್ಧಿಯ ಹಾದಿಯಲ್ಲಿ ನಡೆಯುವವನಾದರೆ, ಸ್ತ್ರೀಯು ಶೀಲವನ್ನು ರೂಪಿಸುವಂಥ ಭಾವನೆಗಳ ಯೋಗ್ಯವಿಕಾಸದತ್ತ ಗಮನವೀಯುವಳು. ಆತನು ಸ್ಮೃತಿ ಸಂಚಯವನ್ನು ಹೆಚ್ಚಿಸುವವನಾದರೆ ಅವಳು ಹೃದಯ ಮಂಡಲದಲ್ಲಿ ನೆಲಸುವಳು. ಆತನು ಯಾವದನ್ನು ನಿಜವೆಂದು ಮಾತ್ರ ನಂಬುವಂತೆ ಮಾಡಬಹುದೋ ಅದನ್ನು ಅವಳು ನಾವು ಪ್ರೀತಿಸುವಂತೆ ಮಾಡುವಳು. ಅವಳ ಮಧ್ಯಸ್ಥಿಕೆಯಿಂದಲೇ ನಾವು ಸಚ್ಛೀಲದ ಪಥಕ್ಕೆ ಬರುವದು ಸಾಧ್ಯವಾಗುವದು.

ಬಾಲ್ಯದಲ್ಲಿ ಶೀಲದ ಒಲವು ಒಂದು ಕಡೆ ಆಗುವದು; ಅದು ಹಾಗೇ ಕೆಲ ಕಾಲವಿದ್ದು ಪ್ರೌಢದೆಶೆ ಪ್ರಾಪ್ತವಾದ ಮೇಲೆ ಒಂದು ನಿಶ್ಚಿತ ಮಟ್ಟಕ್ಕೆ ಬರುವದು. ನೀವು ಎಷ್ಟು ದೀರ್ಘಾಯುಷ್ಯವಂತರಾದರೂ ನಿಮ್ಮ ಜೀವನದ ಮೊದಲಿನ ೨೦ ವರ್ಷಗಳು ಆ ಜೀವನದ ಅರ್ಧ ಭಾಗಕ್ಕಿಂತಲೂ ಹೆಚ್ಚು ಇದ್ದಂತೆ. ಮುಂದಿನ ಆಯುಷ್ಯದ ಮೇಲೆ ಅದರ ಪ್ರಭಾವವು ಅತಿ ಸ್ಪಷ್ಟವಾದದ್ದು. ಗುಣವತಿಯೂ ಮಿತವನ್ನರಿತವಳೂ ಉಲ್ಲಾಸ ಸ್ವಭಾವದವಳೂ, ನಿರ್ಮಲಾಚಾರಉಳ್ಳವಳೂ ಆದ ಹೆಂಗುಸಿನಿಂದ ಅಧಿಷ್ಠಿತವಾದ ಎಂತಹ ದರಿದ್ರನ ಮನೆಯಾದರೂ ಸತ್ಯ ಸುಖ ಸಮಾಧಾನಗಳ ಸದನವಾಗಬಹುದು. ಕೌಟುಂಬಿಕ ಜೀವನದಲ್ಲಿಯ ಪ್ರತಿಯೊಂದು ಶ್ರೇಷ್ಠ ಭೂಮಿಕೆಯ ಸಂಬಂಧದ ರಂಗಸ್ಥಳವದಾಗಬಹುದು. ಅನೇಕ ಆಲ್ಹಾದಕರ ಸಹಚರಿತ ಭಾವನೆಗಳಿಂದ ಅದು ಮನುಷ್ಯನಿಗೆ ಪ್ರಿಯವಾಗಬಹುದು. ಹೃದಯಕ್ಕೊಂದು ಪವಿತ್ರ ಮಂದಿರವೂ, ಬಾಳಿನ ಬಿರುಗಾಳಿಯಿಂದ ರಕ್ಷಣವೂ, ಕಷ್ಟದ ಕೆಲಸವಾದ ಮೇಲೆ ಒಂದು ಸುಂದರವಾದ ವಿಶ್ರಾಂತಿಸ್ಥಾನ, ವ್ಯಸನದಲ್ಲಿ ಸಮಾಧಾನಪಡೆಯುವ ಸ್ಥಳ, ವೈಭವದಲ್ಲಿ ಅಭಿಮಾನವೆನಿಸುವ ಮತ್ತು ಸದಾಕಾಲ ಆನಂದದ ಬೀಡು– ಇದೆಲ್ಲವೂ ಅದಾಗುವದು.

ಒಳ್ಳೆಯ ಗೃಹವು, ಒಳ್ಳೆಯ ಮನೆತನವು ಬಾಲ್ಯದಲ್ಲಿಯೂ ವೃದ್ಧಾಪ್ಯದಲ್ಲಿಯೂ ಶಾಲೆಗಳಲ್ಲೆಲ್ಲ ಉತ್ತಮವಾದ ಶಾಲೆ. ಅಲ್ಲಿ ಎಳೆಯರೂ ಮುದುಕರೂ ಎಲ್ಲರೂ ಉಲ್ಲಾಸದಿಂದಿರುವದನ್ನು, ತಾಳ್ಮೆ, ಆತ್ಮಸಂಯಮನ, ಸೇವಾ ಭಾವನೆ ಕರ್ತವ್ಯ ಬುದ್ಧಿ– ಇವುಗಳನ್ನು ಕಲಿತುಕೊಳ್ಳುವರು.

ಮನೆಯು ಆದರಾತಿಥ್ಯ ವಿನಯ ಸೌಜನ್ಯಗಳನ್ನು ಕಲಿಸಲಿಕ್ಕೆ ಉತ್ತಮ ಪಾಠಶಾಲೆ. ಹೆಣ್ಣುಮಗಳು ಅದರ ವ್ಯವಹಾರೋಪಯೋಗಿ ಬೋಧಕಳು. "ಸ್ತ್ರೀಯ ಆರೈಕೆ ಇಲ್ಲದ ಪುರುಷರು ಚೆನ್ನಾಗಿ ಮೈನೆಕ್ಕಿಸಿಕೊಳ್ಳದ ಮರಿಗಳು ಇದ್ದಹಾಗೆ." ಎಂದು ಒಂದು ಗಾದೆಯ ಮಾತಿದೆ.

"ಸಮಾಜದಲ್ಲಿ ನಾವು ಯಾವ ಚಿರಪರಿಚಿತ ಜನರ ವರ್ಗಕ್ಕೆ ಸೇರಿರುವೆವೋ ಅವರನ್ನು ಪ್ರೀತಿಸಲಿಕ್ಕೆ ಕಲಿತರೆ ಲೋಕದಲ್ಲಿಯ ದರಿದ್ರನಾರಾಯಣನನ್ನು ಪ್ರೀತಿಸಲಿಕ್ಕೆ ಕಲಿತಂತೆ" ಎಂದು ಬರ್ಕ ಎಂಬ ರಾಜಕಾರಣವಿಚಕ್ಷಣನು ಹೇಳಿದ್ದಾನೆ. ಯಾವಾತನು ತನ್ನ ಮನೆಯವರನ್ನೇ ಪ್ರೀತಿಸಲಾರನೋ ಅವನು ತನ್ನ ದೇಶಬಾಂಧವರನ್ನು ಪ್ರೀತಿಸುವದು ದೂರೋಪಾಸ್ತವೇ.

ಮನೆಗಳು ಶೀಲಸ್ವಭಾವಗಳ ಶಿಶುವಿಹಾರಗಳಾಗಿ ಉತ್ತಮ ಪಾಠ ಶಾಲೆಗಳೆನಿಸುವಂತೆ ಅವು ಮೌಢ್ಯ ದುಶ್ಚಟಗಳ ಸಾಲೆಯೂ ಆಗಬಹುದು. ಮನೆಯಲ್ಲಿನ ಅಜ್ಞಾನವು ಬಾಲ್ಯ ಪ್ರೌಢಾವಸ್ಥೆಯ ನಡುವಿನ ಕಾಲದಲ್ಲಿ ಎಷ್ಟು ಅನರ್ಥವನ್ನು ಉಂಟು ಮಾಡಬಲ್ಲದು! ಮನುಷ್ಯನು ಮೊದಲು ಎಳೆದ ಉಸಿರಿಗೂ ಕೊನೆಗೆ ಬಿಡುವ ಉಸುರಿಗೂ ನಡುವಿನ ಅವಧಿಯಲ್ಲಿ ಅವಿವೇಕಿಯೂ ಅಸಮರ್ಥಳೂ ಆದ ತಾಯಿಯಿಂದ ಎಂತಹ ನೈತಿಕ ದುರ್ಗತಿ ದುರವಸ್ಥೆಗಳೂ ಪ್ರಾಪ್ತವಾಗುವವು! ಕೆಲಸಕ್ಕೆ ಬಾರದ ಒಬ್ಬ ಅಜ್ಞ ಹೆಣ್ಣುಮಗಳ ವಶಕ್ಕೆ ಕೂಸನ್ನು ಒಪ್ಪಿಸಿದರಾಯಿತು. ಮುಂದಿನ ಜೀವನದಲ್ಲಿ ದೇಶಾ

ದನ್ನು ಉಚ್ಚ ವಿದ್ಯಾಭ್ಯಾಸವನ್ನು ಮಾಡಿಸಿದರೂ ಹಿಂದೆ ಆದ ಅನಿಷ್ಟವನ್ನು ದೂರಮಾಡುವದು ದುಸ್ತರ. ತಾಯಿಯು ರೋಗಮಾರಿಯೂ, ವ್ಯಸನಿಯೂ, ಓರಣವಿಲ್ಲದವಳೂ ಇದ್ದಳೆಂದರೆ, ಮನೆಯಲ್ಲಿ ಹೆಜ್ಜೆ ಹೆಜ್ಜೆಗೆ ಹಾಗೇಕೆ ಹೀಗೇಕೆ ಎಂದು ಚಿಟುಕುಮುಳ್ಳಾಡಿಸುವದೂ, ಸಿಡುಕುತನ, ಅಸಂತೋಷ ಇದ್ದವೆಂದರೆ ಅದು ತಾಪತ್ರಯದ ತವರು ಮನೆಯಾಗುವದು– ತಮಗೂ ಅನ್ಯರಿಗೂ ಕೂಡಿಯೇ ದುಃಖದುಗುಡಗಳ ಕ್ಷೇತ್ರವಾಗುವದು. ಅಂಥಲ್ಲಿ ಬೆಳೆದ ಮಕ್ಕಳು ಅವರ ದುರದೃಷ್ಟದ ಫಲವಾಗಿ ನೀತಿ ಭ್ರಷ್ಟರಾಗುವರು.

ಪ್ರಖ್ಯಾತರಾದ ಕವಿಗಳ ಮತ್ತು ಸಂಶೋಧಕರ ಹೆಸರುಗಳಲ್ಲಿ ನಾವು ಹೆಣ್ಣುಮಕ್ಕಳ ಹೆಸರುಗಳನ್ನು ಹೆಚ್ಚಾಗಿ ಕೇಳಿರಲಿಕ್ಕಿಲ್ಲ. ಅವರು ಮಹಾಭಾರತ ರಾಮಾಯಣಂತಹ ಗ್ರಂಥಗಳನ್ನಾಗಲಿ ಶಾಕುಂತಲ ಗೀತಾಂಜಲಿಯಂತಹ ಕಾವ್ಯಗಳನ್ನಾಗಲಿ ಬರೆದಿರಲಿಕ್ಕಿಲ್ಲ ಬೀಜಗಣಿತವನ್ನಾಗಲಿ, ದೂರದರ್ಶಕಯಂತ್ರವನ್ನಾಗಲಿ, ಉಗಿಬಂಡಿಯನ್ನಾಗಲಿ ಮೊದಲು ಕಂಡು ಹಿಡಿದವರಾಗಿರಲಿಕ್ಕಿಲ್ಲ. ಆದರೆ ಲೋಕದಲ್ಲಿನ ಎಲ್ಲ ಶ್ರೇಷ್ಠ ವ್ಯಕ್ತಿಗಳು ಬಾಲ್ಯದಲ್ಲಿನ ತಮ್ಮ ಮಾತೆಯರ ಶಿಕ್ಷಣವೇ ತಮ್ಮ ಗೌರವ ಘನತೆಗಳ ಮೂಲವೆಂದು ನಿಃಸಂಶಯವಾಗಿ ಹೇಳಿದ್ದಾರೆ.

★ ಗ್ರಂಥ ವಿಮರ್ಶೆ ★

ಪುಸ್ತಕದ ಹೆಸರು– 'ಪುಟ ಚೆಂಡು' (ಭಾಗ ೨)
ಸಂಪಾದಕರು– 'ಸಿಸು'
ಪ್ರಕಾಶಕರು– ಭಾರತೀಯ ಸಾಹಿತ್ಯ ಭಂಡಾರ, ಯರನಾಳ.
ಪುಟಗಳು– ೧೦೦ ಬೆಲೆ ೦–೧೨–೦

ಈ ಸಂಗ್ರಹವು ೧೦೬ ಕವನಗಳ ಬೆಳಕನ್ನು ನೀಡುತ್ತಿದೆ. ನಾಡಿನ ಮೂಲೆ ಮೂಲೆಗಳಲ್ಲಿ ಗೋಚರಿಸುತ್ತಿರುವ ಕಿರಿ-ಕಿರಿ ಕವಿಗಳ ಕವನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. 'ಹರಿಹರ' 'ಬೋರ ಬಿದ್ದನು ನೆಲದಲಿ' 'ಕಣ್ಣು', 'ಮುಂಬಯಿ ಕಾರಕೂನ', 'ತೊರೆಯ ಬಳಿ', 'ಇದೊ ಭಾರತ', 'ಪ್ರಾಣಪುಷ್ಪ', 'ನಾಡದೇವಿ ಪೂಜೆ' 'ನಮ್ಮದೇಸು' ಮೊದಲಾದ ಕವನಗಳು ಓದುಗರ ಮನವನ್ನು ಸೂರೆಗೊಳ್ಳುವದರಲ್ಲಿ ಸಂದೇಹವಿಲ್ಲ. ಇದರಲ್ಲಿಯ ಸಣ್ಣ-ದೊಡ್ಡ ಬಣ್ಣ ಬಣ್ಣದ ಚೆಂಡುಗಳನ್ನು ಪುಟಿಪುಟಿಸಿ ಬಾಲಕ-ಬಾಲಿಕೆಯರು ನಲಿಯುವರೆಂದೂ ಅವರಿಗೆ ಈ ಸಂಗ್ರಹವು ನಿತ್ಯರಸದೂಟವನ್ನು ಉಣಿಸುವದೆಂದೂ ಭಾವಿಸುವೆವು. ಕವನ ಮುದ್ರಣವು ಇದ್ದುದಕ್ಕಿಂತ ತುಸು ದೊಡ್ಡ ಅಕ್ಷರಗಳಲ್ಲಿ ಹಾಗೂ ಇನ್ನೂ ಹೆಚ್ಚು ಬಿಡಿಯಾಗಿ ಜರುಗಿದ್ದರೆ ಇನ್ನಿಷ್ಟು ಶೋಭೆಯನ್ನು ತರಬಹುದಾಗಿತ್ತು. ರಸದುಂಬಿಗಳಂತಿರುವ 'ಸಿಸು' ಅವರಿಂದ ಸಾಹಿತ್ಯ ದೇವಿಯು ಇನ್ನು ಮುಂದೆಯೂ ಆರಾಧನೆಯನ್ನು ಹೊಂದುವಳೆಂದು ಹಾರೈಸುವೆವು.

ಪ್ರ. ಸಂ.

ಪುಸ್ತಕದ ಹೆಸರು– 'ಗುಲಾಬಿ ಗೊಂಚಲು'
ಲೇಖಕರು– ಬಿ. ಎ. ಸನದಿ. ಶ್ರೀಕಾಂತ ಶಮನೇವಾಡಿ

ಪ್ರಕಾಶಕರು— ಸ್ನೇಹ ಪ್ರಕಾಶನ, ಶಮನೇವಾಡಿ

ಪುಟಗಳು ೪೨ ಬೆಲೆ ೦-೫-೦

೧೬ ಕವನಗಳ ಸಂಗ್ರಹವಿದು. ತರುಣ ಲೇಖಕರೀರ್ವರು ವಸಂತಮಾಸದ ೧೬ ಗುಲಾಬಿಗಳ ಒಂದು ಸುಂದರ ಗೊಂಚಲನ್ನು ಬಂಧುರವಾಗಿ ಕಟ್ಟಿ ಜನತೆಯ ದುರಿಗೆ ವಿಶೇಷವಾಗಿ ಮಕ್ಕಳ ಕೈಗಳಲ್ಲಿ ಇಟ್ಟಿದ್ದಾರೆ. 'ತಾಯಿ.' 'ಸುನಂದಾ', 'ನರ್ತನ ಲೀಲೆ', 'ಹಬ್ಬ', 'ಎಂಟು ಗಂಟೆಗೆ', 'ಹೂವಿನ ಗಿಡಗಳ ಹಚ್ಚುವೆನು,' 'ಕುರುಬರ ಹುಡುಗ', 'ಮಲಗು ಕಂದ' ಈ ಕವನಗಳಲ್ಲಿರುವ ಸಹಾನುಭೂತಿ ಭಾವ, ಚೈತನ್ಯ, ಸೊಗಸು, ಮಕರಂದ ಮೊದಲಾದುವು ಮಕ್ಕಳ ಮನಸ್ಸನ್ನು ಆಕರ್ಷಿಸುವುವಲ್ಲದೆ ಅವರ ಮನೋನೈರ್ಮಲ್ಯವನ್ನು ಪರಿಮಳಿತಗೊಳಿಸುತ್ತವೆ. ಭಾವಗಳಿಗೆ ತಕ್ಕಂತೆ ಛಂದೋಬಂಧವು ಸಹ ಬೀಗಿ ಬಂದಿದೆ. ಗುಲಾಬಿಯ ಈ ಗೊಂಚಲು ಮಕ್ಕಳ ಮನಸ್ಸನ್ನು ಸೂರೆಗೊಳ್ಳುವಂತಾಗಲೆಂದೂ ಶ್ರೀಯುತರು ಮಕ್ಕಳನ್ನು ಗೊಂಚಲದಿಂದ ಮಾಲೆಗೆ ಮಾಲೆಗಳಿಂದ ತೋಟಕ್ಕೆ ಕರದೊಯ್ದು ಅವರಿಗೆ ವನಸಿರಿಯ ಸೊಬಗನ್ನು ತೋರಿಸುವರೆಂದೂ ಹಾರೈಸುವೆವು.

ಪ್ರ. ಸಂ.

ಪುಸ್ತಕದ ಹೆಸರು— ಭಕ್ತಿ ಭಾಂಡಾರಿ ಮತ್ತು ಇತರ ನಾಟಕಗಳು

ಲೇಖಕರು— ಶ್ರೀ ಆರ್. ಸಿ. ಭೂಸನೂರಮಠ

ಪ್ರಕಾಶಕರು— ತಾರಾಗ್ರಂಥ ಪ್ರಕಾಶನ, ಧಾರವಾಡ

ಬೆಲೆ ೦-೧೫-೦ ಪುಟಗಳು ೧೧೪

ಈ ಚಿಕ್ಕ ಗ್ರಂಥವು ಐದು ಚಿಕ್ಕ ನಾಟಕಗಳ ಸಂಗ್ರಹವು. 'ಭಕ್ತಿ ಭಾಂಡಾರಿ'ಯು ಭಕ್ತಿರಸವನ್ನೂ, 'ಸಿಂಹಗಡ'ವು ವೀರರಸವನ್ನೂ ಪ್ರತಿಪಾದಿಸಿದರೆ 'ಹರಳಯ್ಯ ಮಧುವಯ್ಯ' ನಾಟಕವು ಆ ಇಬ್ಬರು ಮಹಾನುಭಾವಿಗಳ ಸಾಮಾಜಿಕ ಸಮತೆಯನ್ನೂ ಅಸ್ಪೃಶ್ಯತೆಯ ಕಲಂಕವನ್ನು ನಿರ್ಮೂಲಗೊಳಿಸಲು ಮಾಡಿದ ಬಲಿದಾನವನ್ನೂ ಚಿತ್ರಿಸುತ್ತದೆ. 'ಪ್ರಸಂಗಾವಧಾನಿ'ಯು ಚಂದ್ರಕಾಂತರ ಪ್ರಸಂಗಕ್ಕೆ ತಕ್ಕಂತೆ ಬದಲಾಗುವ ಆದರ್ಶಗಳನ್ನು ಎತ್ತಿ ತೋರಿಸುತ್ತಿದ್ದರೆ ಕೊನೆಯದಾದ 'ಪ್ರೇಮಾಹುತಿ'ಯು ಪ್ರೇಮಕ್ಕೆ ಆಹುತಿಯಾದ ಅನಾರ್ಕಲಿ ಮತ್ತು ಗುಲ್‌ಕೇಶ ಇವರ ಮರಣದಲ್ಲಿ ಪರ್ಯವಸಾನ ಹೊಂದಿ ವಾಚಕರ ಚಿತ್ತ ಭಿತ್ತಿಯ ಮೇಲೆ ಗಾಢವಾಗಿ ಮೂಡುತ್ತದೆ.

ನಾಟಕಗಳ ಶೈಲಿಯು ಒಳ್ಳೆಯ ರಸವತ್ತಾಗಿ ಬಂದಿದೆ. ಸುಲಭಗ್ರಾಹ್ಯವಾಗುವ ಶಬ್ದಗಳನ್ನೇ ಉಪಯೋಗಿಸಲಾಗಿದೆ. ಸಂಭಾಷಣೆ ಹಾಗೂ ನಾಟಕೀಯತೆಗಳು ಒಳ್ಳೇ ಆಕರ್ಷಕವಾಗಿವೆ. ಓದಲಿಕ್ಕೆ ಆರಂಭಿಸಿದರೆ ಅಂದಿನ ಘಟನೆಗಳು ಕಣ್ಮುಂದೆ ನಡೆಯುವಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಈ ಐದು ನಾಟಕಗಳು ಐದಳದ ಒಂದು ಸುಂದರ, ಸುವಾಸಿತ ಪುಷ್ಪದಂತೆ ನೋಟಕ್ಕೆ, ಮನಕ್ಕೆ ಸಂತಸವನ್ನೂ, ಉದಾತ್ತತೆಯನ್ನೂ ಬೀರಬಲ್ಲುದು.

ಸಾಲೆ-ಕಾಲೇಜುಗಳ ವಿದ್ಯಾರ್ಥಿಗಳು ಶೈಕ್ಷಣಿಕ ವಿನೋದಾವಳಿಗಳ ಅಂಗವಾಗಿ ಈ ಸಣ್ಣ ನಾಟಕಗಳನ್ನು ಸಹಜವಾಗಿ ಆಡಬಹುದು. ಮನರಂಜನೆಯೊಂದಿಗೆ ಶಿಕ್ಷಣಿಕ ಜ್ಞಾನವನ್ನೂ, ವಿಲಾಸದೊಂದಿಗೆ ವಿಕಾಸವನ್ನೂ ಮಾಡುವಶಕ್ತಿಯುಳ್ಳ ಈ ನಾಟಕಗಳನ್ನು ವಿದ್ಯಾರ್ಥಿಗಳು ಆಡಿ ತಮ್ಮ ಬೌದ್ಧಿಕ ವಿಕಾಸವನ್ನು ಮಾಡಿಕೊಳ್ಳುವದಲ್ಲದೆ ಸಮಾಜದ ವಿಕಾಸವನ್ನೂ ಮಾಡಬಹುದಾಗಿದೆ.

ಪ್ರ. ಸಂ.

ಪ್ರಕಟನೆ

೧೯೫೬ನೆಯ ಇಸ್ವಿಯಲ್ಲಿ ಜರುಗಲಿರುವ ಮಿಡಲ್ ಹಾಗೂ ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಗಳು ದಿನಾಂಕ ೬ ಮತ್ತು ೭ನೆಯ ಫೆಬ್ರುವರಿ ೧೯೫೬ ರಂದು ನಡೆಯುವವು. ಪರೀಕ್ಷಾರ್ಥಿಗಳು ತಮ್ಮ ಅರ್ಜಿಗಳನ್ನು ದಿನಾಂಕ ೫-೧-೧೯೫೬ ರೊಳಗಾಗಿ ಹೆಡ್ ಮಿಸ್ಟ್ರೆಸ್ ಎ. ಕೆ. ಗರ್ಲ್ಸ್ ಹಾಯಸ್ಕೂಲ ಧಾರವಾಡ ಅವರ ಕಡೆಗೆ ಮುಟ್ಟುವಂತೆ ಕಳಿಸತಕ್ಕದ್ದು; ಎಂದು ಮೆ। ಎ. ಇ. ಧಾರವಾಡ ಅವರು ತಿಳಿಸುತ್ತಾರೆ.

ಸಾಹಿತಿಗಳಲ್ಲಿ ವಿಜ್ಞಾಪನೆ

ಕಳೆದ ತಿಂಗಳ ಪುಣೆಯಲ್ಲಿ ಮುಂಬಯಿ ರಾಜ್ಯದ ಸಮಾಜ ಶಿಕ್ಷಣ ಸಮಿತಿಗಳ ಕಾರ್ಯಾಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಭೆ ಶ್ರೀಮತಿ ಇಂದುಮತಿ ಶೇಠ, ಉಪಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆ ಸಮಯದಲ್ಲಿ ಸಮಾಜ ಶಿಕ್ಷಣ ಸಾಹಿತ್ಯ ಕುರಿತು ವಿಚಾರ ವಿನಿಮಯವಾಯಿತು. ಹೊಸ ಸಾಕ್ಷರರಿಗಾಗಿ ಸಾಹಿತ್ಯವನ್ನು ಪ್ರಕಟಿಸಲು ನಿರ್ಣಯವಾಯಿತು. ನವ ಸಾಕ್ಷರರಿಗೆ ಅವರ ಸಾಕ್ಷರತೆಯನ್ನು ಉಳಿಸಿಕೊಳ್ಳಲು ಯೋಗ್ಯ ಸಾಹಿತ್ಯವನ್ನು ತಯಾರಮಾಡಬೇಕು. ಈಗ ನಮಗೆ ಬೇಕಾದುದು ಪಂಡಿತರ ಸಾಹಿತ್ಯವಲ್ಲ. ನಮಗೆ ಬೇಕಾದುದು ಹಳ್ಳಿಗಳಲ್ಲಿ ವಾಸ ಮಾಡುವ ಹೊಸ ಸಾಕ್ಷರರಿಗಾಗಿ ಹೊಸ ಸಾಹಿತ್ಯ. ವಯಸ್ಕರ ಬುದ್ಧಿಮಾನಕ್ಕನುಸರಿಸಿ ಪುಸ್ತಕಗಳನ್ನು ಪ್ರಕಟಿಸಬೇಕಾಗಿದೆ. ಹಳ್ಳಿಯ ವಾತಾವರಣ, ಅಲ್ಲಿಯ ಜೀವನ, ಅವರ ಸ್ಥಿತಿ-ಗತಿ, ರೀತಿ-ನೀತಿ, ಉದ್ಯೋಗ ಹಾಗೂ ಅವರಲ್ಲಿ ತುಂಬಿರುವ ಅಜ್ಞಾನವನ್ನು ದೂರ ಮಾಡಲು ಉಪಯುಕ್ತವಾದ ವಿಷಯಗಳಿಂದ ಕೂಡಿದ ಸಾಹಿತ್ಯ ಹೆಚ್ಚಾಗಿ ಬೇಕಾಗಿದೆ. ಭಾಷೆ ಸುಲಭವಾಗಿರಬೇಕು. ಒತ್ತಕ್ಷರಗಳು ಕಡಿಮೆಯಿರಬೇಕು. ಓದಲು ಅನುಕೂಲವಾಗುವಂತೆ ನಾಲ್ಕೈದು ಶಬ್ದಗಳ ವಾಕ್ಯಗಳಿದ್ದರೆ ಹೆಚ್ಚು ನೆಟ್ಟಗೆ. ಟಾಯಿಪ ದೊಡ್ಡದಿದ್ದು ಮುದ್ರಣ ಅಂದವಾಗಿರಬೇಕು. ೩೨ಕ್ಕಿಂತ ಹೆಚ್ಚು ಪುಟಗಳಿರತಕ್ಕದ್ದಲ್ಲ. ಅವರು ತಮ್ಮ ನಿತ್ಯ ವ್ಯವಹಾರದಲ್ಲಿ ಉಪಯೋಗಿಸುವ ಮಾತುಗಳ ಬಳಿಕೆ ಹೆಚ್ಚಾಗಿರಬೇಕು. ಆದರೆ ಅವು ಗ್ರಾಮ್ಯವಿರತಕ್ಕದ್ದಲ್ಲ. ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿ ತಕ್ಕೊಂಡು ಕನ್ನಡ ನಾಡಿನ ಹಿರಿ-ಕಿರಿ ಸಾಹಿತಿಗಳು ಮುಂದೆ ಬಂದು ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿಯವರು ಕೈಕೊಂಡ ಕಾರ್ಯದಲ್ಲಿ ನೆರವಾಗಬೇಕು. ಈಗಾಗಲೆ ಈ ವಿಷಯದಲ್ಲಿ ಅನೇಕಸಲ ಬರಹಗಾರರಿಗೆ ಬೇಡಿಕೊಳ್ಳಲಾಗಿದೆ. ಪ್ರೌಢರಿಗೆ ತಕ್ಕ ಸಾಹಿತ್ಯ ನಿರ್ಮಾಣ ಮಾಡಿದಲ್ಲಿ ಸಮಿತಿಯವರಿಂದ ಯೋಗ್ಯ ಸಂಭಾವನೆ ದೊರೆಯುವದು. ಭಾರತ ಸರಕಾರದವರು ಈ ವಿಷಯದಲ್ಲಿ ಹೆಚ್ಚು ಆಸ್ಥೆವಹಿಸಿರುವರು. ವರುಷಕ್ಕೊಮ್ಮೆ ಬರಹಗಾರರ ಕಡೆಯಿಂದ ಪುಸ್ತಕಗಳನ್ನು ತರಿಸಿ ಯೋಗ್ಯವೆಂದು ಕಂಡ ಗ್ರಂಥಗಳಿಗೆ ಬಹುಮಾನವನ್ನು ಸಹ ಕೊಡುವದುಂಟು. ಈ ವರೆಗೆ ದೊರೆತ ಬಹುಮಾನಗಳಲ್ಲಿ ಉತ್ತರ ಕರ್ನಾಟಕದವರಿಗೆ ಒಂದೂ ಬಹುಮಾನ ದೊರೆತಿರುವದಿಲ್ಲ. ಉತ್ತರ ಕರ್ನಾಟಕದ ಸಮಾಜ ಶಿಕ್ಷಣಾಭಿಮಾನಿಗಳು ಮುಂದೆ ಬಂದು ಈ ಕಲಂಕವನ್ನು ತೊಳೆದುಕೊಳ್ಳಬೇಕು. ತಡವಾದರೂ ಚಿಂತೆಯಿಲ್ಲ ಮುಂದಿನ ಸಲ ಜರಗುವ ಸ್ಪರ್ಧೆಯಲ್ಲಿ ಉತ್ತರ ಕರ್ನಾಟಕದ ಬರಹಗಾರರು ಒಂದೆರಡನ್ನಾದರೂ ಬಹುಮಾನವನ್ನು ಪಡೆಯಬೇಕು. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ನಮ್ಮ ಆಫೀಸಿಗೆ ಬರೆದು ಕೇಳಿಕೊಳ್ಳಬೇಕು. ಬರಹಗಾರರು ತಮ್ಮ ಪ್ರಕಟನೆಗಳನ್ನು ನೇರವಾಗಿ ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಿಗೆ ಕಳಿಸಿ ಕೊಡಬೇಕಾಗಿ ವಿನಂತಿ.

ಕಾರ್ಯದರ್ಶಿ ಮತ್ತು ಸ. ಶಿ. ಆಫೀಸರ

ಕರ್ನಾಟಕ, ಬೆಳಗಾಂವ

ನಯೀ ತಾಲೀಮು

ಲೇಖಕರು : ಶ್ರೀ ಬ. ಮ. ಶಿಂತ್ರಿ, ಬಿ.ಎ., ಬಿ ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣ ಭಾಗ ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್ ಸಾಹಿತ್ಯ ಸಮಿತಿ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ.

ಹುಟ್ಟು ಹಾಗೂ ಹಿನ್ನೆಲೆ

'ನಯೀ ತಾಲೀಮು'ವೆಂದರೆ ಹೊಸ ಶಿಕ್ಷಣ. ಅದರ ಉತ್ಪಾದಕರು ಮಹಾತ್ಮಾ ಗಾಂಧಿಯವರು, ಇದು ಮಧ್ಯ ಪ್ರಾಂತ (ಈಗಿನ ಮಧ್ಯ ಪ್ರದೇಶ)ದಲ್ಲಿಯ ವರ್ಧಾ ಪಟ್ಟಣದಲ್ಲಿ ರೂಪುಗೊಂಡಿತಾದುದರಿಂದ ಇದಕ್ಕೆ 'ವರ್ಧಾ ಶಿಕ್ಷಣ'ವೆಂಬ ಹೆಸರಿದೆ. ಯಾವದಾದರೊಂದು ಮೂಲೋದ್ಯೋಗದ ಮುಖಾಂತರ ಮಗುವು ಶಿಕ್ಷಣವನ್ನು ಹೊಂದುವದರಿಂದ ಇದಕ್ಕೆ 'ಮೂಲ ಶಿಕ್ಷಣ'ವೆಂಬ ಮತ್ತೊಂದು ಹೆಸರಿದೆ. ಜೀವನಕ್ಕೆ ಹೊಂದಿಕೆಯಾಗುವ ಶಿಕ್ಷಣವು ಮಗುವಿಗೆ ಸಿಗುವದರಿಂದ ಇದಕ್ಕೆ 'ಜೀವನ ಶಿಕ್ಷಣ'ವೆಂಬ ಮಗದೊಂದು ಹೆಸರಿದೆ

ಮೊತ್ತ ಮೊದಲು ಗಾಂಧೀಜಿಯವರು ೧೯೩೭ನೆಯ ಇಸವಿಯಲ್ಲಿ ತಮ್ಮ 'ಹರಿಜನ' ಪತ್ರಿಕೆಯ ಜುಲಾಯ ತಿಂಗಳ ಸಂಚಿಕೆಯಲ್ಲಿ ಹೊಸ ಶಿಕ್ಷಣದ ಬಗೆಗಿದ್ದ ತಮ್ಮ ವಿಚಾರ ತರಂಗಗಳನ್ನೆಲ್ಲ ಪ್ರಕಟಗೊಳಿಸಿದರು. ಯಾವದಾದರೊಂದು ಕೈಗಾರಿಕೆಯ ಮೂಲಕ ಮಗುವಿನ ಶಿಕ್ಷಣವು ಪ್ರಾರಂಭವಾಗಬೇಕು. ಕೈಗಾರಿಕೆಯನ್ನು ಮಾತ್ರ ಯಾಂತ್ರಿಕವಾಗಿ ಕಲಿಸದೆ ಶಾಸ್ತ್ರಬದ್ಧವಾಗಿ ಕಲಿಸಬೇಕು. ಪ್ರತಿಯೊಂದು ವಿಧಾನದ ಕಾರಣ-ಪರಿಣಾಮಗಳು (Causes and effects) ಮಗುವಿಗೆ ತಿಳಿಯುತ್ತಾಗಬೇಕು. ಇದರಿಂದ ಶರೀರ, ಮನಸು, ಆತ್ಮ, ಇವು ಮೂರೂ ವಿಕಾಸವನ್ನು ಹೊಂದುವವು. ಇದಕ್ಕೆ ಸ್ವಾನುಭವದ ಹಿನ್ನೆಲೆಯಿದೆಯೆಂದು ಬಾಪೂಜಿಯವರು ಸಾರಿದರು. ಈ ಲೇಖನದ ಮೇಲೆ ಸುತ್ತೂ ಕಡೆಯಿಂದ ದೈನಿಕಗಳಲ್ಲಿಯೂ ಮಾಸಿಕಗಳಲ್ಲಿಯೂ ಬೇರೆ ಪತ್ರಿಕೆಗಳಲ್ಲಿಯೂ ಶಿಕ್ಷಣ ತಜ್ಞರ ಪ್ರತಿಕ್ರಿಯೆಗಳ ಹಾಗೂ ಟೀಕೆಗಳ ಸುರಿಮಳೆಯಾಗದೆ ಬಿಡಲಿಲ್ಲ. ಆ ಟೀಕೆಗಳಿಗೆಲ್ಲ ಮಹಾತ್ಮರು ಸಮಾಧಾನದಿಂದಲೇ ಸಮರ್ಪಕ ಉತ್ತರಗಳನ್ನು ಕೊಟ್ಟರು. ಅಭ್ಯಾಸ ಪತ್ರಿಕೆಯೊಂದನ್ನು ತಯಾರಿಸಲು ಶಿಕ್ಷಣ ತಜ್ಞರದೊಂದು ಸಮಿತಿಯು ನಿರ್ಮಿಸಲ್ಪಟ್ಟಿತು. ಅದಕ್ಕೆ 'ಝಾಕೀರ ಹುಸೇನ ಸಮಿತಿ' (Zakir Hussain Committee) ಯೆಂಬ ಹೆಸರಿದೆ. ಸದಸ್ಯರ ಹೆಸರುಗಳು ಕೆಳಗೆ ಕೊಟ್ಟಂತೆ ಇವೆ—

ಡಾ. ಝಾಕೀರ ಹುಸೇನ (ಅಧ್ಯಕ್ಷ)
ಜನಾಬ್ ಕೆ. ಗುಲಾಮು ಸೈಯಿದಾಯಿನ್
ಪ್ರೊ. ಕೆ. ಟಿ. ಶಹಾ
ಆಚಾರ್ಯ ಕಾಕಾ ಕಾಲೇಲಕರ
,, ವಿನೋಬಾ ಭಾವೆ
ಶ್ರೀ ಕಿಶೋರಲಾಲ ಮಶ್ರುವಾಲಾ
ಶ್ರೀ ಜೆ ಸಿ. ಕುಮಾರಪ್ಪ
ಶ್ರೀ ಶ್ರೀಕೃಷ್ಣದಾಸ ಜಾಜು.
ಶ್ರೀಮತಿ ಆಶಾದೇವಿ
ಶ್ರೀ ಆರ್ಯನಾಯಕಮ್ (ಕಾರ್ಯದರ್ಶಿ)

ಈ ಸಮಿತಿಯವರು ೧೯೩೮ನೆಯ ಇಸವಿ ಫೇಬ್ರುವರಿ ತಿಂಗಳಲ್ಲಿ ತಮ್ಮ ವರದಿಯನ್ನು ಮಹಾತ್ಮರಿಗೆ ಒಪ್ಪಿಸಿದರು. ಗಾಂಧೀಜಿಯವರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಕಡೆಗೆ ಕಳಿಸಿದರು. ಆ ಮಂಡಲವು ಮುಂದೆ ಮಾರ್ಚ ತಿಂಗಳಲ್ಲಿ ನೆರೆದ ಹರಿಪುರದ ಅಧಿವೇಶನದಲ್ಲಿ 'ವರ್ಧಾ

ಶಿಕ್ಷಣ' ಯೋಜನೆಯು ರಾಷ್ಟ್ರೀಯ ಶಿಕ್ಷಣವೆಂದು ಸಾರಿ ಅದಕ್ಕೆ ತನ್ನ ಮುದ್ರೆಯನ್ನು ಹಾಕಿತು. ಈ ಹೊಸ ಶಿಕ್ಷಣದ ಜೀವನಕ್ಕಾಗಿ ಅಖಿಲ ಭಾರತ ಶಿಕ್ಷಣ ಸಂಸ್ಥೆಯೊಂದನ್ನು ನಿರ್ಮಾಣ ಮಾಡಿ ಅದಕ್ಕೆ 'ಹಿಂದುಸ್ತಾನಿ ತಾಲೀಮಿ ಸಂಘ' ಎಂಬ ನಾಮಕರಣ ಮಾಡಿ ಅದರ ಮುಖ್ಯ ಕಚೇರಿಯನ್ನು ಸೇವಾಗ್ರಾಮದಲ್ಲಿರಿಸಬೇಕೆಂದು ನಿರ್ಧರಿಸಲಾಯಿತು. ಆ ಕಚೇರಿಯು ಇನ್ನೂವರೆಗೂ ಅಲ್ಲಿಯೇ ಇದ್ದು ಎಲ್ಲ ರಾಜ್ಯಗಳಲ್ಲಿಯ ಹೊಸ ಶಿಕ್ಷಣದ ಮೇಲ್ವಿಚಾರಣೆಯನ್ನು ಮಾಡುತ್ತಿದೆ. ಶ್ರೀ ಆರ್ಯನಾಯಕಮ್‌ರವರು ಅದರ ಪ್ರಧಾನ ಕಾರ್ಯದರ್ಶಿಗಳಾಗಿಯೂ ಅವರ ಧರ್ಮಪತ್ನಿಯವರಾದ ಶ್ರೀಮತಿ ಆಶಾದೇವಿಯವರು ಸಹ ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡುತ್ತಿದ್ದಾರೆ. ಈ ಹೊಸ ಶಿಕ್ಷಣದ ಪ್ರಗತಿಯು ಚೆನ್ನಾಗಿಯಾಗಬೇಕಾದರೆ ಮತ್ತು ಕಾರ್ಯಕಲಾಪಗಳು ಸುಸೂತ್ರವಾಗಿ ಸಾಗಬೇಕಾದರೆ, ಅದರಲ್ಲಿ ತರಬೇತಿಯನ್ನು ಹೊಂದಿದ ಶಿಕ್ಷಕ-ಶಿಕ್ಷಕಿಯರು ಅವಶ್ಯವಾಗಿ ಬೇಕಲ್ಲವೆ? ನಮ್ಮ ಮುಂಬೈ ರಾಜ್ಯದಲ್ಲಿ ಅಂತಹ ತರಬೇತಿ ಕೇಂದ್ರಗಳನ್ನು ನಾಲ್ಕು ಸ್ಥಳಗಳಲ್ಲಿ ತೆರೆಯಲಾಯಿತು. ಮಹಾರಾಷ್ಟ್ರದಲ್ಲಿ ಲೋಣಿ, ಗುಜರಾತದಲ್ಲಿ ಕಾತರಗಾವ, ಕರ್ನಾಟಕದಲ್ಲಿ ಧಾರವಾಡ ಮತ್ತು ಖಾನದೇಶದಲ್ಲಿ ಜಳಗಾವ (ಉರ್ದು), ಈ ಪ್ರಕಾರ ಕೇಂದ್ರಗಳು ತೆರೆಯಲ್ಪಟ್ಟವು. ಈ ಕೇಂದ್ರಗಳಲ್ಲಿ ತಯಾರಾದ ಶಿಕ್ಷಕ-ಶಿಕ್ಷಕಿಯರಿಗೆ ಕೆಲಸಮಾಡಲು ಪ್ರಾಯೋಗಿಕ ಕ್ಷೇತ್ರಗಳು (Experimental Areas) ತೆರೆಯಲ್ಪಟ್ಟವು. ಅಂತಹದೊಂದು ಪ್ರಾಯೋಗಿಕ ಕ್ಷೇತ್ರವು ಕರ್ನಾಟಕದಲ್ಲಿ ಧಾರವಾಡದ ಸುತ್ತುಮುತ್ತಲಿನ ಗರಗ, ಉಪ್ಪಿನಬೆಟಗೇರಿ, ಅಮ್ಮಿನಭಾವಿ, ಮೊದಲಾದ ಹತ್ತು ಹಳ್ಳಿಗಳನ್ನು ಆವರಿಸಿದ್ದಿತು. ಪ್ರಯೋಗವು ಬಹು ಸಮಾಧಾನಕರ ರೀತಿಯಿಂದ ನಡೆಯಿತು. ಪ್ರಯೋಗವು ಸಮಾಧಾನಕರವಾಗಿ ಕಂಡು ಬಂದುದರಿಂದ ಅದು ಈಗ ಸಾರ್ವತ್ರಿಕವಾಗುವದರಲ್ಲಿದೆ.

ದೋಷ-ಟೀಕೆಗಳು

ಹೊಸ ಶಿಕ್ಷಣವೆಂದರೆ ಸ್ವರ್ಗದಿಂದಲೋ ಇಲ್ಲವೆ ಬೇರಾವ ಸ್ಥಳದಿಂದಲೋ ಹಿಡಿದುಕೊಂಡು ಬಂದ ಹೊಸ ವಸ್ತುವಲ್ಲ. ಹೊಸ ಶಿಕ್ಷಣವೆಂದರೆ ಶಿಕ್ಷಣದ ಈಗಿನ ಹೊಸ ದೃಷ್ಟಿಯು. ದಿನಗಳು ಉರುಳಿ ಹೋದಂತೆ ಮಾನವನ ವಿಚಾರಗಳಲ್ಲಿಯೂ ಆಗಾಗ ಬದಲಾವಣೆಗಳಾಗುತ್ತ ಹೋಗುವದು ಸ್ವಾಭಾವಿಕವಿದೆ. ಈ ಬದಲಾವಣೆ ಇಲ್ಲವೆ ಮಾರ್ಪಾಡು ಮಾನವನ ಪ್ರಗತಿಗೆ ಕಾರಣೀಭೂತವಾಗಿದೆಯಲ್ಲದೇ? ಮಾರ್ಪಾಡು ಇಲ್ಲವೆ ಹೊಸತನವು ಇಲ್ಲದಿದ್ದರೆ, ಮಾನವನ ಬಾಳು ನಿಸ್ಸಾರವಾಗುತ್ತಿದ್ದಿಲ್ಲವೇ? ಮಾನವನು ಮಾರ್ಪಾಡಿನ ಪ್ರಿಯನು. ಮಾರ್ಪಾಡಿಗೆ ಇಲ್ಲವೆ ಹೊಸತನಕ್ಕೆ ಅಷ್ಟೊಂದು ಬೆಲೆಯಿದೆ, ರುಚಿಯಿದೆ. 'Change is the spice of life' ಎಂಬ ಆಂಗ್ಲ ನಾಣ್ಣುಡಿಯು ಈ ಮಾತನ್ನೇ ಒತ್ತಿ ಹೇಳುತ್ತಿದೆಯಲ್ಲವೇ? ಶಿಕ್ಷಣಕ್ಕೂ ಈ ಮಾತು ಅನ್ವಯಿಸುವದರಲ್ಲೇನಾಶ್ಚರ್ಯ? ಶಿಕ್ಷಣದಲ್ಲಿ ಹೊಸ ದೃಷ್ಟಿಯು ರುಸೋ, ಪೆಸ್ಟಾಲಜಿ, ಹರ್ಬಾರ್ಟ, ಫ್ರೋಬೆಲ್‌ರವರ ಕಾಲದಿಂದ ಪ್ರಾರಂಭವಾಗಿದೆ. ಈಗಿನ ಯುಗವು ಮಕ್ಕಳ ಯುಗವು. ಈಗಿನ ಶಿಕ್ಷಣವು ಮಗು ಪ್ರಧಾನವಿದೆ; ಹಳೆಯ ಶಿಕ್ಷಣದಂತೆ ವಿಷಯ ಪ್ರಧಾನವಾದುದಲ್ಲ. ಮಾಂಟೇಸರಿ, ...ನನ್, ಡ್ಯೂಯಿ ಮೊದಲಾದ ಆಧುನಿಕ ಶಿಕ್ಷಣ ತಜ್ಞರು ಇದೇ ತತ್ವವನ್ನು ಪುರಸ್ಕರಿಸಿದ್ದಾರೆ. ಪೂಜ್ಯ ಬಾಪೂಜಿಯವರಾದರೂ ಈ ವಿಷಯದ ಬಗೆಗೆ ಆಳವಾಗಿ ವಿಚಾರಿಸಿದರು. ಶಿಕ್ಷಣವೇ ನವಭಾರತದ ನೆಲಗಟ್ಟೆಂದು ಭಾವಿಸಿದರು. ಮಗುವಿನ ಶಾರೀರಿಕ, ಮಾನಸಿಕ, ಹಾಗು ನೈತಿಕ ವಿಕಾಸವೇ ಶಿಕ್ಷಣದ ಗುರಿಯೆಂದು ಕಂಡು ಹಿಡಿದರು. ಮಗುವು ಹೊಸ ಶಿಕ್ಷಣದ ಕೇಂದ್ರವೆಂದು ಸಾರಿದರು. ಮಗುವಿನ ಸರ್ವತೋಮುಖವಾದ ಬೆಳವಣಿಗೆಯೇ 'ನಯೀ ತಾಲೀಮು'ದ ಹೆಗ್ಗುರಿ. ಇದುವೆ ನವಭಾರತದ ನಿಜವಾದ ತಳಹದಿಯೆಂಬುದು ಮಹಾತ್ಮರ ಒಳಬೆಳಗು ಇಲ್ಲವೆ ಅಂತರ್ವಾಣಿ (Inner Voice). ಈ ಅಂತರಿಕ ಕರೆಗೆ ಓಗೊಟ್ಟು ಗಾಂಧೀಜಿಯವರು ಹೊಸ ಶಿಕ್ಷಣದ ಪ್ರಸಾರಕ್ಕೆ ಕೈಹಾಕಿ 'ಹರಿಜನ' ಪತ್ರಿಕೆಯಲ್ಲಿ ತಮ್ಮ ವಿಚಾರ ತರಂಗಗಳನ್ನೆಲ್ಲ ಬರೆಯಲಾರಂಭಿಸಿದರು. ಹಲವರು, ಅವುಗಳಲ್ಲಿ ಏನೂ ಹುರುಳಿಲ್ಲೆಂದರು; ಹಲವರು, ಶಿಕ್ಷಣದಲ್ಲಿ ಅನುಭವವಿಲ್ಲದವನ ವಿಚಾರಗಳೆಂದು ಹೆಸರಿಟ್ಟರು; ಹಲವರು, ಮಹಾತ್ಮರ ಮುದಿಹುಚ್ಚಿನ ವಿಚಾರಗಳೆನ್ನುವಷ್ಟು ದೂರದವರೆಗೆ ಹೋದರು. ಆ ಆಕ್ಷೇಪಣೆಗಳಿಗೆಲ್ಲ ಸಮರ್ಪಕ ಉತ್ತರವನ್ನು ಕೊಟ್ಟು ನೋಡು ನೋಡುವಷ್ಟರಲ್ಲಿ ಟೀಕಿಸಿದವ

ನ್ನೆಲ್ಲ ತಮ್ಮ ವಿಚಾರಸರಣಿಯತ್ತ ತಾವಾಗಿಯೇ ಓಡುತ್ತ ಬರುವಂತೆ ಮಾಡಿದರು. ಆ ಜಗದ್ವಂದ್ಯ ವಿಭೂತಿಯ ಪ್ರಭಾವವೇ ಅಂತಹದಿತ್ತು!

ಮಗುವು ಪರಿಸ್ಥಿತಿಗೆ ಒಗ್ಗುವಂತಹ ಯಾವದಾದರೊಂದು ಕೈಗಾರಿಕೆಯ ಮೂಲಕ ತನ್ನ ಶಿಕ್ಷಣವನ್ನು ಪಡೆಯಬೇಕು. ಝಾಕೀರ ಹುಸೇನ ಸಮಿತಿಯವರು ಎಳೆಂಟು ಕೈಗಾರಿಕೆಗಳನ್ನು ಸಿಫಾರಸು ಮಾಡಿದ್ದಾರೆ. ಅವುಗಳಲ್ಲಿ ಬೇಕಾದೊಂದನ್ನಾಯ್ದುಕೊಳ್ಳಬಹುದು. ಆ ಮೂಲೋದ್ಯೋಗ (Basic Craft)ದ ಮುಖಾಂತರ ಮಗುವಿನ ಏಳು ವರುಷಗಳ ಪ್ರಾಥಮಿಕ ಶಿಕ್ಷಣವು ಸಾಗಬೇಕು. ಮೂಲೋದ್ಯೋಗದ ವಿಧಾನಗಳಲ್ಲಿ ಹಲವು ಸುಲಭ, ಹಲವು ಗಡಚು, ಹಲವು ಮತ್ತಿಷ್ಟು ಗಡಚು ಇವೆ. ಅವುಗಳನ್ನೆಲ್ಲ ಮಕ್ಕಳ ಬುದ್ಧಿಮಟ್ಟಕ್ಕೂ ವಯೋಮಾನಕ್ಕೂ ಅನುಸರಿಸಿ ಏಳು ವರುಷಗಳಲ್ಲಿ ಹೊಂದಿಕೆಯಾಗುವ ಹಾಗೆ ಹಂಚಿ ಹಾಕಿ ಅಭ್ಯಾಸ ಪತ್ರಿಕೆಯನ್ನು ತಯಾರಿಸಲಾಗಿದೆ. ಆ ಪತ್ರಿಕೆಯಲ್ಲಿಯ ಉಳಿದ ವಿಷಯಗಳು ಶಕ್ಯವಿದ್ದಮಟ್ಟಿಗೆ ಮೂಲೋದ್ಯೋಗಕ್ಕೆ ಸಂಬಂಧಿಸಿ ಕಲಿಸಲ್ಪಡಬೇಕು. ಸಂಬಂಧೀಕರಣ (Corrleation)ವು ಇಲ್ಲವೆ ಅನುಬಂಧವು ಈ ಶಿಕ್ಷಣದ ಜೀವಾಳವು. ಮೂಲೋದ್ಯೋಗಕ್ಕೆ ಅನುಬಂಧ ಮಾಡಿ ಎಲ್ಲ ವಿಷಯಗಳನ್ನು ಕಲಿಸುವದು ಶಕ್ಯವಿಲ್ಲೆಂದು ಕಾಲಕ್ರಮೇಣ ಕಂಡುಬಂದಿತು. ಆದುದರಿಂದ ೧೯೩೯ನೆಯ ಇಸವಿ ಅಕ್ಟೋಬರ ತಿಂಗಳಲ್ಲಿ ಪುಣೆಯಲ್ಲಿ ಕಲೆತ ಸಮ್ಮೇಲನದಲ್ಲಿ ಈ ಪ್ರಕಾರ ತೀರ್ಮಾನಿಸಲಾಯಿತು— ಮೂಲೋದ್ಯೋಗಕ್ಕೆ ಸಂಬಂಧಿಸಿ ಕಲಿಸಲು ಶಕ್ಯವಿಲ್ಲದ್ದರೆ, ಮಗುವಿನ ನೈಸರ್ಗಿಕ ಇಲ್ಲವೆ ಸಾಮಾಜಿಕ ಪರಿಸ್ಥಿತಿಗೆ ಅನುಬಂಧಿಸಿ ಕಲಿಸಬಹುದು. ಮೊತ್ತಮೊದಲು ನೂಲುವದೊಂದನ್ನೇ ಮೂಲೋದ್ಯೋಗವನ್ನಾಗಿ ಎಲ್ಲ ಬೇಸಿಕ್ ಶಾಲೆಗಳಲ್ಲಿ ಕೈಕೊಳ್ಳಲಾಗಿತ್ತು. ಆದು ಅವ್ಯವಹಾರ್ಯವೆಂದು ಕಂಡು ಬಂದಿತು. ಈಗ ಮುಂಬಯಿ ರಾಜ್ಯದಲ್ಲಿ ಮೂರು ಮೂಲೋದ್ಯೋಗಗಳು ಬಳಕೆಯಲ್ಲಿವೆ– (ಅ) ನೂಲುವದು-ನೇಯುವದು, (ಆ) ಕೈದೋಟ– ಒಕ್ಕಲತನ, (ಇ) ರಟ್ಟಿನ ಕೆಲಸ-ಬಡಿಗತನ. ಶಾಲೆಯ ಪರಿಸ್ಥಿತಿಗನುಸರಿಸಿ ಇವುಗಳಲ್ಲಿ ಬೇಕಾದೊಂದನ್ನಾಯ್ದುಕೊಳ್ಳಬಹುದು. ಇತ್ತೀಚೆಗೆ ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿದೆಯೆನ್ನಲಡ್ಡಿಯಿಲ್ಲ. ತಮ್ಮ ಜೀವನಕ್ಕೆ ಸಂಬಂಧಿಸಿದ ಬೇಕಾದೊಂದು ಚಟುವಟಿಕೆಯನ್ನು ತಾವೇ ಆಯ್ದುಕೊಂಡು ಅದರಿಂದ ಸ್ವಾಭಾವಿಕವಾಗಿ ಹೊರಹೊಮ್ಮುವ ಸಂಗತಿಗಳ ಜ್ಞಾನವನ್ನು ಮಕ್ಕಳು ತಮ್ಮಷ್ಟಕ್ಕೆ ತಾವೇ ಗ್ರಹಣ ಮಾಡಿಕೊಳ್ಳುವರು; ಶಿಕ್ಷಕ-ಶಿಕ್ಷಕಿಯರು ಕೇವಲ ಉಪದೇಶಕರು, ಮಾರ್ಗದರ್ಶಕರು; ಮಾತ್ರವಲ್ಲದೆ, ಮಕ್ಕಳು ಆಯ್ದುಕೊಂಡ ಚಟುವಟಿಕೆ (Activity)ಯಲ್ಲಿ ತಾವೂ ಭಾಗವಹಿಸಿ ಕೆಲಸ ಮಾಡಿ ತೋರಿಸುವ ಆದರ್ಶ ಕಾರ್ಯಕರ್ತರು; ಮಕ್ಕಳು ಪಡೆದ ಅನುಭವಗಳನ್ನೆಲ್ಲ ಸುಸಂಬದ್ಧವಾಗಿ ಹೊಂದಿಸಿ ಅವುಗಳ ಮರ್ಮವನ್ನು ತಿಳಿಯಪಡಿಸುವ ಗುರೂಜಿಯವರು. ಇದು ನಿಜಕ್ಕೂ ಹೊಗಳತಕ್ಕಂತಹ ಕಾರ್ಯಪದ್ಧತಿಯು!

ಪದ್ಧತಿ ಪರಿಚಯ

ಈ ಹೊಸ ಶಿಕ್ಷಣವನ್ನು ಮನಃಶಾಸ್ತ್ರದ ದೃಷ್ಟಿಯಿಂದ ವಿಚಾರಿಸಿ, ಪರಿಕಿಸಿ, ನೋಡಬೇಕಲ್ಲವೇ? ಮಕ್ಕಳಿಗೆ ಉಪಯುಕ್ತವಾದ ಬೇಕಾದೊಂದು ಚಟುವಟಿಕೆಯ ಮೂಲಕ ಅದರಿಂದ ತನ್ನಷ್ಟಕ್ಕೆ ತಾನೇ ಹೊರಹೊಮ್ಮುವ ಸಂಗತಿಗಳ ಇಲ್ಲವೆ ವಿಷಯಗಳ ಬಗೆಗೆ ಮಕ್ಕಳಿಗೆ ಜ್ಞಾನ ಮಾಡಿಕೊಡುವದು ಈ ಹೊಸ ಶಿಕ್ಷಣದ ಮೂಲೋದ್ದೇಶವು. ಚಟುವಟಿಕೆಯಲ್ಲಿ ಇಲ್ಲವೆ ಉದ್ಯೋಗದಲ್ಲಿ ತೊಡಗಿದ ಮಗುವಿನ ಅವಧಾನ (Attention)ವು ಅತ್ತಿತ್ತ ಹರಿದಾಡುವದಿಲ್ಲ; ಮಗುವು ತನ್ನ ಕೆಲಸದಲ್ಲಿ ತಲ್ಲೀನವಾಗುವದುಂಟು. ಕೋತಿಯ ಸ್ವಭಾವದ ಚಿಕ್ಕ ಮಕ್ಕಳ ಅವಧಾನವು ಎಷ್ಟು ಚಂಚಲವಿರುತ್ತದೆಂಬುದನ್ನು ಓದುಗರು ಕಂಡುಂಡ ಮಾತಾಗಿದೆಯಲ್ಲವೇ? ಅಂತಹ ಕೋತಿಯ ಸ್ವಭಾವದ ಮಕ್ಕಳ ಅವಧಾನವನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದರೆ, ಚಟುವಟಿಕೆಯು ಒಂದೇ ಒಂದು ಉಪಾಯವು. ಚಟುವಟಿಕೆಯಲ್ಲಿ ಮಗುವು ಕೆಲಸ ಮಾಡುತ್ತ ಮಾಡುತ್ತ ಕಲಿಯುತ್ತಿದೆ. 'ಮಾಡುತ್ತ ಕಲಿ' (Learning by Doing) ಎಂಬುದು ಮನಃಶಾಸ್ತ್ರದಲ್ಲಿ ಬಹು ದೊಡ್ಡ ತತ್ತ್ವವಿದೆ. ಈ ತತ್ತ್ವವನ್ನೊಳಗೊಂಡ ಪದ್ಧತಿಗೆ 'ಕೃತಿ ಪ್ರಧಾನ ಪದ್ಧತಿ' (Dynamic Method) ಎಂಬ ಹೆಸರಿದೆ. ಮಕ್ಕಳಿಗೆ ಕಲಿ

ಸುವ ಈಗಿನ ಹಲವಾರು ಪದ್ಧತಿಗಳಲ್ಲಿ ಇದೊಂದು ಶ್ರೇಷ್ಠ ಪದ್ಧತಿಯು. ಈ ಪದ್ಧತಿಯಲ್ಲಿ ಮಕ್ಕಳು ಕೆಲಸ ಮಾಡಮಾಡುತ್ತ ಹೊಸ ಜ್ಞಾನವನ್ನೂ ಅನುಭವಗಳನ್ನೂ ಪಡೆಯುವರು. ಸ್ವಂತ ಶ್ರಮದಿಂದ ಪಡೆದ ಜ್ಞಾನವು ಅತ್ಯಂತ ಶ್ರೇಷ್ಠವಾದುದಾಗಿದೆ. ಅಂತಹ ಜ್ಞಾನವನ್ನು ಮಗವು ತನ್ನ ಜೀವಮಾನದಲ್ಲಿ ಎಂದೂ ಮರೆಯುವದಿಲ್ಲ; ಅದು ಶಾಶ್ವತವಾದುದು.

ಚಟುವಟಿಕೆಯೆಂದರೆ ಮಕ್ಕಳಿಗೆ ಅದೊಂದು ಘೋರ ಸಮಸ್ಯೆ. ಸಾಲೆಯಲ್ಲಿ 'ಪಾಲಕರ ದಿನ'ವನ್ನಾಚರಿಸುವದಿದೆಯೆಂದು ಉದಾಹರಣೆಗಾಗಿ ತಕ್ಕೊಳ್ಳೋಣ. ಅದಕ್ಕಾಗಿ ಸಾಲೆಯನ್ನು ಸಿಂಗರಿಸುವ ಚಟುವಟಿಕೆಯೊಂದನ್ನು ಮಕ್ಕಳು ಆಯ್ದುಕೊಂಡರೆಂದು ತಿಳಿಯೋಣ. ಸಿಂಗಾರ ಮಾಡುವದು ಮಕ್ಕಳಿಗೆ ಅದೊಂದು ದೊಡ್ಡ ಸಮಸ್ಯೆಯಲ್ಲವೇ? ಸಾಲೆಯನ್ನು ಒಳಗೂ ಹೊರಗೂ ಸ್ವಚ್ಛ ಮಾಡುವದು, ತೋರಣಗಳನ್ನು ಕಟ್ಟುವದು, ಸಾರಿಸುವದು, ಕೈಕೆಲಸದ ಒಡವೆಗಳ ಚಿಕ್ಕದೊಂದು ಪ್ರದರ್ಶನವನ್ನೇರ್ಪಡಿಸುವದು, ನಕಾಶಗಳನ್ನೂ ಚಿತ್ರಗಳನ್ನೂ ಪಟಗಳನ್ನೂ ಚಂದ ಕಾಣುವಂತೆ ತೂಗ ಹಾಕುವದು, ಮೊದಲಾದ ಉಪಸಮಸ್ಯೆಗಳೆಷ್ಟೊ ಆ ದೊಡ್ಡ ಸಮಸ್ಯೆಯಲ್ಲಿ ಉದ್ಭವಿಸುವವು. ಅವುಗಳನ್ನೆಲ್ಲ ಮಕ್ಕಳೇ ಎದುರಿಸಿ ನಿರ್ವಹಿಸಬೇಕಾಗುವದು. ಅವುಗಳನ್ನು ನಿರ್ವಹಿಸುವಾಗ ಮಕ್ಕಳಿಗೆ ಅಡರುವ ಎಡರು-ತೊಡರುಗಳು ಅಷ್ಟಿಷ್ಟಲ್ಲ. ಅಂತಹ ಪ್ರಸಂಗಗಳಲ್ಲಿ ಗುರೂಜಿಯವರಿಂದ ಸಲಹೆ-ಸೂಚನೆಗಳನ್ನು ಹೊಂದಿ ಎದೆಗೊಟ್ಟು, ಕೆಲಸ ಮಾಡಬೇಕಾಗುವದು. ಬೇರೆ ಬೇರೆ ಕೆಲಸಗಳನ್ನು ಮಾಡಲು ತಮ್ಮ ತಮ್ಮಲ್ಲಿ ಗುಂಪುಗಳನ್ನು ಮಾಡಿಕೊಳ್ಳುವರು. ಆಯಾ ಗುಂಪುಗಳು ಸಹಕಾರದಿಂದಲೂ ಒಕ್ಕಟ್ಟಿನಿಂದಲೂ ದುಡಿಯಬೇಕಾಗುವದು. ಇದುವೇ ಸಾಂಘಿಕ ಇಲ್ಲವೆ ಕೌಟುಂಬಿಕ ಜೀವನ (Community Life)ದ ಗುಟ್ಟು. ಇದರಿಂದ ಮಕ್ಕಳು ಜೀವನದಲ್ಲಿಯ ಅನುಭವಗಳನ್ನೆಲ್ಲ ಸಾಕ್ಷಾತ್ತಾಗಿ ಪಡೆಯುವರು. ಇದರಂತಹ ಶ್ರೇಷ್ಠವಾದ ಜ್ಞಾನವು ಜಗತ್ತಿನಲ್ಲಿ ಯಾವದಿದೆ? ಜೀವನದ ಅನುಭವಗಳನ್ನೆಲ್ಲ ಮಕ್ಕಳು ಸಾಲೆಯಲ್ಲಿ ಪಡೆಯುವದರಿಂದ ಈ ಹೊಸ ಶಿಕ್ಷಣಕ್ಕೆ ಇತ್ತೀಚೆಗೆ 'ಜೀವನ ಶಿಕ್ಷಣ'ವೆಂಬ ಹೆಸರು ಪ್ರಾಪ್ತವಾಗಿದೆ. ಮನಃಶಾಸ್ತ್ರದಲ್ಲಿ ಇಂತಹ ಪದ್ಧತಿಗೆ 'ಯೋಜನಾ ಪದ್ಧತಿ' (Project Method) ಯೆಂಬ ಹೆಸರಿದೆ. ಈ ಪದ್ಧತಿಯಲ್ಲಿ ಮಕ್ಕಳು ಚಟುವಟಿಕೆ (Activity)ಯೊಂದನ್ನು ತಮ್ಮ ಸ್ವಯಂಸ್ಫೂರ್ತಿಯಿಂದ ಆಯ್ದುಕೊಳ್ಳುವದುಂಟು. ಸ್ಫೂರ್ತಿಯಿದ್ದಲ್ಲಿ ಅಭಿರುಚಿ-ಆಸಕ್ತಿಗಳು ತಮ್ಮಷ್ಟಕ್ಕೆ ತಾವೇ ತಲೆದೋರುತ್ತವೆ. ಅಭಿರುಚಿ-ಆಸಕ್ತಿಗಳಿದ್ದಲ್ಲಿ ಮಕ್ಕಳು ಆಸ್ಥೆವಹಿಸಿ ಕೆಲಸ ಮಾಡುವದುಂಟು. ಕೆಲಸ ಮಾಡುತ್ತ ಮಾಡುತ್ತ ಬೇರೆ ಬೇರೆ ವಿಧಾನಗಳಲ್ಲಿಯ ಜ್ಞಾನಗಳನ್ನು ಇಲ್ಲವೆ ಅನುಭವಗಳನ್ನು ಪಡೆಯುವದುಂಟು. ಮಕ್ಕಳು ಪಡೆದ ಈ ಅನುಭವಗಳು ಶಿಕ್ಷಣ ಶಾಸ್ತ್ರದಲ್ಲಿ ಬಹು ಅಮೌಲ್ಯವಾದವುಗಳೆಂದು ಗಣಿಸಲ್ಪಟ್ಟಿವೆ. ಆದುದರಿಂದ ಯೋಜನಾ ಪದ್ಧತಿಯಂತಹ ಬೆಲೆಯುಳ್ಳ ಪದ್ಧತಿಯು ಶಿಕ್ಷಣ ಶಾಸ್ತ್ರದಲ್ಲಿ ಬೇರೊಂದಿಲ್ಲ.

ಕೃತಿ ಪ್ರಧಾನ ಪದ್ಧತಿ, ಯೋಜನಾ ಪದ್ಧತಿ ಇವೆರಡು ಅಮೌಲ್ಯವಾದ ಪದ್ಧತಿಗಳು 'ನಯೀ ತಾಲೀಮು' ದಲ್ಲಿ ಸಮಾವೇಶವಾಗಿವೆ. ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿವೆಯೆಂಬ ಮಾತನ್ನು ಓದುಗರ ಗಮನಕ್ಕೆ ತರಲಾಗಿದೆ. ಇವೆರಡೂ ಪದ್ಧತಿಗಳಿಗನುಗುಣವಾಗಿ ಚಟುವಟಿಕೆಯನ್ನು ನಿರ್ವಹಿಸುವಾಗ ಮಕ್ಕಳು ಪಡೆದ ಅನುಭವಗಳನ್ನು ಸುಸಂಬದ್ಧವಾಗಿ ಹೊಂದಿಸಿ ಅಭ್ಯಾಸ ಪತ್ರಿಕೆಯೊಳಗಿನ ಇತಿಹಾಸ, ಭೂಗೋಲ, ಗಣಿತ, ಮಾತೃಭಾಷೆ ಮೊದಲಾದ ವಿಷಯಗಳಿಗೆ ಸಂಬಂಧೀಕರಣ ಮಾಡಿ ಶಿಕ್ಷಕ–ಶಿಕ್ಷಕಿಯರಿಂದ ಕಲಿಸಲಾಗುವದು.

(ಮುಂದುವರೆಯುವದು)

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ.ಗಳಿಗಾಗಿ)

ಬೆಲೆ : ೦—೨—೬

ಅಂಚೆವೆಚ್ಚ ರೂ. ೦—೧—೦ ಪ್ರತಿಯೊಂದಕ್ಕೆ

ಪ್ರತಿಗಳು ಸಿಗುವ ಸ್ಥಳ:—

ಪ್ರಧಾನ ಸಂಪಾದಕರು ಕನ್ನಡ ಪ್ರಾಥಮಿಕ ಶಿಕ್ಷಣ

ಧಾರವಾಡ.

ನಮ್ಮ ಸಮಸ್ಯೆಗಳು

ಶ್ರೀ ಎಚ್. ಕೆ. ಹಾದೀಮನಿ, ಅ. ಮಾ. ಚಳಗೇರಿ
ಇವರ ಪ್ರಶ್ನೆಗಳಿಗೆ ಉತ್ತರ—

ಪ್ರಶ್ನೆ:— ಪ್ರಾಥಮಿಕ ಶಿಕ್ಷಕರಿಗೆ ಉಡುಪುಗಳ ಆಯ್ಕೆಯ ಸಂಬಂಧದಲ್ಲಿ ಸ್ವಾತಂತ್ರ್ಯವನ್ನು ಏಕೆ ಕೊಡಬಾರದು? ನಿರ್ದಿಷ್ಟ ಉಡುಪಿನ ಅವಶ್ಯಕತೆ ಇದ್ದಲ್ಲಿ ಜಿ. ಸ್ಕೂ. ಬೋ. ಗಳು ಅವುಗಳನ್ನು ಏಕೆ ಪೂರೈಸಬಾರದು.

ಉ:— ಧಾರವಾಡ ಜಿಲ್ಹೆಯ ಸ್ಕೂಲ್ ಬೋರ್ಡ್ ಹಾಗು ಉತ್ತರ ಕನ್ನಡ ಜಿಲ್ಹೆಯ ಸ್ಕೂಲ್ ಬೋರ್ಡ್ ಇವೆರಡೂ ಒಬ್ಬ ಡಾಯರೆಕ್ಟರರ ಆಡಳಿತಕ್ಕೆ ಒಳಪಟ್ಟಿದ್ದರೂ ಅಥವಾ ಲೋಕಲ್ ಅಥಾರಿಟೀಸ್ ಕಮಿಶನರರ ಅಧಿಕಾರಕ್ಕೆ ಒಳಪಟ್ಟಿದ್ದರೂ ಪ್ರತಿಯೊಂದು ಜಿಲ್ಹಾ ಸ್ಕೂಲ್ ಬೋರ್ಡಿಗೆ ಕೆಲವು ವಿಷಯಗಳಲ್ಲಿ ಕೆಲಮಟ್ಟಿನ ಸ್ವಾತಂತ್ರ್ಯವನ್ನು ಕೊಟ್ಟಿರುತ್ತದೆ. ಆ ಜಿಲ್ಹಾ ಸ್ಕೂಲ್ ಬೋರ್ಡಿನವರು ಮಾಡಿದ ನಿಯಮಗಳಿಗನುಸಾರವಾಗಿ ವರ್ತಿಸುವದು ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯ. ಆ ನಿಯಮಗಳು ಸರಿಯಾಗಿಲ್ಲವೆಂದು ನಿಮಗನಿಸಿದರೆ ಸ್ಕೂಲ್ ಬೋರ್ಡ ಮೆಂಬರರ ಮುಖಾಂತರ ಸ್ಕೂಲ್ ಬೋರ್ಡ್ ಚೇರಮನ್ನರಿಗೆ ಅದರ ಬಗ್ಗೆ ಬರೆಯಬಹುದು. ಅವರು ಅದರಲ್ಲಿ ಯೋಗ್ಯ ಬದಲಾವಣೆ ಮಾಡುವದನ್ನು ವಿಚಾರಿಸುವರು.

ಪ್ರಶ್ನೆ:— ಉಮೇದವಾರ ಶಿಕ್ಷಕರಿಗೆ ೨ ತಿಂಗಳಿಗೆ ೩ ದಿನಗಳ ರಜೆ ಕೊಡಲಾಗುವ ನಿಯಮವು ಅನಿವಾರ್ಯ ಪ್ರಸಂಗಗಳಲ್ಲಿ ತೊಂದರೆಯಾಗುವದಿಲ್ಲವೇ? ನಿಯಮವನ್ನು ಸಡಲಿಸುವದು ಯೋಗ್ಯವಲ್ಲವೇ?

ಉ:— ಶಿಕ್ಷಕರಿಗೆ ನೌಕರಿಯಲ್ಲಿ ಬರಬಹುದಾದ ತೊಂದರೆಯನ್ನನುಲಕ್ಷಿಸಿಯೇ ೨ ತಿಂಗಳಲ್ಲಿ ೩ ದಿವಸಕ್ಕಿಂತ ಹೆಚ್ಚು ರಜೆ ಕೊಡಕೂಡದೆಂದು ವಿಧಿಸಿದ್ದಾರೆ—ಉಮೇದವಾರ ಶಿಕ್ಷಕರಿಗೆ ಆತನು ಹೆಚ್ಚಿನ ಆಪತ್ತಿಗೆ ಗುರಿಯಾದಾಗ ಹೆಚ್ಚು ದಿನದ ಬೇರೆ ಪ್ರಕಾರದ ರಜೆಗಾಗಿ ಸ್ಪೆಶಲ್ ಅರ್ಜಿಮಾಡಿಕೊಳ್ಳಬಹುದು.

ಪ್ರಶ್ನೆ:— ಕಾಯಂ ಅಲ್ಲದ ಶಿಕ್ಷಕರಿಗೆ ವರ್ಗವಾದ ಪ್ರಸಂಗಗಳಲ್ಲಿ ಪ್ರವಾಸ ಭತ್ತೆಯನ್ನು ಏಕೆ ಕೊಡಬಾರದು?

ಉ:— ಇದ್ದ ನಿಯಮಗಳಲ್ಲಿ ಬದಲಾವಣೆ ಮಾಡಬೇಕೆಂದೆನಿಸಿದರೆ ಬೋರ್ಡ್ ಮೀಟಿಂಗುಗಳಲ್ಲಿ ನಿಮ್ಮ ಮೆಂಬರರು ಸೂಚನೆ ತರುವಂತೆ ಕೇಳಿಕೊಳ್ಳಬೇಕು.

ಪ್ರಶ್ನೆ:— ಶಿಕ್ಷಕರಿಗೆ ಸಮಯಕ್ಕೆ ಪಗಾರ ಬಟವಡೆಯು ಸಕಾಲದಲ್ಲಿ ಆಗದೇ ಇರುವದನ್ನು ಹೇಗೆ ನಿಯಂತ್ರಿಸಬಹುದು? ಪಗಾರ ಶಿಪಾಯಿಯ ವಿಲಂಬನವನ್ನು ಹೇಗೆ ತಪ್ಪಿಸಬಹುದು?

ಉ:— ಪಗಾರವು ಶಿಕ್ಷಕರಿಗೆ ಸರಿಯಾಗಿ ಯೋಗ್ಯ ವೇಳೆಗೆ ಮುಟ್ಟದೆ ಇರುವುದಕ್ಕೆ ಕಾರಣ ಪಗಾರ ಸಿಪಾಯಿಯ ಕರ್ತವ್ಯ ವಿಮುಖತೆ ಮತ್ತು ಅಪ್ರಾಮಾಣಿಕತೆ ಇವುಗಳನ್ನು ಅವಲಂಬಿಸಿದೆ ಎಂದ ಹಾಗಾಯಿತು. ಅದರ ಬಗ್ಗೆ ನೀವು ಸ್ಕೂ. ಬೋ. ಚೇರಮನ್ನರಿಗೆ ಅಥವಾ ಅಡ್‌ಮಿನಿಸ್ಟ್ರೇಟಿವ್ಹ ಆಫೀಸರರಿಗೆ ದೂರು ಕಳಿಸಬಹುದು. ಅವರು ಅಂಥ ಸಿಪಾಯಿಯನ್ನು ಖಂಡಿತವಾಗಿ ದ[illegible]ವರು.

ವಿಶೇಷ ಸುದ್ದಿ

ಆಡ್ನೂರ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶ್ರೀ ಎಚ್. ಎಲ್. ಜಿನಕಟ್ಟಿ ಅವರು ಕರ್ನಾಟಕ ವಿಶ್ವವಿದ್ಯಾಲಯ ನಿಧಿಗೆ ಪ್ರತಿ ತಿಂಗಳು ೨ ರೂಪಾಯಿಯಂತೆ ಒಂದು ವರ್ಷದ ವರೆಗೆ ದೇಣಿಗೆ ಕೊಡುವದಾಗಿ ತಮಗೆ ತಿಳಿಸಿರುವರೆಂದು ರಜಿಸ್ಟ್ರಾರರು ತಿಳಿಸುತ್ತಾರೆ.

ಪ್ರ. ಸ.

Regd. No. B. 5375

ಸಹಜ ಸಾಹಿತ್ಯ ! ★ **ಜ್ಞಾನರಸ ಸಾಹಿತ್ಯ** ★ **ಶಾಶ್ವತ ಸಾಹಿತ್ಯ !**

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ)	....	೧-೨-೦
೨.	ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	....	೧-೪-೦
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	....	೧-೪-೦
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	....	೦-೬-೦
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧-೮-೦
೬.	ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ)	....	೧-೮-೦
೭.	ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು)	....	೦-೧೨-೦
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧-೦-೦
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	....	೧-೪-೦
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	....	೧-೮-೦
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	....	೧-೪-೦
೧೨.	ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ)	....	೧-೪-
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಈಸುಗುಂಬಳ)	....	೦-೩-
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	....	೧-೨-
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	....	೧-೮-

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತ ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪ್ರೋ:— **ಚಡಚಣ** ಜಿ. ವಿಜಾಪ

— ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ, ಕನ್ನಡ ಕಂದನು ಕಾದಿಡುವ ಅಮೌಲ್ಯ ಕೃತಿಗಳು -

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ ಸಮಿತಿಯಿಂದ
ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು - ಕವಿತಾ ಸಂಕಲನ

ಭಾಗ-೧. ೧೨೪, ಭಾಗ-೨. ೧೦೪ ಜನರ ಕವಿತೆಗಳು

ಆಣೆಕಲ್ಲು - ಕಥಾ. ಸಂಕಲನ

ಭಾಗ-೧. ೪೦, ಭಾಗ -೨. ೩೬ ಜನರ ಕಥೆಗಳು

ಭಾಗ ೧ - ೧ ರಿಂದ ೪, ೨ - ೫ ರಿಂದ ೭ ವರ್ಗಕ್ಕೆ. ಬೆಲೆ ೧೨ ಆಣೆಯಂತೆ ಉತ್ತರದ ಶ್ರೀ ಬೇಂದ್ರೆಯವರಿಂದ ದಕ್ಷಿ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ ಪಶ್ಚಿಮದ ಗೋವಿಂದ ಪೈ ಅವರ ವರೆಗಿನ ೩೦೦ ಜನ ಲೇಖಕರ ವಿ ಕೃತಿ, ವ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆ ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

— ಶಿಕ್ಷಕರೆಲ್ಲ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ಬಿನ್ನಹ. —

ಭಾರತೀ ಸಾಹಿತ್ಯ ಭಂಡಾರ ಯರನ

ಅಂಚೆ :— ಮನಗೋಳಿ— **ಜಿ.** ವಿಜಾಪು

Printed by Shri S. F. Kattimani at Manohar Power Printing Press, Hubli. Edited Published by Sjts S. P. Patil, B. M. Shintri, S. R. Tatti & Smti. P. A. Bhaskar at the Kan Prathamik Shikshan Office, Govt. Training College for Men, Dharwar